ಶನಿವಾರ, ಡಿಸೆಂಬರ್ 25, 2021 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೋವಿಡ್–19 ಲಸಿಕೆ: ಕರ್ನಾಟಕಕ್ಕೆ ಎರಡನೇ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆಯ ಮೊದಲ ಹಾಗೂ ಎರಡನೇ ಡೋಸ್ ವಿತರಣೆಯಲ್ಲಿ ದೇಶದ ಪ್ರಮುಖ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕವು ಎರಡನೇ ಸ್ಥಾನದಲ್ಲಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಜನಸಂಖ್ಯೆಯ ಆಧಾರದಲ್ಲಿ 10 ರಾಜ್ಯಗಳನ್ನು ಪಟ್ಟಿ ಮಾಡಲಾಗಿದೆ. ಕೋವಿನ್ ಪೋರ್ಟಲ್ ಪ್ರಕಾರ ಆಂಧ್ರಪ್ರದೇಶ ಮೊದಲ ಸ್ಥಾನದಲ್ಲಿದ್ದು, 3.89 ಕೋಟಿ ಮಂದಿಗೆ ಮೊದಲ ಡೋಸ್ ಲಸಿಕೆ ವಿತರಿಸಲಾಗಿದೆ. ಗುಜರಾತ್ ಮೂರನೇ ಸ್ಥಾನದಲ್ಲಿದೆ.

RAMAIAH
Group of Institutions

24th Anniversary of
"Karma Yogi"

Dr. M S RAMAIAH, FIAE
(1922-1997)
Founder Chairman

"You have scripted a great tradition for all of us to follow."

Today, 25th December 2021, on 24th Anniversary of our beloved Founder Chairman **'Karma Yogi', Dr. M. S. Ramaiah,** we redeem to follow his footsteps in maintaining the tradition envisioned by him.

RAMAIAH INSTITUTIONS *for* Health *and* Education

Management, Staff & Students of Ramaiah Group of Institutions
M.S.R. Nagar, MSRIT Post, Bengaluru-560 054.

us on

Freedom®
Refined Sunflower Oil

ಲೈಟ್ & ವೈಟ್ ಕೊಡುಗೆ

ಖರೀದಿಸಿ 5 ಲೀಟರ್
ಫ್ರೀಡಮ್ ಸನ್ ಫ್ಲವರ್ ಆಯಿಲ್
ಜಾರ್ ಮತ್ತು ಪಡೆಯಿರಿ

ಉಚಿತ*
VICCO®
VAJRADANTI
ಪೇಸ್ಟ್ ಮೌಲ್ಯದ ₹50/-
80g

R K SWAMY BBDO 2101015

ಅಷ್ಟು ಸಂತೋಷ
With vitamins A,D&E

- ಬ್ಲಡ್ ಕೊಲೆಸ್ಟರಾಲ್ ನಿರ್ವಹಿಸುವಲ್ಲಿ ಸಹಕರಿಸುತ್ತದೆ
- ನೈಸರ್ಗಿಕ ಆ್ಯಂಟಿಆಕ್ಸಿಡಂಟ್‌ಗಳನ್ನು ಹೊಂದಿದೆ

*ಕೊಡುಗೆ ಸ್ಟಾಕ್ ಇರುವವರೆಗೆ ಮಾತ್ರ. ಕೊಡುಗೆ ಇಲ್ಲದೆಯೂ ಸ್ಟಾಕ್‌ಗಳು ಲಭ್ಯ
• ಆರೋಗ್ಯಕರ ಅಡುಗೆ ಎಣ್ಣೆ ಬಳಸುವುದರ ಜೊತೆಗೆ ಒಳ್ಳೆಯ ಆರೋಗ್ಯಕ್ಕಾಗಿ ನಿಯಮಿತ ವ್ಯಾಯಾಮ ಹಾಗೂ ಸಮತೋಲಿತ ಆಹಾರ ಸೇವನೆಯನ್ನೂ ಫ್ರೀಡಮ್ ಸಲಹೆ ಮಾಡುತ್ತದೆ

ಎಚ್–1ಬಿ, ವೀಸಾಗೆ ಸಂದರ್ಶನ ಇಲ್ಲ

ವಾಷಿಂಗ್ಟನ್ (ಪಿಟಿಐ): ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದಾಗಿ 2022ರಲ್ಲಿಎಚ್–1ಬಿ ವೀಸಾ ಕೋರಿ ರುವ ಅರ್ಜಿದಾರರಿಗೆ ಮತ್ತು ವಿದ್ಯಾರ್ಥಿಗಳಿಗೆ ಮೌಖಿಕ ಸಂದರ್ಶನವನ್ನು ಕೈಬಿಡುವುದಾಗಿ ಅಮೆರಿಕ ಘೋಷಿಸಿದೆ.

ಎಚ್–1ಬಿ ವಲಸೆರಹಿತ ವೀಸಾ ಆಗಿದ್ದು, ಇದು ಅಮೆರಿಕದ ಕಂಪನಿಗಳಿಗೆ ತಾಂತ್ರಿಕ ಪರಿಣತಿಯ ಅಗತ್ಯವಿರುವ ವಿಶೇಷ ಉದ್ಯೋಗಗಳಲ್ಲಿ ವಿದೇಶಿ ಉದ್ಯೋಗಿಗಳನ್ನು ನೇಮಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ.

ಭಾರತ ಮತ್ತು ಚೀನಾದಂತಹ ದೇಶಗಳಿಂದ ಪ್ರತಿವರ್ಷ ಹತ್ತು ಸಾವಿರ ಉದ್ಯೋಗಿಗಳನ್ನು ನೇಮಿಸಿಕೊಳ್ಳಲು ತಂತ್ರಜ್ಞಾನ ಕಂಪನಿಗಳು ಎಚ್–1ಬಿ ವೀಸಾವನ್ನು ಅವಲಂಬಿಸಿವೆ.

‘ವಲಸೆರಹಿತ ಕೆಲಸದ ವೀಸಾಗಳಿಗೆ ಮತ್ತು ಕೆಲ ವರ್ಗಗಳಲ್ಲಿ ಮೌಖಿಕ ಸಂದರ್ಶನಗಳನ್ನು ಕೈಬಿಡಲು ದೂತಾವಾಸ ಅಧಿಕಾರಿಗಳಿಗೆ ತಾತ್ಕಾಲಿಕವಾಗಿ ಅಧಿಕಾರ ನೀಡಲಾಗಿದೆ’ ಎಂದು ಗುರುವಾರ ಪ್ರಕಟಿಸಲಾಗಿದೆ.

‘ವಿಶೇಷ ಉದ್ಯೋಗದಲ್ಲಿರುವ ವ್ಯಕ್ತಿಗಳು (ಎಚ್–1ಬಿ ವೀಸಾ) ತರಬೇತಿ ದಾರರು ಅಥವಾ ವಿಶೇಷ ಶಿಕ್ಷಣ ಸಂದರ್ಶಕರು (ಎಚ್–3 ವೀಸಾ), ಇಂಟ್ರಾಕಂಪನಿ ವರ್ಗಾವಣೆದಾರರು (ಎಲ್ ವೀಸಾ), ಅಸಾಧಾರಣ ಸಾಮರ್ಥ್ಯ ಅಥವಾ ಸಾಧನೆ ಮಾಡಿರುವ ವ್ಯಕ್ತಿಗಳು (ಒ ವೀಸಾ), ಕ್ರೀಡಾಪಟುಗಳು, ಕಲಾವಿದರು ಮತ್ತು ಮನರಂಜನೆ (ಪಿ ವೀಸಾ), ಮತ್ತು ಅಂತರರಾಷ್ಟ್ರೀಯ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರಿಗೆ (ಕ್ಯೂ ವೀಸಾ) ಮೌಖಿಕ ಸಂದರ್ಶನವನ್ನು ಕೈಬಿಡಲಾಗಿದೆ’ ಎಂದು ಅಮೆರಿಕವು ತಿಳಿಸಿದೆ.

‘ಅರ್ಜಿದಾರರು ಮಾಹಿತಿಗಾಗಿ ರಾಯಭಾರ ಕಚೇರಿ ಮತ್ತು ಕಾನ್ಸುಲೇಟ್ ವೆಬ್‌ಸೈಟ್‌ಗಳನ್ನು ಪರಿಶೀಲಿಸಬೇಕು’ ಎಂದು ದೂತಾವಾಸ ಕಚೇರಿ ತಿಳಿಸಿದೆ.

ಗುಜರಿ ನೀತಿ: ಇನ್ನೂ ಸಜ್ಜಾಗಿಲ್ಲ ಸರ್ಕಾರ

2022ರ ಏ. 1ರಿಂದ ಜಾರಿಯಾಗಬೇಕಿದೆ ನೀತಿ: ಎಫ್‌ಎಎಫ್‌ಟಿಸಿ ಸ್ಥಾಪನೆಗೆ ನಡೆದಿಲ್ಲ ಸಿದ್ಧತೆ

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ವಾಹನಗಳ ಗುಜರಿ ನೀತಿಯು 2022ರ ಏಪ್ರಿಲ್ 1ರಿಂದ ರಾಷ್ಟ್ರದಾದ್ಯಂತ ಜಾರಿಗೆ ಬರಬೇಕಿದೆ. ಕೇಂದ್ರ ಸರ್ಕಾರ 2021ರ ಬಜೆಟ್‌ನಲ್ಲೇ ಈ ನೀತಿಯನ್ನು ಘೋಷಿಸಿದೆ. ಆದರೆ, ಅದರ ಅನುಷ್ಠಾನಕ್ಕೆ ಅಗತ್ಯವಿರುವ ಪೂರ್ವ ಸಿದ್ಧತೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇನ್ನೂ ಪೂರ್ಣಗೊಳಿಸಿಲ್ಲ. ಇದು ವಾಹನ ಮಾಲೀಕರನ್ನು ಗೊಂದಲಕ್ಕೆ ಎಡೆಮಾಡಿದೆ.

2021ರ ಬಜೆಟ್‌ನಲ್ಲಿ ಗುಜರಿ ನೀತಿಯನ್ನು ಕೇಂದ್ರ ಸರ್ಕಾರ ಘೋಷಣೆ ಮಾಡಿತ್ತು. ಈ ನೀತಿ ಜಾರಿ ಸಂಬಂಧ ನಿಮಯಗಳನ್ನು ರೂಪಿಸಿ ಸೆಪ್ಟಂಬರ್ 23 ಮತ್ತು ಅಕ್ಟೋಬರ್ 4ರಂದು ಎರಡು ಅಧಿಸೂಚನೆಗಳನ್ನು ಹೊರಡಿಸಿದೆ. ಆದರೆ ಎರಡೂ ಸರ್ಕಾರಗಳು ನೀತಿ ಜಾರಿಯ ಸಿದ್ಧತೆಯ ಹಂತದಲ್ಲೇ ಇದ್ದು, ಏಪ್ರಿಲ್‌ನಿಂದ ಜಾರಿಗೊಳಿಸುವ ಬಗ್ಗೆ ಅಧಿಕಾರಿಗಳೇ ಅನುಮಾನ ವ್ಯಕ್ತಪಡಿಸಿದ್ದಾರೆ.

ಆನ್‌ಲೈನ್ ಅರ್ಜಿ, ಏಕಗವಾಕ್ಷಿ ವ್ಯವಸ್ಥೆ: ಗುಜರಿ ನೀತಿ ಜಾರಿಗೆ ಬಂದ ಬಳಿಕ 15 ವರ್ಷ ಮೀರಿದ ಎಲ್ಲಾ ರೀತಿಯ ವಾಹನಗಳನ್ನು ಸ್ವಯಂಪ್ರೇರಿತವಾಗಿ ಗುಜರಿಗೆ ಹಾಕಿ, ಸವಲತ್ತು ಪಡೆಯಲು ಇಚ್ಛಿಸುವವರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಏಕಗವಾಕ್ಷಿ ವ್ಯವಸ್ಥೆ ಜಾರಿಗೆ ತರಲು ತಯಾರಿ ನಡೆದಿದೆ.

‘ಅದಕ್ಕೆ ಬೇಕಿರುವ ಪೋರ್ಟಲ್ ಅಭಿವೃದ್ಧಿಪಡಿಸಲಾಗುತ್ತಿದೆ. ಈ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿದರೆ ಮಾಲಿನ್ಯ ನಿಯಂತ್ರಣಾ ಮಂಡಳಿಯ ಅನುಮತಿಗೆ ಪ್ರತ್ಯೇಕ ಅರ್ಜಿ ಸಲ್ಲಿಸಬೇಕಿಲ್ಲ. ಜನ ಕಚೇರಿಗಳಿಗೆ ಅಲೆದಾಡುವುದೂ ತಪ್ಪಲಿದೆ’ ಎಂದು ಸಾರಿಗೆ ಇಲಾಖೆ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘2022ರ ಏಪ್ರಿಲ್ 1ರಿಂದಲೇ ಗುಜರಿ ನೀತಿ ಜಾರಿಗೆ ಬರಲಿದೆ ಎಂದು ಈಗಲೇ ಹೇಳಲಾಗದು. ಇದಕ್ಕೆ ಸಾಕಷ್ಟು ಪೂರ್ವ ತಯಾರಿಯ ಅಗತ್ಯ ಇದೆ. ನೀತಿಯನ್ನು ಏಕಾಏಕಿ ಕಾರ್ಯರೂಪಕ್ಕೆ ತರುವುದು ಕಷ್ಟ’ ಎಂದರು.

15 ವರ್ಷ ಮೀರಿದ ವಾಹನಗಳನ್ನು ಹಸಿರು ತೆರಿಗೆ ಪಾವತಿಸಿ ಬಳಸಲು ನೀತಿಯಲ್ಲಿ ಅವಕಾಶ ಇದೆ. ವಾಹನಗಳು ಸುಸ್ಥಿತಿಯಲ್ಲಿ ಇವೆಯೇ ಎಂಬುದನ್ನು ತಪಾಸಣೆಗೆ ಒಳಪಡಿಸಲು ಸಂಪೂರ್ಣ ಸ್ವಯಂಚಾಲಿತ ಪರೀಕ್ಷಾ ಕೇಂದ್ರಗಳನ್ನು(ಎಫ್‌ಎಎಫ್‌ಟಿಸಿ) ಅಲ್ಲಲ್ಲಿ ಸ್ಥಾಪಿಸಬೇಕಿದೆ. ಈ ಬಗ್ಗೆ ಇನ್ನೂ ತಯಾರಿಯೇ ನಡೆದಿಲ್ಲ. ಈ ಕೇಂದ್ರಗಳು ರಾಜ್ಯದಲ್ಲಿ ಎಲ್ಲೆಲ್ಲಿ ತಲೆ ಎತ್ತಲಿವೆ ಎಂಬ ಬಗ್ಗೆ ರಾಜ್ಯದ ಸಾರಿಗೆ ಇಲಾಖೆಗೇ ಇನ್ನೂ ಸ್ಪಷ್ಟತೆ ಇಲ್ಲ.

ಎಫ್‌ಸಿ ಪಡೆಯದಿದ್ದರೆ ದಿನಕ್ಕೆ ₹50 ದಂಡ

ಈ ನೀತಿ ಜಾರಿಗೆ ಬಂದ ಬಳಿಕ 15 ವರ್ಷಗಳಿಗಿಂತ ಹಳೆಯದಾದ ವಾಹನಗಳು ಪ್ರತಿವರ್ಷ ಎಫ್.ಸಿ ಪಡೆಯದೇ ರಸ್ತೆಯಲ್ಲಿ ಸಂಚರಿಸಲು ಅವಕಾಶ ಇಲ್ಲ.ಒಂದು ವೇಳೆ ಸಂಚರಿಸಿ, ಸಿಕ್ಕಿಬಿದ್ದರೆ ದಿನಕ್ಕೆ ₹ 50ರಂತೆ ದಂಡ ಕಟ್ಟಬೇಕಾಗುತ್ತದೆ.

ಮತ್ತೊಂದು ಸುದ್ದಿ 05

‘ಕೋವಿಡ್ ಎದುರಿಸಲು 7 ಲಕ್ಷ ಹಾಸಿಗೆ ಸಜ್ಜು’

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಎದುರಿಸಲು ಆಸ್ಪತ್ರೆಗಳಲ್ಲಿ ಏಳು ಲಕ್ಷಕ್ಕೂ ಹೆಚ್ಚು ಹಾಸಿಗೆಗಳನ್ನು ಸಿದ್ಧಪಡಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಶುಕ್ರವಾರ ಹೇಳಿದ್ದಾರೆ.

‘ಜಗತ್ತಿನಾದ್ಯಂತ ಕೊರೊನಾ ರೂಪಾಂತರ ತಳಿ ಓಮೈಕ್ರಾನ್‌ನ 9.64 ಲಕ್ಷ ಪ್ರಕರಣಗಳು ಗುರುವಾರ ವರದಿಯಾಗಿವೆ. ಜಗತ್ತು ಕೋವಿಡ್‌ನ ನಾಲ್ಕನೇ ಅಲೆಗೆ ಸಾಕ್ಷಿಯಾಗಿದೆ. ನಾವು ನಮ್ಮ ಎಚ್ಚರ ಕೈಬಿಡಲು ಸಾಧ್ಯವಿಲ್ಲ’ ಎಂದು ಅವರು ಹೇಳಿದ್ದಾರೆ.

ಭಾರತದಲ್ಲಿ ಸೋಂಕಿತರ ಸಂಖ್ಯೆಯು ಕಡಿಮೆ ಆಗುತ್ತಿದೆ. ಹಾಗಿದ್ದರೂ ಓಮೈಕ್ರಾನ್ ಪ್ರಕರಣಗಳು ನಿಧಾನಗತಿಯಲ್ಲಿ ಏರುತ್ತಿವೆ.

ಶುಕ್ರವಾರ ಬೆಳಿಗ್ಗಿನ ಹೊತ್ತಿಗೆ ದೇಶದಲ್ಲಿ 358 ಪ್ರಕರಣಗಳು ದೃಢಪಟ್ಟಿದ್ದವು. ಮಹಾರಾಷ್ಟ್ರ, ದೆಹಲಿ, ತೆಲಂಗಾಣ, ತಮಿಳುನಾಡು ಮತ್ತು ಕರ್ನಾಟಕದಲ್ಲಿಯೇ ಸುಮಾರು 250 ಪ್ರಕರಣಗಳು ವರದಿಯಾಗಿವೆ.

ಕೋವಿಡ್–19 ಪ್ರಕರಣಗಳು ಕೂಡ ಮುಂಬೈ ಮತ್ತು ದೆಹಲಿಯಲ್ಲಿ ಏರಿಕೆ ಕಂಡಿವೆ. ಮುಂಬೈಯಲ್ಲಿ ಸತತ ಮೂರು ದಿನಗಳಿಂದ ಸಾವಿರಕ್ಕೂ ಹೆಚ್ಚು ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ. ದೆಹಲಿಯಲ್ಲಿ ಶುಕ್ರವಾರ 180 ಪ್ರಕರಣಗಳು ದೃಢಪಟ್ಟಿವೆ. ಇದು ಎರಡು ತಿಂಗಳಲ್ಲಿಯೇ ಅತಿ ಹೆಚ್ಚು.

ಆಮ್ಲಜನಕ ಸೌಲಭ್ಯ ಇರುವ 4.94 ಲಕ್ಷ ಹಾಸಿಗೆಗಳು ಸಿದ್ಧವಿವೆ. 1.39 ಲಕ್ಷ ಐಸಿಯು ಹಾಸಿಗೆಗಳಿವೆ. 1.2 ಲಕ್ಷ ಐಸಿಯು ಹಾಸಿಗೆಗಳನ್ನು ಕೇಂದ್ರ ಸರ್ಕಾರವು ಮಂಜೂರು ಮಾಡಿದೆ ಎಂದು ಭೂಷಣ್ ತಿಳಿಸಿದ್ದಾರೆ.

ವೈದ್ಯಕೀಯ ಆಮ್ಲಜನಕ ಸಿದ್ಧಪಡಿಸುವ ಪ್ರತಿ ದಿನದ ಸಾಮರ್ಥ್ಯ 18 ಸಾವಿರ ಟನ್‌ಗೆ ಏರಿದೆ. ಇದು ಎರಡನೇ ಅಲೆಯ ಸಂದರ್ಭದ ಸಾಮರ್ಥ್ಯಕ್ಕಿಂತ ಶೇ 80ರಷ್ಟು ಹೆಚ್ಚು ಎಂದು ಅವರು ಮಾಹಿತಿ ಕೊಟ್ಟಿದ್ದಾರೆ.

ತಿರುಮಲ ಪ್ರವೇಶಕ್ಕೆ ಲಸಿಕೆ ಕಡ್ಡಾಯ

ತಿರುಮಲದ ವೆಂಕಟೇಶ್ವರ ದೇವಾಲಯಕ್ಕೆ ಹೋಗುವ ಭಕ್ತರು ಕೋವಿಡ್ ಲಸಿಕೆಯ ಎರಡೂ ಡೋಸ್ ಪಡೆದುಕೊಂಡ ಪ್ರಮಾಣಪತ್ರ ತೋರಿಸುವುದು ಕಡ್ಡಾಯ. ಅದು ಇಲ್ಲದೇ ಇದ್ದರೆ, 48 ಗಂಟೆಗಳ ಮೊದಲು ಪಡೆದುಕೊಂಡ ಕೋವಿಡ್ ನೆಗೆಟಿವ್ ಪ್ರಮಾಣಪತ್ರವನ್ನು ತೋರಿಸಬೇಕು ಎಂದು ದೇವಾಲಯದ ಆಡಳಿತ ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಮಾಣಪತ್ರ ಇಲ್ಲದವರನ್ನು ಬೆಟ್ಟದ ಕೆಳಭಾಗದ ತಪಾಸಣಾ ಠಾಣೆ ಅಲಿಪಿರಿಯಿಂದಲೇ ಹಿಂದಕ್ಕೆ ಕಳುಹಿಸಲಾಗುವುದು.

ಇನ್ನಷ್ಟು ಸುದ್ದಿಗಳು 8

‘ಮೇಲ್ಮನೆ ಗೌರವ ಹೆಚ್ಚಿಸಲು ಕ್ರಮ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಮೇಲ್ಮನೆಯ ಘನತೆ, ಗೌರವ ಕಾಪಾಡುವ ಜೊತೆಗೆ, ಕಾರ್ಯಕಲಾಪಗಳಲ್ಲಿ ಸುಧಾರಣೆ ತರಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ. ಮುಂದಿನ ಅಧಿವೇಶನದ ವೇಳೆಗೆ ಪರಿಷತ್‌ನ್ನು ಚಿಂತಕರ ಚಾವಡಿಯಾಗುವ ರೀತಿ ಮಾಡುತ್ತೇನೆ’ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

‘ಸುವರ್ಣ ವಿಧಾನಸೌಧದಲ್ಲಿ ಜಂಟಿ ಅಧಿವೇಶನ ನಡೆಸಬೇಕು ಅಥವಾ ಹೆಚ್ಚು ದಿನ ಅಧಿವೇಶನ ನಡೆಸಬೇಕು. ಇಲ್ಲಿ ಶಾಸಕರ ಭವನ ಹಾಗೂ ಸಚಿವಾಲಯ ಕಚೇರಿ ಆಗಬೇಕು ಎಂದು ಮುಖ್ಯಮಂತ್ರಿ ಬಳಿ ಪ್ರಸ್ತಾವ ಮುಂದಿಟ್ಟಿದ್ದೇನೆ. ಅವರೂ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಸುವರ್ಣ ವಿಧಾನಸೌಧದಲ್ಲಿ ಜಂಟಿ ಅಧಿವೇಶನ ನಡೆಸಬೇಕು. ಇಲ್ಲಿ ಶಾಸಕರ ಭವನ ಹಾಗೂ ಸಚಿವಾಲಯ ಕಚೇರಿ ಆಗಬೇಕು ಎಂದು ಮುಖ್ಯಮಂತ್ರಿ ಬಳಿ ಪ್ರಸ್ತಾಪ ಮುಂದಿಟ್ಟಿದ್ದೇನೆ. ಸದನದ ಗಾಂಭೀರ್ಯ ಹೆಚ್ಚಿಸಿ ಉತ್ತಮ ಶಾಸನ ರಚನೆಗೆ ಕೊಡುಗೆ ನೀಡಿದ ಶಾಸಕರನ್ನು ಗುರುತಿಸಿ ಅತ್ಯುತ್ತಮ ಶಾಸಕರ ಪ್ರಶಸ್ತಿ ನೀಡಲು ತೀರ್ಮಾನಿಸಲಾಗಿದೆ’ ಎಂದರು.

ಫೋನ್ ಕರೆ: 2 ವರ್ಷ ಅಳಿಸದಂತೆ ತಾಕೀತು

ನವದೆಹಲಿ (ಪಿಟಿಐ): ದೂರಸಂಪರ್ಕ ಸೇವಾ ಕಂಪನಿಗಳು ಚಂದಾದಾರರ ಕರೆ ವಿವರ ಮತ್ತು ಇಂಟರ್ನೆಟ್ ಬಳಕೆ ದಾಖಲೆಗಳನ್ನು ಕಾಯ್ದಿಟ್ಟುಕೊಳ್ಳಬೇಕಿರುವ ಅವಧಿಯನ್ನು ಕೇಂದ್ರ ದೂರಸಂಪರ್ಕ ಇಲಾಖೆಯು ಎರಡು ವರ್ಷಗಳಿಗೆ ವಿಸ್ತರಿಸಿದೆ.

ಇದುವರೆಗೆ ಈ ದಾಖಲೆಗಳನ್ನು ಒಂದು ವರ್ಷ ಕಾಯ್ದಿಟ್ಟುಕೊಂಡಿದ್ದರೆ ಸಾಕಿತ್ತು. ಭದ್ರತಾ ಕಾರಣಗಳಿಂದಾಗಿ, ಎರಡು ವರ್ಷಗಳ ಅವಧಿಗೆ ಇವುಗಳನ್ನು ಕಾಯ್ದಿರಿಸಬೇಕು ಎಂದು ಇಲಾಖೆ ತಾಕೀತು ಮಾಡಿದೆ.

‘ವಾಣಿಜ್ಯ ದಾಖಲೆಗಳನ್ನು, ಕರೆ ವಿವರಗಳ ದಾಖಲೆಗಳನ್ನು, ಐಪಿ ವಿವರಗಳನ್ನು ದೂರಸಂಪರ್ಕ ಸೇವಾ ಪರವಾನಗಿ ಪಡೆದವರು ಇರಿಸಿಕೊಳ್ಳಬೇಕು. ಭದ್ರತೆಯ ಕಾರಣಗಳಿಗೆ ಪರವಾನಗಿ ಪ್ರಾಧಿಕಾರದ ಪರಿಶೀಲನೆಗೆ ಅವುಗಳನ್ನು ಎರಡು ವರ್ಷಗಳವರೆಗೆ ಇರಿಸಿಕೊಳ್ಳಬೇಕು’ ಎಂದು ಇಲಾಖೆಯ ಸುತ್ತೋಲೆಯಲ್ಲಿ ಹೇಳಲಾಗಿದೆ.

ಇಲಾಖೆಯಿಂದ ನಿರ್ದಿಷ್ಟ ಸೂಚನೆ ಇಲ್ಲದಿದ್ದರೆ, ದೂರಸಂಪರ್ಕ ಕಂಪನಿಗಳು ವಿವರಗಳನ್ನು ಎರಡು ವರ್ಷಗಳ ನಂತರದಲ್ಲಿ ನಾಶಪಡಿಸಬಹುದು. ಸಾರ್ವಜನಿಕ ಹಿತಾಸಕ್ತಿ, ಭದ್ರತೆಯ ದೃಷ್ಟಿಯಿಂದ ಈ ಬದಲಾವಣೆ ಅಗತ್ಯವಾಗಿದೆ ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ.

ಇ-ಮೇಲ್‌ನ ಲಾಗಿನ್ ಹಾಗೂ ಲಾಗೌಟ್ ವಿವರಗಳು, ವೈಫೈ ಮೂಲಕ ಮಾಡಿದ ಕರೆ ವಿವರಗಳು, ಮೊಬೈಲ್ ಅಪ್ಲಿಕೇಷನ್‌ಗಳ ಮೂಲಕ ಮಾಡಿದ ಕರೆ ವಿವರಗಳನ್ನು ಕಂಪನಿಗಳು ಇನ್ನು ಮುಂದೆ ಎರಡು ವರ್ಷಗಳವರೆಗೆ ಇರಿಸಿಕೊಳ್ಳುವುದು ಕಡ್ಡಾಯವಾಗಲಿದೆ.

ದೂರಸಂಪರ್ಕ ಪರವಾನಗಿ ಷರತ್ತುಗಳ ಅನ್ವಯ, ದೂರಸಂಪರ್ಕ ಸೇವಾ ಕಂಪನಿಗಳು ಕರೆ ವಿವರಗಳನ್ನು ಅಗತ್ಯ ಎದುರಾದಾಗ ಕಾನೂನು ಜಾರಿ ಸಂಸ್ಥೆಗಳಿಗೆ ಹಾಗೂ ನ್ಯಾಯಾಲಯಗಳಿಗೆ ಸಲ್ಲಿಸಬೇಕಾಗುತ್ತದೆ.

ಗರಿಷ್ಠ ಎರಡು ವರ್ಷಗಳವರೆಗಿನ ಕರೆ ವಿವರಗಳು ಲಭ್ಯ ಇರಬೇಕಾಗುತ್ತದೆ ಎಂದು ಕಾನೂನು ಜಾರಿ ಸಂಸ್ಥೆಗಳು ಅಭಿಪ್ರಾಯ ವ್ಯಕ್ತಪಡಿಸಿದ್ದ ಕಾರಣ, ಸರ್ಕಾರವು ಹೊಸದಾಗಿ ಈ ಸುತ್ತೋಲೆ ಹೊರಡಿಸಿದೆ ಎಂದು ದೂರಸಂಪರ್ಕ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು. ‘ಈ ಸುತ್ತೋಲೆಯಲ್ಲಿ ಅಸಹಜ ವಾದುದು ಏನೂ ಇಲ್ಲ’ ಎಂದು ಅವರು ಹೇಳಿದರು.

ಫೋರಂ ಮಾಲ್: 30 ಅಡಿ ಎತ್ತರದ ಡಿಜಿಟಲ್ ‘ಕ್ರಿಸ್‌ಮಸ್ ಟ್ರೀ’

ಬೆಂಗಳೂರು: ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ಅಂಗವಾಗಿ ಕೋರಮಂಗಲದ ಫೋರಂ ಮಾಲ್‌ನಲ್ಲಿ ಎಲ್‌ಇಡಿ ಪರದೆಗಳಿಂದ ಕೂಡಿದ 30 ಅಡಿ ಎತ್ತರದ ಡಿಜಿಟಲ್ ‘ಕ್ರಿಸ್‌ಮಸ್ ಟ್ರೀ’ ಸ್ಥಾಪಿಸಲಾಗಿದೆ.

ಪರದೆಗಳಲ್ಲಿ ಸಾಮಾಜಿಕ ಸಂದೇಶಗಳು, ವಿವಿಧ ಬ್ರ್ಯಾಂಡ್ ಕೊಡುಗೆಗಳು ಪ್ರದರ್ಶನಗೊಳ್ಳಲಿವೆ. ಮಾಲ್‌ಗೆ ಬರುವ ಸಾರ್ವಜನಿಕರ ಭಾವಚಿತ್ರವನ್ನು ಆ ಪರದೆಗಳಲ್ಲಿ ಪ್ರದರ್ಶಿಸುವ ವ್ಯವಸ್ಥೆಯೂ ಇದೆ. ಶುಭಾಶಯ ಕೋರುವವರು ವಿಡಿಯೊ ಅಥವಾ ಭಾವಚಿತ್ರಗಳನ್ನು ಸೆರೆ ಹಿಡಿದು, ಸಾಮಾಜಿಕ ಜಾಲತಾಣಗಳಲ್ಲಿ ಫೋರಂ ಮಾಲ್‌ಗೆ ಟ್ಯಾಗ್ ಮಾಡಿದರೆ, ಅದನ್ನು ಕ್ರಿಸ್‌ಮಸ್ ಟ್ರೀ ಪರದೆಗಳಲ್ಲಿ ಪ್ರದರ್ಶಿಸಲಾಗುತ್ತಿದೆ. ಮೊದಲ ದಿನ ಸುಮಾರು 150ಕ್ಕೂ ಹೆಚ್ಚು ಮಂದಿಯ ಭಾವಚಿತ್ರಗಳನ್ನು ಪರದೆಯಲ್ಲಿ ಪ್ರದರ್ಶಿಸಲಾಯಿತು.

ವೈಟ್‌ಫೀಲ್ಡ್‌ನ ಫೋರಂ ನೇಬರ್‌ಹುಡ್ ಮಾಲ್‌ನಲ್ಲಿ ₹10 ಸಾವಿರಕ್ಕಿಂತ ಮೇಲ್ಪಟ್ಟು ಖರೀದಿ ಮಾಡುವವರಿಗೆ ವಿಶೇಷ ಬಹುಮಾನಗಳನ್ನು ವಿತರಿಸಲಾಗುತ್ತಿದೆ.

ನಾಲ್ವರ ಬಂಧನ: ₹ 77 ಲಕ್ಷ ಮೌಲ್ಯದ 53 ದ್ವಿಚಕ್ರ ವಾಹನಗಳ ಜಪ್ತಿ

ಕಳವು ಮಾಡಿಸುತ್ತಿದ್ದ ಕಾನ್‌ಸ್ಟೆಬಲ್!

ಪ್ರಜಾವಾಣಿ ವಾರ್ತೆ

ಹೊನ್ನಪ್ಪ

ರಮೇಶ್

ಬೆಂಗಳೂರು: ಪೊಲೀಸರು ಕಳ್ಳರನ್ನು ಹಿಡಿದು ಶಿಕ್ಷೆಗೊಳಪಡಿಸುವುದು ಸಾಮಾನ್ಯ. ಆದರೆ ನಗರದ ಠಾಣೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಕಾನ್‌ಸ್ಟೆಬಲ್‌ವೊಬ್ಬ, ಹಣದ ಆಸೆಗೆ ಬೈಕ್ ಕಳ್ಳತನಕ್ಕಿಳಿದು ಪೊಲೀಸರ ಅತಿಥಿಯಾಗಿದ್ದಾನೆ!

ವಿದ್ಯಾರಣ್ಯಪುರ ಠಾಣೆಯ ಸಿಬ್ಬಂದಿ ಹೊನ್ನಪ್ಪ ದುರದಪ್ಪ ಮಾಳಗಿ ಯಾನೆ ರವಿ (26) ಬಂಧಿತ ಕಾನ್‌ಸ್ಟೆಬಲ್. ಈತನ ಸಹಚರ ರಾಜಸ್ಥಾನ ಮೂಲದ ರಮೇಶ್ (25) ಹಾಗೂ ಕೃತ್ಯಕ್ಕೆ ಸಹಕರಿಸಿದ್ದ ಇಬ್ಬರು ಬಾಲಕರನ್ನು ಮಾಗಡಿ ರಸ್ತೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ 53 ದ್ವಿಚಕ್ರ ವಾಹನ ಗಳನ್ನು ಜಪ್ತಿ ಮಾಡಲಾಗಿದೆ. ಇವುಗಳ ಒಟ್ಟು ಮೌಲ್ಯ ₹77 ಲಕ್ಷ ಎಂದು ಅಂದಾಜಿಸಲಾಗಿದೆ.

‘ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನ ಕಾಕೋಳ ನಿವಾಸಿ ಹೊನ್ನಪ್ಪ, ಮೂವರು ಹುಡುಗರನ್ನು ಬಳಸಿಕೊಂಡು ನಗರದ ವಿವಿಧೆಡೆ ಬೈಕ್‌ಗಳನ್ನು ಕಳವು ಮಾಡಿಸುತ್ತಿದ್ದ. ಬಳಿಕ ಅವುಗಳ ನಂಬರ್ ಪ್ಲೇಟ್ ಬದಲಿಸಿ, ನಕಲಿ ನೋಂದಣಿ ಪ್ರಮಾಣ ಪತ್ರ ಮಾಡಿಸಿ ಬೇರೆ ಜಿಲ್ಲೆಗಳಲ್ಲಿ ಅತಿ ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿದ್ದ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಎಂ.ಪಾಟೀಲ ಹೇಳಿ ದರು.

‘ಆರೋಪಿಗಳಿಂದ ನಾಲ್ಕು ರಾಯಲ್ ಎನ್‌ಫೀಲ್ಡ್, ಒಂದು ಯಮಹಾ ಆರ್‌–15, 10 ಪಲ್ಸರ್, ನಾಲ್ಕು ಡ್ಯೂಕ್, ಒಂದು ಟಿವಿಎಸ್ ಅಪಾಚೆ, 15 ಹೊಂಡಾ ಡಿಯೊ, ಮೂರು ಹೊಂಡಾ ಆ್ಯಕ್ಟೀವಾ, ನಾಲ್ಕು ಯಮಹಾ ಆರ್‌ಎಕ್ಸ್ ಹಾಗೂ ಇತರ ಕಂಪನಿಗಳ 10 ವಾಹನಗಳನ್ನು ಜಪ್ತಿ ಮಾಡಲಾಗಿದೆ. ಬೆಂಗಳೂರಿನ ನಂದಿನಿ ಲೇಔಟ್, ಯಶವಂತಪುರ, ಎಚ್‌ಎಂಟಿ ಲೇಔಟ್, ಜಾಲಹಳ್ಳಿ ಕ್ರಾಸ್, ಗಂಗಮ್ಮ ಸರ್ಕಲ್, ಹೆಬ್ಬಾಳ, ಜ್ಞಾನಭಾರತಿ, ಪೀಣ್ಯ, ರಾಜಗೋಪಾಲನಗರ, ವಿಜಯ ನಗರ ಹಾಗೂ ನಗರದ ಇತರ ಪ್ರದೇಶಗಳಲ್ಲಿ ದ್ವಿಚಕ್ರ ವಾಹನಗಳನ್ನು ಕಳುವು ಮಾಡಿದ್ದ ಆರೋಪಿಗಳು ಅವುಗಳನ್ನು ಬೆಂಗಳೂರು, ದಾವಣಗೆರೆ, ರಾಣೆಬೆನ್ನೂರು ಮೊದಲಾದ ಜಿಲ್ಲೆಗಳಲ್ಲಿ ಮಾರಿದ್ದರು’ ಎಂದು ವಿವರಿಸಿದರು.

ಪ್ರಕರಣದ ತನಿಖೆ ವೇಳೆ ಜಾಲ ಪತ್ತೆ

‘ವ್ಯಕ್ತಿಯೊಬ್ಬರು ಈ ವರ್ಷದ ಅ. 28ರ ಮಧ್ಯಾಹ್ನ ತಮ್ಮ ಮನೆಯ ಮುಂದೆ ಪಲ್ಸರ್ ಬೈಕ್ ನಿಲ್ಲಿಸಿದ್ದರು. ಮರು ದಿನ ಮಧ್ಯಾಹ್ನ ಬಂದು ನೋಡಿದಾಗ ಬೈಕ್ ನಾಪತ್ತೆಯಾಗಿತ್ತು. ಅವರು ಮಾಗಡಿ ರಸ್ತೆ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ಸಿಬ್ಬಂದಿ ತನಿಖೆ ಕೈಗೊಂಡಿದ್ದರು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಇದೇ 21ರಂದು ಬೈಕ್ ಚಲಾಯಿಸಿಕೊಂಡು ಹೋಗುತ್ತಿದ್ದ ಬಾಲಕರನ್ನು ತಡೆದು ವಿಚಾರಿಸಿದಾಗ ಅವರು ಹೊನ್ನಪ್ಪ ಮತ್ತು ರಮೇಶ್ ಹೆಸರು ಬಾಯಿ ಬಿಟ್ಟಿದ್ದರು. ಈ ಮಾಹಿತಿ ಆಧಾರದಲ್ಲಿ ಆರೋಪಿಗಳನ್ನು ಬಂಧಿಸಲಾಯಿತು’ ಎಂದು ತಿಳಿಸಿದ್ದಾರೆ.

ಶನಿವಾರ, ಡಿಸೆಂಬರ್ 25, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 356 | ಪುಟ 30

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಉದ್ಯೋಗ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆಯುವುದು 'ಪಾಶ್'ನ ಮುಖ್ಯ ಉದ್ದೇಶ.

ಕೋವಿಡ್: ಫೆಬ್ರುವರಿ ವೇಳೆಗೆ 3ನೇ ಅಲೆ ಉತ್ತುಂಗಕ್ಕೆ 8

ಸೆನ್ಸೆಕ್ಸ್ 57,124 ▼ | ನಿಫ್ಟಿ 17,003 ▼ | ₹/$ 75.03 ▲

ಕ್ರಿಸ್‌ಮಸ್ ಶುಭಾಶಯಗಳು

ಮಸೂದೆ ಒಪ್ಪಿಗೆಗೆ ವಿಫಲ ಕಸರತ್ತು: ಸಭಾಪತಿ ಕೊಠಡಿಯೊಳಗೆ ಬೃಹನ್ನಾಟಕ

ಮತಾಂತರ: ಮೇಲ್ಮನೆಯಲ್ಲಿ ಸರ್ಕಾರಕ್ಕೆ ಮುಖಭಂಗ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ವಿಧಾನಮಂಡಲ ಅಧಿವೇಶನದ ಕೊನೆಯ ದಿನವಾದ ಶುಕ್ರವಾರ ವಿರೋಧ ಪಕ್ಷಗಳ ಸದಸ್ಯರು ಊರುಗಳತ್ತ ತೆರಳಿದ್ದ ಸಮಯವನ್ನೇ ಬಳಸಿಕೊಂಡು ವಿಧಾನ ಪರಿಷತ್‌ನಲ್ಲಿ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ (ಮತಾಂತರ ನಿಷೇಧ) ಮಸೂದೆಗೆ ಅಂಗೀಕಾರ ಪಡೆಯಲು ಯತ್ನಿಸಿದ ಬಿಜೆಪಿ ಸರ್ಕಾರ, ವಿಪಕ್ಷಗಳ ಬಿಗಿ ಪಟ್ಟಿನಿಂದಾಗಿ ಮುಖಭಂಗ ಅನುಭವಿಸಿತು.

ಹೊರಹೋಗಿದ್ದ ತನ್ನ ಸದಸ್ಯರನ್ನು ಕರೆಸಿಕೊಂಡು ಬಲ ಹೆಚ್ಚಿಸಿಕೊಳ್ಳುವ ತಂತ್ರಗಾರಿಕೆ ಮಾಡಿದ ಆಡಳಿತ ಪಕ್ಷ, ಕಲಾಪ ಆರಂಭಿಸುವುದನ್ನು ವಿಳಂಬ ಮಾಡಿತು. ಇದನ್ನು ಅರಿತ ಕಾಂಗ್ರೆಸ್ ಸದಸ್ಯರು ಸಭಾಪತಿ ಕಚೇರಿಯತ್ತ ಧಾವಿಸಿ, ವಾಗ್ವಾದ ನಡೆಸಿದಾಗ ಕೋಲಾಹಲ ಸೃಷ್ಟಿಯಾಯಿತು. ಕಾಂಗ್ರೆಸ್ ಸದಸ್ಯರ ಬೇಡಿಕೆಗೆ ಮಣಿದ ಸರ್ಕಾರ, ವಿಧಾನ ಪರಿಷತ್‌ನಲ್ಲಿ ಮತಾಂತರ ನಿಷೇಧ ಮಸೂದೆ ಮಂಡನೆಯಿಂದ ಹಿಂದೆ ಸರಿಯಿತು.

ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರ ಒಟ್ಟು ಸಂಖ್ಯೆಯನ್ನು ಅರಿತ ಬಿಜೆಪಿ, ಮಸೂದೆ ಅಂಗೀಕಾರಕ್ಕೆ ಇರುವ ಕೊರತೆಯನ್ನು ತುಂಬಿಕೊಳ್ಳುವ ಪ್ರಯತ್ನ ಆರಂಭಿಸಿತ್ತು.

ದಾವಣಗೆರೆ ತಲುಪಿದ್ದ ಉಪ ಸಭಾಪತಿ ಎಂ.ಕೆ. ಪ್ರಾಣೇಶ್ ಮತ್ತು ಬಿಜೆಪಿ ಸದಸ್ಯ ರುದ್ರೇಗೌಡ ಅವರನ್ನು ಸಂಪರ್ಕಿಸಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸದನಕ್ಕೆ ಹಿಂದಿರುಗುವಂತೆ ಸೂಚಿಸಿದ್ದರು. ಅವರು ಬರುವ ವರೆಗೂ ಕಾದು ನಂತರವೇ ಕಲಾಪ ಆರಂಭಿಸಲು ಆಡಳಿತ ಪಕ್ಷ ತಂತ್ರಗಾರಿಕೆ ಹೆಣೆದಿತ್ತು. ಮಧ್ಯಾಹ್ನ ಭೋಜನ ವಿರಾಮದ ಬಳಿಕ 3 ಗಂಟೆಗೆ ಕಲಾಪ ಆರಂಭವಾಗಬೇಕಿತ್ತು. 4 ಗಂಟೆಯಾದರೂ ಕೋರಂ ಬೆಲ್ ಹಾಕಿರಲಿಲ್ಲ. ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ, ಗೃಹ ಸಚಿವ ಆರಗ ಜ್ಞಾನೇಂದ್ರ ಸೇರಿದಂತೆ ಆಡಳಿತ ಪಕ್ಷದ ಹಲವರು ಸಭಾಪತಿ ಬಸವರಾಜ ಹೊರಟ್ಟಿಯವರ ಕೊಠಡಿಯಲ್ಲಿ ಸಮಾಲೋಚನೆ ನಡೆಸುತ್ತಿದ್ದರು. ವಿಳಂಬ ಧೋರಣೆಯ ತಂತ್ರಗಾರಿಕೆ ಅರಿತ ಕಾಂಗ್ರೆಸ್ ಸದಸ್ಯರು ಸಭಾಪತಿ ಕೊಠಡಿ ಯೊಳಕ್ಕೆ ಪ್ರವೇಶಿಸಿದರು. ಆಡಳಿತ ಪಕ್ಷದ ಸದಸ್ಯರು ಸಭಾಪತಿ ಕೊಠಡಿ ಯೊಳಕ್ಕೆ ಸೇರಿಕೊಂಡು ಕಲಾಪ ಆರಂಭವಾಗದಂತೆ ತಡೆಯುತ್ತಿದ್ದಾರೆ ಎಂದು ಏರಿದ ಧ್ವನಿಯಲ್ಲಿ ಆಕ್ಷೇಪಿಸಿದರು.

10ನೇ ಪುಟ ನೋಡಿ

ವಿಧಾನ ಪರಿಷತ್ತಿನಲ್ಲಿ ಶುಕ್ರವಾರ ಬಿಜೆಪಿ ಸದಸ್ಯ ಆಯನೂರು ಮಂಜುನಾಥ್, ಕೋಟ ಶ್ರೀನಿವಾಸ ಪೂಜಾರಿ, ಸಚಿವ ಕೆ.ಎಸ್ ಈಶ್ವರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಗೃಹ ಸಚಿವ ಆರಗ ಜ್ಞಾನೇಂದ್ರ ಮಾತುಕತೆಯಲ್ಲಿ ತೊಡಗಿದ್ದರು —ಪ್ರಜಾವಾಣಿ ಚಿತ್ರ/ ರಂಜು ಪಿ.

ರಾಜೀನಾಮೆಗೆ ಮುಂದಾಗಿದ್ದ ಹೊರಟ್ಟಿ

ಮತಾಂತರ ನಿಷೇಧ ಮಸೂದೆ ಒಪ್ಪಿಗೆ ಪಡೆಯಲು ವಿಧಾನಪರಿಷತ್ತಿನಲ್ಲಿ ಶುಕ್ರವಾರ ನಡೆದ ಬೃಹನ್ನಾಟಕದಿಂದ ಮನನೊಂದ ಬಸವರಾಜ ಹೊರಟ್ಟಿ ಅವರು ಸಭಾಪತಿ ಹುದ್ದೆಗೆ ರಾಜೀನಾಮೆ ಕೊಡಲು ಮುಂದಾಗಿದ್ದರು.

ಮಸೂದೆಗೆ ಹೇಗಾದರೂ ಅನುಮೋದನೆ ಪಡೆಯಲೇಬೇಕೆಂಬ ಹಟಕ್ಕೆ ಬಿದ್ದಿದ್ದ ಆಡಳಿತಾರೂಢ ಬಿಜೆಪಿ, ಕಲಾಪವನ್ನು ವಿಳಂಬ ಮಾಡುವ ಮೂಲಕ ಸಂಖ್ಯಾಬಲ ಕ್ರೋಡೀಕರಣಕ್ಕೆ ಮುಂದಾಗಿತ್ತು. ಇದನ್ನು ಅರಿತ ಕಾಂಗ್ರೆಸ್ ಸದಸ್ಯರು ಸಭಾಪತಿ ಕೊಠಡಿಗೆ ತೆರಳಿ ವಾಗ್ವಾದ ನಡೆಸಿದ್ದರು. ಬಳಿಕ ಕಲಾಪ ಆರಂಭವಾದಾಗ, ಕಾಂಗ್ರೆಸ್ ಸದಸ್ಯರು ಸಭಾಪತಿಯವರ ಧೋರಣೆಯನ್ನು ಪ್ರಶ್ನಿಸಿದ್ದರು.

10ನೇ ಪುಟ ನೋಡಿ

ಸುಗ್ರೀವಾಜ್ಞೆಗೂ ಅವಕಾಶ

ಮತಾಂತರ ನಿಷೇಧ ಮಸೂದೆಗೆ ವಿಧಾನ ಪರಿಷತ್‌ನ ಅಂಗೀಕಾರ ದೊರೆಯದೇ ಇರುವುದರಿಂದ ಕಾಯ್ದೆಯ ರೂಪದಲ್ಲಿ ಜಾರಿಗೆ ಅವಕಾಶವಿಲ್ಲ.

ಆದರೆ, ಸುಗ್ರೀವಾಜ್ಞೆ ಹೊರಡಿಸುವ ಮೂಲಕ ತಕ್ಷಣವೇ ಈ ಮಸೂದೆಯಲ್ಲಿರುವ ಕ್ರಮಗಳನ್ನು ಜಾರಿಗೊಳಿಸಲು ಅವಕಾಶವಿದೆ. ಸುಗ್ರೀವಾಜ್ಞೆ ಜಾರಿಯ ನಿರ್ಧಾರವನ್ನು ಸಂಪುಟ ಸಭೆಯಲ್ಲಿ ಅನುಮೋದಿಸಿ, ರಾಜ್ಯಪಾಲರ ಒಪ್ಪಿಗೆ ಪಡೆಯಬೇಕಾಗುತ್ತದೆ ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

ಒಳ ಪುಟಗಳು

ಢಾಕಾ: ಲಾಂಚ್‌ನಲ್ಲಿ ಬೆಂಕಿ, 40 ಮಂದಿ ಸಾವು 8

ಧರಣಿಯಲ್ಲೇ ಕೊನೆಗೊಂಡ ವಿಧಾನಸಭೆ ಕಲಾಪ 10

ಚರ್ಚೆ

ಹೆಣ್ಣುಮಕ್ಕಳ ಮದುವೆಯ ಕನಿಷ್ಠ ವಯಸ್ಸು 18 ವರ್ಷದಿಂದ 21ಕ್ಕೆ ಏರಿಕೆ ಸರಿಯಾದ ನಿರ್ಧಾರವೇ? 7

ಅಸ್ಪೃಶ್ಯತೆ: 4 ವರ್ಷಗಳಲ್ಲಿ 7,133 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಅಸ್ಪೃಶ್ಯತೆ ಆಚರಣೆ ಆರೋಪದಡಿ 2018ರಿಂದ 2021ರ ನವೆಂಬರ್ ಅಂತ್ಯದವರೆಗೆ ರಾಜ್ಯದಲ್ಲಿ 7,133 ಪ್ರಕರಣಗಳನ್ನು ದಾಖಲಿಸಲಾಗಿದೆ' ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಬಿಜೆಪಿಯ ತೇಜಸ್ವಿನಿ ಗೌಡ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಅವರು, 'ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್.ಟಿ) ಜನರ ಮೇಲೆ ದೌರ್ಜನ್ಯ ತಡೆ ಕಾಯ್ದೆಯಡಿ ಈ ಪ್ರಕರಣಗಳನ್ನು ದಾಖಲಿಸಲಾಗಿದೆ. ಈ ಪೈಕಿ 1,852 ಪ್ರಕರಣಗಳು ಎಸ್.ಸಿ. ಮತ್ತು ಎಸ್.ಟಿ. ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದವು' ಎಂದು ಮಾಹಿತಿ ನೀಡಿದ್ದಾರೆ.

'ಅಸ್ಪೃಶ್ಯತೆ ಆಚರಣೆ ಆರೋಪದಡಿ ನಾಲ್ಕು ವರ್ಷಗಳಲ್ಲಿ 20 ಪ್ರಕರಣಗಳನ್ನು ನಾಗರಿಕ ಹಕ್ಕು ಸಂರಕ್ಷಣಾ ಕಾಯ್ದೆಯ ಅಡಿಯಲ್ಲಿ ದಾಖಲಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ 13, ಚಿಕ್ಕಮಗಳೂರು ಜಿಲ್ಲೆಯಲ್ಲಿ 5, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ತಲಾ ಒಂದು ಪ್ರಕರಣ ದಾಖಲಿಸಲಾಗಿದೆ' ಎಂದು ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ಕ್ರಿಕೆಟ್‌ಗೆ ಹರಭಜನ್ ವಿದಾಯ



ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಫ್‌ಸ್ಪಿನ್ನರ್ ಹರಭಜನ್ ಸಿಂಗ್ ಶುಕ್ರವಾರ ಎಲ್ಲ ಮಾದರಿಗಳ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದರು.

ಟೆಸ್ಟ್ ಕ್ರಿಕೆಟ್‌ನಲ್ಲಿ ಹ್ಯಾಟ್ರಿಕ್ ಸಾಧನೆ ಮಾಡಿದ ಭಾರತದ ಮೊದಲ ಬೌಲರ್ ಎಂಬ ಹೆಗ್ಗಳಿಕೆ ಅವರದ್ದು. 103 ಟೆಸ್ಟ್ ಗಳನ್ನು ಆಡಿರುವ ಅವರು 417 ವಿಕೆಟ್ ಗಳಿಸಿದ್ದಾರೆ. 2016ರ ನಂತರ ಅವರಿಗೆ ಭಾರತ ತಂಡದಲ್ಲಿ ಸ್ಥಾನ ಲಭಿಸಿರಲಿಲ್ಲ.

'ಕ್ರಿಕೆಟ್ ನನಗೆ ಸರ್ವಸ್ವವನ್ನೂ ನೀಡಿದೆ. ಭಾರತ ತಂಡದಲ್ಲಿ ಆಡಿದ್ದು ಸುಂದರ ಪಯಣ. ರಾಜಕೀಯ ರಂಗಕ್ಕಿಳಿಯುವ ಬಗ್ಗೆ ಇನ್ನೂ ನಿರ್ಧಾರ ಕೈಗೊಂಡಿಲ್ಲ. ಯೋಚಿಸಿ ತೀರ್ಮಾನಿಸುತ್ತೇನೆ' ಎಂದು ಹರಭಜನ್ ಹೇಳಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಶನಿವಾರದ ಉಷ್ಣಾಂಶ 29° ಗರಿಷ್ಠ 16° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಗ್ಗೆ ಮಂಜು ಮುಸುಕಿದ ವಾತಾವರಣ. ಹಗಲು ಶುಭ್ರ ಆಕಾಶ

ಮುನ್ನೋಟ: ಭಾನುವಾರ 28° 16° | ಸೋಮವಾರ 27° 16° | ಮಂಗಳವಾರ 27° 16°

ಸೂರ್ಯೋದಯ: 6:38 ಸೂರ್ಯಾಸ್ತ : 5:59 ಚಂದ್ರೋದಯ: ರಾ. 10:25 ಚಂದ್ರಾಸ್ತ: ಬೆ.10:32 ಶುಕ್ರವಾರದ ಹವಾಮಾನ : ಗರಿಷ್ಠ 30° ಕನಿಷ್ಠ 15°

ಪ್ರಜಾವಾಣಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ | ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೀದರ

ಸಂ.: ಕಾನಿಅ/ಗ್ರಾಕುನೀನೈವಿ/ಬೀದರ/ಶಾತಾ- /2021-22/ ದಿನಾಂಕ: 23-12-2021

ಅಲ್ಪಾವಧಿ ಟೆಂಡರ್ ಪ್ರಕಟಣೆ ದ್ವಿಲಕೋಟೆ ಪದ್ಧತಿ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೀದರ ರವರು KW-3 & KW-4 (Standard Bid Document) ನಿಬಂಧನೆಗಳೊಳಪಟ್ಟಂತೆ. 2021-22ನೇ ಸಾಲಿನ JJM ಯೋಜನೆಯಡಿಯಲ್ಲಿನ ರೂ. 50.00 ಲಕ್ಷ ಮೇಲ್ಪಟ್ಟ ಒಟ್ಟು 37 ಕಾಮಗಾರಿಗಳಿಗೆ ಅರ್ಹ ನೊಂದಾಯಿತ 3ನೇ ದರ್ಜೆ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು/ನೊಂದಾಯಿತ ಸಂಸ್ಥೆಗಳು ಹಾಗೂ ಸಾಮಾನ್ಯ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿಗಳಿಗೆ ಏಟಂವಾರು ಇ-ಟೆಂಡರ್ ಆಹ್ವಾನಿಸಲಾಗಿದೆ.

ಸದರಿ ಕಾಮಗಾರಿಗಳ ಹೆಚ್ಚಿನ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕೆಳಗೆ ಸಹಿ ಮಾಡಿರುವ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ಸೈಟ್ http://eproc.karnataka.gov.in ಸಂಪರ್ಕಿಸಬಹುದಾಗಿದೆ.

1) ಟೆಂಡರ್ ದಸ್ತಾವೇಜುಗಳನ್ನು ವೆಬ್ ಸೈಟಿನಿಂದ ಡೌನಲೋಡ ಮಾಡಿಕೊಳ್ಳಲು ಪ್ರಾರಂಭವಾಗುವ ದಿನಾಂಕ : **23.12.2021 ರಿಂದ 10.01.2022 ವರೆಗೆ**, 2) ಭರ್ತಿ ಮಾಡಿದ ಟೆಂಡರ ಸಲ್ಲಿಸಲು ಕೊನೆಯ ದಿನಾಂಕ : **10.01.2022 ರಂದು 17:00 ಗಂಟೆಯವರೆಗೆ**, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **12.01.2022 ರಂದು 11.00 ಗಂಟೆಯ ನಂತರ**, 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾಕುನೀ & ನೈ ವಿಭಾಗ-ಬೀದರ

ವಾ.ಸಾ.ಸಂ.ಇ/ಬೀದರ/233/ಐಸಿಕೆ&ಎ/2021-22

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸ.ನೀ. ಮತ್ತು ಅಂ.ಅ ವಿಭಾಗ, ಮಂಡ್ಯ

ಟೆಂಡರ್ ಅಧಿಸೂಚನೆ ಸಂಖ್ಯೆ : 11 / 2022-22, ದಿನಾಂಕ : 22-12-2021

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ-571401 ಇವರು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯು-4 ರ ಪ್ರಕಾರ "ಇ" – ಪ್ರೊಕ್ಯೂರ್‌ಮೆಂಟ್‌ನಲ್ಲಿ ಏಟಂವಾರು ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ 4702– ವಿಶೇಷ ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ 10 ಕಾಮಗಾರಿಗಳಿದ್ದು ಟೆಂಡರಿಗಿಟ್ಟ ಮೊತ್ತ ಕನಿಷ್ಠ ರೂ. 4.56 ಲಕ್ಷಗಳಿಂದ ಗರಿಷ್ಠ **ರೂ. 30.00 ಲಕ್ಷಗಳಾಗಿರುತ್ತದೆ** ಹಾಗೂ ಇ.ಎಂ.ಡಿ ಕನಿಷ್ಠ **ರೂ. 11400, ಗರಿಷ್ಠ ರೂ. 75000 ಗಳಾಗಿರುತ್ತದೆ.** ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಈ ಕಛೇರಿ ವೇಳೆಯಲ್ಲಿ ದಿನಾಂಕ : **30.12.2021 ರವರೆಗೆ** ಪಡೆಯಬಹುದಾಗಿದೆ. **ದಿನಾಂಕ:07.01.2022ರ 17–00 ಗಂಟೆವರೆಗೆ** ಟೆಂಡರ್‌ನ ನಿಗದಿತ ನಮೂನೆಗಳನ್ನು **"www.eproc.karnataka.gov.in"** ನಲ್ಲಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ.ಯೊಂದಿಗೆ ಕೆಳಕಂಡ ಕಾಲಂಗಳನ್ನುಳ್ಳ ಬಿಡ್ಡನ್ನು ಅಪ್ ಲೋಡ್ ಮಾಡಬಹುದಾಗಿದೆ. ಈ ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ತ್ತು ಆರ್ಥಿಕ ಬಿಡ್ಡನ್ನು **ದಿನಾಂಕ : 11.01.2022 ರಂದು ಬೆಳಿಗ್ಗೆ : 11.00 ಗಂಟೆಗೆ** ತೆರೆಯಲಾಗುವುದು. ಟೆಂಡರ್ ದಾಖಲಾತಿಗಳನ್ನು ವೆಬ್ ಸೈಟ್ **"www.eproc.karnataka.gov.in"** ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯ ಬಹುದು.

ವಿ.ಸೂ : ಸದರಿ ಟೆಂಡರ್‌ನ ಕಾಮಗಾರಿಯನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ ಇವರಿಗೆ ಕಾಯ್ದಿರಿಸಲಾಗಿದೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳನ್ನು "ಇ" – ಪ್ರಕಟಣೆಗಳಲ್ಲಿಯೇ ಪ್ರಕಟಿಸಲಾಗುವುದು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸ.ನೀ.ಮತ್ತು ಅಂ.ಅ.ವಿಭಾಗ, ಮಂಡ್ಯ

ವಾಸಾಸಂಇ/ಸಸ-ಮಂಡ್ಯ/ಎಂಎ/478/2021-22

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಗದಗ
ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.

ನಂ:ಕಾ.ಅ.ಪಂ.ರಾಜ್.ಇಂ.ವಿ/ಗದಗ/ಟಿಬಿ-1/ಟೆಂಡರ್/2021-22/3245 ದಿನಾಂಕ : 23-12-2021

ಇ-ಪ್ರೊಕ್ಯೂರ್‌ಮೆಂಟ ಟೆಂಡರ ಪ್ರಕಟಣೆ
Standard Bid Document KW-4 [ದ್ವಿಲಕೋಟೆ ಪದ್ಧತಿ]

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್-2000 ನಿಯಮದಂತೆ Standard Bid Document KW-4ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ 2 ಕಾಮಗಾರಿಗಳಿಗೆ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ:2021-22ನೇ ಸಾಲಿನ 5054–03–337–0–75–059 ಯೋಜನೆ ಕೆಳಕಾಣಿಸಿದ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್, https://eproc.karnataka.gov.in ಮುಖಾಂತರ ಭಾಗವಹಿಸಬಹುದು. ವಿವರ ಈ ಕೆಳಗಿನಂತಿದೆ.

ಕ್ರ. ಸಂ.	ಕಾಮಗಾರಿಯ ಹೆಸರು / ವರ್ಕ ಇಂಡೆಂಟ್	ಟೆಂಡರಿಗಿಟ್ಟ ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ (ಇ-ಪೋರ್ಟಲ್ ಮುಖಾಂತರ)	ಕಾಮಗಾರಿ ಅವಧಿ (ಮಳೆಗಾಲ ಸೇರಿ)	ಗುತ್ತಿಗೆದಾರರ ದರ್ಜೆ
1	IMPROVEMENTS TO ROAD FROM BENNIHALLI VILLAGE TO TIPPAPUR IN MUNDARAGI TALUKA OF GADAG DIST. UNDER 2021-22 5054. WORK_INDENT86766	13269627.56	0.00 EMD Declaration	9 ತಿಂಗಳು	2 ನೇ ದರ್ಜೆ ಹಾಗೂ ಮೇಲ್ಪಟ್ಟು KW-4
2	IMPROVEMENTS TO ROAD FROM MUKTAMPUR VILLAGE TO BUDIHAL IN MUNDARAGI TALUKA OF GADAG DIST. UNDER 2021-22 5404 WORK_INDENT86777	13256746.59	0.00 EMD Declaration	9 ತಿಂಗಳು	2 ನೇ ದರ್ಜೆ ಹಾಗೂ ಮೇಲ್ಪಟ್ಟು KW-4

ಇ-ಪ್ರೊಕ್ಯೂರ್‌ಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್-ಬಿ ಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ 28–12–2021 ರಿಂದ 04–01–2022 16.00 ಗಂಟೆಯವರೆಗೆ. ಪ್ರಿಬಿಡ್ ಮೀಟಿಂಗ್ : 01–01–2022 ರಂದು 16:00:00 ಗಂಟೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 06–01–2022 ರಂದು 16.30 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ : 08–01–2022 ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಂದು ಭಾಗವಹಿಸಿದ ಗುತ್ತಿಗೆದಾರರಲ್ಲಿ ಅರ್ಥಿಕ ಬಿಡ್‌ನಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ-ಪದ್ಧತಿ ಇರುವುದರಿಂದ ಕಾಗದ ರೂಪದಲ್ಲಿ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್,
ಪಂ.ರಾಜ್. ಇಂಜಿನೀಯರಿಂಗ್ ವಿಭಾಗ, ಗದಗ

ವಾವಾಸಂಇ/ಗದಗ/ಎಂ.ಸಿ.ಎ/407/2021-22

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯನಿರ್ವಾಹಕ ಇಂಜಿನೀಯರರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ ಬಳ್ಳಾರಿ

ಐಎಫ್‌ಬಿ ಸಂಖ್ಯೆ ಲೋಇ/ಕಾಇ/ಬಿ/ಟಿಎಸ್5/2021-22/ ದಿನಾಂಕ: 22.12.20021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ನೊಂದಾಯಿತರಾದ ಅಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಈ ಕೆಳಕಾಣಿಸಿದ ಕಾಮಗಾರಿಗಳಲ್ಲಿ ಕ್ರಸಂ. 1 ರಿಂದ 8 ರ ವರೆಗಿನ ಕಾಮಗಾರಿಗಳಿಗೆ ಏಕಲಕೋಟೆ ಪದ್ಧತಿಯಲ್ಲಿ ಹಾಗೂ ಕ್ರ.ಸಂ. 9 ಕಾಮಗಾರಿ ದ್ವಿಲಕೋಟೆ ಪದ್ಧತಿಯಡಿ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ಇದಕ್ಕಾಗಿ ಗುತ್ತಿಗೆದಾರರು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ http://eproc.karnataka.gov.in ಮುಖಾಂತರ ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಯ ವಿವರ	ಟೆಂಡರ್‌ಗೆ ಸೂಚಿಸಿದ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	2	3
1	WORK_INDENT 141207 (Reserved of SC)	24.00
2	WORK_INDENT 142806 (Reserved of SC)	31.40
3	WORK_INDENT 142895 (Reserved of ST)	17.00
4	WORK_INDENT 142804 (Others)	31.40
5	WORK_INDENT 142805 (Others)	22.00
6	WORK_INDENT 140837 (Others)	17.00
7	WORK_INDENT 140423/2nd Call (Others)	17.00
8	KPWD/2021-22/RD/WORK_INDENT 144524 (Others)	10.00
9	WORK_INDENT 141400 (Others)	62.80

ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ನೀಡಲ್ಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರ ಯಾವುದೇ ಬದಲಾವಣೆಗಳನ್ನು ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಟೆಂಡರಿನ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ :	
1) ಟೆಂಡರ್ ಆಹ್ವಾನಿಸಲಾಗಿದ ನಿಗದಿಪಡಿಸಿದ ದಿನಾಂಕ	24–12–2021 ರಂದು 12:00 ಗಂಟೆ ವರೆಗೆ
2) ಇ-ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	31–12–2021 ರಂದು 16:00 ಗಂಟೆಯ ವರೆಗೆ
3) ಕ್ರ.ಸಂ. 9ಕ್ಕೆ ತಾಂತ್ರಿಕ ಬಿಡ್ಡನ್ನು ಹಾಗೂ ಕ್ರ.ಸಂ. 1 ರಿಂದ 8ರ ವರೆಗಿನ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	01–01–2022 ರಂದು 16:30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್ ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಚೇರಿಯಲ್ಲಿ ತೆರೆಯಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್, ಲೋ.ಇ. ವಿಭಾಗ, ಬಳ್ಳಾರಿ

ಗುರುಲಿಂಗ ಕಾಪಸೆಗೆ 'ಶ್ರೀಸಾಹಿತ್ಯ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಶ್ರೀ ಪ್ರತಿಷ್ಠಾನದ ವತಿಯಿಂದ ನೀಡಲಾಗುವ 2022ನೇ ಸಾಲಿನ 'ಶ್ರೀಸಾಹಿತ್ಯ ಪ್ರಶಸ್ತಿ'ಗೆ ವಿದ್ವಾಂಸ ಗುರುಲಿಂಗ ಕಾಪಸೆ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರೊ.ಬಸವರಾಜ ಕಲ್ಗುಡಿ, ಎ.ವಿ. ನಾವಡ, ಗುರುಪಾದ ಮರಿಗುದ್ದಿ ಅವರು ಆಯ್ಕೆ ಸಮಿತಿಯಲ್ಲಿ ಇದ್ದರು.

ಪ್ರೊ.ಗುರುಲಿಂಗ ಕಾಪಸೆ

'ಪ್ರಶಸ್ತಿ ₹1 ಲಕ್ಷ ನಗದು ಹಾಗೂ ಸ್ಮರಣಿಕೆ ಒಳಗೊಂಡಿವೆ. ಬಿಎಂಶ್ರೀ ಪ್ರತಿಷ್ಠಾನದಲ್ಲಿ 2022ರ ಜನವರಿ ಎರಡನೇ ವಾರದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ' ಎಂದು ಪ್ರಕಟಣೆ ತಿಳಿಸಿದೆ.

26 ರಿಂದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಇದೇ 26ರಂದು ಮತ್ತು 27ರಂದು ಬೆಳಿಗ್ಗೆ 10ರಿಂದ ಸಂಜೆ 5ರ ಅವಧಿಯಲ್ಲಿ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಟಾಟಾ ಐಬಿಎಂ, ಎಸ್.ಜೆ. ಆರ್. ಪಾರ್ಕ್, ಸುಮಧುರಾ ಅಪಾರ್ಟ್‌ಮೆಂಟ್ ಸಮುಚ್ಚಯ, ನಲ್ಲೂರಹಳ್ಳಿ, ಯುಟಿಎಲ್ ಕಂಪನಿ, ವಿ.ಕೆ.ಟೆಕ್ ಪಾರ್ಕ್, ಗಾಯತ್ರಿ ಟೆಕ್ ಪಾರ್ಕ್, ಮೈಕ್ರೊ ಚಿಪ್, ವೈದೇಹಿ ಆಸ್ಪತ್ರೆ, ಸತ್ಯ ಸಾಯಿ ಬಾಬಾ ಆಸ್ಪತ್ರೆ, ಚನ್ನಮ್ಮ ಬಡಾವಣೆ, ಗ್ರಾಫೈಟ್ ಸಿಗ್ನಲ್, ಆಕಾಶ್ ಟೆಕ್‌ಪಾರ್ಕ್, ಜನತಾ ಕಾಲೋನಿ, ಕೋಡಿಪಾಳ್ಯ, ಅನ್ನಪೂರ್ಣೇಶ್ವರಿ ಬಡಾವಣೆ, ವಿದ್ಯಾಪೀಠ ರಸ್ತೆ, ಡಿ.ಬಿ. ಕಲ್ಲು, ಬಿ.ಜಿ.ಎಸ್. ಆಸ್ಪತ್ರೆ ರಸ್ತೆ, ಸಿದ್ಧಗಂಗಾ ಬಡಾವಣೆ, ಮಾರಣ್ಣ ಬಡಾವಣೆ, ಉಲ್ಲಾಳ ನಗರ, ಮಾರುತಿನಗರ, ಕುವೆಂಪು ಮುಖ್ಯ ರಸ್ತೆ, ಜಿ.ಕೆ. ಗಲ್ಲಿ, ಬಿಇಎಲ್ 1ನೇ ಮತ್ತು 2ನೇ ಹಂತ ಸುತ್ತಮುತ್ತ ಪ್ರದೇಶಗಳು.

ನೈಋತ್ಯ ರೈಲ್ವೆ

ಹರಾಜು ಕಾರ್ಯಕ್ರಮ ಸೂಚನೆ ಸಂ. S/XIII/05/2021-22

ನೈರುತ್ಯ ರೈಲ್ವೆಯ ಜನರಲ್ ಸ್ಟೋರ್ಸ್ ಡಿಪೋ / ಹುಬ್ಬಳ್ಳಿ, ಮೆಕ್ಯಾನಿಕಲ್ & ಜನರಲ್ ಸ್ಟೋರ್ಸ್ ಡಿಪೋ / ಅಶೋಕಪುರಂ ಡಿಪೋ ಮತ್ತು ಹುಬ್ಬಳ್ಳಿ, ಮೈಸೂರು ಮತ್ತು ಬೆಂಗಳೂರು ವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಆನ್‌ಲೈನ್ ಮತ್ತು ಡಿಪೋ ಸ್ಕ್ರಾಪ್ ಮಾರಾಟಕ್ಕಾಗಿ ಜನವರಿ ಮತ್ತು ಫೆಬ್ರುವರಿ – 2022 ತಿಂಗಳಲ್ಲಿ ನಡೆಯಲಿರುವ ಇ–ಹರಾಜಿನ ವೇಳಾಪಟ್ಟಿ ಈ ಕೆಳಗಿನಂತಿರುತ್ತದೆ.

ಹರಾಜಿನ ವಿಧ	ಸ್ಥಳ	ಜನವರಿ			ಫೆಬ್ರುವರಿ		
ಇ–ಹರಾಜು	ಜನರಲ್ ಸ್ಟೋರ್ಸ್ ಡಿಪೋ / ಹುಬ್ಬಳ್ಳಿ	7th	19th	31st	7th	16th	24th
	ಮೆಕ್ಯಾನಿಕಲ್ & ಜನರಲ್ ಸ್ಟೋರ್ಸ್ ಡಿಪೋ / ಅಶೋಕಪುರಂ (ಮೈಸೂರು)	5th	17th	27th	8th	17th	25th
	ಹುಬ್ಬಳ್ಳಿ ವಿಭಾಗ	6th	18th	28th	9th	18th	28th
	ಬೆಂಗಳೂರು ವಿಭಾಗ	4th	14th	25th	3rd	14th	23rd
	ಮೈಸೂರು ವಿಭಾಗ	3rd	13th	24th	2nd	11th	21st

ಹೆಚ್ಚಿನ ಮಾಹಿತಿಗಾಗಿ www.ireps.gov.in/E-auction ವೆಬ್‌ಸೈಟ್‌ಗೆ ಲಾಗಿನ್ ಆಗಿ

PUB/348/AAV/PRB/SWR/2021-22 ಪ್ರಧಾನ ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು, ಹುಬ್ಬಳ್ಳಿ

S.W.Railways | sw_rly | SWRRLY | southwesternrailway | SWRRLY

ಈ ಪ್ರಸಿದ್ಧ ಉತ್ಪನ್ನವನ್ನು ಶುದ್ಧ ಔಷಧೀಯ ಗಿಡಮೂಲಿಕೆಗಳೊಂದಿಗೆ ಪುರಾತನ ಆಯುರ್ವೇದಿಯ ಪದ್ಧತಿಯನುಸಾರ ಮಿಶ್ರಣ ಮಾಡಿ ತಯಾರಿಸಲಾಗಿದ್ದು ನಿಮ್ಮಲ್ಲಿ ಶಕ್ತಿ ಮತ್ತು ಉತ್ಸಾಹವನ್ನು ಉತ್ಪಾದಿಸಿ ಉಳಿಯುವಂತೆ ಮಾಡುತ್ತದೆ. ಹೆಚ್ಚಿನ ಶಕ್ತಿ, ಜೀವಂತಿಕೆ ಹಾಗೂ ತ್ರಾಣವನ್ನು ಅನುಭವಿಸುತ್ತೀರಿ.

ಜಪಾನಿ–M ಕ್ಯಾಪ್ಸ್ಯೂಲ್ (ಪುರುಷರಿಗೆ)

ಜಪಾನಿ–F ಕ್ಯಾಪ್ಸ್ಯೂಲ್ (ಸ್ತ್ರೀಯರಿಗೆ)

ಪ್ರತಿದಿನ ಬೆಳಗ್ಗೆ ಒಂದು ಮತ್ತು ರಾತ್ರಿ ಒಂದು ಸೇವಿಸಿ

ಇನ್ನೂ ಹೆಚ್ಚಿನ ಪರಿಣಾಮ ಪಡೆಯ ಬಯಸುವ ಪುರುಷರು ಜಪಾನಿ–M ಕ್ಯಾಪ್ಸ್ಯೂಲ್ ಜೊತೆಗೆ ಜಪಾನಿ ತೈಲವನ್ನು ಕೂಡ ನಿಯಮಿತವಾಗಿ ಬಳಸಬಹುದು.

ಎಲ್ಲ ಔಷಧಾಲಯ ಮತ್ತು ಆಯುರ್ವೇದಿಕ್ ಅಂಗಡಿಗಳಲ್ಲಿ ಲಭ್ಯ

ವಿಸ್ಟಾಡೋಮ್ ಕೋಚ್‌ಗಳಲ್ಲಿ ನಿಸರ್ಗದ ನಯನಮನೋಹರವಾದ ರಮಣೀಯ ದೃಶ್ಯಾವಳಿಯನ್ನು ಆನಂದಿಸಿ

ವಿಸ್ಟಾಡೋಮ್ ರೈಲುಗಳ ವೇಳಾಪಟ್ಟಿ

ಇಂದ – ಗೆ	ರೈಲು ಸಂಖ್ಯೆ	ಸೇವೆಯ ದಿನಗಳು	ನಿರ್ಗಮನ	ಆಗಮನ
ಯಶವಂತಪುರ ದಿಂದ ಶಿವಮೊಗ್ಗ ಟೌನ್	16579	ಪ್ರತಿದಿನ	ಯಶವಂತಪುರ ಬೆಳಿಗ್ಗೆ 9.15	ಶಿವಮೊಗ್ಗ ಟೌನ್ ಮಧ್ಯಾಹ್ನ 2.30
ಶಿವಮೊಗ್ಗ ಟೌನ್ ನಿಂದ ಯಶವಂತಪುರ	16580	ಪ್ರತಿದಿನ	ಶಿವಮೊಗ್ಗ ಟೌನ್ ಸಂಜೆ 3.30	ಯಶವಂತಪುರ ರಾತ್ರಿ 8.30

ದರ ರೂ.1130/– (ಒಂದು ದಾರಿಗೆ)

ಸ್ವಾತಂತ್ರ್ಯದ ಅಮೃತಮಹೋತ್ಸವ | ನೈಋತ್ಯ ರೈಲ್ವೆ ನಗುಮೊಗದೊಂದಿಗೆ ಗ್ರಾಹಕರ ಸೇವೆಯಲ್ಲಿ

PUB/354(D)/AAS/PRB/SWR/2021-22

www.swr.indianrailways.gov.in | facebook.com/S.W.Railways | twitter.com/SWRRLY

ಶ್ರೀ ಆರ್. ಕೃಷ್ಣಪ್ಪರವರಿಗೆ

(ಕರ್ನಾಟಕ ಸರ್ಕಾರದ ಮಾಜಿ ಮಂತ್ರಿಗಳು, ಕೆ.ಪಿ.ಸಿ.ಸಿ ಉಪಾಧ್ಯಕ್ಷರು ಹಾಗೂ ಎಸ್.ಆರ್.ಎಸ್ ವಿದ್ಯಾಸಂಸ್ಥೆಗಳ ಅಧ್ಯಕ್ಷರು)

ದಿನಾಂಖ: 25-12-2021 ರಂದು

75 ನೇ ಹುಟ್ಟು ಹಬ್ಬಕ್ಕೆ

ಪರಮಾತ್ಮನು ಆಯಸ್ಸು, ಆರೋಗ್ಯ ಹಾಗೂ ಅಂತಸ್ತುಗಳನ್ನು ಇನ್ನೂ ಹೆಚ್ಚಿನ ಕಾಲ ವೃದ್ಧಿಸಲೆಂದು ಹಾರೈಸುತ್ತೇವೆ.

ಹಾರ್ಧಿಕ ಶುಭಾಶಯಗಳನ್ನು ಕೋರುವವರು:

Excellence in education SRS INSTITUTES

ಶ್ರೀ ರೇವಣ ಸಿದ್ಧೇಶ್ವರ ವಿಧ್ಯಾಸಂಸ್ಥೆ ದತ್ತಿಯ

ಕಾರ್ಯದರ್ಶಿಗಳು, ನಿರ್ದೇಶಕರು, ಆಡಳಿತ ಮಂಡಲಿ, ಪ್ರಾಂಶುಪಾಲರು ಹಾಗೂ ಸಂಸ್ಥೆಯ ಎಲ್ಲಾ ಭೋಧಕ ಮತ್ತು ಭೋಧಕೇತರ ಸಿಬ್ಬಂದಿಯವರು.

ಸಮಸ್ತ ನಾಗರೀಕ ಬಂಧುಗಳಿಗೆ ಕ್ರಿಸ್‌ಮಸ್ ಹಾಗು ಹೊಸ ವರ್ಷದ ಶುಭಾಶಯಗಳು

ಅಭಿಯಾನಕ್ಕೆ ಉತ್ತಮ ಸ್ಪಂದನೆ • ಹಿಂದಿ ಹೇರಿಕೆಗೆ ಆಕ್ರೋಶ

'ಗ್ರಾಹಕ ಸೇವೆ ಕಾಣಲಿ ಕನ್ನಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಣಲಿ ಕನ್ನಡ, ಕೇಳಲಿ ಕನ್ನಡ, ಗ್ರಾಹಕ ಸೇವೆಯಲ್ಲಿ ಕನ್ನಡ'... ಎಲ್ಲಾ ತರಹದ ಸೇವೆಗಳೂ ಕನ್ನಡದಲ್ಲೇ ಸಿಗಬೇಕು ಎಂದು ಒತ್ತಾಯಿಸಿ ಕನ್ನಡ ಗ್ರಾಹಕರ ಕೂಟವು ರಾಷ್ಟ್ರೀಯ ಗ್ರಾಹಕರ ದಿನವಾದ ಶುಕ್ರವಾರ ಹಮ್ಮಿಕೊಂಡಿದ್ದ ಟ್ವಿಟರ್ ಅಭಿಯಾನದ ಘೋಷವಾಕ್ಯವಿದು. ಈ ಅಭಿಯಾನಕ್ಕೆ ಭಾರಿ ಬೆಂಬಲ ವ್ಯಕ್ತವಾಯಿತು.

ಬ್ಯಾಂಕ್‌ಗಳು ಹಾಗೂ ವಿವಿಧ ಕಂಪನಿಗಳು ಕನ್ನಡವನ್ನು ಕಡೆಗಣಿಸಿ, ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಸೇವೆ ಒದಗಿಸಲು ಆದ್ಯತೆ ನೀಡಿರುವುದಕ್ಕೆ ಹಲವು ಗ್ರಾಹಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಕನ್ನಡಿಗರ ಮೇಲೆ ಹಿಂದಿ ಹೇರುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಕಿಡಿಕಾರಿದ್ದಾರೆ. ಭಾರತೀಯ ಸ್ಟೇಟ್ ಬ್ಯಾಂಕ್‌ನ ದಿನನಿತ್ಯದ ವಹಿವಾಟಿನಲ್ಲಿ ಕನ್ನಡ ಬಳಕೆಗೆ ಆದ್ಯತೆ ನೀಡದ ಬಗ್ಗೆ ಗ್ರಾಹಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಜನರು ಖರೀದಿಸುವ ಉತ್ಪನ್ನಗಳ ಬಗ್ಗೆ ಮಾಹಿತಿ ಕನ್ನಡದಲ್ಲಿರಬೇಕು ಎಂಬ ಅರಿವು ಮೂಡಿಸುವ ಪ್ರಯತ್ನ ನಮ್ಮದು. ಈ ಅಭಿಯಾನದಲ್ಲಿ ಭಾಗವಹಿಸಿದ ಕನ್ನಡ ಮನಸ್ಸುಗಳಿಗೆ ಧನ್ಯವಾದಗಳು. ಗ್ರಾಹಕ ಸೇವೆಯಲ್ಲಿ ಕನ್ನಡ ಜಾರಿಯಾಗುವಂತೆ ಮಾಡಲು ಜನಾಂದೋಲನಕ್ಕಿಂತ ಮಿಗಿಲಾದ ಅನ್ಯ ಮಾರ್ಗ ಇಲ್ಲ. ಈ ಬೇಡಿಕೆಯನ್ನು ಪ್ರತಿದಿನವೂ ಮಂಡಿಸಬೇಕು. ಆಗ ಮಾತ್ರ ಬದಲಾವಣೆ ಸಾಧ್ಯ' ಎಂದು ಕನ್ನಡ ಗ್ರಾಹಕರ ಕೂಟ ತಿಳಿಸಿದೆ.

ಗ್ರಾಹಕರ ದಿನದ ಅಂಗವಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರೂ ಸಹ ವಿಡಿಯೊ ಸಂದೇಶವನ್ನು ಟ್ವೀಟ್ ಮಾಡಿದ್ದಾರೆ.

'ಗ್ರಾಹಕ ಸೇವೆಯಲ್ಲಿ ಕನ್ನಡಕ್ಕೆ ಆದ್ಯತೆ ಸಿಗಬೇಕು. ಅಂಚೆ ಕಚೇರಿಯಲ್ಲಿ ಪಿಂಚಣಿ ತೆಗೆದುಕೊಳ್ಳಲು ಇಂಗ್ಲಿಷ್ ಬಲ್ಲವರನ್ನು ಕರೆದುಕೊಂಡು ಬರಬೇಕೇ? ಇದು ಯಾವ ನ್ಯಾಯ ಸ್ವಾಮಿ. ಯಾರ ಮೇಲೆಯೂ ಅವಲಂಬನೆಯಾಗಬಾರದು ಎನ್ನುವ ಕಾರಣಕ್ಕೆ ವೃದ್ಧರು ಪಿಂಚಣಿ ತೆಗೆದುಕೊಳ್ಳಲು ಬರುತ್ತಾರೆ. ನಮ್ಮ ಭಾಷೆಯಲ್ಲೇ ಸೇವೆ ಕೊಡಿ. ಅವರ ಸ್ವಾವಲಂಬಿತನವನ್ನು ಹುರಿದುಂಬಿಸಿ' ಎಂದು ಒತ್ತಾಯಿಸಿದ್ದಾರೆ.

'ರಾಜ್ಯದ ನೆಲ, ಜಲ, ವಿದ್ಯುತ್ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಬಳಸಿಕೊಂಡಿರುವವರು ಉದ್ಯೋಗ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

'ಹಿಂದಿ ನಮ್ಮ ರಾಷ್ಟ್ರಿಯ ಭಾಷೆ ಅಲ್ಲ. 6.5 ಕೋಟಿ ಜನ ಶ್ರೇಷ್ಠ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಆದರೆ, ನಿಮ್ಮ ಹೋಟೆಲ್‌ಗಳಲ್ಲಿ ಕನ್ನಡದ ಫಲಕಗಳ ಕಾಣಿಸುವುದಿಲ್ಲ' ಎಂದು ಜಹೊಮ ತಿಪ್ಪೇಸ್ವಾಮಿ ಎನ್ನುವವರು ಡೊಮಿನೋಸ್ ಬಗ್ಗೆ ಟ್ವೀಟ್ ಮಾಡಿದ್ದಾರೆ.

'ಚಾಲುಕ್ಯರ ರಾಜಧಾನಿ ಬದಾಮಿಯಲ್ಲಿ ಸಾವಿರಾರು ವರ್ಷದ ಹಿಂದೆಯೇ ಕನ್ನಡ ರಾಜಭಾಷೆಯಾಗಿತ್ತು. ಇಂದು ಕನ್ನಡವನ್ನು ಹುಡುಕಬೇಕಿದೆ...' ಎಂದು ಟ್ವೀಟ್ ಮಾಡಿರುವ ಅರುಣ್ ಜಾವಗಲ್ ಅವರು ಭಾರತೀಯ ಪುರಾತತ್ವ ಇಲಾಖೆ ನೀಡುವ ಪ್ರವೇಶ ಚೀಟಿಯ ಚಿತ್ರವನ್ನು ಟ್ವೀಟ್ ಮಾಡಿದ್ದಾರೆ.

ಕೋವಿಡ್: ಒಂದೇ ದಿನ 400ಕ್ಕೂ ಅಧಿಕ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿದ್ದು, ಶುಕ್ರವಾರ ಒಂದೇ ದಿನ 405 ಮಂದಿ ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿದೆ.

ಕೆಲ ದಿನಗಳಿಂದ ಹೊಸ ಪ್ರಕರಣಗಳ ಸಂಖ್ಯೆ 300ರ ಗಡಿಯ ಆಸುಪಾಸಿನಲ್ಲಿತ್ತು. ಓಮೈಕ್ರಾನ್ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾಗುತ್ತಿರುವುದರಿಂದ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನೂ ಏರಿಕೆ ಮಾಡಲಾಗಿದೆ. ಒಂದು ದಿನದಲ್ಲಿ 1.14 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.35ರಷ್ಟಿದೆ. ಏಳು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 11 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬಳ್ಳಾರಿ ಸೇರಿದಂತೆ 11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರಿನಲ್ಲಿ 254 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉತ್ತರ ಕನ್ನಡದಲ್ಲಿ 32, ದಕ್ಷಿಣ ಕನ್ನಡದಲ್ಲಿ 20, ಕೋಲಾರದಲ್ಲಿ 18, ತುಮಕೂರಿನಲ್ಲಿ 16, ಉಡುಪಿ ಹಾಗೂ ಮೈಸೂರಿನಲ್ಲಿ ತಲಾ 13, ಕೊಡಗಿನಲ್ಲಿ 12 ಪ್ರಕರಣಗಳು ವರದಿಯಾಗಿವೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30.03 ಲಕ್ಷಕ್ಕೆ ದಾಟಿದೆ.

ಸೋಂಕಿತರಲ್ಲಿ 267 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.58 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 7,251ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿ 5,866 ಸೋಂಕಿತರಿದ್ದಾರೆ. ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಇಬ್ಬರು, ಬೆಳಗಾವಿ ಹಾಗೂ ಮೈಸೂರಿನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 0.98 ರಷ್ಟು ಇದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,305ಕ್ಕೆ ಏರಿಕೆಯಾಗಿದೆ.



ನಗರದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು	12,61,156
ಸಕ್ರಿಯ ಪ್ರಕರಣಗಳು	5,866
ಗುಣಮುಖರಾದವರು	12,38,908
ಒಟ್ಟು ಸಾವು	16,381
ದಿನದ ಏರಿಕೆ	
ಹೊಸ ಪ್ರಕರಣ	254
ಗುಣಮುಖ	128
ಸಾವು	2

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಇಲೆಕ್ಟ್ರಾನಿಕ್ಸ್ ಮತ್ತು ರಡಾರ್ ಅಭಿವೃದ್ಧಿ ಸಂಸ್ಥೆ
ಡಿಆರ್‌ಡಿಒ ಕಾಂಪ್ಲೆಕ್ಸ್, ಸಿ.ವಿ.ರಾಮನ್ ನಗರ, ಬೆಂಗಳೂರು–560093

ಎಲ್‌ಆರ್‌ಡಿಇ: ಜಾಹೀರಾತು ಸಂ. 04/ಅಡ್ಮಿನ್–ಎಂಐ ರೂಮ್/2021

ಇಲೆಕ್ಟ್ರಾನಿಕ್ಸ್ ಮತ್ತು ರಡಾರ್ ಅಭಿವೃದ್ಧಿ ಸಂಸ್ಥೆ (ಎಲ್‌ಆರ್‌ಡಿಇ) ಎಂಬ ಸಂಸ್ಥೆಯು ಭಾರತ ಸರ್ಕಾರದ ರಕ್ಷಣಾ ಸಚಿವಾಲಯದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಅಡಿಯಲ್ಲಿನ ಒಂದು ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಾಗಿದ್ದು ರಡಾರ್‌ಗಳು, ಇಲೆಕ್ಟ್ರಾನಿಕ್ಸ್ ಸಿಸ್ಟಮ್‌ಗಳು ಹಾಗೂ ಸಂಬಂಧಿತ ತಂತ್ರಜ್ಞಾನಗಳಿಗೆ ಸಂಬಂಧಿತ ಸೇವೆಗಳನ್ನು ಒದಗಿಸುತ್ತದೆ. ಸಿವಿಲಿಯನ್ ಮೆಡಿಕಲ್ ಆಫೀಸರ್ ಸೇವೆಗಳನ್ನು ಪಡೆಯಲು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲೆಂದು ಕೆಳಗಿನ ಅರ್ಹತಾ ಮಾನದಂಡಗಳನ್ನು ಪೂರೈಸಬಲ್ಲ ಅಭ್ಯರ್ಥಿಗಳಿಂದ ಇದೀಗ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆಯ ಹೆಸರು: ಸಿವಿಲಿಯನ್ ಮೆಡಿಕಲ್ ಆಫೀಸರ್ (ಗುತ್ತಿಗೆ ಆಧಾರದ ಮೇರೆಗೆ)
ಅಗತ್ಯ ವಿದ್ಯಾರ್ಹತೆ: ಎಂಬಿಬಿಎಸ್ (ಕರ್ನಾಟಕ ವೈದ್ಯಕೀಯ ಮಂಡಳಿಯಲ್ಲಿ ನೋಂದಾಯಿತ)
ಅಪೇಕ್ಷಣೀಯ ಅರ್ಹತೆ: ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಾರ್ಯನಿರ್ವಹಿಸಿದ ಅನುಭವ.
ಕೆಲಸದ ಸಮಯ: 0800 ರಿಂದ 1630 ಗಂಟೆ (ಸೋಮವಾರದಿಂದ ಶುಕ್ರವಾರ)
ಸಂಭಾವನೆ: ಸಂಭಾವನೆ (ಕ್ರೋಢೀಕೃತ/ಫಿಕ್ಸೆಡ್) ಮಾಸಿಕ ರೂ. 60,000/–
ಗುತ್ತಿಗೆ ಅವಧಿ: ಒಂದು ವರ್ಷ ಅಥವಾ ರೆಗ್ಯೂಲರ್ ಅಭ್ಯರ್ಥಿ ಹಾಜರಾಗುವವರೆಗೆ ಯಾವುದು ಮೊದಲೊ ಅದು.

ಬಿಳಿ ಹಾಳೆಯಲ್ಲಿ ಟೈಪ್ ಮಾಡಿದ ಅರ್ಜಿಯ ಜೊತೆಗೆ, ಜನ್ಮದಿನಾಂಕದ ಪುರಾವೆಗಾಗಿ ಸ್ವಯಂ ದೃಢೀಕೃತ ಮೆಟ್ರಿಕ್ಯುಲೇಶನ್/ಎಸ್ಎಸ್ಎಲ್‌ಸಿ ಅಂಕಪಟ್ಟಿ, ಪದವಿ ಪ್ರಮಾಣಪತ್ರ/ಅಂಕಪಟ್ಟಿ, ವೃತ್ತಿಗೆ ಸಂಬಂಧಿತ ಮತ್ತು ಅನುಭವದ ಪ್ರಮಾಣಪತ್ರಗಳ, ವಿಳಾಸ (ಪ್ರಸ್ತುತ ಮತ್ತು ಶಾಶ್ವತ ವಿಳಾಸ, ಮೊಬೈಲ್ ನಂಬರ್) ಜೊತೆಗೆ ಕೆಎಂಸಿ ನೋಂದಣಿ ಪ್ರಮಾಣಪತ್ರಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ, ಸದರಿ ಜಾಹೀರಾತು ದಿನಾಂಕದಿಂದ 21 ದಿನಗಳೊಳಗೆ ನಿರ್ದೇಶಕರು, ಎಲ್‌ಆರ್‌ಡಿಇ, ಸಿ.ವಿ.ರಾಮನ್ ನಗರ, ಬೆಂಗಳೂರು–560093 ಇವರಿಗೆ ಅಂಚೆ ಮೂಲಕ ರವಾನಿಸುವುದು.

DAVP 10301/11/0126/2122 ಸಹಿ/– ನಿರ್ದೇಶಕರು

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು–560001. ದೂರವಾಣಿ: 080–22204928

ಸಂಖ್ಯೆ: ಡಿಟಿಇ/ಪ್ಲಾನ್ 0/44/ಎಸ್‌ಪಿಎಸ್(1)2021 ದಿನಾಂಕ: 23/12/2021

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

2021–22 ನೇ ಸಾಲಿನಿಂದ ಪ್ರಾರಂಭವಾಗುತ್ತಿರುವ ಕೋರ್ಸ್ ಮತ್ತು ಕಾಲೇಜುಗಳಿಗೆ ಪೀಠೋಪಕರಣಗಳ ಖರೀದಿಗಾಗಿ ಅರ್ಹ ಸರಬರಾಜುದಾರರಿಂದ ಇ–ಟೆಂಡರ್ ಕರೆಯಲಾಗಿದೆ.

1) ಇ–ಟೆಂಡರ್ ಪೋರ್ಟಲ್ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ : **23/12/2021**. 2) ಪ್ರೀ ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ : **28/12/2021 ಬೆಳಿಗ್ಗೆ 11.00 ಗಂಟೆಗೆ.** 3) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : **05/01/2022 ರ ಸಂಜೆ 5:00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 07/01/2022 ಬೆಳಿಗ್ಗೆ 11.00 ಗಂಟೆಗೆ. 5) ಹಣಕಾಸಿನ ಬಿಡ್ ತೆರೆಯುವ ದಿನಾಂಕ : 13/01/2022 ರ ಬೆಳಿಗ್ಗೆ 11.00 ಗಂಟೆಗೆ. 6) **ಟೆಂಡರ್ ತೆರೆಯಲಾಗುವ ಸ್ಥಳ :** ಆಯುಕ್ತರವರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, 3ನೇ ಮಹಡಿ, ಅರಮನೆ ರಸ್ತೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು–560001. 7) **ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹಾಗೂ ವಿಳಾಸ, ದೂರವಾಣಿ ಸಂಖ್ಯೆ :** ಜಂಟಿ ನಿರ್ದೇಶಕರು (ಯೋಜನೆ), ತಾಂತ್ರಿಕ ಶಿಕ್ಷಣ ಇಲಾಖೆ, 3ನೇ ಮಹಡಿ, ಅರಮನೆ ರಸ್ತೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು–560001.

ಇ–ಟೆಂಡರ್‌ಗೆ ಸಂಬಂಧಿಸಿದಂತೆ ಯಾವುದೇ ಸೂಚನೆ ನೀಡದೇ ರದ್ದುಪಡಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಇಲಾಖೆಯು ಕಾಯ್ದಿರಿಸಿದೆ. ಹೆಚ್ಚಿನ ವಿವರಗಳನ್ನು ಜಾಲತಾಣ http://www.eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/–
ಜಂಟಿ ನಿರ್ದೇಶಕರು (ಆಡಳಿತ)
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ

ವಾ.ಸಾ.ಸಂ.ಇ/ಬೆಂ.ನಗರ/2538/ಆಕಾರ್/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಉದ್ಯೋಗ ಸ್ಥಳದಲ್ಲಿ ಲೈಂಗಿಕ ಕಿರುಕುಳವೇ?

‘ಪಾಶ್’ ಅಡಿ ದೂರು ಕೊಡಿ!

ಉದ್ಯೋಗ ಸ್ಥಳದಲ್ಲಿ ಮಹಿಳೆಗೆ ಲೈಂಗಿಕ ದೌರ್ಜನ್ಯ ಉಂಟಾಗದಂತೆ ತಡೆಯುವುದು ‘ಪಾಶ್’ನ ಮುಖ್ಯ ಉದ್ದೇಶ. ಉದ್ಯೋಗದ ಸ್ಥಳದಲ್ಲಿ 10 ಅಥವಾ ಅದಕ್ಕಿಂತ ಹೆಚ್ಚು ಮಹಿಳೆಯರಿದ್ದರೆ ಅಲ್ಲಿ ‘ಪಾಶ್’ ಕಾಯ್ದೆಯಡಿ ಆಂತರಿಕ ದೂರು ಸಮಿತಿ ರಚಿಸಬೇಕು.

ಮಂಜುಶ್ರೀ ಎಂ. ಕಡಕೋಳ

ಉದ್ಯೋಗ ಸ್ಥಳಗಳಲ್ಲಿ ಮಹಿಳಾ ಸಿಬ್ಬಂದಿ ಮೇಲಿನ ದೌರ್ಜನ್ಯ ತಡೆಗೆ ಕೇಂದ್ರ ಸರ್ಕಾರ ‘ಪಾಶ್’ 2013 ಕಾಯ್ದೆಯಡಿ ಆಂತರಿಕ ದೂರು ಸಮಿತಿಗಳನ್ನು ರಚಿಸಬೇಕೆಂದು ಸೂಚಿಸಿದೆ. ಕರ್ನಾಟಕ ರಾಜ್ಯ ಮಹಿಳಾ ಆಯೋಗವು ಈಚೆಗೆ ಸರ್ಕಾರಿ ಮತ್ತು ಖಾಸಗಿ ವಲಯದ 5 ಸಾವಿರ ಸಂಸ್ಥೆಗಳಲ್ಲಿ ‘ಪಾಶ್’ ಕುರಿತು ಕೇಳಿದ ಮಾಹಿತಿಗೆ ಉತ್ತರ ನಿರಾಶದಾಯಕವಾಗಿತ್ತು. ಶೇ 70ರಷ್ಟು ಸಂಸ್ಥೆಗಳು ಇಂಥ ಸಮಿತಿಗಳ ಬಗ್ಗೆ ನಿರ್ಲಕ್ಷ್ಯವಹಿಸಿದ್ದು, ಕೆಲಸದ ಸ್ಥಳದಲ್ಲಿ ಮಹಿಳೆಯರ ಸುರಕ್ಷತೆಯನ್ನು ಪ್ರಶ್ನಿಸುವಂತಿದೆ.

ಉದ್ಯೋಗದ ಸ್ಥಳದಲ್ಲಿ ಅನುಭವಿಸುವ ಲೈಂಗಿಕ ದೌರ್ಜನ್ಯ, ಕಿರುಕುಳವನ್ನು ಬಹುತೇಕ ಮಹಿಳೆಯರು ತಾಳ್ಮೆಯಿಂದ ಸಹಿಸಿಕೊಳ್ಳುತ್ತಾರೆ. ಇದನ್ನು ಎದುರಿಸುವ ಬಗೆ ತಿಳಿಯಲಾರದೇ ಒಳಗೊಳಗೆ ನೋವು ತಿನ್ನುತ್ತಿರುವವರ ಸಂಖ್ಯೆಯೇನೂ ಕಡಿಮೆ ಇಲ್ಲ. ಆದರೆ, ವಿಶಾಖಾ ಮಾರ್ಗಸೂಚಿಯ ಪರಿಣಾಮ ರೂಪುಗೊಂಡ ಉದ್ಯೋಗದ ಸ್ಥಳದಲ್ಲಿ ದುಡಿಯುವ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟುವಿಕೆ ಕಾಯ್ದೆ (ಪಾಶ್) ಬಂದಾಗಿನಿಂದ ಇಂಥ ಹಲವು ದೌರ್ಜನ್ಯಗಳಿಗೆ ತಕ್ಕಮಟ್ಟಿಗೆ ಕಡಿವಾಣ ಬಿದ್ದಿರುವುದು ಸಮಾಧಾನಕರ.

ಏನಿದು ‘ಪಾಶ್’, ಇದರ ಮಹತ್ವವೇನು?

ಪ್ರಿವೆನ್ಷನ್ ಆಫ್ ಸೆಕ್ಷುಯೆಲ್ ಹೆರಾಸ್‌ಮೆಂಟ್‌ನ ಸಂಕ್ಷಿಪ್ತ ರೂಪವೇ ‘ಪಾಶ್’ (POSH). ಕೆಲಸದ ಸ್ಥಳದಲ್ಲಿ ಮಹಿಳೆಗೆ ಲೈಂಗಿಕ ದೌರ್ಜನ್ಯ ಉಂಟಾಗದಂತೆ ತಡೆಯುವುದು ‘ಪಾಶ್’ನ ಮುಖ್ಯ ಉದ್ದೇಶ. ಉದ್ಯೋಗದ ಸ್ಥಳದಲ್ಲಿ 10 ಅಥವಾ ಅದಕ್ಕಿಂತ ಹೆಚ್ಚು ಮಹಿಳೆಯರಿದ್ದರೆ ಅಲ್ಲಿ ‘ಪಾಶ್’ ಕಾಯ್ದೆಯಡಿ ಆಂತರಿಕ ಸಮಿತಿ ರಚಿಸಬೇಕು.

ಕೆಲಸದ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯ, ಕಿರುಕುಳಕ್ಕೆ ಸಂಬಂಧಿಸಿದ ದೂರುಗಳನ್ನು ಆಂತರಿಕ ದೂರು ಸಮಿತಿಯು ಪರಿಹರಿಸುತ್ತದೆ. ಉದ್ಯೋಗದ ಸ್ಥಳದಲ್ಲಿ ಮಹಿಳೆಯರಿಗೆ ಘನತೆ ಮತ್ತು ಸುರಕ್ಷತೆಯ ವಾತಾವರಣ ಕಲ್ಪಿಸುವ ಉದ್ದೇಶದಿಂದ ‘ಪಾಶ್’ ಕಾಯ್ದೆಯನ್ನು ಜಾರಿಗೆ ತರಲಾಗಿದೆ. ಆಂತರಿಕ ಸಮಿತಿಯಲ್ಲಿ ಮಹಿಳೆಯರು ಇರುವುದರಿಂದ ಸಂತ್ರಸ್ತೆ ದೂರು ನೀಡಲು ಹಿಂಜರಿಯಬೇಕಿಲ್ಲ. ಈ ಸಮಿತಿಯ ವರದಿಯನ್ನಾಧರಿಸಿ ದೌರ್ಜನ್ಯ ಎಸಗಿದವರ ವಿರುದ್ಧ ಕ್ರಮ ಕೈಗೊಳ್ಳಲು ಸಾಧ್ಯ. ಸರ್ಕಾರಿ, ಅರೆ ಸರ್ಕಾರಿ, ಸಂಘಟಿತ, ಅಸಂಘಟಿತ ಹೀಗೆ ಯಾವುದೇ ಕೆಲಸದ ಸ್ಥಳದಲ್ಲಿ ‘ಪಾಶ್’ ಕಾಯ್ದೆಯಡಿ ಆಂತರಿಕ ದೂರು ಸಮಿತಿ ಇರಬೇಕಾದದ್ದು ಕಡ್ಡಾಯ.

ಕೋವಿಡ್ ಸಮಯದಲ್ಲೂ ತಪ್ಪಿಲ್ಲ ಕಿರುಕುಳ!

ಕೋವಿಡ್–19 ಸಾಂಕ್ರಾಮಿಕ ರೋಗದ ಕಾರಣ ಹಲವೆಡೆ ಉದ್ಯೋಗಸ್ಥ ಮಹಿಳೆಯರು ಮನೆಯಿಂದಲೇ ಕಚೇರಿ ಕೆಲಸ ನಿರ್ವಹಿಸುತ್ತಿದ್ದಾರೆ. ಈ ಸಮಯದಲ್ಲೂ ಮಹಿಳೆಯರಿಗೆ ಲೈಂಗಿಕ ಕಿರುಕುಳ ತಪ್ಪಿಲ್ಲ ಎನ್ನುತ್ತವೆ ರಾಷ್ಟ್ರೀಯ ಮಹಿಳಾ ಆಯೋಗದ ವರದಿಗಳು.

‘ಮಹಿಳೆ ಮನೆಯಲ್ಲಾಗಲಿ, ಕಚೇರಿಯಲ್ಲಾಗಲಿ, ಎಲ್ಲೇ ದೌರ್ಜನ್ಯಕ್ಕೀಡಾದರೂ ದೂರು ಸಲ್ಲಿಸಬಹುದು. ಉದ್ಯೋಗ ಸ್ಥಳದಲ್ಲಿನ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ 2021ರ ಮಾರ್ಚ್‌ನಿಂದ ನವೆಂಬರ್ ತನಕ ರಾಜ್ಯ ಮಹಿಳಾ ಆಯೋಗಕ್ಕೆ ಒಟ್ಟು 161 ದೂರುಗಳು ಬಂದಿವೆ. ಇದರಲ್ಲಿ 28 ಪ್ರಕರಣಗಳು ಪರಿಹಾರವಾಗಿವೆ. ಇನ್ನುಳಿದ 133 ಪ್ರಕರಣಗಳನ್ನು ಆಯಾ ಸಂಬಂಧಿಸಿದ ಇಲಾಖೆಗಳಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ’ ಎಂದು ಮಾಹಿತಿ ನೀಡುತ್ತಾರೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಆರ್. ಪ್ರಮೀಳಾ ನಾಯ್ಡು.

ಆರ್. ಪ್ರಮೀಳಾ ನಾಯ್ಡು

‘ಕಚೇರಿಗಳಲ್ಲಿನ ಆಂತರಿಕ ದೂರು ಸಮಿತಿಯು ಹೇಗೆ ಕೆಲಸ ಮಾಡುತ್ತಿದೆ ಎನ್ನುವುದು ಮುಖ್ಯ. ಮುಖ್ಯವಾಗಿ ಕೆಲಸದ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯ, ಕಿರುಕುಳದ ಸ್ವರೂಪ ಯಾವ ರೀತಿ ಇರುತ್ತದೆ ಎಂಬ ಬಗ್ಗೆ ಉದ್ಯೋಗಿಗಳಿಗೆ ಸೂಕ್ತ ಮಾಹಿತಿ, ತರಬೇತಿ ನೀಡುವುದು ಅತ್ಯಗತ್ಯ. ಕೆಲಸದ ಸ್ಥಳಗಳಲ್ಲಿ ದೌರ್ಜನ್ಯಕ್ಕೀಡಾಗುವವರು ಬಹುತೇಕ ಕೆಳ ವರ್ಗದ ಮಹಿಳೆಯರೇ ಆಗಿರುತ್ತಾರೆ. ಕೆಲಸ ಕಳೆದುಕೊಳ್ಳುವ ಭೀತಿ, ಕೋವಿಡ್ ಒಡ್ಡಿದ ಆರ್ಥಿಕ ದುಸ್ಥಿತಿ, ಮುಂದಿನ ಭವಿಷ್ಯ ಇವುಗಳ ಕಾರಣಕ್ಕಾಗಿ ದೂರು ನೀಡಲು ಹಿಂಜರಿಯುವವರೇ ಹೆಚ್ಚು’ ಎಂದು ವಿಶ್ಲೇಷಿಸುತ್ತಾರೆ ವಕೀಲರಾದ ಆರ್. ಮಂಜುಳಾದೇವಿ.

ದೂರು ನೀಡಿದರೆ ಪರಿಹಾರ ಸಾಧ್ಯ

‘ಕಚೇರಿಯಲ್ಲಿ ಲೈಂಗಿಕ ಕಿರುಕುಳ ನೀಡುತ್ತಿದ್ದ ಸಹೋದ್ಯೋಗಿಯೊಬ್ಬರ ವಿರುದ್ಧ ಮಹಿಳೆಯೊಬ್ಬರು ದೂರು ನೀಡಿದ್ದರು. ಆ ಮಹಿಳೆ ಎಲ್ಲಿಯೂ ತನ್ನ ಹೆಸರನ್ನಾಗಲೀ, ಗುರುತನ್ನಾಗಲೀ ಹೇಳಿಕೊಂಡಿರಲಿಲ್ಲ. ಇದು ‘ಪಾಶ್’ನ ಆಂತರಿಕ ದೂರು ಸಮಿತಿಗೆ ಬಂದೊಡನೆ ಆ ಕಂಪನಿ, ದೌರ್ಜನ್ಯ ಎಸಗಿದ್ದ ಉದ್ಯೋಗಿಗೆ ಡಿಮೋಷನ್ ಮಾಡಿ ಕ್ರಮ ಕೈಗೊಂಡಿತ್ತು. ‘ಪಾಶ್’ನಿಂದಾಗಿ ಆ ಮಹಿಳೆ ಈಗ ಕಚೇರಿಯಲ್ಲಿ ನೆಮ್ಮದಿಯಾಗಿ ಕೆಲಸ ಮಾಡುವಂತಾಗಿದೆ’ ಎನ್ನುತ್ತಾರೆ ಖಾಸಗಿ ಕಂಪನಿಯೊಂದರ ಆಂತರಿಕ ದೂರು ಸಮಿತಿಯಲ್ಲಿ ಸದಸ್ಯರಾಗಿರುವ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಕಾರ್ಯದರ್ಶಿ ಶೋಭಾ ಎಸ್.

ಉದ್ಯೋಗದ ಸ್ಥಳದಲ್ಲಿ ಉಂಟಾಗುವ ಲೈಂಗಿಕ ಕಿರುಕುಳಗಳಿಂದ ಬೇಸತ್ತ ಹಲವು ಮಹಿಳೆಯರು ಕೆಲಸ ಬಿಡುವುದನ್ನೋ ಅಥವಾ ಬದಲಾಯಿಸುವುದನ್ನೋ ಮಾಡುತ್ತಾರೆ. ಆದರೆ, ಇಂಥ ಕಿರುಕುಳಗಳನ್ನು ‘ಪಾಶ್’ ಕಾಯ್ದೆಯಡಿ ದಿಟ್ಟತನದಿಂದ ಎದುರಿಸಿದಲ್ಲಿ ದೌರ್ಜನ್ಯ ಎಸಗಿದವರಿಗೆ ತಕ್ಕಪಾಠ ಕಲಿಸಿದಂತಾಗುತ್ತದೆ. ಈ ಪಾಠ ಇತರರಿಗೂ ಎಚ್ಚರಿಕೆ ನೀಡಿದಂತಾಗುತ್ತದೆ. ಕಾನೂನಿನ ಬೆಂಬಲವಿರುವಾಗ ಶೋಷಣೆ ಸಹಿಸಿಕೊಳ್ಳದೇ ಸಮಸ್ಯೆಗಳಿಂದ ಮುಕ್ತರಾಗುವುದೊಳಿತು. ❖

ದೌರ್ಜನ್ಯ ಸಹಿಸಿಕೊಳ್ಳದಿರಿ

ಮಹಿಳೆಯರ ಸಹಿಸಿಕೊಳ್ಳುವ ಗುಣವೇ ಸಮಸ್ಯೆಯಾಗಿದೆ. ಲೈಂಗಿಕ ದೌರ್ಜನ್ಯದ ಕುರಿತು ಯಾರಾದರೂ ಪ್ರಶ್ನಿಸಿದರೆ ಆಕೆಯನ್ನು ಮೇಲ್ನೋಟಕ್ಕೆ ‘ಗಟ್ಟಿಗಿತ್ತಿ’ ಎಂದು ಕರೆದರೂ, ಮುಂದಿನ ಪರಿಣಾಮಗಳು ಅವಳ ವಿರುದ್ಧವಾಗಿರುತ್ತವೆ. ಆದರೆ, ಕೆಲ ಹೆಣ್ಣುಮಕ್ಕಳು ಇವುಗಳನ್ನು ಮೀರಿಯೂ ದೂರು ನೀಡಿ ಪರಿಹಾರ ಕಂಡುಕೊಂಡ ನಿದರ್ಶನಗಳಿವೆ. ಎಷ್ಟೋ ಪ್ರಕರಣಗಳಲ್ಲಿ ಪುರುಷರೇ ಮಹಿಳೆಗೆ ಬೆಂಬಲ ನೀಡಿದ ಉದಾಹರಣೆಗಳಿವೆ.

ಆರ್. ಮಂಜುಳಾ ದೇವಿ, ವಕೀಲರು

ಸಮಾನತೆ ಇದ್ದಲ್ಲಿ ಕಿರುಕುಳ ತಪ್ಪುತ್ತದೆ

ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವ ಮಹಿಳಾ ಉದ್ಯೋಗಿಗಳು ಹೆಚ್ಚಿನ ಪ್ರಮಾಣದಲ್ಲಿ ಲೈಂಗಿಕ ದೌರ್ಜನ್ಯ ಎದುರಿಸುತ್ತಿದ್ದಾರೆ. ಆದರೆ, ಕೆಲಸ ಕಳೆದುಕೊಳ್ಳುವ ಭೀತಿಯಿಂದ ದೂರು ನೀಡುವುದು ವಿರಳ. ಎಲ್ಲ ಪ್ರಕರಣಗಳು ಸುಖಾಂತ್ಯವಾಗದಿದ್ದರೂ, ‘ಪಾಶ್’ ಕಾಯ್ದೆಯಡಿ ಕನಿಷ್ಠ ದೂರನ್ನಾದರೂ ನೀಡಬಹುದು ಎನ್ನುವುದು ಸಮಾಧಾನಕಾರ. ಕೆಲವು ಪ್ರಕರಣಗಳಲ್ಲಿ ದೌರ್ಜನ್ಯ ಎಸಗಿದವರನ್ನು ಕೆಲಸದಿಂದ ತೆಗೆದುಹಾಕಿದ ನಿದರ್ಶನಗಳೂ ಇವೆ. ಆದರೆ, ಕೆಲಸದ ಸ್ಥಳದಲ್ಲಿ ಹೆಣ್ಣು–ಗಂಡು ಇಬ್ಬರೂ ಸಮಾನರು ಎನ್ನುವ ಭಾವ ಬಾರದ ಹೊರತು ಇಂಥ ಕಿರುಕುಳಗಳು ತಪ್ಪಲ್ಲ.

ಪ್ರತಿಭಾ ಆರ್., ಅಧ್ಯಕ್ಷೆ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್

ದಂಪತಿಗಳಲ್ಲಿ ಲೈಂಗಿಕ ಜ್ಞಾನದ ಕೊರತೆ

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

- **24ರ ಯವತಿ. ಮಾರ್ಚ್ ತಿಂಗಳಲ್ಲಿ ಮದುವೆಯಾಗಿದ್ದೇನೆ. ನಾವಿಬ್ಬರೂ ತೆಳ್ಳಗಿದ್ದೇವೆ. 10-15 ನಿಮಿಷದ ಲೈಂಗಿಕ ಕ್ರಿಯೆಯ ನಂತರ ಪತಿಗೆ ಸ್ಖಲನವಾಗುತ್ತದೆ. ನಾವು ಸರಿಯಾದ ಲೈಂಗಿಕಕ್ರಿಯೆ ನಡೆಸುತ್ತಿದ್ದೇವೆಯೇ ಮತ್ತು ನಾನು ಗರ್ಭವತಿಯಾಗುತ್ತೇನೆಯೇ ಎನ್ನುವ ಆತಂಕ ಕಾಡುತ್ತಿದೆ. ಸಲಹೆ ನೀಡಿ.**

ಹೆಸರು, ಊರು ತಿಳಿಸಿಲ್ಲ.

ಲೈಂಗಿಕ ಕ್ರಿಯೆಯಿಂದ ಇಬ್ಬರಿಗೂ ತೃಪ್ತಿ ಸಮಾಧಾನಗಳು ಆಗುತ್ತಿವೆಯೇ? ಆಗುತ್ತಿದೆ ಎಂದಾದರೆ ನೀವು ಸೇರುತ್ತಿರುವ ರೀತಿ ಸರಿಯಾಗಿದೆ ಎಂದಾಯಿತಲ್ಲವೇ? ಇಬ್ಬರೂ ತೆಳ್ಳಗಿರುವುದು ನಿಮ್ಮ ಲೈಂಗಿಕ ತೃಪ್ತಿಗೆ ಮಕ್ಕಳಾಗುವುದಕ್ಕೆ ಸಂಬಂಧವಿರದ ಅಂಶ. ಸಂಭೋಗದ ನಂತರ ಸ್ಖಲನವಾದ ಹೆಚ್ಚಿನ ವೀರ್ಯವು ಹೊರಹೋಗುತ್ತದೆ ಎನ್ನುವುದು ನಿಮ್ಮ ಅನುಮಾನ ಆತಂಕಕ್ಕೆ ಕಾರಣವಿರಬಹುದೇ? ಹೀಗೆ ಹೊರಹೋಗುವುದು ಸಹಜವೇ. ಮದುವೆಯಾಗಿ ಇನ್ನೂ ವರ್ಷವೂ ಆಗಿಲ್ಲದಿರುವಾಗ ಮಕ್ಕಳನ್ನು ಪಡೆಯುವ ಆತುರವೇಕೆ? ಸದ್ಯ ಲೈಂಗಿಕ ಸುಖವನ್ನು ಹೊಂದುತ್ತಾ ಇಬ್ಬರ ನಡುವಿನ ಬಾಂಧವ್ಯವನ್ನು ಗಟ್ಟಿಮಾಡಿಕೊಳ್ಳಬಹುದಲ್ಲವೇ? ಇದರಿಂದ ಮುಂದಿನ ಸಂತಾನವನ್ನು ಉತ್ತಮವಾಗಿ ಬೆಳೆಸಲು ಸಹಾಯವಾಗುತ್ತದೆ. ಅಗತ್ಯವಿದ್ದರೆ ನಿಮ್ಮ ಕುಟುಂಬ ವೈದ್ಯರೊಡನೆ ಎಲ್ಲಾ ವಿಷಯಗಳನ್ನು ಮುಕ್ತವಾಗಿ ಚರ್ಚೆಮಾಡಿ.

- **ಪುರುಷ, ಥೈರಾಯ್ಡ್ ಸಮಸ್ಯೆಯಿದೆ. ಲೈಂಗಿಕ ಆಸಕ್ತಿ ಕಡಿಮೆಯಿದೆ. ನೀಲಿಚಿತ್ರ ನೋಡುವುದರಿಂದ ಆಸಕ್ತಿ ಹೆಚ್ಚಾಗುತ್ತಿದೆ. ಪರಿಹಾರವೇನು?**

ಹೆಸರು, ಊರು ತಿಳಿಸಿಲ್ಲ.

ನಿಮ್ಮ ಪ್ರಶ್ನೆಯಲ್ಲಿ ಸ್ಪಷ್ಟತೆಯಿಲ್ಲ. ವಯಸ್ಸು ಮತ್ತು ಕುಟುಂಬದ ವಿವರಗಳನ್ನು ನೀಡಿಲ್ಲ. ನೀಲಿಚಿತ್ರ ನೋಡಿದಾಗ ಲೈಂಗಿಕ ಆಸಕ್ತಿ ಕೆರಳುತ್ತದೆ ಎಂದು ನೀವು ಹೇಳುತ್ತಿದ್ದೀರಲ್ಲವೇ? ಹಾಗಿದ್ದರೆ ನಿಮಗೆ ಆಸಕ್ತಿ ಕಡಿಮೆಯಿದೆ ಎಂದು ಹೇಗೆ ಹೇಳಲು ಸಾಧ್ಯ. ನಿಮ್ಮ ಪತ್ನಿಯೊಡನೆ ಲೈಂಗಿಕ ಆಸಕ್ತಿ ಮೂಡುತ್ತಿಲ್ಲ ಎನ್ನುವುದು ನಿಮ್ಮ ಅಭಿಪ್ರಾಯವೇ? ಪತ್ನಿಗೂ ಆಸಕ್ತಿ ಇದೆಯೇ? ಇದ್ದರೆ ಅವರು ಬಯಸುವ ಲೈಂಗಿಕತೆ ಎಂತಹದ್ದು ಎಂದು ಕೇಳಿದ್ದೀರಾ? ನಿಮ್ಮ ಲೈಂಗಿಕ ಆಸಕ್ತಿಗಳನ್ನು ಅವರಿಗೆ ಹೇಳಿಕೊಂಡಿದ್ದೀರಾ? ಇಬ್ಬರ ಬಯಕೆಗಳನ್ನೂ ಪೂರೈಸಿಕೊಳ್ಳುವುದು ಹೇಗೆಂದು ಮಾತನಾಡಿದ್ದೀರಾ? ಇಂತಹ ವಿಚಾರಗಳನ್ನು ಇಬ್ಬರೂ ಮುಕ್ತವಾಗಿ ಚರ್ಚೆ ಮಾಡಿದರೆ ನೀಲಿಚಿತ್ರಗಳ ಅಗತ್ಯವಿಲ್ಲದೆ ನಿಮ್ಮ ಲೈಂಗಿಕ ಆಸಕ್ತಿಯೂ ಸಹಜವಾಗಿ ಕೆರಳುತ್ತದೆ.

- **ಪುರುಷ. 10 ವರ್ಷದಿಂದ ಹಸ್ತಮೈಥುನ ಸಮಸ್ಯೆಯಿದೆ. ಮದುವೆಯಾಗಿ 2ವರ್ಷವಾಗಿದೆ. ಈಗ ಮಕ್ಕಳಾಗುತ್ತಿಲ್ಲ. ಪರಿಹಾರವೇನು.**

ಹೆಸರು, ಊರು ತಿಳಿಸಿಲ್ಲ.

ಹಸ್ತಮೈಥುನಕ್ಕೂ ಮಕ್ಕಳಾಗುವುದಕ್ಕೂ ಸಂಬಂಧವಿಲ್ಲ ಎಂದು ಈ ಅಂಕಣದಲ್ಲಿ ಹಲವಾರು ಬಾರಿ ಹೇಳಲಾಗಿದೆ. ವೀರ್ಯಾಣುಗಳು ಸ್ಖಲನವಾಗದೆ ಹೊರಹೋಗದಿದ್ದರೂ ಅನಿರ್ದಿಷ್ಟ ಕಾಲದವರೆಗೆ ದೇಹದಲ್ಲಿ ಜೀವಂತವಾಗಿರುವುದಿಲ್ಲ. ನಿರ್ದಿಷ್ಟ ಸಮಯದ ನಂತರ ಅವು ನಾಶವಾಗಿ ಹೊಸದು ಸೃಷ್ಟಿಯಾಗುತ್ತಲೇ ಇರುತ್ತವೆ. ಮಕ್ಕಳಾಗದಿರುವುದಕ್ಕೆ ಹಲವಾರು ಕಾರಣಗಳಿರಬಹುದು. ನಿಮ್ಮ ಕುಟುಂಬ ವೈದ್ಯರಲ್ಲಿ ಸಲಹೆ ಪಡೆಯಿರಿ.

- **24ರ ಯುವತಿ. ಬಿಕಾಂ ಓದಿದ್ದೇನೆ. ಹಳ್ಳಿಯಲ್ಲಿ ಬೆಳೆದಿದ್ದು ಮೂರು ವರ್ಷಗಳಿಂದ ಅಜ್ಜಿಯ ಜೊತೆ ಬೆಂಗಳೂರಿನಲ್ಲಿದ್ದೇನೆ. ಕೆಲಸಕ್ಕೆ ಹೋಗುವ ಆಸೆಯಿದ್ದರೂ ಕೀಳರಿಮೆಯಿಂದ ಹೋಗಲಾಗುತ್ತಿಲ್ಲ. ಎಲ್ಲದಕ್ಕೂ ಬೇರೆಯವರ ಮೇಲೆ ಅವಲಂಬಿಸಿದ್ದೇನೆ ಎನ್ನುವ ನೋವಿದೆ. ಸ್ನೇಹಿತರು ಕಡಿಮೆ. ಒಂದೇ ವಿಷಯದ ಕುರಿತು ಯೋಚಿಸುತ್ತೇನೆ. ನಕಾರಾತ್ಮಕ ಯೋಚನೆಗಳೇ ಹೆಚ್ಚು. ಹೊಸಬರ ಜೊತೆ ಮಾತಾಡಲು ಭಯ. ಭಯದಿಂದ ಹೊರ ಬರುವುದು ಹೇಗೆ?**

ಹೆಸರು, ಊರು ತಿಳಿಸಿಲ್ಲ.

ನಿಮಗೆ ಕಾಡುತ್ತಿರುವುದು ಭಯವಲ್ಲ, ನಿಮ್ಮ ಬಗೆಗೆ ನಿಮ್ಮೊಳಗೆ ಆಳವಾಗಿ ಬೇರೂರಿರುವ ಹಿಂಜರಿಕೆ. ಕೆಲಸವನ್ನು ಪಡೆದುಕೊಳ್ಳಲು ನನಗೆ ಯೋಗ್ಯತೆಯಿದೆಯೇ? ಸಿಗುವ ಕೆಲಸವನ್ನು ನಿಭಾಯಿಸುವ ಶಕ್ತಿ ಇದೆಯೇ? ಸಾಧ್ಯವಾಗದಿದ್ದರೆ ಎಲ್ಲರಿಂದ ಅವಮಾನಿತಳಾಗುತ್ತೇನೆಯೇ? ಎಲ್ಲರ ಜೊತೆ ಬೆರೆತು ಸ್ನೇಹವನ್ನು ಗಳಿಸಲು ನನಗೆ ಸಾಧ್ಯವೇ? ಬೇರೆಯವರಿಂದ ಸ್ನೇಹ, ಗೌರವವನ್ನು ಪಡೆದುಕೊಳ್ಳುವ ಯೋಗ್ಯತೆ ನನಗಿದೆಯೇ? ಇಂತಹ ಹಲವಾರು ರೀತಿಯ ಹಿಂಜರಿಕೆಗಳು ನಿಮ್ಮನ್ನು ಕಾಡುತ್ತಿರಬಹುದು. ಮೊದಲು ಎಲ್ಲವನ್ನೂ ನಿಧಾನವಾಗಿ ಪಟ್ಟಿ ಮಾಡಿಕೊಳ್ಳಿ. ನಂತರ ಇಂತಹ ನಂಬಿಕೆಗಳು ನನ್ನಲ್ಲಿ ಹೇಗೆ ಮೂಡಿರಬಹುದು ಎಂದು ಯೋಚಿಸಿ. ನಿಮ್ಮ ಬಾಲ್ಯದ ಸಾಕಷ್ಟು ಅನುಭವಗಳು ನೆನಪಾಗಬಹುದು. ಬಾಲ್ಯದಲ್ಲಿ ಹೀಗೆ ಕೇಳಿದ್ದು ಕುಟುಂಬದವರ ಶಿಕ್ಷಕರ ಸುತ್ತಲಿನವರ ಅಭಿಪ್ರಾಯ ಮಾತ್ರ. ಅದು ನಿಮ್ಮ ಕುರಿತು ನೀವೇ ಹುಡುಕಿಕೊಂಡ ಸತ್ಯವಲ್ಲ ಅಲ್ಲವೇ? ನಿಮ್ಮನ್ನು ನೀವೇ ತಿಳಿದುಕೊಳ್ಳಬೇಕಾದರೆ ಸೂಕ್ತವಾದ ಒಂದು ಕೆಲಸವನ್ನು ಹುಡುಕಿ ಬದಲಾವಣೆಗೆ ನಾಂದಿ ಹಾಡಿ. ಸೋಲುಗಳನ್ನು ಒಪ್ಪಿಕೊಂಡು ಗೆಲುವನ್ನು ಆನಂದಿಸುತ್ತಾ ಮುನ್ನಡೆಯಿರಿ. ❖

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ. bhoomika@prajavani.co.in

ಬಗೆ ಬಗೆ ಕೇಕ್

ನಳಪಾಕ

ಟೂಟಿ ಫ್ರೂಟಿ ಕೇಕ್

ಬೇಕಾಗುವ ಸಾಮಗ್ರಿಗಳು: ಮೈದಾಹಿಟ್ಟು – ಒಂದೂವರೆ ಕಪ್, ಸಕ್ಕರೆಪುಡಿ – 1 ಕಪ್, ಗಟ್ಟಿ ಮೊಸರು – 1ಕಪ್, ಎಣ್ಣೆ – ಅರ್ಧ ಕಪ್, ಅಡುಗೆಸೋಡಾ – 1 ಚಮಚ, ವೆನಿಲಾ ಎಸೆನ್ಸ್ – 1 ಚಮಚ, ಉಪ್ಪು – ಚಿಟಿಕೆ.

ಟೂಟಿ ಫ್ರೂಟಿ ಮಿಶ್ರಣಕ್ಕೆ: ಟೂಟಿ ಫ್ರೂಟಿ – ಅರ್ಧ ಕಪ್, ಒಣದ್ರಾಕ್ಷಿ – ಸ್ವಲ್ಪ, ಗೋಡಂಬಿ – ಸ್ವಲ್ಪ, ಮೈದಾಹಿಟ್ಟು – 1 ಚಮಚ.

ತಯಾರಿಸುವ ವಿಧಾನ: ಬೌಲ್‌ವೊಂದರಲ್ಲಿ ಟೂಟಿ ಫ್ರೂಟಿ, ಒಣದ್ರಾಕ್ಷಿ ಹಾಗೂ ಗೋಡಂಬಿ ಹಾಕಿ. ಅದಕ್ಕೆ ಮೈದಾಹಿಟ್ಟು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಇನ್ನೊಂದು ಬೌಲ್‌ನಲ್ಲಿ ಮೊಸರು ಹಾಗೂ ಸಕ್ಕರೆ ಪುಡಿ ಸೇರಿಸಿ ಸಕ್ಕರೆ ಕರಗುವವರೆಗೂ ಚೆನ್ನಾಗಿ ಮಿಶ್ರಣ ಮಾಡಿ. ಅದಕ್ಕೆ ಅಡುಗೆ ಸೋಡಾ ಸೇರಿಸಿ ಐದು ನಿಮಿಷ ಬಿಡಿ. ನಂತರ ವೆನಿಲಾ ಎಸೆನ್ಸ್ ಹಾಗೂ ಮೈದಾಹಿಟ್ಟು ಸೇರಿಸಿ ಗಂಟಿಲ್ಲದಂತೆ ಚೆನ್ನಾಗಿ ಕಲೆಸಿ. ಈ ಮಿಶ್ರಣಕ್ಕೆ ಟೂಟಿ ಫ್ರೂಟಿ ಸೇರಿಸಿ. ಅದನ್ನು ಬೆಣ್ಣೆ ಸವರಿದ ಪ್ಯಾನ್‌ಗೆ ಸುರಿಯಿರಿ. ಅದನ್ನು ನಲವತ್ತು ನಿಮಿಷಗಳ ಕಾಲ ಬೇಯಿಸಿ. ಟೂಟಿ ಫ್ರೂಟಿ ಕೇಕ್ ಮಕ್ಕಳಿಗೆ ತಿನ್ನಲು ಇಷ್ಟವಾಗುತ್ತದೆ.



ಮೊಟ್ಟೆ ರಹಿತ ಸ್ಪಾಂಜ್ ಕೇಕ್

ಬೇಕಾಗುವ ಸಾಮಗ್ರಿಗಳು: ಮೊಸರು – 1ಕಪ್, ಸಕ್ಕರೆ – 1/2 ಕಪ್, ವೆನಿಲಾ ಎಕ್ಸ್‌ಟ್ರ್ಯಾಕ್ಟ್ – 1 ಚಮಚ, ಎಣ್ಣೆ – 1 ಚಮಚ, ಅಡುಗೆ ಸೋಡಾ – 1 ಚಮಚ, ಮೈದಾಹಿಟ್ಟು – 2 ಕಪ್, ಹಾಲು – 3 ಚಮಚ

ತಯಾರಿಸುವ ವಿಧಾನ: ಒಂದು ಅಗಲವಾದ ಬೌಲ್‌ಗೆ ಮೊಸರು, ಸಕ್ಕರೆ ಹಾಗೂ ವೆನಿಲಾ ಎಕ್ಸ್‌ಟ್ರ್ಯಾಕ್ಟ್ ಹಾಕಿ ಸಕ್ಕರೆ ಕರಗುವವರೆಗೂ ಮಿಶ್ರಣ ಮಾಡಿ. ಅದಕ್ಕೆ ಅಡುಗೆಸೋಡಾ ಸೇರಿಸಿ ಚೆನ್ನಾಗಿ ಕಲೆಸಿ. ನಂತರ ಜರಡಿ ಹಿಡಿದ ಮೈದಾಹಿಟ್ಟು ಸೇರಿಸಿ ಈ ಎಲ್ಲವನ್ನು ಚೆನ್ನಾಗಿ ಮಿಶ್ರಣ ಮಾಡಿ. ಅದಕ್ಕೆ 3 ಚಮಚ ಹಾಲು ಸೇರಿಸಿ ಮತ್ತೆ ಚೆನ್ನಾಗಿ ಕಲೆಸಿ. ಅದನ್ನು ಎಣ್ಣೆ ಅಥವಾ ಬೆಣ್ಣೆ ಸವರಿದ ಪ್ಯಾನ್‌ಗೆ ಸುರಿದು ಓವೆನ್‌ನಲ್ಲಿ ಅರ್ಧ ಗಂಟೆ ಬೇಯಿಸಿ. ಓವೆನ್ ಇಲ್ಲದೇ ಇದ್ದವರು ಗ್ಯಾಸ್ ಮೇಲೆ ಪಾತ್ರೆಯಲ್ಲಿಟ್ಟು ಬೇಯಿಸಬಹುದು. ಆದರೆ ಗ್ಯಾಸ್ ಮೇಲೆ 45 ನಿಮಿಷಗಳವರೆಗೆ ಬೇಯಿಸಬೇಕಾಗುತ್ತದೆ. ಇದರ ಮೇಲೆ ನಿಮಗೆ ಬೇಕಾದ ಹಾಗೆ ಫ್ರಾಸ್ಟಿಂಗ್ ಮಾಡಿಕೊಳ್ಳಬಹುದು. ಫ್ರಾಸ್ಟಿಂಗ್ ಇಷ್ಟ ಇಲ್ಲದವರು ಹಾಗೆಯೇ ತಿನ್ನಬಹುದು.

ಬಾಳೆಹಣ್ಣಿನ ಕೇಕ್

ಬೇಕಾಗುವ ಸಾಮಗ್ರಿಗಳು: ಮೈದಾಹಿಟ್ಟು – ಎರಡೂವರೆ ಕಪ್, ಅಡುಗೆ ಸೋಡಾ – 1 ಚಮಚ, ಉಪ್ಪು – ಚಿಟಿಕೆ, ಬೆಣ್ಣೆ – ಅರ್ಧ ಕಪ್, ಸಕ್ಕರೆ – 1 ಕಪ್, ಕಂದು ಬಣ್ಣದ ಸಕ್ಕರೆ – ಮುಕ್ಕಾಲು ಕಪ್, ಮೊಟ್ಟೆ – 2, ಕಳಿತ ಬಾಳೆಹಣ್ಣು – 4 (ನುಣ್ಣಗೆ ಮಾಡಿಕೊಳ್ಳಿ), ಮಜ್ಜಿಗೆ – ಮುಕ್ಕಾಲು, ವಾಲ್‌ನಟ್ – ಅರ್ಧ ಕಪ್

ತಯಾರಿಸುವ ವಿಧಾನ: ಕೇಕ್ ಪ್ಯಾನ್‌ಗೆ ಬೆಣ್ಣೆ ಸವರಿ ಇಡಿ. ಒಂದು ಬೌಲ್‌ನಲ್ಲಿ ಮೈದಾಹಿಟ್ಟು, ಅಡುಗೆಸೋಡಾ ಹಾಗೂ ಉಪ್ಪು ಸೇರಿಸಿ ಕಲೆಸಿ ಇಡಿ. ಇನ್ನೊಂದು ಅಗಲವಾದ ಬೌಲ್‌ನಲ್ಲಿ ಬೆಣ್ಣೆ, ಸಕ್ಕರೆ, ಕಂದು ಸಕ್ಕರೆ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಅದಕ್ಕೆ ಮೊಟ್ಟೆ ಒಡೆದು ಹಾಕಿ. ಅದಕ್ಕೆ ಬಾಳೆಹಣ್ಣನ್ನು ಸೇರಿಸಿ. ನಂತರ ಮೊದಲೇ ತಯಾರಿಸಿಕೊಂಡ ಹಿಟ್ಟನ್ನು ಹಾಕಿ ಅದರ ಮೇಲೆ ಮಜ್ಜಿಗೆ ಹಾಕಿ ಎಲ್ಲವನ್ನೂ ಚೆನ್ನಾಗಿ ಮಿಶ್ರಣ ಮಾಡಿ. ಕೊನೆಯಲ್ಲಿ ವಾಲ್‌ನಟ್ ಸೇರಿಸಿ ಕಲೆಸಿ. ಅದನ್ನು ಪ್ಯಾನ್‌ಗೆ ಸುರಿಯಿರಿ. ಓವೆನ್‌ನಲ್ಲಿ 30 ನಿಮಿಷಗಳ ಕಾಲ ಬೇಯಿಸಿ. ಈಗ ನಿಮ್ಮ ಮುಂದೆ ರುಚಿಯಾದ ಬಾಳೆಹಣ್ಣಿನ ಕೇಕ್ ತಿನ್ನಲು ಸಿದ್ಧ.

ಚಳಿಗಾಲದಲ್ಲಿ ತ್ವಚೆಯ ಆರೈಕೆಗೆ ಮನೆಮದ್ದು

ಸೌಂದರ್ಯ

ಚರ್ಮ ಕಾಂತಿ ಹೆಚ್ಚಿಸಲು, ಕಲೆಗಳ ನಿವಾರಣೆಗೆ ಮತ್ತು ಸುಕ್ಕುಗಟ್ಟದಂತೆ ತಡೆಯಲು ಮಾರುಕಟ್ಟೆಯಲ್ಲಿ ವಿಧ ವಿಧವಾದ ರಾಸಾಯನಿಕಯುಕ್ತ ಕ್ರೀಮ್, ಲೋಷನ್‌ಗಳು ಲಭ್ಯವಿವೆ. ಆದರೆ ಇವೆಲ್ಲ ಚರ್ಮದ ಸಮಸ್ಯೆಗಳಿಗೆ ತಕ್ಷಣಕ್ಕೆ ಪರಿಹಾರ ನೀಡುತ್ತವೆಯಾದರೂ, ದೀರ್ಘಕಾಲದ ಬಳಕೆಯಿಂದ ಚರ್ಮ ಕಳೆಗುಂದಲು ಕಾರಣವಾಗುತ್ತವೆ. ಇದು ಹಲವರಿಗೆ ತಿಳಿದಿರುವ ವಿಷಯ. ಹಾಗಾದರೆ, ಇದಕ್ಕೆ ಪರಿಹಾರವೇನು?

ಮನೆಯಲ್ಲೇ ಇರುವ ವಸ್ತುಗಳನ್ನು ಬಳಸಿ ತಯಾರಿಸಿದ ಔಷಧದಿಂದ, ಖರ್ಚಿಲ್ಲದೇ ಹಾಗೂ ಅಡ್ಡಪರಿಣಾಗಳಿಲ್ಲದೇ, ತ್ವಚೆಯ ಆರೈಕೆ ಮಾಡಿಕೊಳ್ಳಬಹುದು. ಇಂಥ ಮನೆಮದ್ದಿನ ಕುರಿತು ಬೆಂಗಳೂರಿನ ಯೋಗಶಿಕ್ಷಕಿ **ರಜನಿ ಶ್ರೀಕಾಂತ ಮಿರ್ಜಿ** ಒಂದಿಷ್ಟು ಟಿಪ್ಸ್‌ಗಳನ್ನು ನೀಡಿದ್ದಾರೆ.

1. ಕಿತ್ತಳೆ ಹಣ್ಣಿನ ಸಿಪ್ಪೆಯನ್ನು ಒಣಗಿಸಿ ಪುಡಿ ಮಾಡಿಕೊಳ್ಳಿ. ಅದಕ್ಕೆ ಅರ್ಧ ಟೀ ಚಮಚ ಅರಿಸಿನ, ಹಾಲಿನ ಕೆನೆ ಅಥವಾ ಹಾಲಿನಲ್ಲಿ 10 ನಿಮಿಷ ನೆನಸಿಟ್ಟು, ರಾತ್ರಿ ಮುಖ, ಕೈ, ಕುತ್ತಿಗೆ ಭಾಗಕ್ಕೆ ಹಚ್ಚಿಕೊಳ್ಳಬೇಕು. ಒಂದು ತಾಸು ಬಿಟ್ಟು ಉಗುರು ಬೆಚ್ಚಗಿನ ನೀರಿನಲ್ಲಿ ಮುಖ ತೊಳೆದುಕೊಳ್ಳಬೇಕು. ಎಣ್ಣೆ ಚರ್ಮದವರು ಕೆನೆ/ಹಾಲಿನ ಬದಲು ಮೊಸರನ್ನು ಬಳಸಬಹುದು. ಪ್ರತಿದಿನವೂ ಈ ಮಿಶ್ರಣವನ್ನು ಹಚ್ಚಿಕೊಳ್ಳುವುದರಿಂದ ತ್ವಚೆ ಬಿರಿಯುವಿಕೆ, ಸುಕ್ಕುಗಟ್ಟುವಿಕೆಯಿಂದ ರಕ್ಷಣೆ ಪಡೆದು, ಚರ್ಮದ ಕಾಂತಿಯನ್ನು ಕಾಪಾಡಿಕೊಳ್ಳಬಹುದು.
2. ಲೋಳೆಸರ (ಅಲೊವೆರಾ), ಅರಿಸಿನ, ರೋಸ್ ವಾಟರ್ ಅನ್ನು ಸಮಪ್ರಮಾಣದಲ್ಲಿ ಮಿಶ್ರಣ ಮಾಡಿ. ಅದನ್ನು ರಾತ್ರಿ ಮಲಗುವಾಗ ಮುಖ, ಮೈ, ಕೈ ಕಾಲುಗಳಿಗೆ ಹಚ್ಚಿ. ಬೆಳಿಗ್ಗೆ ಉಗುರು ಬೆಚ್ಚಗಿನ ನೀರಿನಿಂದ ತೊಳೆದುಕೊಳ್ಳಬೇಕು. ಪ್ರತಿನಿತ್ಯ ಈ ಮಿಶ್ರಣ ಬಳಸುವುದರಿಂದ ಚರ್ಮ ಮೃದುವಾಗಿ, ಕಾಂತಿಯುತವಾಗಿ ಇರಲಿದೆ.
3. ಮುಲ್ತಾನಿ ಮಿಟ್ಟಿಯನ್ನು ಮೊಸರಿನಲ್ಲಿ ಹಾಕಿ. ಇದು ಮೊಸರನ್ನು ಹೀರಿಕೊಂಡ ಮೇಲೆ ಅದಕ್ಕೆ ಅರ್ಧ ಚಮಚ ಜೇನಿನಮೇಣ ಹಾಗೂ ಲೋಳೆಸರ ಸೇರಿಸಿ ಸರಿಯಾಗಿ ಕಲೆಸಬೇಕು. ಈ ಮಿಶ್ರಣವನ್ನು ಒಣ ಚರ್ಮದ ಸಮಸ್ಯೆಯಿರುವವರು ತ್ವಚೆಗೆ ನಿತ್ಯವೂ ಹಚ್ಚಿಕೊಳ್ಳುವುದರಿಂದ ಒಣಚರ್ಮದ ಸಮಸ್ಯೆ ದೂರವಾಗಿ, ಚರ್ಮದ ಮೇಲಿನ ಕಲೆಗಳು ಮಾಯವಾಗಲಿವೆ.
4. ಅರ್ಧ ಚಮಚ ಲವಂಗದ ಪುಡಿಯನ್ನು 2 ಚಮಚ ನೀರಿನಲ್ಲಿ ಬೆರೆಸಿಕೊಳ್ಳಿ. ಅದಕ್ಕೆ ಅರ್ಧ ಚಮಚ ಜೇನುತುಪ್ಪ, ಕೊಬ್ಬರಿ ಎಣ್ಣೆಯನ್ನು ಸ್ವಲ್ಪ ಬಿಸಿ ಮಾಡಿ ಸೇರಿಸಿ. ಚೆನ್ನಾಗಿ ಕಲಕಿದ ಮಿಶ್ರಣವನ್ನು ತ್ವಚೆಗೆ ಹಚ್ಚಿದಲ್ಲಿ ತ್ವಚೆ ಮೃದುವಾಗುವುದರೊಂದಿಗೆ ಸುಕ್ಕುಗಳು ದೂರವಾಗಲಿವೆ. ಲವಂಗದ ಬದಲು ಚಕ್ರಮೊಗ್ಗನ್ನೂ ಬಳಸಬಹುದು. ಲವಂಗ ಇಲ್ಲವೆ ಚಕ್ರಮೊಗ್ಗಿನ ಪುಡಿಯನ್ನು ರೋಸ್ ವಾಟರ್‌ನಲ್ಲೂ ಸೇರಿಸಿಕೊಳ್ಳಬಹುದು.
5. ಆಲೂಗೆಡ್ಡೆ ತುರಿದು, ರಸ ತೆಗೆದು, ಸೋಸಿ ಒಂದು ಬೌಲ್‌ನಲ್ಲಿ ಹಾಕಿಕೊಳ್ಳಿ. ಅದಕ್ಕೆ ರೋಸ್‌ವಾಟರ್, ಅಲೊವೆರಾ, ಮೊಸರು (ಎಲ್ಲವೂ ಸಮಪ್ರಮಾಣದಲ್ಲಿರಲಿ) ಸೇರಿಸಿ. ಚೆನ್ನಾಗಿ ಕಲೆಸಿಕೊಳ್ಳಿ. ಪ್ರತಿನಿತ್ಯ ಹಚ್ಚಿಕೊಂಡು, 15 ನಿಮಿಷ ಬಿಟ್ಟು ಬೆಚ್ಚಗಿನ ನೀರಿನಲ್ಲಿ ತೊಳೆಯಿರಿ. ಇದು ಒಣಗಿ, ಕಂದುಗಟ್ಟಿದ ಚರ್ಮ ಕಾಂತಿಯುತವಾಗಲು ಸಹಾಯಕ.

ಇವನ್ನೆಲ್ಲ ಪಾಲಿಸುವ ಮೊದಲು ತ್ವಚೆಯ ಡೆಡ್‌ಸ್ಕಿನ್ ಅನ್ನು ತೆಗೆಯಲು ಒಂದು ಸಲಹೆ ಇಲ್ಲಿದೆ. ಎರಡು ಚಮಚ ಅಕ್ಕಿಹಿಟ್ಟು, ಒಂದು ಚಮಚ ಜೋಳದ ಹಿಟ್ಟನ್ನು ಹಾಲಿನಲ್ಲಿ ಕಲೆಸಿ ಮುಖಕ್ಕೆ ಚೆನ್ನಾಗಿ ವೃತ್ತಾಕಾರವಾಗಿ ತಿಕ್ಕಿಕೊಳ್ಳಬೇಕು. ನಂತರ ತೊಳೆದುಕೊಂಡರೆ ಚರ್ಮ ಸ್ವಚ್ಛಗೊಳ್ಳಲಿದೆ. ಅನಂತರ ಈ ಮೇಲೆ ಹೇಳಲಾದ ಮಿಶ್ರಣ ಬಳಕೆಯನ್ನು ಅನುಸರಿಸಬಹುದು. ಚಳಿಗಾಲದಲ್ಲಿ ಖರ್ಚಿಲ್ಲದೇ ಕಾಂತಿಯುತ ತ್ವಚೆಯನ್ನು ನಿಮ್ಮದಾಗಿಸಿಕೊಳ್ಳಬಹುದು.

ನಿರೂಪಣೆ: ಕೃಷ್ಣಿ ಶಿರೂರ

15 ವರ್ಷ ಮೀರಿದ ವಾಹನ ಚಾಲನೆಗೆ ಪ್ರತಿವರ್ಷ ಎಫ್‌ಸಿ ಕಡ್ಡಾಯ

ಹಳೇ ವಾಹನಗಳಿಗೆ ಹಸಿರು ತೆರಿಗೆಯ ಹೊರೆ

● ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ವಾಹನಗಳ ಗುಜರಿ ನೀತಿ ಪ್ರಕಾರ 15 ವರ್ಷ ಮೀರಿದ ಎಲ್ಲಾ ವಾಹನಗಳನ್ನು ಗುಜರಿಗೆ ಹಾಕಬೇಕಿಲ್ಲ. ಆದರೆ, ಅವುಗಳ ಬಳಕೆ ಮುಂದುವರಿಸಬೇಕಿದ್ದರೆ ಹಸಿರು ತೆರಿಗೆ ಹೊರೆಯ ಭಾರವನ್ನು ವಾಹನಗಳ ಮಾಲೀಕರು ಪ್ರತಿವರ್ಷ ಹೊರಬೇಕಾಗುತ್ತದೆ.

15 ವರ್ಷ ಹಳೆಯದಾದ ವಾಹನಗಳು ಅಥವಾ ಚಾಲನೆಗೆ ಯೋಗ್ಯವಿಲ್ಲದ 15 ವರ್ಷದೊಳಗಿನ ವಾಹನಗಳನ್ನು ಸ್ವಯಂಪ್ರೇರಿತವಾಗಿ ಗುಜರಿಗೆ ಹಾಕಲು ಈ ನೀತಿಯಲ್ಲಿ ಅವಕಾಶ ಕಲ್ಪಿಸಲಾಗುತ್ತಿದೆ. ವಾಹನಗಳ ಮಾಲೀಕರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದರೆ, ಅವುಗಳನ್ನು ಯೋಗ್ಯತಾ ಪರೀಕ್ಷೆಗೆ ಒಳಪಡಿಸಿ ಗುಜರಿಗೆ ಹಾಕಲು ಅನುಮತಿ ನೀಡಲಾಗುತ್ತದೆ. ಹೀಗೆ ಗುಜರಿಗೆ ಹಾಕುವ ಮಾಲೀಕರಿಗೆ ಪ್ರಮಾಣಪತ್ರವನ್ನೂ ಸಾರಿಗೆ ಇಲಾಖೆ ನೀಡುತ್ತದೆ.

ಹೀಗೆ ಸ್ವಯಂಪ್ರೇರಿತವಾಗಿ ವಾಹನವನ್ನು ಗುಜರಿಗೆ ಹಾಕುವವರಿಗೆ ಮೂರು ರೀತಿಯ ಅನುಕೂಲಗಳನ್ನು ಸಾರಿಗೆ ಇಲಾಖೆ ಕಲ್ಪಿಸಲಿದೆ. ಪ್ರಮಾಣಪತ್ರ ಪಡೆದವರಿಗೆ ಹೊಸದಾಗಿ ವಾಹನ ಖರೀದಿಸುವಾಗ ಜಿಎಸ್‌ಟಿಯಲ್ಲಿ ಶೇ 3ರಿಂದ ಶೇ5ರಷ್ಟು ವಿನಾಯಿತಿ ಸಿಗಲಿದೆ. ಗುಜರಿಗೆ ಹಾಕಿದ ವಾಹನದ ತೂಕಕ್ಕೆ ತಕ್ಕಷ್ಟು ಹಣವೂ ಪಾವತಿಯಾಗುತ್ತದೆ. ಅಲ್ಲದೇ, ಆದಾಯ ತೆರಿಗೆ ಪಾವತಿಯಲ್ಲೂ ಅವರಿಗೆ ಕೆಲ ವಿನಾಯಿತಿಗಳು ದೊರಕಲಿವೆ.

ಕಡ್ಡಾಯವಲ್ಲ: 15 ವರ್ಷ ಮೀರಿದ ವಾಹನಗಳನ್ನು ಗುಜರಿಗೆ ಹಾಕುವುದು ಕಡ್ಡಾಯವಲ್ಲ. ಚಾಲನೆ ಮಾಡಲು ಮಾಲೀಕರು ಬಯಸಿದರೆ ವರ್ಷಕ್ಕೊಮ್ಮೆ ಯೋಗ್ಯತಾ ಪರೀಕ್ಷೆ ಮಾಡಿಸಿಕೊಂಡು ಪ್ರಮಾಣಪತ್ರ (ಎಫ್‌.ಸಿ) ಪಡೆಯಬೇಕಾಗುತ್ತದೆ (ಈ ಹಿಂದೆ 5 ವರ್ಷಕ್ಕೊಮ್ಮೆ ಎಫ್‌.ಸಿ ಪಡೆಯಲು ಅವಕಾಶ ಇತ್ತು). ರಸ್ತೆಯಲ್ಲಿ ಸಂಚರಿಸಲು ವಾಹನ ಯೋಗ್ಯವಾಗಿದ್ದರೂ ಎಫ್‌.ಸಿ ನೀಡಲು ನಿಗದಿಪಡಿಸಿರುವ ಸಾಮಾನ್ಯ ಶುಲ್ಕದ ಜೊತೆಗೆ ಹೆಚ್ಚುವರಿಯಾಗಿ ಹಸಿರು ತೆರಿಗೆಯನ್ನೂ ಪಾವತಿಸಬೇಕಾಗುತ್ತದೆ.

ವಾಹನಗಳಿಗೆ ₹500 ರಿಂದ ₹2,500ರಷ್ಟು ಹಸಿರು ತೆರಿಗೆ ನಿಗದಿಪಡಿಸಲಾಗಿದೆ. ರಾಜ್ಯದಲ್ಲಿರುವ 2.50 ಕೋಟಿ ವಾಹನಗಳಲ್ಲಿ 15 ವರ್ಷ ಮೀರಿದ 40 ಲಕ್ಷಕ್ಕೂ ಹೆಚ್ಚು ವಾಹನಗಳಿವೆ. ಅವುಗಳನ್ನು ಗುಜರಿಗೆ ಹಾಕುವ ಆಸಕ್ತಿ ಮಾಲೀಕರಿಗೆ ಇಲ್ಲ ಎಂದಾದರೆ ಪ್ರತಿವರ್ಷ ಹಸಿರು ತೆರಿಗೆ ಪಾವತಿಸುವುದು ಅನಿವಾರ್ಯ.

ಈ ಹಸಿರು ತೆರಿಗೆಯಿಂದಲೇ ಸರ್ಕಾರಕ್ಕೆ ಸಾಕಷ್ಟು ವರಮಾನ ಬರಲಿದೆ. ಹೀಗೆ ಬರುವ ವರಮಾನವನ್ನು ಪರಿಸರ ಸಮತೋಲನ ಕಾಪಾಡುವ ಕಾರ್ಯಕ್ರಮಗಳಿಗೆ ಬಳಸಬೇಕು ಎಂದು ಹಸಿರು ನ್ಯಾಯಪೀಠ ಆದೇಶ ನೀಡಿದೆ ಎನ್ನುತ್ತಾರೆ ಸಾರಿಗೆ ಇಲಾಖೆ ಅಧಿಕಾರಿಗಳು.

ಪ್ರಜಾವಾಣಿ ವಿಶೇಷ

ಹಸಿರು ತೆರಿಗೆ ಹೆಚ್ಚಿಸಲು ಸಲಹೆ

15 ವರ್ಷ ಮೀರಿದ ವಾಹನಗಳನ್ನು ಗುಜರಿಗೆ ಒಪ್ಪಿಸಿ ಎಲೆಕ್ಟ್ರಿಕ್ ವಾಹನಗಳನ್ನು ಖರೀದಿಸುವವರಿಗೆ ₹1 ಲಕ್ಷ ಸಹಾಯಧನ ನೀಡಬೇಕು ಎಂಬ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ. ಸದ್ಯ ಪ್ರಸ್ತಾಪಿಸಿರುವ ಹಸಿರು ತೆರಿಗೆಯನ್ನು ಕನಿಷ್ಠ ₹5 ಸಾವಿರದಿಂದ ₹6 ಸಾವಿರದ ತನಕ ಹೆಚ್ಚಿಸಬೇಕು ಎಂದೂ ಸಲಹೆ ನೀಡಿದೆ.

'ಗುಜರಿ ನೀತಿ ಜಾರಿಯಿಂದ ಪರಿಸರ ಮಾಲಿನ್ಯ ಕಡಿಮೆಯಾಗಲಿದೆ. ಸಹಾಯಧನ ದೊರೆತರೆ ಎಲೆಕ್ಟ್ರಿಕ್ ವಾಹನ ಖರೀದಿಗೆ ಜನ ಆಕರ್ಷಿತರಾಗಲಿದ್ದಾರೆ' ಎಂದು ಸಾರಿಗೆ ಇಲಾಖೆ ನಿವೃತ್ತ ಅಧಿಕಾರಿ ಶಿವರಾಜ ಪಾಟೀಲ ಹೇಳಿದರು.

ಹಸಿರು ತೆರಿಗೆ: ಯಾವುದಕ್ಕೆ–ಎಷ್ಟು?

- ದ್ವಿಚಕ್ರ ವಾಹನಕ್ಕೆ ಪ್ರತಿವರ್ಷ ಎಫ್‌.ಸಿ ಶುಲ್ಕದ ಜೊತೆಗೆ ₹500
- ಲಘು ವಾಹನಗಳಿಗೆ ಪ್ರತಿವರ್ಷ ಎಫ್‌.ಸಿ ಶುಲ್ಕದ ಜೊತೆಗೆ ₹1 ಸಾವಿರ
- ಸರಕು ಸಾಗಣೆ ಮತ್ತು ಭಾರಿ ವಾಹನಗಳಿಗೆ ಪ್ರತಿವರ್ಷ ಎಫ್‌.ಸಿ ಶುಲ್ಕದ ಜೊತೆಗೆ ₹2,500

ಎರಡು ವರ್ಷ ವಿನಾಯಿತಿಗೆ ಮನವಿ

'15 ವರ್ಷ ಹಳೆಯದಾದ ವಾಹನಗಳನ್ನು ಬಳಸಬೇಕಿದ್ದರೆ ಹಸಿರು ತೆರಿಗೆ ಪಾವತಿಸಬೇಕಾಗುತ್ತದೆ. ಕೋವಿಡ್ ಕಾರಣದಿಂದ ಎರಡು ವರ್ಷಗಳ ವಿನಾಯಿತಿ ನೀಡಬೇಕು' ಎಂದು ಕರ್ನಾಟಕ ರಾಜ್ಯ ಟ್ರಾವೆಲ್ ಮಾಲೀಕರ ಸಂಘದ ಅಧ್ಯಕ್ಷ ಕೆ. ರಾಧಾಕೃಷ್ಣ ಹೊಳ್ಳ ಒತ್ತಾಯಿಸಿದರು.

'ಕೋವಿಡ್ ಕಾರಣದಿಂದ ಎರಡು ವರ್ಷದಿಂದ ಕೆಲ ವಾಹನಗಳು ರಸ್ತೆಗೇ ಇಳಿದಿಲ್ಲ. ಅವುಗಳನ್ನು ಬಳಸಲು ಹಸಿರು ತೆರಿಗೆ ಪಾವತಿಸಬೇಕೆಂದರೆ ವಾಹನಗಳ ಮಾಲೀಕರಿಗೆ ಹೊರೆಯಾಗಲಿದೆ. ಈ ಬೇಡಿಕೆ ಪರಿಗಣಿಸಲು ಒತ್ತಾಯಿಸಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ' ಎಂದು ಅವರು ತಿಳಿಸಿದರು.

ಲೀಲಾವತಿಗೆ 'ಕೆಎಸ್‌ನ ಕಾವ್ಯ ಗಾಯನ ಪ್ರಶಸ್ತಿ'

ಮೈಸೂರು: ಸುಗಮ ಸಂಗೀತ ಕ್ಷೇತ್ರದ ಖ್ಯಾತ ಗಾಯಕಿ ಎಚ್‌.ಆರ್‌.ಲೀಲಾವತಿ ಅವರನ್ನು ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 'ಕೆ.ಎಸ್.ನರಸಿಂಹಸ್ವಾಮಿ ಕಾವ್ಯಗಾಯನ ಪ್ರಶಸ್ತಿ–2020'ಕ್ಕೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹ 25 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ಡಿ.27ರಂದು ಸಂಜೆ 5.30ಕ್ಕೆ ಕಲಾಮಂದಿರದ ಕಿರುರಂಗಮಂದಿರದಲ್ಲಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತೆ ಡಿ.ಆರ್‌.ಪೂರ್ಣಿಮಾ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಟ್ರಸ್ಟ್ ಅಧ್ಯಕ್ಷ ನರಹಳ್ಳಿ ಬಾಲಸುಬ್ರಹ್ಮಣ್ಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಟ್ರಸ್ಟ್‌ನ ಸದಸ್ಯ ಸಂಚಾಲಕ ಕೆ.ಜೆ. ನಾರಾಯಣ ಕಿಕ್ಕೇರಿ ತಿಳಿಸಿದ್ದಾರೆ.

ಚಲನಚಿತ್ರ '83' ಭಾರತದ ಅದ್ಭುತವಾದ ವಿಶ್ವಕಪ್ ವಿಜಯವನ್ನು ಆಧರಿಸಿದೆ!

ಬಿಜೆಪಿ ರಾಜ್ಯ ಕಾರ್ಯಕಾರಿಣಿಗೆ ಜೆ.ಪಿ. ನಡ್ಡಾ, ಅರುಣ್ ಸಿಂಗ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಬಿಜೆಪಿ ರಾಜ್ಯ ಕಾರ್ಯಕಾರಿಣಿ ನಗರದ ಡೆನಿಸನ್ಸ್ ಹೋಟೆಲ್‌ನಲ್ಲಿ ಡಿ.28 ಮತ್ತು 29ರಂದು ನಡೆಯಲಿದ್ದು, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಪಾಲ್ಗೊಳ್ಳಲಿದ್ದಾರೆ ಎಂದು ರಾಜ್ಯ ಬಿಜೆಪಿ ಘಟಕದ ಪ್ರಧಾನ ಕಾರ್ಯದರ್ಶಿ ಮಹೇಶ ಟೆಂಗಿನಕಾಯಿ ತಿಳಿಸಿದರು.

ರಾಜ್ಯ ಘಟಕದ ಉಸ್ತುವಾರಿ ಅರುಣ್ ಸಿಂಗ್, ರಾಜ್ಯ ಸಹ ಪ್ರಭಾರಿ ಡಿ.ಕೆ. ಅರುಣಾ, ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ, ನಾರಾಯಣ ಸ್ವಾಮಿ, ಭಗವಂತ ಖೂಬಾ, ರಾಜೀವ ಚಂದ್ರಶೇಖರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಪಕ್ಷದ ಎಲ್ಲ ಮುಖಂಡರು ಪಾಲ್ಗೊಳ್ಳಲಿದ್ದಾರೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜೆ.ಪಿ.ನಡ್ಡಾ

28ರಂದು ಎರಡು ವಿಶೇಷ ಸಭೆಗಳು ನಡೆಯಲಿವೆ. 29ರಂದು ಸಂಜೆ ಜೆ.ಪಿ. ನಡ್ಡಾ ಅವರ ಸಮ್ಮುಖದಲ್ಲಿ ವಿಶೇಷ ಸಭೆ ನಡೆಯಲಿದೆ. ವಿಭಾಗದ ಜಿಲ್ಲೆಗಳ ಶಕ್ತಿ ಕೇಂದ್ರ ಪ್ರಮುಖರು, ಪದಾಧಿಕಾರಿಗಳು, ಮೋರ್ಚಾದ ಪ್ರಮುಖರು ಪಾಲ್ಗೊಳ್ಳಲಿದ್ದಾರೆ.

ಖ್ಯಾತ ನಿರ್ದೇಶಕ ಕೆ.ವಿ. ರಾಜು ನಿಧನ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಬೆಳ್ಳಿ ಕಾಲುಂಗುರ', 'ಯುದ್ಧಕಾಂಡ' ಮುಂತಾದ ಹಿಟ್ ಸಿನಿಮಾಗಳನ್ನು ನಿರ್ದೇಶಿಸಿದ್ದ ಚಂದನವನದ ಖ್ಯಾತ ನಿರ್ದೇಶಕ ಕೆ.ವಿ.ರಾಜು (67) ಶುಕ್ರವಾರ ನಿಧನರಾಗಿದ್ದಾರೆ.

ಮೃತರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರು, ರಾಜಾಜಿನಗರದಲ್ಲಿರುವ ನಿವಾಸದಲ್ಲಿ ಶುಕ್ರವಾರ ಬೆಳಗ್ಗೆ ಕೊನೆಯುಸಿರೆಳೆದರು. ಮಧ್ಯಾಹ್ನದವರೆಗೆ ಪಾರ್ಥಿವ ಶರೀರವನ್ನು ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಸಂಜೆ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಸಂಸ್ಕಾರ ನಡೆಯಿತು. ಖ್ಯಾತ ನಿರ್ದೇಶಕರಾಗಿದ್ದ ಕೆ.ವಿ. ಜಯರಾಮ್ ಅವರ ಸಹೋದರರಾಗಿದ್ದ ಕೆ.ವಿ.ರಾಜು, ಜಯರಾಮ್ ಅವರ ಸಿನಿಮಾಗಳ ಮೂಲಕವೇ ಚಿತ್ರರಂಗ ಪ್ರವೇಶಿಸಿದರು. 1982ರಲ್ಲಿ ತೆರೆಕಂಡ 'ಬಾಡದ ಹೂ' ಹಾಗೂ 1984ರಲ್ಲಿ ಬಿಡುಗಡೆಯಾದ 'ಒಲವೇ ಬದುಕು' ಚಿತ್ರದಲ್ಲಿ ಸಹ ನಿರ್ದೇಶಕನಾಗಿ ಕಾರ್ಯನಿರ್ವಹಿಸಿದ್ದ ರಾಜು ಅವರು, 50ಕ್ಕೂ ಹೆಚ್ಚು ಚಿತ್ರಗಳಿಗೆ ಚಿತ್ರಕಥೆ ಮತ್ತು ಸಂಭಾಷಣೆ ರಚಿಸಿದ್ದಾರೆ.

> **ನನಗೆ ಸಿನಿಮಾ ಜಗತ್ತಿಗೆ ಪರಿಚಯಿಸಿದ ಗುರುಗಳು ಕೆ.ವಿ. ಜಯರಾಮ್. ಕೆ.ವಿ.ರಾಜು ಅವರು ನನ್ನ ಎರಡನೇ ಗುರುಗಳು. ಅವರು ಕಾಲವಾದರು ಎಂದಾಗ ದುಃಖಿತನಾದೆ**
> **ಜಗ್ಗೇಶ್**, ನಟ

1989ರಲ್ಲಿ ರಾಜು ಅವರು ನಿರ್ದೇಶಿಸಿದ್ದ, ಅಂಬರೀಷ್ ನಟನೆಯ 'ಇಂದ್ರಜಿತ್' ಸಿನಿಮಾ ಹಿಟ್ ಆಗಿತ್ತು. ಇದನ್ನು 1991ರಲ್ಲಿ ಬಾಲಿವುಡ್‌ಗೆ ಕೊಂಡೊಯ್ದು, ಅಮಿತಾಬ್ ಬಚ್ಚನ್, ಜಯಪ್ರದಾ ತಾರಾಗಣದಲ್ಲಿ 'ಇಂದ್ರಜಿತ್' ಎಂಬ ಹೆಸರಿನಲ್ಲೇ ರಾಜು ಅವರು ನಿರ್ದೇಶಿಸಿದ್ದರು. 1996ರಲ್ಲಿ ನಟ ದೇವರಾಜ್ ಸಿನಿ ಬದುಕಿಗೆ ತಿರುವು ನೀಡಿದ 'ಹುಲಿಯಾ' ಸಿನಿಮಾ ರಾಜು ಅವರ ನಿರ್ದೇಶನಾ ಸಾಮರ್ಥ್ಯಕ್ಕೆ ಹಿಡಿದ ಕೈಗನ್ನಡಿ. ಖಡಕ್ ನಿರ್ದೇಶಕ ಎಂದೇ ಗುರುತಿಸಿಕೊಂಡಿದ್ದ ಅವರು 'ಸುಂದರ ಕಾಂಡ', 'ಕದನ'. 'ಪೊಲೀಸ್ ಲಾಕಪ್', 'ಬೊಂಬಾಟ್ ಹುಡುಗ', ಮುಂತಾದ ಚಿತ್ರಗಳನ್ನು ನಿರ್ದೇಶಿಸಿದ್ದರು.

2017ರಲ್ಲಿ 'ಬಿ.ಆರ್. ಪಂತುಲು ಪ್ರಶಸ್ತಿ'ಯನ್ನು ರಾಜು ಅವರು ನಿರಾಕರಿಸಿದ್ದು ದೊಡ್ಡ ಸುದ್ದಿಯಾಗಿತ್ತು. 'ಶಾಲು-ಸನ್ಮಾನಗಳು ಅಂದರೆ ಅಲರ್ಜಿ ನನಗೆ. ಅದಕ್ಕಾಗಿ ತಪಸ್ಸು ಮಾಡುವವರ ದಂಡೇ ಇದೆ' ಎಂದು ಹೇಳಿದ್ದ ರಾಜು, ಪ್ರಶಸ್ತಿಯನ್ನು ನಿರಾಕರಿಸಿದ್ದರು.

ನಿಧನ ವಾರ್ತೆ

ಚಂದ್ರಕಾಂತ ಅಂಗಡಿ

ಹಳಿಯಾಳ (ಉತ್ತರ ಕನ್ನಡ ಜಿಲ್ಲೆ): ಪಟ್ಟಣದ ಬಸವ ಕೇಂದ್ರದ ಸಂಸ್ಥಾಪಕ ಮತ್ತು ಸಮಾಜ ಸೇವಕ ಚಂದ್ರಕಾಂತ ಬಸಪ್ಪಾ ಅಂಗಡಿ (61) ಅವರು ಹೃದಯಘಾತದಿಂದ ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಇದ್ದಾರೆ.

ಅವರಿಗೆ ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ, ಮನಮಿತ್ರ ಪ್ರಶಸ್ತಿ, ಬಸವಗುರು ಕಾರುಣ್ಯ ಪ್ರಶಸ್ತಿ, ಅಂಬಿಗ ಕುಮಾರ ಚೌಡಯ್ಯ ಮತ್ತಿತರ ಪ್ರಶಸ್ತಿಗಳು ಸಂದಿವೆ. ಪಟ್ಟಣದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಶ್ರೀಕಂಠೇಶ್ವರ ದೇವಾಲಯ ಹುಂಡಿಯಲ್ಲಿ ₹ 2.15 ಕೋಟಿ

ಪ್ರಜಾವಾಣಿ ವಾರ್ತೆ

ನಂಜನಗೂಡು: ನಗರದ ಇತಿಹಾಸ ಪ್ರಸಿದ್ಧ ಶ್ರೀಕಂಠೇಶ್ವರ ದೇವಾಲಯದ 21 ಹುಂಡಿಗಳಿಗೆ ಭಕ್ತರು ಹಾಕಿದ್ದ ಕಾಣಿಕೆಯನ್ನು ಶುಕ್ರವಾರ ಸಿಬ್ಬಂದಿ ಎಣಿಸಿದ್ದು, ದಾಖಲೆ ಪ್ರಮಾಣದ ₹ 2.15 ಕೋಟಿ ಸಂಗ್ರಹವಾಗಿದೆ.

108 ಗ್ರಾಂ ಚಿನ್ನ, 5.75 ಕೆ.ಜಿ ಬೆಳ್ಳಿ ಹಾಗೂ 29 ವಿದೇಶಿ ಕರೆನ್ಸಿಗಳು ಇದ್ದವು. ₹ 1 ಸಾವಿರ ಮುಖಬೆಲೆಯ 10 ಹಾಗೂ 500 ಮುಖ ಬೆಲೆಯ 64 ನಿಷೇಧಿತ ನೋಟುಗಳನ್ನೂ ಭಕ್ತರು ಹುಂಡಿಗೆ ಹಾಕಿದ್ದರು.

ಬ್ಯಾಂಕ್ ಆಫ್ ಬರೋಡ ಸಿಬ್ಬಂದಿ ಸೇರಿದಂತೆ ಸ್ವಸಹಾಯ ಸಂಘದ ಮಹಿಳೆಯರು, ದೇವಾಲಯದ ಸಿಬ್ಬಂದಿ ಸೇರಿ 200 ಕ್ಕೂ ಹೆಚ್ಚು ಮಂದಿ ಎಣಿಕೆ ಕಾರ್ಯದಲ್ಲಿ ಪಾಲ್ಗೊಂಡರು.

ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಹುಂಡಿ ಎಣಿಕೆ ಕಾರ್ಯ.

THE FEDERAL BANK LIMITED
Regd. Office: Aluva, Kerala.
ZONAL OFFICE: 1st Floor, Halcyon Complex, No.9, St Marks Road, Bangalore-560 001.e-mail:bgrr-cpc@federalbank.co.in
Phone: 080-22074610/604/613/624/625

PUBLIC NOTICE 24/12/2021

The General Public are hereby informed that we, The Federal bank Ltd, Koramangala Branch having its Office at No. 7, Maruthi Arcade, 20th Main Road, 7th Block, Koramangala, Bangalore South Taluk, Bangalore Urban – 560095, are proposing to accept All that piece and parcel of Agricultural land admeasuring 68.39 acres in Sy. Nos. 1/85, 1/84, 1/45, 1/46, 31/2, 1/90, 1/26, 1/96, 1/91, 1/104B, 1/72, 1/104C, 1/41, 1/104A, 1/31, 1/18, 1/82, 1/25, 1/10, 30, 29, 1/43, 1/58, 1/56, 1/83, 1/33, 1/121, 1/92, 1/120, 1/57 and 1/77, situated at Kundalli Village, Shantalli Hobli, Somwarpet Taluk and Kodagu District as security by way of Equitable Mortgage/Registered mortgage for the purpose of securing the loans. It is represented to us by the present owners of the Property that they are unable to procure any Death certificate and Legal Heir ship Certificate of the prior owners of the Property and also their whereabouts are not known to the present owners. Therefore, Bank proposes to waive the verification of the Legal heir ship and death certificate of the prior owners. If anyone has any claim(s) whatsoever over the Property, he/she/they may prefer the same before me/us within 07 (Seven) days from the date of publication. Failing which, it will be considered that is/are no subsisting rights/claims on the Schedule Property.

Bangalore 24-12-2021 — Vice President & Zonal Head

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಕಟ್ಟಡ ವಿಭಾಗ
ನಂ/ಕವಿವಿ/ಕಟ್ಟಡ/ಟೆಂಡರ್/2021–22 ದಿನಾಂಕ: 22.12.2021
ಐಟಂವಾರು ಟೆಂಡರ್ ಅಧಿಸೂಚನೆ (IFT)
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)
ಕರ್ನಾಟಕ ಮಹಾವಿದ್ಯಾಲಯ, ಧಾರವಾಡ ಆವರಣದಲ್ಲಿ Renovation of Old Mangalore tiled Bldg beside Canteen Into shops ಮತ್ತು ಇತರೆ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಿದೆ.
ವಿವರಗಳನ್ನು ಇ–ಪೋರ್ಟಲ www.eproc.karnataka.gov.in ಮುಖಾಂತರ ದಿನಾಂಕ: 08-01–2022, 14–00 ಗಂಟೆಯವರೆಗೆ ಪಡೆದು ಸಲ್ಲಿಸಬಹುದು, ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಪಡೆಯಬಹುದು ಪೋನ ನಂ–0836:2215211.
ಸಹಿ/– ಸ್ಥಾನಿಕ ಅಭಿಯಂತರರು, ಕಟ್ಟಡ ವಿಭಾಗ, ಕ.ವಿ.ವಿ. ಧಾರವಾಡ

ರಾಮನಗರ ಜಿಲ್ಲಾ ಪಂಚಾಯತ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ರಾಮನಗರ ವಿಭಾಗ, ರಾಮನಗರ.
ಸಂಖ್ಯೆ: 24/ಕಾಅ/ಗ್ರಾ.ಕು.ನೀ.&ನೈ.ವಿ/ರಾ/ಟೆಂಡರ್/ಸ.ಇಂ–1/JJM/1653-1663/2021-22 (Call-2) ದಿನಾಂಕ: 21.12.2021
ಮರು ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ **JJM ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ರಾಮನಗರ ಜಿಲ್ಲೆಯ ರಾಮನಗರ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು** ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ನಿರ್ವಹಿಸಲು ವಿವರಗಳು ಈ ಕೆಳಕಂಡಂತಿವೆ.
ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ: **ರೂ. 169.99 ಲಕ್ಷಗಳು.** ಇ.ಎಂ.ಡಿ: **ರೂ. 2.55 ಲಕ್ಷಗಳು.** ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ: **ರೂ. 120.22 ಲಕ್ಷಗಳು.** ಇ.ಎಂ.ಡಿ: **ರೂ. 2.00 ಲಕ್ಷಗಳು.** ಕಾಲಾವಧಿ: **06 ತಿಂಗಳು.**
ಬಿಡ್ ಪೂರ್ವಭಾವಿ ಸಭೆ **ದಿನಾಂಕ: 24.12.2021ರ ಬೆಳಗ್ಗೆ 11:00 ಗಂಟೆಗೆ.** ಸ್ಥಳ: **ಕಾರ್ಯಪಾಲಕ ಅಭಿಯಂತರರ ಕಛೇರಿ, 3ನೇ ಮಹಡಿ, ಪಂಚಾಯತ್ ಭವನ ರಾಮನಗರ.**
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 28.12.2021ರ ಸಂಜೆ 5.30 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 30.12.2021ರ ಬೆಳಗ್ಗೆ 11:00 ಗಂಟೆಯ ನಂತರ.** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 01.01.2022ರ ಬೆಳಗ್ಗೆ 11:00 ಗಂಟೆಯ ನಂತರ.**
ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ / ವೆಬ್‌ಸೈಟ್ **www.eproc.karnataka.gov.in** ರಲ್ಲಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ರಾನ/ಬ್ರಾಂಜ್/382/2021–22 ಗ್ರಾ.ಕು.ನೀ&ನೈ ಇಲಾಖೆ, ರಾಮನಗರ ವಿಭಾಗ, ರಾಮನಗರ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ,
ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ
ಸಂ : 12/2021–2022 ದಿನಾಂಕ : 21–12–2021
ಮಂಡ್ಯ ಜಿಲ್ಲೆಯ ವಿವಿಧ ಕಾಮಗಾರಿಗಳಿಗಾಗಿ ಅಲ್ಪಾವಧಿ ಟೆಂಡರ್ ಪ್ರಕಟಣೆ
ಐಟಂವಾರು ದರದ ಟೆಂಡರನ್ನು ಕೆಳಗೆ ಕಾಣಿಸಿದ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **KW-1 & 3** ರ ರೀತಿ ಏಕಲಕೋಟೆ/ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://www.eproc.karnataka.gov.in ಮುಖಾಂತರ ಕಾಮಗಾರಿಯ ಟೆಂಡರ್‌ಗಾಗಿ ಭಾಗವಹಿಸಬಹುದು. ಟೆಂಡರ್ ದಾಖಲಾತಿಗಳನ್ನು ದಿನಾಂಕ : 22–12–2021 ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ ದಿನಾಂಕ : 04–01–2022 ಸಂಜೆ 4.00 ಗಂಟೆವರೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 05–01–2022 ಸಂಜೆ 4.30 ಗಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 06–01–2022 ಸಂಜೆ 5.00 ಗಂಟೆ ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ : 06–01–2022 ಸಂಜೆ 5.00 ಗಂಟೆ ನಂತರ (ಅಂದಾಜು ಮೊತ್ತ 50.00 ಲಕ್ಷದೊಳಗಿನ ಕಾಮಗಾರಿಗಳಿಗೆ) ಆರ್ಥಿಕ ಬಿಡ್ ದಿನಾಂಕ 10–01–2022 ಬೆಳಗ್ಗೆ 11.00 ಗಂಟೆಗೆ ಅಥವಾ ನಂತರದ ಕೆಲಸದ ದಿನಗಳು. (ಅಂದಾಜು ಮೊತ್ತ 50.00 ಲಕ್ಷ ಮೇಲ್ಪಟ್ಟ ಕಾಮಗಾರಿಗೆ) ಟೆಂಡರ್ ಪ್ರಕ್ರಿಯೆ ಬೆಲೆ ಇ–ಪೋರ್ಟಲ್‌ರಂತೆ. ಕಾಲಮಿತಿ : ಮಳೆಗಾಲ ಸೇರಿ 2/6 ತಿಂಗಳು. ಒಟ್ಟು 4 (ನಾಲ್ಕು) ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ **ರೂ. 100.00 ಲಕ್ಷಗಳು** ಕನಿಷ್ಠ **ರೂ. 1.46 ಲಕ್ಷಗಳು** ಇ.ಎಂ.ಡಿ. ಬೆಲೆ ಇ–ಪೋರ್ಟಲ್‌ರಂತೆ ಕೆಲಸಗಳ ವಿವರ, ಅಂದಾಜು ಮೊತ್ತ ಇ.ಎಂ.ಡಿ. ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾ.ಇಂ., ಲೋ.ಇ., ವಿಭಾಗ, ಮಂಡ್ಯ

ಕರ್ನಾಟಕ ಸರಕಾರ
ಉಪ ನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ, ಹಾವೇರಿ
ಹಾವೇರಿ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಸವಣೂರ ತಾಲೂಕಿನ ವಿದ್ಯಾರ್ಥಿನಿಲಯಗಳಿಗೆ 2021–22 ಹಾಗೂ 2022–23 ನೇ ಸಾಲಿಗೆ ಆಹಾರ ಪದಾರ್ಥ ಹಾಗೂ ಇತರೆ ಸಾಮಗ್ರಿಗಳನ್ನು ಪೂರೈಸುವ ಕುರಿತು ಟೆಂಡರ್ ವೇಳಾಪಟ್ಟಿ.
ಇ–ಪ್ರೋಕ್ಯೂರಮೆಂಟ್ ಟೆಂಡರ್ ಪ್ರಕಟಣೆ
(1) ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ : DC:SWD:S-4:FT:CR:2021-22 DATED : 18-12-2021 (2) ಟೆಂಡರ್‌ಗೆ ಇಟ್ಟ ಮೊತ್ತ : **Rs. 74,46,666=00** (3) ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : **03-01-2022,** Time. 5.00 P.M (4) ಪ್ರಿ–ಬಿಡ್ ಮೀಟಿಂಗ ದಿನಾಂಕ : **27-12-2021,** Time. 04.00 P.M (5) ತಾಂತ್ರಿಕ ಲಕೋಟೆ ತೆರೆಯುವ ವೇಳೆ ಮತ್ತು ದಿನಾಂಕ : **04-01-2022,** Time. 11.00 A.M (6) ಹಣಕಾಸಿನ ಲಕೋಟೆಯನ್ನು ತೆರೆಯುವ ಸ್ಥಳ ವೇಳೆ ಮತ್ತು ದಿನಾಂಕ : **10-01-2022,** Time. 11.00 A.M (7) ಟೆಂಡರನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ : Rs. **1,48,933=00** (8) ಹೆಚ್ಚಿನ ಮಾಹಿತಿಗಾಗಿ ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ : **http//eproc.karnataka.gov.in** ಹಾಗೂ ಕಛೇರಿ ವೇಳೆಯಲ್ಲಿ ಉಪ ನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ, 'ಬಿ' ಬ್ಲಾಕ ನಂ–25 ಜಿಲ್ಲಾಡಳಿತ ಭವನ ದೇವಗಿರಿ (ಹಾವೇರಿ) – ಪೋನ್ **08375–249292**
ಸಹಿ/– ಸದಸ್ಯ ಕಾರ್ಯದರ್ಶಿ ಜಿಲ್ಲಾ ಮಟ್ಟದ ಆಹಾರ ಪದಾರ್ಥಗಳ ಖರೀದಿ ಸಮಿತಿ ಹಾಗೂ ಉಪ ನಿರ್ದೇಶಕರು,
ವಾಸಾಸಂಇ/ಹಾವೇರಿ/ಎಂ.ಸಿ.ಎ/326/2021–22 ಸಮಾಜ ಕಲ್ಯಾಣ ಇಲಾಖೆ, ಹಾವೇರಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಕೊಪ್ಪಳ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.
ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಟೆಂಡರ್/2021–22/2004 ದಿನಾಂಕ:21.12.2021
ಟೆಂಡರ್ ಪ್ರಕಟಣೆ (ದ್ವಿತೀಯ ಕರೆ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ಯೂರಮೆಂಟ್ ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2020–21 ನೇ ಸಾಲಿನ ಜಲ ಜೀವನ್ ಮಿಶನ್ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ದ್ವಿತೀಯ ಕರೆಯ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟ್‌ಲ್ http://eproc.karnataka.gov.in ಮುಖಾಂತರ ಭಾಗವಹಿಸಬಹುದು.
ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ email:eerwsskpl@gmail.com ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ:22.12.2021 ರಿಂದ Download ಮಾಡಿಕೊಳ್ಳಬಹುದಾಗಿದೆ.
ಟೆಂಡರ್ ಪ್ರೋಸೆಸಿಂಗ್ ಶುಲ್ಕ : **ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿರುವಂತೆ.** ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿತ ಕಾಲಾವಧಿ: **3 ತಿಂಗಳು (ಮಳೆಗಾಲ ಸೇರಿದಂತೆ).** ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು: **27/12/2021 ಸಮಯ 11:00 ಗಂಟೆ.** ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ: **05/01/2022 ಸಮಯ 16:00 ಗಂಟೆ.** ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **06/02/2022 ರಂದು 17:00 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ**
ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ ನಂತರ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಒದಗಿಸತಕ್ಕದ್ದು.
ಸಹಿ/–(ಎಸ್.ಎಂ.ಸುಭಾನ್ ಸಾಹೇಬ್) ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/421/ಎಂಸಿಎ/2021–22

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹಾವೇರಿ
ಟೆಂಸಂ:ಡಿಬಿಸಿಹಾ/ವಿನಿ ಹೊ.ಸಂ.ಟೆಂಡರ್/ಸಿಆರ್–14/2021–22 ದಿನಾಂಕ:24.12.2021
ಟೆಂಡರ್ ಪ್ರಕಟಣೆ ('ಇ–ಪ್ರೊಕ್ಯೂರ್‌ಮೆಂಟ್')
2021–22ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಗ್ರೂಪ್–ಡಿ ಹುದ್ದೆಗಳಿಗೆ ಮತ್ತು ಡಾಟಾ ಎಂಟ್ರಿ ಆಪರೇಟರ್ ಹಾಗೂ ಟಿಟಿಸಿ ಇನ್‌ಸ್ಟ್ರಕ್ಟರ್ ಹುದ್ದೆಗಳಿಗೆ ಹೊರಸಂಪನ್ಮೂಲ ಸಿಬ್ಬಂದಿ ಸೇವೆ ಪಡೆಯಲು ಇ ಪ್ರಕ್ಯೂರಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸುವ ಕುರಿತು.
(1) ಟೆಂಡರ್ ಪ್ರಕಟಣೆ ದಿನಾಂಕ : **24.12.2021** (2) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ. **1,98,27,228/–** (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **22.01.2022** ಸಂಜೆ 5.00 (4) ಪ್ರಿ–ಬಿಡ್ ಮೀಟಿಂಗ ದಿನಾಂಕ : **03.01.2022** (5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : **23.01.2022** ಬೆಳಿಗ್ಗೆ–11.30 (6) ಹಣಕಾಸಿನ ಲಕೋಟೆಯನ್ನು ದಿನಾಂಕ : ತಾಂತ್ರಿಕ ಬಿಡ್ಡಿನಲ್ಲಿ ಯಶಸ್ವಿಯಾದ ಸಂಸ್ಥೆಯವರಿಗೆ ನಂತರ ತಿಳಿಸಲಾಗುವುದು (7) ಟೆಂಡರನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ ರೂ. **2,97,408/–** (8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ : ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬಿ–ಬ್ಲಾಕ ನಂ–26 ಜಿಲ್ಲಾಡಳಿತ ಭವನ ದೇವಗಿರಿ ಹಾವೇರಿ ದೂರವಾಣಿ ಸಂಖ್ಯೆ : **08375–249008**
ಸಹಿ/– ಸದಸ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹಾವೇರಿ
ವಾಸಾಸಂಇ/ಹಾವೇರಿ/ಎಂಸಿಎ/334/2021–22

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋ,ಇ ವಿಶೇಷ ವಿಭಾಗ, ಶಿವಮೊಗ್ಗ
ಫೋನ್ ನಂ : 08182–222942, ಇ–ಮೇಲ್: spdivision@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಐ.ಎಫ್.ಟಿ ಸಂಖ್ಯೆ: 48/2021–22 ದಿನಾಂಕ : 21.12.2021
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಕೆಳಕಂಡ ಕಾಮಗಾರಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ/ಡಬ್ಲ್ಯೂ –2 ರನ್ವಯ **3054–03–337–0–05–200– ರಾಜ್ಯ ಹೆದ್ದಾರಿ ನಿರ್ವಹಣೆ ಲೆಕ್ಕಶೀರ್ಷಿಕೆಗಳಡಿಯಲ್ಲಿನ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ತೀರ್ಥಹಳ್ಳಿ ತಾ॥ ಮಾವಿನಕಟ್ಟೆ – ಯಡೂರು – ಮಾಸ್ತಿಕಟ್ಟೆ – ನಗರ – ಕಾನಗೋಡು ರಾಜ್ಯ ಹೆದ್ದಾರಿ ರಸ್ತೆಯ ಸರಪಳಿ 8.80 ರಿಂದ 9.45 ಕಿ.ಮೀ ವರೆಗೆ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿ (ಇಂಡೆಂಟ್ ನಂ 144058) ಅನುಮೋದನೆಗೊಂಡಿರುವ ಕಾಮಗಾರಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ ರೂ. 50.00 ಲಕ್ಷ ಹಾಗೂ ಇ.ಎಂ.ಡಿ. ಮೊತ್ತ ರೂ. 1.00 ಲಕ್ಷ ಟೆಂಡರ್ ಅವಧಿ 03 ತಿಂಗಳ ಮಳೆಗಾಲ ಸೇರಿ & ಮಾರ್ಚ್ 2022 ರ ಅಂತ್ಯದವರೆಗೆ.**
ಸದರಿ ಕಾಮಗಾರಿಗೆ ಈ ಕೆಳಸಹಿ ಮಾಡಿರುವವರು ಟೆಂಡರ್ ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್ –2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–4 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ **ದಿನಾಂಕ: 21–12–2021 ರಿಂದ 05–01–2022** ರ ವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು **ದಿನಾಂಕ: 05–01–2022** ರ **ಸಂಜೆ 5:00 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಭರಿಸತಕ್ಕದ್ದು, ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ **ದಿನಾಂಕ: 06–01–2022 ರಂದು** ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು **ದಿನಾಂಕ: 07–01–2022ರ ನಂತರ** ತೆರೆಯಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ
ವಾಸಾಸಂಇ/ಶಿ/ನಂ.101–12/ಝೇಂಕಾರ್/2021–22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವಿಭಾಗ ಕಾರ್ಯಾಲಯ, ಹಬ್ಬುವಾಡಾ–ಕಾರವಾರ, ಉತ್ತರ ಕನ್ನಡ ಜಿಲ್ಲೆ –581 301.
ದೂರವಾಣಿ: 08382–228935, ಫ್ಯಾಕ್ಸ್: 229735 e-mail: eerdwsd.uk@gmail.com
ನಂ.:ಕಾನಿಇಂ/ಗ್ರಾಕುನಿ&ನೈವಿ/ಕಾರವಾರ/ಪಿಬಿ–1/ಅಲ್ಪಾವಧಿ ಟೆಂಡರ/JJM/2021–22/1398 ದಿನಾಂಕ: 24.12.2021
ಇ–ಪ್ರೊಕ್ಯೂರಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಾರವಾರ ಇವರಿಂದ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ/ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಹಾಗೂ ಇ–ಪ್ರೊಕ್ಯೂರಮೆಂಟ್ ಸಂಸ್ಥೆಯಿಂದ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಕುಡಿಯುವ ನೀರು ಸರಬರಾಜು ಯೋಜನೆಯಡಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document KW-3 ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್ ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ. ಟೆಂಡರ್ ವಿವರಗಳು ಈ ಕೆಳಗಿನಂತಿದೆ.
ಕಾಮಗಾರಿ ಹೆಸರು: (1) INDENT NO : 36994
(1) Downloading of document through e-proc portal :28.12.2021 to 12.01.2022 up to 15.00 Hrs. (2) Time & date of Pre-Bid Conference: 03.01.2022. Time : 11.30 Hrs. Venue: O/o. Executive Engineer, Rural Drinking Water & Sanitation Division, Po: Habbuwada, Karwar- Uttara Kannada Dist. (3) Last Date & Time for Receipt of Bids: **12.01.2022 Time: 16.30 Hrs.** (4) Date & Time of Technical Bid Opening: 13.01.2022 Time: 17:00 Hrs. (5) Date & Time of Financial Bid Opening: Will be informed technically qualified bidders after approval of Technical Bid.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು
DIPR/ADK/MCA/614/21-22 dt.24.12.2021 ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಾರವಾರ (ಉ.ಕ.ಜಿಲ್ಲೆ)

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು ಕೃಭಾಜನಿ(ನಿ), ಮು.ಏ.ನೀ. ವಿಭಾಗ ನಂ.1, ಮಟ್ಟಿಹಾಳ. ತಾ॥ ಕೋಲಾರ, ಜಿ॥ ವಿಜಯಪುರ, ಕರ್ನಾಟಕ. ದೂ: 08426–286126 ಇ–ಮೇಲ್: kbjnleemli@gmail.com
ಸಂ: ಕೃಭಾಜನಿನಿ/ಮುಏನೀ/ವಿ–1ಮ/ಯೋ.ಶಾ/ಟೆಂಡರ್/2021–22/1209 ದಿನಾಂಕ: 22.12.2021
ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಮಾತ್ರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಬೆಂಗಳೂರು, ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಶೇಕಡಾವಾರು ದ್ವಿ–ಲಕೋಟೆ ಪದ್ಧತಿಯಲ್ಲಿ ಒಟ್ಟು 03 ಕಾಮಗಾರಿಗಳ ಇಂಡೆಂಟ್ ಸಂಖ್ಯೆ: 21398, 21385–2ನೇ ಕರೆ ಮತ್ತು 21345–2ನೇ ಕರೆ ಟೆಂಡರ ಕರೆಯಲಾಗಿದ್ದು, ಕಾಮಗಾರಿಗಳ ಟೆಂಡರಿಗಿಟ್ಟ ಕನಿಷ್ಠ ಹಾಗೂ ಗರಿಷ್ಠ ಮೊತ್ತ ಅನುಕ್ರಮವಾಗಿ **ರೂ. 1.26 ಲಕ್ಷಗಳಿಂದ ರೂ. 122.24 ಲಕ್ಷಗಳು** ಇರುತ್ತವೆ. ಸರ್ಕಾರದ ಆದೇಶ ಸಂಖ್ಯೆ: ಆಇ 675 ವೆಚ್ಚ–12/2020, ಬೆಂಗಳೂರು ದಿನಾಂಕ:–22–12–2020 ರನ್ವಯ ಗುತ್ತಿಗೆದಾರರು ಮುಂಗಡ ಠೇವಣಿ ಮೊತ್ತಕ್ಕೆ ಬದಲಾಗಿ ಇ.ಎಮ್.ಡಿ ಘೋಷಣೆ (EMD Declaration) ಯನ್ನು ನಿಗದಿತ ಅನುಬಂಧದಲ್ಲಿ ಭರ್ತಿ ಮಾಡಿ ಟೆಂಡರ್ ದಾಖಲೆಗಳಲ್ಲಿ ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕು. ಗುತ್ತಿಗೆದಾರರು ನಿಗದಿಪಡಿಸಿದ ಇ.ಎಮ್.ಡಿ ಘೋಷಣಾ ಅನುಬಂಧ/ಗುತ್ತಿಗೆದಾರರ ದರ್ಜೆ/ಟೆಂಡರ್ ನಿಯಮ/ಟೆಂಡರ್ ಪ್ರೊಸೆಸಿಂಗ ಶುಲ್ಕ, ಇತ್ಯಾದಿ ವಿವರಗಳನ್ನು **https://eproc.karnataka.gov.in** ಅಥವಾ ಕೆಳಗೆ ಸಹಿ ಮಾಡಿದವರನ್ನು ಕಛೇರಿಯ ಸಮಯದಲ್ಲಿ ದಿನಾಂಕ: **07.01.2022 ಸಮಯ ಸಾಯಂಕಾಲ 05.00 ಗಂಟೆವರೆಗೆ** ಸಂಪರ್ಕಿಸಬಹುದು. ದೂರವಾಣಿ 08426–286126. ಸದರಿ ಟೆಂಡರುದಾರರು ದ್ವಿ–ಪ್ರತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಅಪ್‌ಲೋಡ್ ಮಾಡುವುದು.
ಟೆಂಡರ್ ಅಧಿಸೂಚನೆಯ ಪ್ರಕಾರ ದಿನಾಂಕವಾರು ಘಟನಾವಳಿಗಳು ಈ ಕೆಳಗಿನಂತಿವೆ. (1) ಇ–ಟೆಂಡರ್ ದಸ್ತಾವೇಜುಗಳ ವಿವರಗಳು ಗುತ್ತಿಗೆದಾರರಿಗೆ ದೊರೆಯುವ ದಿನಾಂಕ ಹಾಗೂ ಪೂರ್ಣಗೊಳಿಸಿದ ಇ–ಟೆಂಡರ್ ದಾಖಲೆಗಳನ್ನು **ದಿನಾಂಕ: 28.12.2021** ರಿಂದ **07.01.2022** ರವರೆಗೆ ಸಮಯ **ಸಾಯಂಕಾಲ 5.00** ಘಂಟೆಯವರೆಗೆ ಸಲ್ಲಿಸುವುದು. (2) ಇಂಡೆಂಟ್ ಸಂಖ್ಯೆ–21398 ನ ಪೂರ್ವಭಾವಿ ಸಭೆಯನ್ನು ದಿನಾಂಕ: **03.01.2022 ರಂದು ಬೆಳಿಗ್ಗೆ 11:00** ಘಂಟೆಗೆ ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ, ವಿಭಾಗ–1, ಮಟ್ಟಿಹಾಳ ಕಛೇರಿಯಲ್ಲಿ ನಿಗದಿಪಡಿಸಲಾಗಿದೆ. ಬಿಡ್ಡದಾರರು ಯಾವುದೇ ಸ್ಪಷ್ಟಿಕರಣಕ್ಕಾಗಿ ತಮ್ಮ ಪ್ರಶ್ನೆಗಳನ್ನು ದಿನಾಂಕ: **01.01.2022 ರಂದು ಸಾಯಂಕಾಲ 05.00** ಘಂಟೆಯವರೆಗೆ ಸಲ್ಲಿಸುವುದು. (3) ಲಕೋಟೆ–1 (ತಾಂತ್ರಿಕ ಬಿಡ್)ನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ ವಿಭಾಗ ಸಂಖ್ಯೆ–1 ಮಟ್ಟಿಹಾಳ, ಕೋಲ್ಹಾರ ತಾಲೂಕು ವಿಜಯಪುರ ಜಿಲ್ಲೆ ಇವರ ಕಛೇರಿಯಲ್ಲಿ ದಿನಾಂಕ **10.01.2022** ಸಮಯ **ಬೆಳಗ್ಗೆ 11.00 ಘಂಟೆಗೆ** ತೆರೆಯಲಾಗುವುದು. (4) ಲಕೋಟೆ–2 (ಆರ್ಥಿಕ ಬಿಡ್)ನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ, ವಿಭಾಗ ಸಂಖ್ಯೆ–1 ಮಟ್ಟಿಹಾಳ, ಕೋಲ್ಹಾರ ತಾಲೂಕು ವಿಜಯಪುರ ಜಿಲ್ಲೆ ಇವರ ಕಛೇರಿಯಲ್ಲಿ ತೆರೆಯುವುದು ದಿನಾಂಕ: **12.01.2022 ಸಮಯ ಬೆಳಿಗ್ಗೆ 11.00 ಗಂಟೆಗೆ** ಅಥವಾ ತಾಂತ್ರಿಕ ಬಿಡ್ ಅನುಮೋದನೆ ನಂತರ ತೆರೆಯಲಾಗುವುದು.
ವಿಶೇಷ ಸೂಚನೆ: (1) ಮೀಸಲಾತಿ ಕಾಮಗಾರಿಗಳಿಗೆ ಭಾಗವಹಿಸುವ ಗುತ್ತಿಗೆದಾರರು, ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಅಪ್ಲೋಡ್ ಮಾಡತಕ್ಕದ್ದು. (2) ಮೀಸಲಾತಿ ಕಾಮಗಾರಿಗಳಿಗೆ ಗುತ್ತಿಗೆ ಸಲ್ಲಿಸುವ ಪರಿಶಿಷ್ಠ ಪಂಗಡ ಗುತ್ತಿಗೆದಾರರು ಕನಿಷ್ಠ 10 ವರ್ಷ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು ಹಾಗೂ ಸಕ್ಷಮ ಪ್ರಾಧಿಕಾರದಿಂದ ಪಡೆದ ನಿವಾಸಿ ಪ್ರಮಾಣ ಪತ್ರ ಲಗತ್ತಿಸತಕ್ಕದ್ದು. (3) ಗುತ್ತಿಗೆದಾರರು ಫರ್ಮ ಗುತ್ತಿಗೆದಾರರಾಗಿದ್ದರೆ ಎಲ್ಲಾ ಪಾರ್ಟನರ್ ಸದಸ್ಯರು ಪರಿಶಿಷ್ಠ ಪಂಗಡದವರಾಗಿರಬೇಕು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು ಕೃಭಾಜನಿ(ನಿ), ಮು.ಏ.ನೀ, ವಿಭಾಗ–1, ಮಟ್ಟಿಹಾಳ
ವಾಸಾಇ/ವಿಜಯಪುರ/ಆರ್.ಓ.ಸಂಖ್ಯೆ416/ಎಂ.ಸಿ.ಎ/2021–22

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ
ಯಾರು ಅಸಹನೆ ಹುಟ್ಟಿಸುವ ವಿಚಾರಗಳಿಂದ ಮುಕ್ತರಾಗುತ್ತಾರೋ ಅಂತಹವರಲ್ಲಿ ಶಾಂತಿಯು ಸಹಜವಾಗಿಯೇ ಹುಟ್ಟುತ್ತದೆ.
–ಗೌತಮ ಬುದ್ಧ

ಓಮೈಕ್ರಾನ್: ಎಚ್ಚರ ತಪ್ಪದಿರಿ ಆರೋಗ್ಯ ವ್ಯವಸ್ಥೆ ಸನ್ನದ್ಧಗೊಳಿಸಿ

ಕೊರೊನಾ ವೈರಾಣುವಿನ ಹೊಸ ರೂಪಾಂತರಿ ತಳಿ ಓಮೈಕ್ರಾನ್ ಸೋಂಕು ತಗುಲಿದ 300ಕ್ಕೂ ಅಧಿಕ ಪ್ರಕರಣಗಳು ದೇಶದಲ್ಲಿ ಈಗ ದೃಢಪಟ್ಟಿವೆ. ತಿಂಗಳ ಆರಂಭದಲ್ಲಿ ಒಂದೂ ಪ್ರಕರಣ ಇರಲಿಲ್ಲ. ಕೆಲವೇ ದಿನಗಳಲ್ಲಿ ಇಷ್ಟೊಂದು ಪ್ರಕರಣಗಳು ವರದಿ ಆಗಿದ್ದರಿಂದ ಅಪಾಯದ ಎಚ್ಚರಿಕೆ ಗಂಟೆ ಬಾರಿಸಿದಂತಾಗಿದೆ. ಸೋಂಕು ಮತ್ತೆ ಹರಡುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಸರ್ಕಾರ, ರಾಜ್ಯಗಳಿಗೆ ಎಚ್ಚರಿಕೆ ಸಂದೇಶವನ್ನು ರವಾನಿಸುವ ಜತೆಗೆ ಕೆಲವು ಸೂಚನೆಗಳನ್ನು ಸಹ ನೀಡಿದೆ. 'ಎಂತಹ ಕೆಟ್ಟ ಪರಿಸ್ಥಿತಿಯನ್ನೂ ಎದುರಿಸಲು ಸಜ್ಜಾಗಿ' ಎಂಬ ಕಿವಿಮಾತು ಹೇಳಿದೆ. ಕೊರೊನಾದ ಹಳೆಯ ಡೆಲ್ಟಾ ತಳಿಗೆ ಹೋಲಿಸಿದರೆ ಓಮೈಕ್ರಾನ್ ಹರಡುವ ಸಾಧ್ಯತೆ ಮೂರುಪಟ್ಟು ಹೆಚ್ಚು ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ. ಹೀಗಾಗಿ ಜಿಲ್ಲೆ ಮತ್ತು ಸ್ಥಳೀಯ ಮಟ್ಟದಲ್ಲಿ ಪರಿಸ್ಥಿತಿಯ ಮೇಲೆ ನಿರಂತರ ನಿಗಾ ಇಡುವುದು, ದತ್ತಾಂಶಗಳನ್ನು ಕೂಲಂಕಷವಾಗಿ ವಿಶ್ಲೇಷಿಸುವುದು, ಸನ್ನಿವೇಶಕ್ಕೆ ತಕ್ಕಂತೆ ತಕ್ಷಣ ನಿರ್ಧಾರ ತೆಗೆದುಕೊಳ್ಳುವುದು ಮತ್ತು ಕಂಟೈನ್‌ಮೆಂಟ್ ವಲಯಗಳನ್ನು ಸಮರ್ಪಕವಾಗಿ ಗುರುತಿಸಿ, ನಿರ್ಬಂಧಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು ಅತೀ ಮುಖ್ಯ ಎಂದು ಕೇಂದ್ರ ಆರೋಗ್ಯ ಸಚಿವಾಲಯ ನೀಡಿರುವ ಸೂಚನೆಯಲ್ಲಿ ತಿಳಿಸಲಾಗಿದೆ. ಕೋವಿಡ್ ದೃಢಪಡುವಿಕೆ ಪ್ರಮಾಣವು ಶೇ 10ರ ಗಡಿ ದಾಟುವ ಮುನ್ನ ಮತ್ತು ಆಮ್ಲಜನಕ ಲಭ್ಯ ಇರುವ ಹಾಸಿಗೆಗಳ ಭರ್ತಿ ಪ್ರಮಾಣ ಶೇ 40 ತಲುಪುವ ಮುನ್ನ ನಿರ್ಬಂಧ ಹಾಗೂ ನಿಷೇಧಗಳನ್ನು ಹೇರಲು ರಾಜ್ಯ ಸರ್ಕಾರಗಳಿಗೆ ಅವಕಾಶ ನೀಡಲಾಗಿದೆ. ರಾತ್ರಿ ಕರ್ಫ್ಯೂ ವಿಧಿಸುವುದು, ಹೆಚ್ಚಿನ ಜನ ಸೇರದಂತೆ ತಡೆಯುವುದು, ಮದುವೆ, ಅಂತ್ಯಸಂಸ್ಕಾರದಲ್ಲಿ ಪಾಲ್ಗೊಳ್ಳುವವರ ಸಂಖ್ಯೆಯನ್ನು ಮಿತಿಗೆ ಒಳಪಡಿಸುವುದು ಮತ್ತು ಸಮೂಹ ಸಾರಿಗೆಯಲ್ಲಿ ದಟ್ಟಣೆಯನ್ನು ಕಡಿಮೆ ಮಾಡಲು ಕಚೇರಿಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ಸಂಖ್ಯೆಯ ಮೇಲೆ ಮಿತಿ ಹೇರುವಂತಹ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ ಎಂದೂ ತಿಳಿಸಲಾಗಿದೆ. ಈ ಸೂಚನೆಗಳನ್ನು ರಾಜ್ಯ ಸರ್ಕಾರಗಳು ಗಂಭೀರವಾಗಿ ತೆಗೆದುಕೊಂಡು ತಕ್ಷಣ ಕಾರ್ಯಪ್ರವೃತ್ತವಾಗುವ ಅಗತ್ಯವಿದೆ.

ಅಪಾಯದ ಕುರಿತು ಅಸಡ್ಡೆ ತೋರದೆ ಸಂಪೂರ್ಣ ನಿಗಾ ವಹಿಸುವ ಮೂಲಕ, ಸರ್ಕಾರ ಮತ್ತು ಸಮುದಾಯ ಒಂದಾಗಿ ಈ ಸಾಂಕ್ರಾಮಿಕವನ್ನು ಹಿಮ್ಮೆಟ್ಟಿಸಬೇಕು

ದೇಶದ ಶೇ 90ರಷ್ಟು ಜನ ಕನಿಷ್ಠ ಒಂದು ಡೋಸ್ ಲಸಿಕೆ ಪಡೆದಿದ್ದಾರೆ. ಕೋವಿಡ್‌ನ ಎರಡನೇ ಅಲೆ ಶುರುವಾಗಿದ್ದ ಹಂತಕ್ಕೆ ಹೋಲಿಸಿದರೆ ಈಗ ಲಸಿಕೆ ಹಾಕುವ ಗುರಿಯಲ್ಲಿ ದೇಶ ದಾಪುಗಾಲು ಹಾಕಿರುವುದೇನೋ ನಿಜ. ಆದರೆ, 'ಸದ್ಯ ಇರುವ ಕೋವಿಡ್ ನಿರೋಧಕ ಲಸಿಕೆಗಳು ಹೊಸ ತಳಿಯ ಸೋಂಕಿನಿಂದ ರಕ್ಷಣೆ ನೀಡುವುದಿಲ್ಲ. ಲಸಿಕೆಯ ಮೂರನೇ ಡೋಸ್ ಸಹ ಬೇಕಾಗುತ್ತದೆ' ಎಂದು ಹೇಳಲಾಗುತ್ತಿದೆ. ಮಕ್ಕಳಿಗೆ ಲಸಿಕೆ ನೀಡುವ ಸಂಬಂಧ ಔಷಧ ನಿಯಂತ್ರಣ ಪ್ರಾಧಿಕಾರ ಇದುವರೆಗೆ ನಿರ್ಧಾರ ತೆಗೆದುಕೊಂಡಿಲ್ಲ. ಒಂದು ಡೋಸ್ ಲಸಿಕೆ ಮಾತ್ರ ಪಡೆದವರು ಮತ್ತು ಲಸಿಕೆಯನ್ನೇ ಪಡೆಯದವರು ಸೇರಿ ಶೇ 40ರಷ್ಟು ಜನ ಈ ಸೋಂಕಿನಿಂದ ಹೆಚ್ಚಿನ ಅಪಾಯ ಎದುರಿಸುವ ಸಾಧ್ಯತೆ ಇದೆ. ಅದರಲ್ಲೂ ಸಾಂಕ್ರಾಮಿಕಪೂರ್ವ ಕಾಲಘಟ್ಟದಂತೆ ಜನದಟ್ಟಣೆ ಈಗ ಮತ್ತೆ ಸಾಮಾನ್ಯವಾಗಿದೆ. ಚುನಾವಣೆ ರ‍್ಯಾಲಿಗಳು ಸಹ ಎಂದಿನಂತೆ ನಡೆಯುತ್ತಿವೆ. ಓಮೈಕ್ರಾನ್ ಎಷ್ಟು ಅಪಾಯಕಾರಿ ಮತ್ತು ಅದರ ನೈಜ ಪರಿಣಾಮ ಏನೆಂಬುದು ಮುಂದಿನ ಕೆಲವು ವಾರಗಳಲ್ಲಿ ಸ್ಪಷ್ಟವಾಗಿ ಗೋಚರಿಸುವ ಸಾಧ್ಯತೆ ಇದೆ.

ಕೋವಿಡ್‌ನ ಮೊದಲ ಅಲೆ ಮುಗಿಯುವ ಹೊತ್ತಿನಲ್ಲೇ 'ಎರಡನೇ ಅಲೆಯೂ ಬಂದೆರಗಲಿದೆ' ಎಂದು ತಜ್ಞರು ಎಚ್ಚರಿಸುತ್ತಲೇ ಇದ್ದರು. ಮೊದಲ ಅಲೆಯ ಸಂದರ್ಭದಲ್ಲಿ ಸಿದ್ಧತೆಗೆ ಸಮಯವಿಲ್ಲದೆ ಒದ್ದಾಡಿದ್ದ ರಾಜ್ಯ ಸರ್ಕಾರ, ಎರಡನೇ ಅಲೆಯನ್ನು ಎದುರಿಸಲು ಕಾಲಾವಕಾಶವಿದ್ದರೂ ಅಣಿಗೊಂಡಿರಲಿಲ್ಲ. ರಾಜ್ಯದಲ್ಲಿ ಕೋವಿಡ್‌ಗೆ ತುತ್ತಾದವರಲ್ಲಿ ಹಲವರು ಸಕಾಲದಲ್ಲಿ ಚಿಕಿತ್ಸೆ, ವೆಂಟಿಲೇಟರ್, ಆಸ್ಪತ್ರೆಯಲ್ಲಿ ಹಾಸಿಗೆ ಸಿಗದೆ ಜೀವ ಕಳೆದುಕೊಂಡ ಕಹಿ ನೆನಪು ಇನ್ನೂ ಕಾಡುತ್ತಿದೆ. ಇಂತಹ ಸಮಯದಲ್ಲೇ ಓಮೈಕ್ರಾನ್ ವಕ್ಕರಿಸಿದೆ. ದೇಶದಲ್ಲಿ ಓಮೈಕ್ರಾನ್ ಸೋಂಕು ಪ್ರಕರಣಗಳು ಹೆಚ್ಚು ವರದಿಯಾಗಿರುವ ರಾಜ್ಯಗಳಲ್ಲಿ ಕರ್ನಾಟಕ ಸಹ ಒಂದಾಗಿದೆ. ಕೋವಿಡ್ ನಿಯಂತ್ರಣಕ್ಕಾಗಿ ಈ ಹಿಂದೆ ಆರಂಭಿಸಿದ್ದ ಬಹುತೇಕ ಕೇಂದ್ರಗಳನ್ನು ಯಾವುದೇ ವಿವೇಚನೆ ಇಲ್ಲದೆ ಮುಚ್ಚಲಾಗಿದೆ. ಅವುಗಳನ್ನು ಜರೂರಾಗಿ ಪುನರಾರಂಭಿಸಬೇಕು. ಜಿಲ್ಲಾ ಕೇಂದ್ರಗಳಲ್ಲಿ ಔಷಧಿಗಳ ದಾಸ್ತಾನು ಸಮರ್ಪಕವಾಗಿಲ್ಲ ಎಂಬ ವರದಿಗಳೂ ಇವೆ. ಎಲ್ಲ ಕಡೆಗಳಲ್ಲಿ ಜೀವರಕ್ಷಕ ಔಷಧಿಗಳ ಅಗತ್ಯ ದಾಸ್ತಾನು ಇರುವಂತೆ ನೋಡಿಕೊಳ್ಳಬೇಕು. ಕೇಂದ್ರ ಆರೋಗ್ಯ ಇಲಾಖೆಯ ಸೂಚನೆಯಂತೆ, ಸ್ಥಳೀಯ ಸಾಂಕ್ರಾಮಿಕ ಪ್ರವೃತ್ತಿಗಳ ಮೇಲೂ ನಿಗಾ ಇಟ್ಟಿರಬೇಕು. ಜನರೂ ಅಷ್ಟೆ, ಸಾಂಕ್ರಾಮಿಕದ ಅಪಾಯದ ಕುರಿತು ಅಸಡ್ಡೆ ತೋರದೆ ಪೂರ್ಣ ಎಚ್ಚರ ವಹಿಸಬೇಕು. ಸರ್ಕಾರ–ಸಮುದಾಯ ಒಂದಾಗಿ ಈ ಸಾಂಕ್ರಾಮಿಕವನ್ನು ಹಿಮ್ಮೆಟ್ಟಿಸಬೇಕು.

ಕಿಡಿನುಡಿ

ಹಿಂದುತ್ವವಾದಿಗಳು ಸದಾ ದ್ವೇಷ ಮತ್ತು ಹಿಂಸೆಯನ್ನು ಹರಡುವ ಕೆಲಸವನ್ನಷ್ಟೇ ಮಾಡಿದ್ದಾರೆ. ಹಿಂದೂ–ಮುಸ್ಲಿಂ–ಸಿಖ್–ಕ್ರೈಸ್ತರೆಲ್ಲರೂ ಇದಕ್ಕೆ ಬೆಲೆ ತೆತ್ತಿದ್ದಾರೆ. ಇನ್ನು ಮುಂದೆ ಹಾಗೆ ಆಗುವುದಿಲ್ಲ.

ರಾಹುಲ್ ಗಾಂಧಿ, ಕಾಂಗ್ರೆಸ್ ಸಂಸದ

ದಿನದ ಟ್ವೀಟ್

ಹಕ್ಕುಗಳನ್ನು ಅರಿಯೋಣ

ದೇಶದ ಆರ್ಥಿಕತೆಯಲ್ಲಿ ಗ್ರಾಹಕರು ಮಹತ್ವದ ಪಾತ್ರ ವಹಿಸುತ್ತಾರೆ! ಗ್ರಾಹಕರ ಹಕ್ಕುಗಳ ಸಂರಕ್ಷಣೆ ಹಾಗೂ ಅದಕ್ಕೆ ಸಂಬಂಧಿಸಿದ ಜನಜಾಗೃತಿಗಾಗಿ ಪ್ರತಿವರ್ಷ ರಾಷ್ಟ್ರೀಯ ಗ್ರಾಹಕರ ಹಕ್ಕುಗಳ ದಿನವನ್ನು ಆಚರಿಸಲಾಗುತ್ತದೆ. ನಮ್ಮ ಈ ಹಕ್ಕುಗಳನ್ನು ಅರಿತು, ಇತರರಲ್ಲೂ ಈ ಕುರಿತು ಜಾಗೃತಿ ಮೂಡಿಸಲು ಬದ್ಧರಾಗೋಣ.

ಪಾರ್ಥ ಸಾರಥಿ ಮಿಶ್ರಾ, ಐಎಎಸ್ ಅಧಿಕಾರಿ

25 ವರ್ಷಗಳ ಹಿಂದೆ

ಬುಧವಾರ, 25-12-1996

● ತುರ್ತು ಅಧಿವೇಶನಕ್ಕೆ ಪ್ರತಿಪಕ್ಷಗಳ ಒತ್ತಡ

ಬೆಂಗಳೂರು, ಡಿ. 24– ರಾಜ್ಯದ ಕಾನೂನು ಸುವ್ಯವಸ್ಥೆ ಹಾಗೂ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಕುಸಿದು, ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ ಎಂದು ಆರೋಪಿಸಿರುವ ವಿರೋಧ ಪಕ್ಷಗಳ ಮುಖಂಡರು, ಚರ್ಚೆಗಾಗಿ ಕೂಡಲೇ ವಿಧಾನಸಭೆಯ ಅಧಿವೇಶನ ಕರೆಯುವಂತೆ ಒತ್ತಾಯಿಸಲು ರಾಜ್ಯಪಾಲರು ಹಾಗೂ ವಿಧಾನಸಭೆಯ ಅಧ್ಯಕ್ಷರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಲು ತೀರ್ಮಾನಿಸಿದ್ದಾರೆ.

ಮೊದಲ ಹಂತವಾಗಿ ಡಿಸೆಂಬರ್ 27ರಂದು ವಿಧಾನಸಭೆಯ ಅಧ್ಯಕ್ಷರನ್ನು ಭೇಟಿ ಮಾಡಿ, ಅಧಿವೇಶನ ಕರೆಯುವಂತೆ ಒತ್ತಾಯಿಸಲಾಗುವುದು. ನಂತರ ರಾಜ್ಯಪಾಲರನ್ನು ಭೇಟಿ ಮಾಡಿ ಈ ಬಗ್ಗೆ ಮನವಿ ಅರ್ಪಿಸಲಾಗುವುದು ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಧರ್ಮಸಿಂಗ್, ಬಿಜೆಪಿ ಶಾಸಕಾಂಗ ಪಕ್ಷದ ಕಾರ್ಯದರ್ಶಿ ರಾಮಚಂದ್ರಗೌಡ, ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ಹಾಗೂ ಶಾಸಕ ವಾಟಾಳ್ ನಾಗರಾಜ್ ಮತ್ತು ವಿಧಾನಸಭೆಯ ಮಾಜಿ ಸ್ಪೀಕರ್ ಡಿ.ಬಿ.ಚಂದ್ರೇಗೌಡ ಇಂದು ಇಲ್ಲಿ ಜಂಟಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಜೆ.ಎಚ್.ಪಟೇಲ್ ನೇತೃತ್ವದ ರಾಜ್ಯ ಜನತಾದಳ ಸರ್ಕಾರವು ಶಾಸನಸಭೆಯ ಅಧಿವೇಶನವನ್ನೇ ಕರೆಯದೆ ಜನತಂತ್ರ ವ್ಯವಸ್ಥೆಯ ಕತ್ತು ಹಿಸುಕುವ ಪ್ರಯತ್ನ ಮಾಡುತ್ತಿರುವುದರಿಂದ, ರಾಜ್ಯಪಾಲರು ಮತ್ತು ವಿಧಾನಸಭೆಯ ಅಧ್ಯಕ್ಷರ ಮೊರೆ ಹೋಗಲು ವಿರೋಧ ಪಕ್ಷಗಳು ತೀರ್ಮಾನಿಸಿವೆ ಎಂದು ಅವರು ಹೇಳಿದರು.

50 ವರ್ಷಗಳ ಹಿಂದೆ

ಶನಿವಾರ, 25-12-1971

● ನೆರವು ನಿಲ್ಲಿಸುವ ಬೆದರಿಕೆಗೆ ಭಾರತ ಮಣಿಯದು: ಇಂದಿರಾ

ಅಂಬಾಲಾ, ಡಿ. 24– ಭಾರತದ ವ್ಯವಹಾರಗಳಲ್ಲಿ ವಿದೇಶಗಳು ಹಸ್ತಕ್ಷೇಪ ಮಾಡಿದರೆ ಅದನ್ನು ಎಂದಿಗೂ ಸಹಿಸಲಾಗದು ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಎಚ್ಚರಿಕೆ ನೀಡಿದರು.

ಇಲ್ಲಿ ಬೃಹತ್ ಸಾರ್ವಜನಿಕ ಸಭೆಯೊಂದನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು, 'ಕೆಲವು ವಿದೇಶಿ ಸರ್ಕಾರಗಳು ಭಾರತದ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿವೆ. ಆದರೆ ಈಗ ಕಾಲ ಬದಲಾಗಿದೆ. ಈ ಹಸ್ತಕ್ಷೇಪವನ್ನು ಭಾರತ ಸಹಿಸುವುದಿಲ್ಲ' ಎಂದರು. ವಿದೇಶಿ ನೆರವು ನಿಲ್ಲಿಸುವ ಬೆದರಿಕೆ ಭಾರತದ ಮೇಲೆ ಯಾವ ಪರಿಣಾಮವನ್ನೂ ಬೀರದು ಎಂದೂ ಅವರು ಸ್ಪಷ್ಟಪಡಿಸಿದರು.

ಇತ್ತೀಚಿನ ಭಾರತ– ಪಾಕ್ ಘರ್ಷಣೆಯ ಸಂದರ್ಭದಲ್ಲಿ ಮತ್ತು ಆನಂತರದ ಪರಿಸ್ಥಿತಿಯ ಬೆಳವಣಿಗೆ ದೃಷ್ಟಿಯಿಂದ ತನ್ನ ಅಂತರರಾಷ್ಟ್ರೀಯ ಬಾಂಧವ್ಯದ ಸ್ವರೂಪವನ್ನು ಭಾರತವು ಪುನರ್ ವಿಮರ್ಶಿಸಬೇಕಾಗುತ್ತದೆ ಎಂದೂ ಇಂದಿರಾ ಗಾಂಧಿ ಅವರು ಸೂಚಿಸಿದರು.

● 'ಬಾಂಗ್ಲಾದೇಶಕ್ಕಾಗಿ ಕಾಶ್ಮೀರ ಬಿಟ್ಟುಕೊಡುವ ಪ್ರಶ್ನೆ ಇಲ್ಲ'

ಲಂಡನ್, ಡಿ. 24– ಬಾಂಗ್ಲಾದೇಶಕ್ಕಾಗಿ ಕಾಶ್ಮೀರವನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲವೆಂದು ಭಾರತದ ವಿದೇಶಾಂಗ ಸಚಿವ ಸ್ವರಣ್ ಸಿಂಗ್ ಅವರು ಇಲ್ಲಿ ತಿಳಿಸಿದರು.

ಜಮ್ಮು–ಕಾಶ್ಮೀರ ಭಾರತದ ಅವಿಭಾಜ್ಯ ಅಂಗ. ಪಶ್ಚಿಮ ಪಾಕಿಸ್ತಾನ ಇದನ್ನು ಒಪ್ಪಿಕೊಳ್ಳಬೇಕು ಎಂದು ಅವರು ಹೇಳಿದರು.

'ಸಾರ್ವಜನಿಕರ ಮಾಲೀಕತ್ವದ ಕಂಪನಿ'ಯಂತೆ ಬದಲಾಗುವುದೊಂದೇ ಕಾಂಗ್ರೆಸ್‌ಗೆ ಉಳಿದಿರುವ ಆಯ್ಕೆ

ಕಾಂಗ್ರೆಸ್ ಮತಪೆಟ್ಟಿಗೆಗೆ ಲಗ್ಗೆ

ಸೂರ್ಯ–ನಮಸ್ಕಾರ

ಎ. ಸೂರ್ಯ ಪ್ರಕಾಶ್

ಕಾಂಗ್ರೆಸ್ ಪಕ್ಷವನ್ನು ಬದಿಗೆ ಸರಿಸಿ, ಬಿಜೆಪಿಗೆ ಎದುರಾಗಿ ಪ್ರಬಲ ಪ್ರಾದೇಶಿಕ ನಾಯಕರನ್ನು ಹೊಂದಿರುವ ಮೈತ್ರಿಕೂಟವನ್ನು ಕಟ್ಟಲು ಮಮತಾ ಬ್ಯಾನರ್ಜಿ ಅವರು ಇರಿಸಿರುವ ಹೆಜ್ಜೆ ಅನಿವಾರ್ಯವಾಗಿತ್ತು ಅನ್ನಿಸುತ್ತಿದೆ. ಕಾಂಗ್ರೆಸ್ ಪಕ್ಷವು ವಿರೋಧ ಪಕ್ಷಗಳ ಒಗ್ಗಟ್ಟಿಗೆ ಸೃಷ್ಟಿಸುತ್ತಿರುವ ಅಡ್ಡಿಗಳನ್ನು ಗಮನಿಸಿದರೆ ಈ ಭಾವನೆ ಮೂಡುತ್ತದೆ.

ವಿರೋಧ ಪಕ್ಷಗಳ ಕೇಂದ್ರಸ್ಥಾನದಲ್ಲಿ ಕಾಂಗ್ರೆಸ್ ಇರುವವರೆಗೆ ನರೇಂದ್ರ ಮೋದಿ ಮತ್ತು ಬಿಜೆಪಿಗೆ 'ಪರ್ಯಾಯವೇ ಇಲ್ಲ'ದ ಸ್ಥಿತಿಯ ಲಾಭ ಸಿಗುತ್ತಿರುತ್ತದೆ ಎಂಬುದು ಹಲವು ವರ್ಷಗಳಿಂದ ಕಾಣಿಸುತ್ತಲೇ ಇದೆ. ಮೋದಿ ಅವರು ಮೊದಲ ಬಾರಿ ಪ್ರಧಾನಿಯಾಗಿ ಎರಡೂವರೆ ವರ್ಷ ಕಳೆದಿದ್ದಾಗಲೇ ರಾಜಕೀಯ ಪಂಡಿತರು ಇದರ ಬಗ್ಗೆ ಮಾತನಾಡಲು ಆರಂಭಿಸಿದ್ದರು. ಆದರೆ, ಈ ಸಮಸ್ಯೆ ಬಗೆಹರಿಸಲು ವಿರೋಧ ಪಕ್ಷಗಳಲ್ಲಿ ಯಾರೊಬ್ಬರೂ ಏನನ್ನೂ ಮಾಡಲಿಲ್ಲ. ವಿರೋಧ ಪಕ್ಷಗಳ ಒಗ್ಗಟ್ಟಿನ ಬಗ್ಗೆ ಬಾಯುಪಚಾರದ ಮಾತನ್ನು ಮಾತ್ರ ಆಡಿದರು.

2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು 300ಕ್ಕೂ ಹೆಚ್ಚು ಸ್ಥಾನಗಳನ್ನು ಪಡೆಯಿತು. ವಿರೋಧ ಪಕ್ಷಗಳ ಒಗ್ಗಟ್ಟಿನಲ್ಲಿ ದೊಡ್ಡ ಮಟ್ಟದ ಸುಧಾರಣೆ ಆಗುವವರೆಗೆ ಮೋದಿ ಅವರಿಗೆ ಯಾರೂ ಸವಾಲು ಹಾಕಲು ಸಾಧ್ಯವಿಲ್ಲ ಎಂಬುದು, 2019ರ ಚುನಾವಣೆಯಲ್ಲಿ ಮತದಾರರು ಮೋದಿ ಅವರ ನಾಯಕತ್ವಕ್ಕೆ ನೀಡಿದ ಮನ್ನಣೆಯನ್ನು ಗಮನಿಸಿದ ಯಾರಿಗಾದರೂ ಸ್ಪಷ್ಟವಾಗುತ್ತಿತ್ತು. ಹೀಗಿದ್ದರೂ, ಒಂದು ಕುಟುಂಬದ ನಿಯಂತ್ರಣದಲ್ಲಿ, ಈಗಲೂ ಒಂದು ಖಾಸಗಿ ಕಂಪನಿಯ ಮಾದರಿಯಲ್ಲಿ ಕೆಲಸ ಮಾಡುತ್ತಿರುವ ಕಾಂಗ್ರೆಸ್ ಪಕ್ಷವು ವಿರೋಧ ಪಕ್ಷಗಳ ಒಗ್ಗಟ್ಟಿಗೆ ಅಡ್ಡಿಯಾಗಿ ನಿಂತಿತು.

ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ ಅವರ ಕಾಲದಲ್ಲಿ ಚಲಾವಣೆಯಾದ ಮತಗಳಲ್ಲಿ ಶೇ 45ರಷ್ಟನ್ನು, ಲೋಕಸಭೆಯ ಸ್ಥಾನಗಳಲ್ಲಿ ಶೇ 65ರಿಂದ ಶೇ 70ರಷ್ಟನ್ನು ಪಡೆಯುತ್ತಿದ್ದ ಕಾಂಗ್ರೆಸ್ ಪಕ್ಷವು ಈಗ ಶೇ 20ಕ್ಕಿಂತ ಕಡಿಮೆ ಮತಗಳನ್ನು ಪಡೆಯುತ್ತಿದೆ. ಇದರ ಪರಿಣಾಮವಾಗಿ ಪಕ್ಷವು 2014ರ ಲೋಕಸಭಾ ಚುನಾವಣೆಯಲ್ಲಿ ಕೇವಲ 44 ಸ್ಥಾನಗಳನ್ನು, 2019ರ ಚುನಾವಣೆಯಲ್ಲಿ 53 ಸ್ಥಾನಗಳನ್ನು ಗೆದ್ದುಕೊಂಡಿತು. ಇಷ್ಟಾದರೂ, 'ಕುಟುಂಬ'ವು ಪಕ್ಷದ ಮೇಲಿನ ನಿಯಂತ್ರಣವನ್ನೂ ಬಿಡಲು ಸಿದ್ಧವಿಲ್ಲ, ಬಿಜೆಪಿ ವಿರೋಧಿ ಗುಂಪಿನ ಮೇಲಿನ ನಿಯಂತ್ರಣವನ್ನೂ ಬಿಡುತ್ತಿಲ್ಲ. ಇದರಿಂದಾಗಿ ಇತರ ಪಕ್ಷಗಳು ಹೊಸ ಮಾರ್ಗಗಳನ್ನು ಹುಡುಕುವಂತೆ ಆಗಿದೆ. ಸಮಸ್ಯೆಯನ್ನು (ಅಂದರೆ ಕಾಂಗ್ರೆಸ್ ಪಕ್ಷವನ್ನು) ಸರಿಯಾಗಿ ಗುರುತಿಸದಿದ್ದರೆ, ಸಮಸ್ಯೆಯನ್ನು ಮೀರಿ ಸಾಗುವ ಅಗತ್ಯದ ಬಗ್ಗೆ ಸಾರ್ವಜನಿಕವಾಗಿ ಘೋಷಿಸದಿದ್ದರೆ 2024ರಲ್ಲಿ ಮೋದಿ ಅವರಿಗೆ ಸವಾಲು ಒಡ್ಡಲು ಸಾಧ್ಯವಿಲ್ಲ ಎಂಬುದು ಅವುಗಳಿಗೆ ಅರ್ಥವಾಗಿದೆ.

ಈಚಿನ ವಾರಗಳಲ್ಲಿ ಮಮತಾ ಅವರು ಮಾಡಲು ಹೊರಟಿರುವುದು ಇದೇ ಕೆಲಸವನ್ನು. ತ್ರಿಪುರಾ, ಗೋವಾದಂತಹ ರಾಜ್ಯಗಳಲ್ಲಿ ಬಿಜೆಪಿಗೆ ಪ್ರಮುಖ ವಿರೋಧ ಪಕ್ಷ ಎಂಬ ಸ್ಥಾನದಿಂದ ಕಾಂಗ್ರೆಸ್ಸನ್ನು ಇಳಿಸಲು, ಅಷ್ಟು ಮಾತ್ರವೇ ಅಲ್ಲದೆ ಕಾಂಗ್ರೆಸ್ಸನ್ನು ಏಕಾಂಗಿಯಾಗಿಸಿ ಹೊಸ ವೇದಿಕೆಯೊಂದನ್ನು ಹುಟ್ಟುಹಾಕುವ ತಮ್ಮ ಅಜೆಂಡಾ ಬಗ್ಗೆ ಮಾತನಾಡಲು ಮಮತಾ ಅವರು ಹಲವು ಪಕ್ಷಗಳ ನಾಯಕರನ್ನು ಭೇಟಿ ಮಾಡುತ್ತಿದ್ದಾರೆ. ಕಾಂಗ್ರೆಸ್ ನೇತೃತ್ವದ ಸಂಯುಕ್ತ ಪ್ರಗತಿಪರ ಮೈತ್ರಿಕೂಟದ (ಯುಪಿಎ) ಕೊನೆಯನ್ನು ಘೋಷಿಸಿ, ರಾಹುಲ್ ಗಾಂಧಿ ವಿರುದ್ಧ ಟೀಕಾಪ್ರಹಾರವನ್ನು ಆಗಾಗ್ಗೆ ನಡೆಸಿದ್ದಾರೆ ಮಮತಾ. 'ಯುಪಿಎ ಅಂದರೆ ಏನು? ಈಗ ಯುಪಿಎ ಇಲ್ಲ... ನಮಗೆ ಬಲಿಷ್ಠ ಪರ್ಯಾಯವೊಂದು ಬೇಕು' ಎಂದು ಮಮತಾ ಹೇಳಿರುವುದಾಗಿ ವರದಿಯಾಗಿದೆ. ರಾಹುಲ್ ಅವರ ಬಗ್ಗೆ, 'ಅರ್ಧದಷ್ಟು ಅವಧಿಗೆ ವಿದೇಶಗಳಲ್ಲಿಯೇ ಕಾಲ ಕಳೆಯುತ್ತಾರೆ ಎಂದಾದರೆ, ರಾಜಕಾರಣ ಮಾಡಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿರುವುದಾಗಿಯೂ ವರದಿಯಾಗಿದೆ.

ಈ ನಡುವೆ, ಆಮ್ ಆದ್ಮಿ ಪಕ್ಷ (ಎಎಪಿ) ಕೂಡ ಕಾಂಗ್ರೆಸ್ಸನ್ನು ಸ್ಥಾನಪಲ್ಲಟಗೊಳಿಸಲು ಮುಂದಾಗಿದ್ದು, ಕೆಲವು ರಾಜ್ಯಗಳಲ್ಲಿ ಒಂದಿಷ್ಟು ನೆಲೆ ಕಲ್ಪಿಸಿಕೊಂಡಿದೆ. ದೆಹಲಿಯಲ್ಲಿ ಸತತ ಎರಡು ಚುನಾವಣೆಗಳಲ್ಲಿ ಕಾಂಗ್ರೆಸ್ಸನ್ನು ಗುಡಿಸಿಹಾಕಿದ ನಂತರ ಎಎಪಿಯು ಪಂಜಾಬ್ ಪ್ರವೇಶಿಸಿದೆ. ಉತ್ತರಾಖಂಡ, ಗೋವಾದಲ್ಲಿ ತನ್ನ ಅದೃಷ್ಟ ಪರೀಕ್ಷೆಗೆ ಮುಂದಾಗಿದೆ. ಈ ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಎಎಪಿ ಪಡೆಯುವ ಸ್ಥಾನಗಳ ಸಂಖ್ಯೆ ಏನೇ ಇರಬಹುದು, ಈ ಪಕ್ಷವು ಕಾಂಗ್ರೆಸ್ಸಿನ ಮತಬುಟ್ಟಿಗೆ ಕೈಹಾಕುವುದು ಖಚಿತ.

ತೃಣಮೂಲ ಕಾಂಗ್ರೆಸ್ ಮತ್ತು ಎಎಪಿ, ಕಾಂಗ್ರೆಸ್ಸಿನ ಮತಬುಟ್ಟಿಗೆ ಕೈಹಾಕುತ್ತಿರುವ ಹೊಸ ಪಕ್ಷಗಳು. ಕಾಂಗ್ರೆಸ್ಸಿನ ಸ್ಥಾನಪಲ್ಲಟ ಮಾಡುವಲ್ಲಿ, ಅದರ ಮತಬ್ಯಾಂಕ್ ದುರ್ಬಲಗೊಳಿಸುವಲ್ಲಿ ಇತರ ಪ್ರಾದೇಶಿಕ ಪಕ್ಷಗಳು ದೊಡ್ಡ ಪಾತ್ರ ವಹಿಸಿವೆ. ಈ ಪ್ರಕ್ರಿಯೆಯು 80ರ ದಶಕದಲ್ಲಿ ಆಂಧ್ರ ಪ್ರದೇಶದಲ್ಲಿ ತೆಲುಗು ದೇಶಂ, ಕರ್ನಾಟಕದಲ್ಲಿ ಜನತಾ ಪಕ್ಷ, 1997ರಲ್ಲಿ ಒಡಿಶಾದಲ್ಲಿ ಬಿಜು ಜನತಾದಳ, ನಂತರದ ವರ್ಷಗಳಲ್ಲಿ ತೆಲಂಗಾಣದಲ್ಲಿ ಟಿಆರ್‌ಎಸ್ ಮತ್ತು ವಿಭಜಿತ ಆಂಧ್ರಪ್ರದೇಶದಲ್ಲಿ ವೈಎಸ್‌ಆರ್ ಕಾಂಗ್ರೆಸ್ ಪ್ರವರ್ಧಮಾನಕ್ಕೆ ಬಂದ ನಂತರದಲ್ಲಿ ವೇಗ ಪಡೆದುಕೊಂಡಿತು. ಕಾಂಗ್ರೆಸ್ ವಿರೋಧಿ ಪಾಳಯವನ್ನು ಈಚೆಗೆ ಸೇರಿರುವ ನಾಯಕ, ಪಂಜಾಬ್‌ನ ಕ್ಯಾಪ್ಟನ್ ಅಮರಿಂದರ್ ಸಿಂಗ್. ಅವರಿಗೆ ನೆಹರೂ–ಗಾಂಧಿಗಳು ಅವಮಾನ ಮಾಡಿ, ಪಕ್ಷದಿಂದ ಹೊರಹಾಕಿದರು. ಈಗ ಸಿಂಗ್ ಅವರು ನೆಹರೂ–ಗಾಂಧಿಗಳಿಗೆ ಪಾಠ ಕಲಿಸಲು ತಮ್ಮದೇ ಆದ ಪ್ರಾದೇಶಿಕ ಪಕ್ಷ ಹುಟ್ಟುಹಾಕಿದ್ದಾರೆ.

ಅಂದಾಜು ಐವತ್ತು ವರ್ಷಗಳ ಕಾಲದ ರಾಜಕಾರಣವನ್ನು ನಿಯಂತ್ರಿಸಿದ್ದ ಕಾಂಗ್ರೆಸ್ ಪಕ್ಷವು ಈಗ ಮುದಿ ಸಿಂಹದಂತೆ ಕಾಣಲು ಆರಂಭಿಸಿದೆ. ಅದಕ್ಕೆ ಬೇಟೆಯಾಡುವ ಶಕ್ತಿ ಇಲ್ಲವಾಗಿದೆ; ತಾನೇ ಬೇಟೆಗೆ ಈಡಾಗುತ್ತಿದೆ. ಇದು ಖೇದಕರ. ಏಕೆಂದರೆ ಕಾರ್ಪೊರೇಟ್ ಸಂಸ್ಥೆಗಳು, ರಾಜಕೀಯ ಪಕ್ಷಗಳು ವ್ಯಕ್ತಿಗಳಂತೆ ಅಲ್ಲ. ಇವುಗಳಿಗೆ ಮುದಿತನ ಬರುವುದನ್ನು ತಡೆಯುವ ಶಕ್ತಿ, ಸಾವನ್ನು ಮೀರುವ ಶಕ್ತಿ ಇರುತ್ತದೆ. ಅದಾಗಬೇಕು ಎಂದಾದರೆ ಇವು ತಾವು ತಪ್ಪು ಮಾಡುತ್ತಿರುವುದು ಎಲ್ಲಿ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು, ಹೊಸ ನಾಯಕತ್ವ ಹಾಗೂ ಆಲೋಚನೆಗಳನ್ನು ಹೊಂದಬೇಕು ಮತ್ತು ತಾವು ಕೊಳೆತು ಹೋಗದಂತೆಯೂ ನೋಡಿಕೊಳ್ಳಬೇಕು.

ತೃಣಮೂಲ ಕಾಂಗ್ರೆಸ್ ಮತ್ತು ಎಎಪಿ ಈಗ ಕಾಂಗ್ರೆಸ್ಸಿನ ಸ್ಥಾನಕ್ಕೆ ಅಪಾಯ ತಂದೊಡ್ಡಿರುವ ಕಾರಣ, ಕಾಂಗ್ರೆಸ್ಸಿಗೆ ಉಳಿದಿರುವುದು ಒಂದೇ ಆಯ್ಕೆ. ಅದು ಒಂದರ್ಥದಲ್ಲಿ, ಸಾರ್ವಜನಿಕರ ಮಾಲೀಕತ್ವದ ಕಂಪನಿಯಂತೆ ಬದಲಾಗಬೇಕು. ಪಕ್ಷದ ನಾಯಕ ಯಾರು ಎಂಬುದನ್ನು ತೀರ್ಮಾನಿಸಲು ಪಾಲುದಾರರಿಗೆ ಅವಕಾಶ ಕೊಡಬೇಕು. ಬಿಜೆಪಿ ವಿರೋಧಿ ಮತಗಳಲ್ಲಿ ತಮ್ಮ ಪಾಲು ಎಷ್ಟು ಎಂಬುದರ ಬಗ್ಗೆ ಎಎಪಿ ಮತ್ತು ಟಿಎಂಸಿ ಈಗಾಗಲೇ ಕಿತ್ತಾಡಲು ಶುರು ಮಾಡಿವೆ.

ಕರ್ನಾಟಕ, ಕೇರಳ, ರಾಜಸ್ಥಾನ, ಛತ್ತೀಸಗಡ, ಮಧ್ಯಪ್ರದೇಶ, ಉತ್ತರಾಖಂಡ ಮತ್ತು ಇತರ ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ಸಿಗೆ ಈಗಲೂ ನಾಯಕರು ಇದ್ದಾರೆ. ಪಕ್ಷವನ್ನು ನಿಯಂತ್ರಿಸುತ್ತಿರುವ ಕುಟುಂಬದ ಸದಸ್ಯರಿಗಿಂತ ಹೆಚ್ಚಿನ ವಿಶ್ವಾಸಾರ್ಹತೆಯು ಈ ನಾಯಕರಿಗೆ ಇದೆ. ವಿಸ್ತೃತ ನೆಲೆಯ ನಾಯಕತ್ವವು ಪಕ್ಷಕ್ಕೆ ಮತ್ತೆ ಮೇಲೇಳಲು ಸಹಾಯ ಮಾಡಬಹುದು. ಆದರೆ, ಹರೀಶ್ ರಾವತ್ ಅವರಂತಹ ನಿಷ್ಠಾವಂತ ನಾಯಕರಿಗೂ ಉಸಿರುಕಟ್ಟಿದ ಅನುಭವ ಆಗುತ್ತಿದೆ. ಈಗ ಹೆಚ್ಚು ಸಮಯ ಇಲ್ಲ. ಕುಟುಂಬವು ತನ್ನ ನಿಯಂತ್ರಣ ಸಡಿಲಿಸಲು ಮುಂದಾಗದಿದ್ದರೆ, ವಯಸ್ಸಾದ ಕುಂಟ ಸಿಂಹದ ಸ್ಥಿತಿ ಪಕ್ಷಕ್ಕೂ ಬಂದೊದಗಬಹುದು.

ಚುರುಮುರಿ



ಗುತ್ತಿಗೆಶ್ರೀ ಪ್ರಶಸ್ತಿ!

● ಆನಂದ

'ಮುಂದಿನ ತಿಂಗಳು ಹೊಸ ಪ್ರಶಸ್ತಿ ಪ್ರಕಟವಾಗುತ್ತೇರಿ' ಎಂದಳು ಹೆಂಡತಿ. ನನಗೆ ಆಶ್ಚರ್ಯವಾಯಿತು. 'ಇದು ಹೊಸ ಪ್ರಶಸ್ತಿನೋ ಅಥವಾ ಹಳೆ ಪ್ರಶಸ್ತಿಗೇ ಹೊಸ ಹೆಸರು ಕೊಡುವ ಪ್ಲ್ಯಾನೋ?' ಎಂದೆ. 'ಇಲ್ಲಾರಿ, ಇದು ಹೊಚ್ಚ ಹೊಸ ಪ್ರಶಸ್ತಿ' ಎಂದಳು.

'ಮುಂದಿನ ತಿಂಗಳು ಹೇಗೂ ರಿಪಬ್ಲಿಕ್ ಡೇ ಸಂದರ್ಭದಲ್ಲಿ ಪ್ರಶಸ್ತಿಗಳನ್ನ ಅನೌನ್ಸ್ ಮಾಡ್ತಾರೆ. ನಿನ್ನದೇನು ಈ ಹೊಸ ಪ್ರಶಸ್ತಿ ರಾಗ?' ಎಂದೆ.

'ಹ್ಞಾಂ! ಈಗ ಆ ಪ್ರಶಸ್ತಿಗೆ ಒಳ್ಳೆ ಹೆಸರೂ ಸಿಕ್ತುರೀ, ಪದ್ಮಶ್ರೀ ತರಹ ಗುತ್ತಿಗೆಶ್ರೀ...' ಎಂದಳು.

'ಗುತ್ತಿಗೆಶ್ರೀ?! ಹಳೆ ಪ್ರಶಸ್ತಿಗೆ ಹೊಸ ಹೆಸರು ಕೊಡುವ ಯೋಜನೆಯೇ? ಅಂದರೆ ಗುತ್ತಿಗೆ ಭೂಷಣ, ಗುತ್ತಿಗೆ ವಿಭೂಷಣ, ಗುತ್ತಿಗೆ ರತ್ನ... ಇವೆಲ್ಲಾ ಇರಬಹುದೇ?'

'ಐಡಿಯಾತೊ ಅಚ್ಛಾ ಹೈ' ಎಂದಳು.

'ಅದೇನು ಹೇಳು' ಎಂದು ಅಂಗಲಾಚಿದೆ.

'ಗುತ್ತಿಗೆ ಕಾಮಗಾರಿಗಳ ಮೊತ್ತದಲ್ಲಿ 40 ಪರ್ಸೆಂಟ್ ಮಾಮೂಲು ಕೊಡಬೇಕಿದೆ ಅಂತ ರಾಜ್ಯ ಗುತ್ತಿಗೆದಾರರ ಸಂಘ ಪ್ರಧಾನಿಗೆ ಪತ್ರ ಬರೆದು ದೂರಿತ್ತಲ್ವೇ? ನಮೋ ಅವರು ಮನಮೋಹನ್ ಅವರಂತೆ ಮೌನ ವಹಿಸಿದ್ದಾರಲ್ಲ. ಅದಕ್ಕೆ ಗುತ್ತಿಗೆದಾರರ ಸಂಘದವರು, ಯಾರ‍್ಯಾರು ಮಾಮೂಲು ಕೇಳ್ತಾರೆ ಎಂಬ ಪಟ್ಟಿಯನ್ನ ಮುಂದಿನ ತಿಂಗಳು ಬಿಡುಗಡೆ ಮಾಡ್ತಾರಂತೆ.'

'ಸೊ?'

'ಆ ಪಟ್ಟಿ ಆಧಾರದ ಮೇಲೆ ಗುತ್ತಿಗೆಶ್ರೀ, ಗುತ್ತಿಗೆ ಭೂಷಣ, ಗುತ್ತಿಗೆ ವಿಭೂಷಣ, ಗುತ್ತಿಗೆ ರತ್ನ ಹೀಗೆ ಪ್ರಶಸ್ತಿ ಕೊಡಬಹುದಲ್ಲವೇ? ಆದರೆ ಒಂದು ಸಮಸ್ಯೆ. 'ಮಾಮೂಲಿ' ಪಡೆಯುವವರ ಹೆಸರುಗಳನ್ನ ಜಿಲ್ಲಾವಾರು ಬಿಡುಗಡೆ ಮಾಡ್ತಾರಂತೆ. ಆಗ ಲಿಸ್ಟ್ ತುಂಬಾ ದೊಡ್ಡದಾಗದೇ?'

'ಆಗಲಿ, ಕೆಲವೊಮ್ಮೆ ಕೆಲವು ಪ್ರಶಸ್ತಿ ವಿಜೇತರ ಸಂಖ್ಯೆ ದಿಢೀರ್ ಎಂದು ಏರಿಕೆಯಾಗುವುದಿಲ್ಲವೇ?

'ಆಗೆಲ್ಲಾ ಪ್ರಶಸ್ತಿ ಗಿಟ್ಟಿಸಿಕೊಳ್ಳುವ ಹಂಬಲ ಜೋರಾಗಿರುತ್ತದೆ. ಆದರೆ ಇಲ್ಲಿ ಮಾತ್ರ ತಮ್ಮ ಹೆಸರು ಪ್ರಕಟವಾಗದಿರಲಿ ಎಂದು ಲಾಬಿ ಮಾಡುವವರ ಸಂಖ್ಯೆ ತುಂಬ ದೊಡ್ಡದಿರುತ್ತದೆ' ಎಂದಳು.

ಅದಕ್ಕೂ ಮಾಮೂಲಿ ಕೊಡಬೇಕೆ? ಎಷ್ಟು ಪರ್ಸೆಂಟ್? ಯಾರಿಗೆ?

ಚರ್ಚೆ

ಮಕ್ಕಳನ್ನೇಕೆ ದೂರುತ್ತಿದ್ದೇವೆ?

ಮಕ್ಕಳ ಮನಸ್ಸನ್ನು ಗೊಂದಲದ ಗೂಡಾಗಿಸಿರುವ ಇಂದಿನ ನಮ್ಮ ಸ್ಥಿತಿ, ಬೇವು ಬಿತ್ತಿ ಮಾವು ಹುಡುಕುವಂತಿದೆ

● ಸದಾಶಿವ್ ಸೊರಟೂರು

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಗ್ರಾಮವೊಂದರ ಪ್ರೌಢಶಾಲಾ ವಿದ್ಯಾರ್ಥಿಗಳು ಶಿಕ್ಷಕರೊಬ್ಬರ ಜೊತೆ ಅನುಚಿತವಾಗಿ ವರ್ತಿಸಿ, ಕೊನೆಗೆ ಅವರ ಕಾಲಿಗೆ ಬಿದ್ದು ಕ್ಷಮೆ ಕೇಳಿದರು. ಅಲ್ಲಿಗೆ ಮುಗಿದದ್ದು ಆ ಪ್ರಕರಣವಷ್ಟೇ; ಅಂತಹ ಪ್ರಕರಣಗಳಲ್ಲ. ಲೆಕ್ಕ ಹಾಕಿದರೆ ಅಂತಹವು ದಿನಕ್ಕೆ ಹತ್ತೆಂಟು ಸಿಕ್ಕಾವು, ಬಗೆಬಗೆಯವು ಸಿಕ್ಕಾವು. ಆದರೆ, ಹೊರಬಿದ್ದು ವರದಿಯಾಗುವುದು ಬೆರಳೆಣಿಕೆಯಷ್ಟು ಮಾತ್ರ!

ಈಗೀಗಂತೂ ಮಕ್ಕಳ ಬಗ್ಗೆ ದೂರುಗಳು ಕೇಳಿಬರುತ್ತಲೇ ಇರುತ್ತವೆ. ನಯ ವಿನಯವಿಲ್ಲ, ಗುರು ಹಿರಿಯರೆಂದರೆ ಗೌರವವಿಲ್ಲ, ಮೌಲ್ಯಗಳಂತೂ ಇಲ್ಲವೇ ಇಲ್ಲ, ವರ್ತನೆ ಹದ್ದು ಮೀರುತ್ತಿದೆ, ಶಿಸ್ತನ್ನಂತೂ ಕೇಳಲೇಬೇಡಿ, ಚಟಗಳು ಬೆನ್ನುಹತ್ತಿವೆ... ಹೀಗೆ ನೂರೆಂಟು.

ಹಾಗಾದರೆ ಇಲ್ಲಿ ತಪ್ಪು ಯಾರದು? ಸ್ವತಃ ಮಕ್ಕಳದೋ? ಅವರಿಗೆ ಪಾಠ ಹೇಳುವ ಶಿಕ್ಷಕರದೋ? ಪೋಷಕರದೋ? ಇಡೀ ವ್ಯವಸ್ಥೆಯದೋ? ಒಂದೇ ಸಾಲಿನಲ್ಲಿ ಉತ್ತರಿಸುವುದಾದರೆ, ಮಗುವಿನ ಇಂತಹ ಸ್ಥಿತಿಗೆ ನಾವೆಲ್ಲರೂ ಕಾರಣ. ಮಕ್ಕಳ ಮೇಲೆ ಆಳಿಗೊಂದು ಕಲ್ಲು ಎಸೆದರೆ ಅವರಾದರೂ ಹೇಗೆ ತಡೆದುಕೊಂಡಾರು?!

ತಪ್ಪನ್ನು ಮಕ್ಕಳ ಮೇಲೆ ಹೊರಿಸಲಾಗದು. ಹಾಗೆ ವರ್ತಿಸುವಂತೆ ಅವರನ್ನು ಅಣಿಗೊಳಿಸಿದ ಇಡೀ ವ್ಯವಸ್ಥೆ ಅದರ ಭಾರವನ್ನು ಹೊರಬೇಕು. ಮಗು ಕೆಟ್ಟ ಗುಣಗಳನ್ನು ತೊಟ್ಟುಕೊಂಡೇನೂ ಹುಟ್ಟಿರುವುದಿಲ್ಲ. ನಮ್ಮ ಪುರಾಣಗಳು ಹೇಳುವಂತೆ, ಹದಿನೈದು ವರ್ಷ ತುಂಬುವವರೆಗೂ ಮಗು ಮಾಡುವ ಎಲ್ಲಾ ಪಾಪಕಾರ್ಯಗಳು ಹೆತ್ತವರ ಖಾತೆಗೆ ಜಮೆಯಾಗುತ್ತವೆಯಂತೆ! ಅಂದರೆ ಅದರ ಅರ್ಥವೇನು? ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ತೀರ್ಮಾನಿಸುವಷ್ಟು ಅವರು ಪ್ರಬುದ್ಧರಲ್ಲ ಅನ್ನುವುದು. ನಿಜಕ್ಕೂ ಅಂತಹ ಹೊಣೆಗಾರಿಕೆಯನ್ನು ಹೇಳಿಕೊಡದಿರುವುದು ಮಗುವಿನ ತಪ್ಪು ಹೇಗಾಗುತ್ತದೆ? ಕಾಲ ಕೆಟ್ಟಿದೆ ಎನ್ನುತ್ತೇವೆ. ಕೆಡುತ್ತಿರುವುದು ಮಕ್ಕಳು, ಅಂತಹ ಮಕ್ಕಳು ಕಾಲವನ್ನು ಕೆಡಿಸದೆ ಇನ್ನೇನು ಮಾಡಿಯಾರು?

ಮಕ್ಕಳ ಬಾಲ್ಯವನ್ನು ಎಂದೋ ಕಸಿದುಕೊಂಡು ಬಿಟ್ಟಿದ್ದೇವೆ. ಸಸಿಯೊಂದಕ್ಕೆ ಮೂಟೆಗಟ್ಟಲೆ ಗೊಬ್ಬರ ಸುರಿಯುವಂತೆ ಒತ್ತಡವನ್ನು ಅವರಲ್ಲಿ ಸುರಿಯುತ್ತಿದ್ದೇವೆ. ನಡೆಯಲು ಆರಂಭಿಸಿದ ಕೂಡಲೇ ಶಾಲೆಗೆ ತಳ್ಳಿಬಿಡುತ್ತೇವೆ. ಬದುಕಿಗೆ ಅಂಕಗಳಷ್ಟೇ ಮುಖ್ಯ, ಅದರಾಚೆಯ ಬದುಕು ಶೂನ್ಯ ಎಂದು ತಲೆಯಲ್ಲಿ ತುಂಬುತ್ತೇವೆ. ಸಂಜೆ ಮನೆಗೆ ಬಂದ ಮಗುವಿಗೆ 'ಹೋಂವರ್ಕ್ ಏನಿದೆ?' ಎಂದು ಕೇಳುತ್ತಲೇ ಬರಮಾಡಿಕೊಳ್ಳುವ ಎಷ್ಟೋ ಪೋಷಕರಿದ್ದಾರೆ. ಮಗು ಓದಿ, ಬರೆಯಲಿಕ್ಕೇ ಹುಟ್ಟಿದೆಯೇನೋ ಎಂಬ ಭಾವ. ಅದು ಅಂದು ಹೊಸತೇನನ್ನು ಕಲಿಯಿತು ಎನ್ನುವುದು ಯಾರಿಗೂ ಬೇಕಿಲ್ಲ.

ಸತ್ಯಹರಿಶ್ಚಂದ್ರನ ಬಗ್ಗೆ ಸೊಗಸಾಗಿ ಬರೆದ ಪ್ರಬಂಧಕ್ಕೆ ಮಗುವಿಗೆ ಉತ್ತಮ ಅಂಕಗಳು ಸಿಗಬಹುದು. ಆದರೆ ಆ ಮಗುವಿಗೆ ಎಷ್ಟರಮಟ್ಟಿಗೆ ಸತ್ಯದ ಅರಿವಾಗಿರಬಹುದು ಎಂದು ತಲೆಕೆಡಿಸಿಕೊಳ್ಳುವವರು ಯಾರು? ನಮಗೆ ಅಂಕಗಳು ಸಾಕು. ಅಮ್ಮ ಸೀರಿಯಲ್ ನೋಡುತ್ತಾ 'ಹೋಂವರ್ಕ್' ಬರೆಸುತ್ತಾಳೆ. ಅಪ್ಪ 'ಬ್ರೇಕಿಂಗ್ ನ್ಯೂಸ್' ನೋಡುತ್ತಾ ಮೈಮರೆಯುತ್ತಾನೆ. ಇದನ್ನೆಲ್ಲಾ ನೋಡುವ ಮಗುವಿನ ಮನಸ್ಸು ಗೊಂದಲದ ಗೂಡಾಗುತ್ತದೆ.

ಮೊಬೈಲ್ ಮೂಲಕ ವಿಚಿತ್ರ ಜಗತ್ತೊಂದು ಮನೆಯೊಳಗೆ ಇಣುಕಿದೆ. ಬಹುತೇಕ ಸಿನಿಮಾಗಳಲ್ಲಿ ಕ್ರೌರ್ಯವೇ ನಾಯಕ. ಮೋಸ, ಅನ್ಯಾಯ, ಅನಾಚಾರ ಜಗತ್ತನ್ನು ಆಳುತ್ತಿವೆ. ಅವೆಲ್ಲಾ ಮಗುವನ್ನು ತಲುಪಲು ತಡಮಾಡುವುದಿಲ್ಲ. ನಮ್ಮ ಕೆಲವು ಶಿಕ್ಷಕರು ಹೇಗಿದ್ದಾರೆ ಎಂಬುದನ್ನು ಮಗುವಿನ ವರ್ತನೆಯೇ ಹೇಳಿಬಿಡುತ್ತದೆ. ಮಗುವಿನ ಮೇಲೆ ಶಿಕ್ಷಕರು ಬೀರುವಷ್ಟು ಪ್ರಭಾವವನ್ನು ಇನ್ಯಾರೂ ಬೀರಲಾರರು. ಕೆಲವು ಶಿಕ್ಷಕರು ಆತ್ಮಾವಲೋಕನ ಮಾಡಿಕೊಳ್ಳುವುದನ್ನು ಎಂದೋ ಬಿಟ್ಟಿದ್ದಾರೆ. ಶಿಕ್ಷಕರು ಕೂಡ ಈಗ ಒಂದು ಮಿತಿಯಲ್ಲಿ ಕೆಲಸ ಮಾಡಬೇಕಿದೆ. ಎಷ್ಟೋ ಬಾರಿ ಮೌಲ್ಯಯುತ ಶಿಕ್ಷಣವು ಪರೀಕ್ಷೆಯಲ್ಲಿ ಉತ್ತರ ಬರೆಯಲಷ್ಟೇ ಬಳಕೆಯಾಗುತ್ತದೆ...

ಹೀಗೆ ಮಗುವನ್ನು ಹಳ್ಳಕ್ಕೆ ತಳ್ಳುತ್ತಿರುವ ಕಾರಣಗಳ ಪಟ್ಟಿ ಬರೆದಷ್ಟೂ ದೀರ್ಘ. ಎಲ್ಲಾ ಮಕ್ಕಳು ದಾರಿ ತಪ್ಪಿದ್ದಾರೆ ಎಂಬುದು ಇದರ ಅರ್ಥವಲ್ಲ. ಕೆಲವರು ತಪ್ಪಿದ್ದಾರೆ, ಇನ್ನು ಕೆಲವರು ತಪ್ಪಲು ಸಿದ್ಧರಾಗುತ್ತಿದ್ದಾರೆ, ಒಂದಷ್ಟು ಮಕ್ಕಳು ಹೆತ್ತವರು ಹಾಗೂ ಶಿಕ್ಷಕರ ಕೃಪೆಯಿಂದ ದಾರಿ ತಪ್ಪದೇ ಉಳಿದಿದ್ದಾರೆ.

ಪುಟ್ಟ ಕತೆಯೊಂದಿದೆ. ಎರಡು ಎಳೆಗಿಳಿಗಳು ಗೂಡಿನಿಂದ ಹೊರಬೀಳುತ್ತವೆ. ಒಂದನ್ನು ಕಟುಕ ಎತ್ತಿಕೊಂಡು ಹೋದರೆ, ಮತ್ತೊಂದನ್ನು ಸಾಧು ತಂದು ಸಾಕುತ್ತಾನೆ. ಕಟುಕನ ಗಿಳಿ 'ಹಿಡಿ, ಹೊಡೆ, ಕೊಲ್ಲು' ಎನ್ನುವ ಮಾತನ್ನು ಕಲಿತರೆ, ಸಾಧುವಿನ ಗಿಳಿ 'ಬನ್ನಿ, ಕುಳಿತುಕೊಳ್ಳಿ. ನಿಮಗೇನು ಬೇಕು?' ಎನ್ನುವ ಸಂಸ್ಕಾರದ ಮಾತನ್ನು ಕಲಿಯುತ್ತದೆ. ನಮಗೆ ಯಾವ ಬಗೆಯ ವಾತಾವರಣ ಸಿಗುತ್ತದೋ ಅದರಿಂದ ನಮ್ಮ ಸಂಸ್ಕಾರ ರೂಪುಗೊಳ್ಳುತ್ತದೆ. ಹೀಗಿರುವಾಗ, ಯಾರನ್ನು ದೂರೋಣ? ಮಕ್ಕಳನ್ನೋ? ವ್ಯವಸ್ಥೆಯನ್ನೋ?

ನಾವೇನು ಮಾಡಬೇಕೆಂಬುದು ನಮ್ಮೆಲ್ಲರಿಗೂ ಗೊತ್ತಿದೆ. ಆದರೆ ಮಾಡಲು ಮನಸ್ಸಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಸ್ಟೇಟಸ್ ಹಾಕಿಕೊಂಡು ಪರಸ್ಪರ ಚರ್ಚೆಗೆ ಕೂರುತ್ತೇವೆ. ಬೇವು ಬಿತ್ತಿ, ಮಾವು ಹುಡುಕುತ್ತೇವೆ. 'ಅಯ್ಯೋ, ಇದೇನಿದು ಬೇವು?' ಎಂದು ಅರಚುತ್ತೇವೆ. ನಮ್ಮ ಮಕ್ಕಳು ಕಿಂದರಿಜೋಗಿಯ ಬೆನ್ನುಹತ್ತಿ ಹೊರಟಂತೆ ವ್ಯವಸ್ಥೆಯ ಹಿಂದೆ ಹೊರಟಿವೆ. ನಾವು ಮೂಕಪ್ರೇಕ್ಷಕರಾಗಿದ್ದೇವೆ.

ವಾಚಕರ ವಾಣಿ

ಲಸಿಕೆ ನೀಡಿಕೆಯಲ್ಲಿ ಯಶಸ್ಸು: ಸುಧಾರಣೆಯತ್ತ ಹೆಜ್ಜೆ

ಓಮೈಕ್ರಾನ್ ಸೋಂಕಿನ ಭೀತಿಯ ನಡುವೆಯೇ ರಾಜ್ಯದಾದ್ಯಂತ ಕೋವಿಡ್ ಲಸಿಕೆ ನೀಡುವ ಕಾರ್ಯ ಯಶಸ್ವಿಯಾಗಿ ಸಾಗಿರುವುದು ಹರ್ಷದಾಯಕ ಸುದ್ದಿ. ಗ್ರಾಮೀಣ ಭಾಗದಲ್ಲಿ ಕೃಷಿ ಚಟುವಟಿಕೆ ನಡೆಯುವ ನೆಲೆಗಳಿಗೇ ಹೋಗಿ ಆರೋಗ್ಯ ಕಾರ್ಯಕರ್ತರು ಲಸಿಕೆ ನೀಡುತ್ತಿರುವುದು, ಜನ ಕೂಡಾ ಅದನ್ನು ಸ್ವೀಕರಿಸುತ್ತಿರುವುದು ಈ ಶತಮಾನದ ಬೃಹತ್ ಲಸಿಕಾ ಅಭಿಯಾನದ ಯಶಸ್ಸನ್ನು ಸಾರುತ್ತಿದೆ. ಹುಲ್ಲಿನ ಬಣವೆ ಹಾಕುವ ಕೆಲಸ ಮಾಡುತ್ತಿದ್ದ ರೈತರೊಬ್ಬರಿಗೆ ಆರೋಗ್ಯ ಕಾರ್ಯಕರ್ತೆಯೊಬ್ಬರು ಏಣಿ ಹತ್ತಿ ಲಸಿಕೆ ನೀಡುತ್ತಿದ್ದ ಚಿತ್ರವೊಂದು ಇತ್ತೀಚೆಗೆ ವೈರಲ್ ಆಗಿತ್ತು. ಈ ಚಿತ್ರ ದೇಶದಲ್ಲಿ ಆರೋಗ್ಯ ಸೇವೆ ಸುಧಾರಣೆಯತ್ತ ಸಾಗುತ್ತಿರುವುದಕ್ಕೆ ನಿದರ್ಶನದಂತಿದೆ.

ಇನ್ನು ನಮ್ಮ ರಾಜಧಾನಿ ಬೆಂಗಳೂರಿನಲ್ಲಿ ಲಸಿಕೆ ನೀಡಿಕೆ ಅಭೂತಪೂರ್ವ ಯಶಸ್ಸು ಪಡೆದಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಎರಡನೇ ಡೋಸ್ ಲಸಿಕೆ ವಿತರಣೆಯಲ್ಲಿ ಶೇ 100ರಷ್ಟು ಸಾಧನೆ ಮಾಡಿರುವುದು ಮೈಲುಗಲ್ಲು. ಜಿಲ್ಲಾಧಿಕಾರಿ, ತಾಲ್ಲೂಕುಗಳ ಆಡಳಿತ, ಆರೋಗ್ಯ ಕಾರ್ಯಕರ್ತರ ಶ್ರಮ ಶ್ಲಾಘನೀಯ. ರಾಜ್ಯದೆಲ್ಲೆಡೆ ಎರಡನೇ ಡೋಸ್ ವಿತರಣೆ ಪೂರ್ಣಗೊಳಿಸಲು ಪ್ರತಿಯೊಬ್ಬರೂ ಕೈಜೋಡಿಸಬೇಕು.

ಪಟಾಪಟ್ ಶ್ರೀನಿವಾಸ್, ಆನೇಕಲ್

ಬಿಟ್ ಕಾಯಿನ್ ದಂಧೆ: ಶಿಕ್ಷೆಯಾಗಲಿ

ಬಿಟ್ ಕಾಯಿನ್ ಬಗ್ಗೆ ರಾಜಕೀಯ ಪಕ್ಷಗಳು ಕಚ್ಚಾಡಿಕೊಂಡಿದ್ದನ್ನು ನೋಡಿದರೆ, ಕಳ್ಳರು ಯಾರೆಂಬುದು ಪ್ರಜೆಗಳಿಗೆ ಗೊತ್ತಾಗಲೇ ಇಲ್ಲ. ನೀವೆಲ್ಲರೂ ವಾಸನೆಯ ತುಂಡುಗಳು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ನಾಲಿಗೆ ಚಪಲಕ್ಕೆ ಬೈದಾಡಿಕೊಳ್ಳುವುದನ್ನು ಬಿಡಿ. ಪ್ರಜೆಗಳಾದ ನಮಗೆ ಬರೇ ವೋಟು ಹಾಕುವ ಕೆಲಸ ಮಾತ್ರ ಅಲ್ಲ, ನಿಮ್ಮನ್ನು ಪ್ರಶ್ನಿಸುವ ಹಕ್ಕೂ ಇದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಿ. ಬಿಟ್ ಕಾಯಿನ್ ದಂಧೆಯಲ್ಲಿ ಯಾರ‍್ಯಾರಿದ್ದಾರೆ ಎಂಬುದನ್ನು ಶೀಘ್ರದಲ್ಲೇ ಪತ್ತೆ ಹಚ್ಚಿ, ಅವರಿಗೆ ಕಠಿಣ ಶಿಕ್ಷೆಯನ್ನು ಜಾರಿಗೊಳಿಸಿ.

ಎಸ್.ಜಯರಾಜ್ ರೈ, ಶಿವಮೊಗ್ಗ

ಶೋಭರಾಜ್ ನೆನಪಿಸಿದ ಮಾಧ್ಯಮ

ಕುಖ್ಯಾತ ಸರಣಿ ಹಂತಕ ಚಾರ್ಲ್ಸ್ ಶೋಭರಾಜ್ ಅವರಿಗೆ 77 ವರ್ಷ ಆಗಿರುವುದರಿಂದ ಬಿಡುಗಡೆ ಮಾಡುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ಮೂರು ದಿನಗಳಲ್ಲಿ ಉತ್ತರಿಸುವಂತೆ ನೇಪಾಳದ ಸುಪ್ರೀಂ ಕೋರ್ಟ್, ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿರುವುದು ವರದಿಯಾಗಿದೆ (ಪ್ರ.ವಾ., ಡಿ. 24).

ಜಗತ್ತು ಶೋಭರಾಜ್ ಕುರಿತಂತೆ ಬಹುತೇಕ ಮರೆತೇಹೋಗಿತ್ತು. ಇಂದಿನವರಿಗಂತೂ ಆತನ ಹೆಸರೇ ಗೊತ್ತಿಲ್ಲದೆ ಇರಬಹುದು. ಹಲವಾರು ವರ್ಷಗಳಿಂದ ಆತನ ಸುದ್ದಿಯೇ ಇರಲಿಲ್ಲ. ಅಂತಹ ವ್ಯಕ್ತಿಯ ಕುರಿತ ಸುದ್ದಿಯನ್ನು ಪತ್ರಿಕೆ ಪ್ರಕಟಿಸಿದೆ. ಜಗತ್ತಿನ ಮೂಲೆಮೂಲೆಯಲ್ಲಿ ನಡೆಯುವ ವಿಚಾರಗಳೆಡೆ ಮಾಧ್ಯಮಗಳು ಕಣ್ಣಿಟ್ಟು, ಅವುಗಳನ್ನು ಜನರಿಗೆ ತಲುಪಿಸಲು ಶ್ರಮಿಸುತ್ತವೆ ಎಂಬುದಕ್ಕೆ ಇದೇ ನಿದರ್ಶನ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಆಯುಷ್ ವಿ.ವಿ.: ಬೇರೆ ಜಿಲ್ಲೆಗೆ ಕೊಡಿ

ದಕ್ಷಿಣ ಭಾರತದ ಮೊತ್ತಮೊದಲ ಆಯುಷ್ ವಿಶ್ವವಿದ್ಯಾಲಯವನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಸ್ಥಾಪಿಸುವ ಮಸೂದೆಗೆ ಇತ್ತೀಚೆಗೆ ವಿಧಾನಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ. ಆದರೆ, ನಮ್ಮ ಮುಖ್ಯಮಂತ್ರಿ ಹಾಗೂ ಸಚಿವರಿಗೆ ಶಿವಮೊಗ್ಗ ಜಿಲ್ಲೆ ಬಿಟ್ಟು ಬೇರೆ ಹಿಂದುಳಿದ ಜಿಲ್ಲೆಗಳು ಕಾಣಿಸುವುದಿಲ್ಲವೇ? ಈಗಾಗಲೇ ಶಿವಮೊಗ್ಗ ಜಿಲ್ಲೆಯಲ್ಲಿ ಕುವೆಂಪು ವಿಶ್ವವಿದ್ಯಾಲಯ, ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ ಕಾರ್ಯನಿರ್ವಹಿಸುತ್ತಿವೆ. ಆದರೂ ಮತ್ತದೇ ಶಿವಮೊಗ್ಗ ಜಿಲ್ಲೆಯಲ್ಲೇ ಆಯುಷ್ ವಿಶ್ವವಿದ್ಯಾಲಯ ಆರಂಭಿಸಲು ಮುಂದಾದದ್ದು ಏಕೆ?

ರಾಜ್ಯದಲ್ಲಿ ಈವರೆಗೆ ಒಂದೇ ಒಂದು ವಿಶ್ವವಿದ್ಯಾಲಯವೂ ಇಲ್ಲದ ಅನೇಕ ಜಿಲ್ಲೆಗಳಿವೆ. ಸರ್ಕಾರ ಅಂತಹ ಜಿಲ್ಲೆಗಳನ್ನು ಗುರುತಿಸಿ ಅಲ್ಲಿನ ಶೈಕ್ಷಣಿಕ ಅಭಿವೃದ್ಧಿಗೆ ಒತ್ತು ನೀಡಬೇಕಾಗಿದೆ. ಅದು ಬಿಟ್ಟು ವಿಶ್ವವಿದ್ಯಾಲಯಗಳು ಇರುವ ಜಿಲ್ಲೆಗಳಿಗೇ ಹೆಚ್ಚುವರಿ ವಿಶ್ವವಿದ್ಯಾಲಯಗಳನ್ನು ಮಂಜೂರು ಮಾಡುತ್ತಾ ಹೋದರೆ ಉಳಿದ ಜಿಲ್ಲೆಗಳ ಕಥೆಯೇನು? ಈಗಲೂ ಕಾಲ ಮಿಂಚಿಲ್ಲ, ಶಿವಮೊಗ್ಗ ಜಿಲ್ಲೆಗೆ ಮಂಜೂರಾಗಿರುವ ಆಯುಷ್ ವಿಶ್ವವಿದ್ಯಾಲಯವನ್ನು ಯಾವ ವಿಶ್ವವಿದ್ಯಾಲಯವೂ ಇಲ್ಲದ ಜಿಲ್ಲೆಗೆ ಬಿಟ್ಟುಕೊಟ್ಟು ಔದಾರ್ಯ ಮೆರೆಯಬೇಕಾಗಿದೆ.

ಮುರುಗೇಶ ಡಿ., ದಾವಣಗೆರೆ

ಉಚ್ಚಾರಣೆಯಲ್ಲಿ ತಪ್ಪಲ್ಲ

'ಆಸನವನ್ನು ಹಾಸನವೆಂದೂ ಅಥವಾ ಹಾಸನವನ್ನು ಆಸನವೆಂದೂ ಭಾಷೆ ಎನ್ನುವುದನ್ನು ಬಾಸೆ ಎಂದೂ ಬಡವ ಎಂಬುದನ್ನು ಭಡವ ಎಂದೂ ಬರೆದರೆ ಅಥವಾ ಉಚ್ಚರಿಸಿದರೆ ಏನೇನು ವೈಪರೀತ್ಯಗಳಾಗಬಹುದು ಎಂಬುದನ್ನು ವಿವರಿಸಬೇಕಾಗಿಲ್ಲ' ಎಂಬ ವಿವರಣೆಯಲ್ಲಿ (ವಾ.ವಾ., ಡಿ. 24) ಇರುವಂತೆ, 'ಆಸನ/ಬಾಸೆ/ಭಡವ' ಎಂಬ ಪದರೂಪಗಳು ಬರವಣಿಗೆಯಲ್ಲಿ ತಪ್ಪಾಗುತ್ತವೆಯೇ ಹೊರತು, ಉಚ್ಚಾರಣೆಯಲ್ಲಲ್ಲ.

ಏಕೆಂದರೆ ಕನ್ನಡ ನುಡಿ ಸಮುದಾಯದ ಪ್ರಾದೇಶಿಕ ಹಾಗೂ ಸಾಮಾಜಿಕ ಉಪಭಾಷೆಗಳ ಮಾತುಕತೆಗಳಲ್ಲಿ 'ಅ/ಹ; ಷ/ಸ; ಬ/ಭ' ಎಂಬ ಮಾತಿನ ಧ್ವನಿಗಳು ಒಂದರ ನೆಲೆಯಲ್ಲಿ ಮತ್ತೊಂದು ಬಳಕೆಗೊಳ್ಳುತ್ತಿರುತ್ತವೆ. 'ಈಗ ತಾನೆ ನಾನು ಆಸನದಿಂದ ಬಂದೆ' ಎಂಬ ಮಾತನ್ನು ಒಬ್ಬರು ಮತ್ತೊಬ್ಬರಿಗೆ ಹೇಳಿದಾಗ ಯಾವುದೇ ಗೊಂದಲವಿಲ್ಲದೆ ಮಾತು ಸಂವಹನಗೊಳ್ಳುತ್ತದೆ. ಜನರ ನಡುವೆ ಮಾತು ವಿನಿಮಯಗೊಳ್ಳುವಾಗ ಆಡುವ ಪದಗಳಿಗೆ ಸಂದರ್ಭ ಪೂರಕವಾಗಿರುತ್ತದೆ. ಇದೇ ರೀತಿ ಮೇಲ್ಕಂಡ ಎಲ್ಲಾ ಪದಗಳು ಮಾತಿನ ಸಂದರ್ಭದಲ್ಲಿ ಯಾವುದೇ ಬಗೆಯ ಅರ್ಥದ ತೊಡಕಿಲ್ಲದೆ ಬಳಕೆಗೊಳ್ಳುತ್ತವೆ.

ಹಳಗನ್ನಡ ವ್ಯಾಕರಣಕಾರನಾದ ಕೇಶಿರಾಜನು ಶಬ್ದಮಣಿದರ್ಪಣದಲ್ಲಿ 'ಭಾಷೆ/ಭಾಸೆ' ಎಂಬ ರೂಪಗಳೆರಡೂ ಬಳಕೆಯಲ್ಲಿ ಇದ್ದುದನ್ನು ದಾಖಲಿಸಿದ್ದಾನೆ. ಸಂಸ್ಕೃತ ಭಾಷೆಯಿಂದ ಕನ್ನಡಕ್ಕೆ ಬಂದಿರುವ ಪದರೂಪಗಳಲ್ಲಿನ ಮಹಾಪ್ರಾಣಗಳು ಅಲ್ಪಪ್ರಾಣಗಳಾಗಿ ಮತ್ತು ಶಕಾರ/ಷಕಾರಗಳು ಸಕಾರವಾಗಿ ಕನ್ನಡಿಗರ ಮಾತುಕತೆಯಲ್ಲಿ ಉಚ್ಚಾರಣೆಗೊಳ್ಳುವುದರಿಂದ ಅರ್ಥದಲ್ಲಿ ಯಾವುದೇ ಬಗೆಯ ಗೊಂದಲ ಉಂಟಾಗುವುದಿಲ್ಲ.

ಸಿ.ಪಿ.ನಾಗರಾಜ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹೆಣ್ಣು ಮಕ್ಕಳ ಮದುವೆಯ ಕನಿಷ್ಠ ವಯಸ್ಸು 18 ವರ್ಷದಿಂದ 21ಕ್ಕೆ ಏರಿಕೆ ಸರಿಯಾದ ನಿರ್ಧಾರವೇ?

ಸಮಸ್ಯೆ ಪರಿಹಾರದ ಮಂತ್ರದಂಡವೇ?

ಮದುವೆಯ ಕನಿಷ್ಠ ವಯಸ್ಸು ಏರಿಕೆಯು ಮಂತ್ರದಂಡದಂತೆ ಎಲ್ಲ ಸಮಸ್ಯೆಗಳನ್ನು ಪರಿಹರಿಸಬಹುದು ಎಂದು ವಾದಿಸುವುದೇ ಅಪಾಯಕಾರಿ ಕುತರ್ಕ. ಹೌದು, ಈ ಒಂದು ಬದಲಾವಣೆಯು ಎಲ್ಲ ಸಮಸ್ಯೆಗಳಿಗೂ ಪರಿಹಾರ ಎಂದಾದರೆ, ಈಗಲೂ ಅಷ್ಟೊಂದು ಹೆಣ್ಣು ಮಕ್ಕಳಿಗೆ 18 ವರ್ಷದ ಒಳಗೇ ಮದುವೆ ಆಗುತ್ತಿರುವುದು ಏಕೆ?

ಪ್ರಜಾವಾಣಿ ಚರ್ಚೆ

• ಕವಿತಾ ರತ್ನ

ಹೆಣ್ಣು ಮಕ್ಕಳು ಚಿಕ್ಕ ವಯಸ್ಸಿನಲ್ಲಿಯೇ ಮದುವೆಯಾಗುವ ದೀರ್ಘ ಕಾಲದ ಸಂಕೀರ್ಣವಾದ ಸಾಮಾಜಿಕ-ರಾಜಕೀಯ ಮತ್ತು ಆರ್ಥಿಕ ಸವಾಲೊಂದನ್ನು ಎದುರಿಸುವುದಕ್ಕಾಗಿ ಕೇಂದ್ರ ಸರ್ಕಾರವು ತರಲು ಮುಂದಾಗಿರುವ ಮಸೂದೆಯು ಮೋಸಗೊಳಿಸುವಷ್ಟು ಸರಳೀಕೃತ ಮತ್ತು ಅತ್ಯಂತ ಹಾನಿಕಾರಕ.

ಹೆಣ್ಣು ಮಕ್ಕಳಿಗೆ ಸಮಾನತೆ ದೊರೆಯುವುದನ್ನು ಖಾತರಿಪಡಿಸುವುದು ಮತ್ತು ಅವರನ್ನು ಸಬಲೀಕರಿಸುವುದು ಈ ಮಸೂದೆಯ ಗುರಿ ಎಂದು ಹೇಳಲಾಗುತ್ತಿದೆ. ಈ ಗುರಿ ಸಾಧನೆಗಾಗಿ ಬಾಲ್ಯ ವಿವಾಹ ನಿಷೇಧ ಕಾಯ್ದೆ (2006) ತಿದ್ದುಪಡಿ ತಂದು ಹೆಣ್ಣು ಮಕ್ಕಳ ಮದುವೆಯ ಕನಿಷ್ಠ ವಯಸ್ಸನ್ನು 18 ವರ್ಷದಿಂದ 21 ವರ್ಷಕ್ಕೆ ಏರಿಸುವುದು ಏಕೈಕ ಕಾರ್ಯಸೂಚಿಯಾಗಿದೆ ಎಂಬುದೇ ವಿಚಿತ್ರ.

ಮಗು ಎಂಬುದಕ್ಕೆ ಮಸೂದೆಯಲ್ಲಿ ಅತ್ಯಂತ ವಿಚಿತ್ರವಾದ ವ್ಯಾಖ್ಯಾನ ಇದೆ. ಅದರಂತೆ, '21 ವರ್ಷ ತುಂಬಿರದ ಹೆಣ್ಣು ಅಥವಾ ಗಂಡು'. ಮತದಾನದ ಹಕ್ಕು, ಆಸ್ತಿ ಹೊಂದುವ ಹಕ್ಕು, ಪೂರ್ಣಾವಧಿ ಉದ್ಯೋಗ ಹೊಂದುವ ಹಕ್ಕು ಇತ್ಯಾದಿಗೆ 18 ವರ್ಷ ವಯಸ್ಸು ತುಂಬಿದರೆ ಸಾಕು. ಯುವ ಜನರನ್ನು ಮಗು ಎಂದೇ ದೀರ್ಘ ಕಾಲ ಪರಿಗಣಿಸುವುದು ಅತ್ಯಂತ ಪ್ರತಿಗಾಮಿ. ಈಗ, ಈ ವ್ಯಾಖ್ಯಾನವು ಈ ಕಾಯ್ದೆಗಷ್ಟೇ ಸೀಮಿತ ಆಗಿರಬಹುದು. ಆದರೆ ಮುಂದೆ ಅದನ್ನು ಪೋಕ್ಸೊ, ಮಕ್ಕಳ ಸುರಕ್ಷೆ, ವೈವಾಹಿಕ ಆಸ್ತಿ ಹಕ್ಕು ಮುಂತಾದವುಗಳಿಗೂ ಅನ್ವಯ ಆಗುವಂತೆ ಮಾಡಬಹುದು. ಇವುಗಳ ಪರಿಣಾಮ ದೂರಗಾಮಿ.

ಈ ಚರ್ಚೆ ಆರಂಭವಾಗಿದ್ದು 2020ರ ಮಧ್ಯ ಭಾಗದಲ್ಲಿ. ನಾಗರಿಕ ಸಮಾಜದ 60 ಸಂಘಟನೆಗಳ ಬೆಂಬಲದ 'ಯಂಗ್ ವಾಯ್ಸ್ ನ್ಯಾಷನಲ್ ಮೂವ್‌ಮೆಂಟ್'ನ 15 ರಾಜ್ಯಗಳ 2,500ಕ್ಕೂ ಹೆಚ್ಚು ಯುವ ಜನರು ಈ ಪ್ರಸ್ತಾವನ್ನು ವಿರೋಧಿಸಿದ್ದಾರೆ. ಇದರ ಪ್ರತಿನಿಧಿಗಳು ಕಾರ್ಯಪಡೆಯ ಎದುರು ತಮ್ಮ ವಾದ ಮಂಡಿಸಿದ್ದಾರೆ. 'ಅವರ ವಾದವನ್ನು ಸ್ಪಷ್ಟವಾಗಿ ಕೇಳಿಸಿಕೊಳ್ಳಲಾಗಿದೆ' ಎಂದು ಕಾರ್ಯಪಡೆಯ ಅಧ್ಯಕ್ಷೆ ಹೇಳಿದ್ದರು. ಬೇಸರದ ಸಂಗತಿ ಎಂದರೆ, ಈ ಪ್ರತಿನಿಧಿಗಳ ಧ್ವನಿಯನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಅದಲ್ಲದೆ, ನಿಜವಾದ ಸಮಸ್ಯೆಯನ್ನು ಗಣನೆಗೇ ತೆಗೆದುಕೊಳ್ಳದೆ ಮಸೂದೆ ಸಿದ್ಧಪಡಿಸಲಾಗುತ್ತಿದೆ. ಒಂದು ಮಗು ಹೀಗೆ ಹೇಳಿದೆ: 'ಮದುವೆಯ ಕನಿಷ್ಠ ವಯಸ್ಸು 21 ವರ್ಷಕ್ಕೆ ಏರಿಕೆಯಾದರೆ, ಹೆಣ್ಣು ಭ್ರೂಣ ಹತ್ಯೆ ಹೆಚ್ಚಲಿದೆ. ಈಗ, ಕುಟುಂಬಗಳು ಕಷ್ಟಪಟ್ಟು ನಮಗೆ 18 ಆಗುವವರೆಗೆ ಕಾಯುತ್ತಿವೆ. ಯಾವುದೇ ಅವಕಾಶ ಅಥವಾ ಸುರಕ್ಷತೆ ಇಲ್ಲದೆ ನಮಗೆ 21 ವರ್ಷ ಆಗುವತನಕ ಅವರು ಕಾಯುವುದೇ ಇಲ್ಲ'.

'ಹೆಣ್ಣು ಮಕ್ಕಳ ಮದುವೆಯ ಕನಿಷ್ಠ ವಯಸ್ಸನ್ನು 21ಕ್ಕೆ ಏರಿಸಿದ್ದರಲ್ಲಿ ತಪ್ಪೇನಿದೆ' ಎಂದು ಕೆಲವರು ಪ್ರಶ್ನಿಸಬಹುದು. ನ್ಯಾಯಯುತ ಪ್ರಶ್ನೆ. ಯುವತಿಯರು 18 ವರ್ಷದ ನಂತರ ಮದುವೆ ಆಗುವುದರಲ್ಲಿ ಅಥವಾ ಮದುವೆಯೇ ಆಗದೇ ಇರುವುದರಲ್ಲಿ ಯಾವ ತಪ್ಪೂ ಇಲ್ಲ. ಆದರೆ, ಪ್ರಗತಿಯ ಹೆಚ್ಚು ಅವಕಾಶಗಳು, ಉನ್ನತ ಶಿಕ್ಷಣದ ಅವಕಾಶಗಳು, ಅರ್ಥಪೂರ್ಣ ಜೀವನೋಪಾಯ ಮದುವೆಯು ವಯಸ್ಸಿನ ಏರಿಕೆಯಿಂದ ತನ್ನಿಂತಾನಾಗಿ ಲಭ್ಯವಾಗಬೇಕು. ಪುರುಷ ಪ್ರಾಬಲ್ಯದ ನಮ್ಮ ಸಮಾಜದಲ್ಲಿ ಮಹಿಳೆಯು ತನ್ನ ನಿರ್ಧಾರಗಳು ಮತ್ತು ಆಯ್ಕೆಗಳನ್ನು ಹೇಳಿಕೊಳ್ಳುವಂತಹ ಸುರಕ್ಷಿತ ಮತ್ತು ಆರೋಗ್ಯಕರ ವಾತಾವರಣವನ್ನು ಮದುವೆಯ ವಯಸ್ಸು ಏರಿಕೆಯು ಸೃಷ್ಟಿಸಬೇಕು.

ಸಾಮಾಜಿಕ ನಿಯಮಗಳು, ಪದ್ಧತಿಗಳು, ಬಡತನ, ಆರ್ಥಿಕ ಒತ್ತಡಗಳು, ದುಬಾರಿ ವೆಚ್ಚಗಳು, ಹೆಣ್ಣು ಮಕ್ಕಳ ಶಿಕ್ಷಣ ಮತ್ತು ತರಬೇತಿಗೆ ಅಗತ್ಯವಾದ ಅವಕಾಶಗಳ ಕೊರತೆ, ಮಹಿಳೆ ಮತ್ತು ಹೆಣ್ಣು ಮಕ್ಕಳ ಮೇಲೆ ನಿರಂತರವಾಗಿ ನಡೆಯುವ ದೌರ್ಜನ್ಯ, ಜೀವನ ವೆಚ್ಚವನ್ನು ಹೆಚ್ಚಿಸಬೇಕಾದ ಒತ್ತಡ, ವಲಸೆ ಮುಂತಾದವುಗಳು ಬಡ ಕುಟುಂಬಗಳ ಹೆಚ್ಚಿನ ಹೆಣ್ಣು ಮಕ್ಕಳನ್ನು ಮದುವೆಯತ್ತ ತಳ್ಳುತ್ತವೆ. ಇದು ಅತ್ಯಂತ ಕಳವಳಕಾರಿಯಾದ ಅಂಶ. ಆದರೆ, ಒಂದೇ ಅಂಶದ ಕಾರ್ಯಸೂಚಿಯು ಸಮಸ್ಯೆಯ ಬೇರುಗಳನ್ನು ಕಿತ್ತು ಹಾಕಬಲ್ಲುದೇ? ವ್ಯವಸ್ಥೆಯಲ್ಲಿ ಹಾಸು ಹೊಕ್ಕಾಗಿರುವ ಅಸಮಾನತೆಯನ್ನು ಸರಿಪಡಿಸಬಲ್ಲುದೇ?

ಮದುವೆಯ ಕನಿಷ್ಠ ವಯಸ್ಸು ಏರಿಕೆಯು ಮಂತ್ರದಂಡದಂತೆ ಎಲ್ಲ ಸಮಸ್ಯೆಗಳನ್ನು ಪರಿಹರಿಸಬಹುದು ಎಂದು ವಾದಿಸುವುದೇ ಅಪಾಯಕಾರಿ ಕುತರ್ಕ. ಹೌದು, ಈ ಒಂದು ಬದಲಾವಣೆಯು ಎಲ್ಲ ಸಮಸ್ಯೆಗಳಿಗೂ ಪರಿಹಾರ ಎಂದಾದರೆ, ಈಗಲೂ ಅಷ್ಟೊಂದು ಹೆಣ್ಣು ಮಕ್ಕಳಿಗೆ 18 ವರ್ಷದ ಒಳಗೇ ಮದುವೆ ಆಗುತ್ತಿರುವುದು ಏಕೆ? ತಾಯಂದಿರ ಮರಣಕ್ಕೆ ಬಡತನ, ಅಪೌಷ್ಟಿಕತೆ ಮತ್ತು ಆರೈಕೆ ಕೊರತೆಯ ಜತೆಗೆ ನೇರ ಸಂಬಂಧ ಇದೆ. ಮದುವೆಯಾದ ಬಳಿಕ ಮಕ್ಕಳನ್ನು ಹೆರುವಂತೆ ಹೆಣ್ಣು ಮಕ್ಕಳು ಮತ್ತು ಯುವತಿಯರ ಮೇಲೆ ಭಾರಿ ಒತ್ತಡ ಇರುತ್ತದೆ. ತಾಯ್ತನ ಮತ್ತು ಸಂತಾನೋತ್ಪತ್ತಿ ವಿಚಾರಗಳಲ್ಲಿ ಅವರಿಗೆ ಯಾವುದೇ ಸ್ವಾತಂತ್ರ್ಯ ಇಲ್ಲ. ಸಂತಾನೋತ್ಪತ್ತಿಗೆ ಸಂಬಂಧಿಸಿದ ನಿರ್ಧಾರ ತೆಗೆದುಕೊಳ್ಳುವುದಕ್ಕಾಗಿ ದೊಡ್ಡ ಸಂಖ್ಯೆಯ ಹೆಣ್ಣು ಮಕ್ಕಳಿಗೆ ಸರಿಯಾದ ಮಾಹಿತಿ, ಸೇವೆಗಳು ಅಥವಾ ಬೆಂಬಲ ವ್ಯವಸ್ಥೆ ಇಲ್ಲ. ಮದುವೆಯ ಕನಿಷ್ಠ ವಯಸ್ಸು ಏರಿಕೆ ಮಾಡುವುದರಿಂದ ಈ ಕೊರತೆಗಳನ್ನು ನೀಗಿಸುವುದು ಸಾಧ್ಯವೇ? ಸ್ಥಳೀಯವಾದ, ಸಾಂದರ್ಭಿಕವಾದ ಪ್ರತಿಕ್ರಿಯೆ, ಮಹಿಳೆ ಕೇಂದ್ರಿತ ಆರೋಗ್ಯ ಕಾರ್ಯಕ್ರಮ ಮತ್ತು ಉಪಕ್ರಮಗಳ ಮೂಲಕ ಈ ಸಮಸ್ಯೆಗಳನ್ನು ಪರಿಹರಿಸುವ ಅಗತ್ಯ ಇದೆ.

ಬಡತನದಿಂದಾಗಿ ಮದುವೆಯಾಗಲೇಬೇಕಾದ ಅನಿವಾರ್ಯದಲ್ಲಿರುವ ಮಹಿಳೆಯರ ವೈವಾಹಿಕ ಸ್ಥಿತಿ ಮತ್ತು ಹಕ್ಕುಗಳನ್ನು ಪ್ರಸ್ತಾವಿತ ಮಸೂದೆಯು ಮೊಟಕು ಮಾಡುತ್ತದೆ. ಕುಟುಂಬದ ಅಸ್ತಿತ್ವದ ಅಗತ್ಯಗಳು ಮತ್ತು ಅಸುರಕ್ಷತೆಯ ಅನಿವಾರ್ಯದಿಂದಾಗಿ ಚಿಕ್ಕ ವಯಸ್ಸಿಗೆ ಮದುವೆ ಮಾಡಲೇಬೇಕಾದುದು ಮಾತ್ರವಲ್ಲದೆ ಕೆಲಸಕ್ಕೂ ಸೇರಿಕೊಳ್ಳಬೇಕಾದ ಸ್ಥಿತಿಯಲ್ಲಿರುವ ಕುಟುಂಬಗಳವರನ್ನು ಈ ಕಾಯ್ದೆಯು ಅಪರಾಧಿಗಳೆಂದು ಪರಿಗಣಿಸುತ್ತದೆ. ಹೆಣ್ಣು ಮಕ್ಕಳು ಮದುವೆ ಆಗುವುದಕ್ಕಾಗಿ ಶಾಲೆ ಬಿಡುವುದಿಲ್ಲ. ಬದಲಿಗೆ ಶಾಲೆ ಬಿಟ್ಟ ಬಳಿಕ ಮದುವೆ ಆಗುತ್ತಾರೆ. ಉತ್ತಮ ಉದ್ಯೋಗ ಒದಗಿಸಬಲ್ಲ ಕೈಗೆಟುಕುವ, ಉಚಿತ, ಗುಣಾತ್ಮಕವಾದ ಶೈಕ್ಷಣಿಕ ಅವಕಾಶಗಳು ಈಗಿನ ಅಗತ್ಯವಾಗಿದೆ. ಕೋವಿಡ್–19 ಸಾಂಕ್ರಾಮಿಕ ಮತ್ತು ಅದಕ್ಕೆ ಸಂಬಂಧಿಸಿದ ಇತರ ಸವಾಲುಗಳು ಒಂದು ಕೋಟಿಗೂ ಹೆಚ್ಚು ಹೆಣ್ಣು ಮಕ್ಕಳನ್ನು ಔಪಚಾರಿಕ ಶಿಕ್ಷಣದಿಂದ ಹೊರ ತಳ್ಳಿವೆ. ಹೆಣ್ಣು ಮಕ್ಕಳ ಉನ್ನತ ಶಿಕ್ಷಣದ ಅವಕಾಶಗಳನ್ನು ಹೆಚ್ಚಿಸಲು ಮತ್ತು ಅವರ ಸಂತಾನೋತ್ಪತ್ತಿ ಆರೋಗ್ಯವನ್ನು ಉತ್ತಮಪಡಿಸಲು ಸರ್ಕಾರವು ಪ್ರಾಮಾಣಿಕವಾಗಿ ಬಯಸಿದ್ದರೆ, ವ್ಯವಸ್ಥೆಯಲ್ಲಿ ಇರುವ ಕೊರತೆಗಳನ್ನು ಹೋಗಲಾಡಿಸಬೇಕು. ಈ ಅಗತ್ಯಗಳಿಗೆ ಸಂಬಂಧಿಸಿದ ಸೇವೆಗಳನ್ನು ಉತ್ತಮಪಡಿಸಬೇಕು ಮತ್ತು ದೂರಗಾಮಿ ಪರಿಣಾಮ ಬೀರಬಲ್ಲ ಸುಧಾರಣೆಗಳನ್ನು ತುರ್ತಾಗಿ ಜಾರಿಗೆ ತರಬೇಕು.

ಬಡತನ, ಹೆಣ್ಣು ಮಕ್ಕಳು ಮತ್ತು ಮಹಿಳೆಯರಿಗೆ ಸಾಂವಿಧಾನಿಕ ಮತ್ತು ಮಾನವ ಹಕ್ಕುಗಳ ಖಾತರಿ, ಘನತೆ, ಸಮಾನತೆ, ಆರೋಗ್ಯ, ಶಿಕ್ಷಣ ಮತ್ತು ಕೆಲಸದ ಅವಕಾಶಗಳು, ಭಾಗವಹಿಸುವಿಕೆ ಮತ್ತು ಪ್ರಾತಿನಿಧ್ಯ, ಹೆಣ್ಣು ಮಕ್ಕಳು ಮತ್ತು ಯುವತಿಯರ ಮೇಲಿನ ದೌರ್ಜನ್ಯ ಮುಂತಾದವುಗಳಿಗೆ ಪರಿಹಾರ ಒದಗಿಸುವುದು ಮುಖ್ಯ. ಅದಲ್ಲದೇ ಇದ್ದರೆ, ಮದುವೆಯ ವಯಸ್ಸು ಏರಿಕೆ ಪ್ರಸ್ತಾವವು ಯುವ ಜನರ ಜೀವನದ ಮೇಲೆ ನಿಯಂತ್ರಣ ಹೇರುವ ಇನ್ನೊಂದು ಪ್ರಯತ್ನವಷ್ಟೇ ಆಗುತ್ತದೆ.

ಉದ್ಯೋಗ, ಆದಾಯ, ಸುರಕ್ಷಿತ ಮತ್ತು ಆರೋಗ್ಯಕರ ಕೆಲಸದ ಸ್ಥಳಗಳು, ಸಮಾನ ವೇತನ, ತಾಯ್ತನ ಮತ್ತು ಸ್ತ್ರೀ ಆರೋಗ್ಯಕ್ಕೆ ಸಂಬಂಧಿಸಿದ ಸೌಲಭ್ಯಗಳು ಮತ್ತು ಅನುಕೂಲಗಳು ಯುವತಿಯರ ಬೇಡಿಕೆಗಳಾಗಿವೆ. ತವರು ಮನೆ ಮತ್ತು ಮದುವೆಯಾದ ಮನೆಯ ಆಸ್ತಿಯಲ್ಲಿ ಸಮಾನ ಹಕ್ಕು ಅವರಿಗೆ ಬೇಕಾಗಿದೆ. ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಸಮಗ್ರವಾದ ಕ್ರಮಗಳು ಅಗತ್ಯವಾಗಿವೆ.

ನಾಗರಿಕರಾಗಿ ಸಮಾನ ಹಕ್ಕುಗಳು ಬೇಕು, ತಮ್ಮ ದೇಹ, ಲೈಂಗಿಕತೆ, ಫಲವಂತಿಕೆ ಮತ್ತು ಜೀವನದಲ್ಲಿ ಸಂಪೂರ್ಣ ನಿಯಂತ್ರಣ ಮಹಿಳೆಯರ ಬೇಡಿಕೆಗಳಾಗಿವೆ. ಜಾತಿ, ಧರ್ಮ ಮತ್ತು ಪ್ರಾದೇಶಿಕ ಹಣೆಪಟ್ಟಿಯ ವಿಭಜನೆಯನ್ನು ಅವರು ವಿರೋಧಿಸುತ್ತಿದ್ದಾರೆ. ಸಬಲೀಕರಣ ಕಾರ್ಯಕ್ರಮ, ಹೆಣ್ಣು ಮಕ್ಕಳ ಅಭಿವೃದ್ಧಿ, ಸಮಾನತೆ ಮತ್ತು ಸ್ವಾತಂತ್ರ್ಯದ ಖಾತರಿಗಾಗಿ ಸರ್ಕಾರ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಬೇಕು ಎಂದು ಹೆಣ್ಣು ಮಕ್ಕಳು ಆಗ್ರಹಿಸುತ್ತಿದ್ದಾರೆ.

ಮದುವೆಯ ಕನಿಷ್ಠ ವಯಸ್ಸು 18 ವರ್ಷವಾಗಿಯೇ ಉಳಿದರೂ ಹಕ್ಕು ಆಧಾರಿತವಾದ ಧೋರಣೆಯಿಂದ ತಮ್ಮ ಸಮ್ಮತಿಗೆ ವಿರುದ್ಧವಾಗಿ ಮದುವೆ ನಡೆಯುವುದನ್ನು ಹೆಣ್ಣು ಮಕ್ಕಳು ಪ್ರಶ್ನಿಸಲು ಸಮರ್ಥರಾಗುತ್ತಾರೆ. ಹಲವು ಯುವತಿಯರ ಮದುವೆಯ ವಯಸ್ಸಿನ ಆಯ್ಕೆಯು ಅವರ ಜೀವನದ ವಾಸ್ತವಗಳು ಮತ್ತು ಸಂದರ್ಭಗಳ ಮೇಲೆ ಆಧಾರಿತವಾಗಿರುತ್ತದೆ. ಮದುವೆ ಆಗಬೇಕೇ, ಬೇಕಿದ್ದರೆ ಯಾವಾಗ, ಯಾರನ್ನು, ಹೇಗೆ ಮದುವೆ ಆಗಬೇಕು ಎಂಬುದನ್ನು ನಿರ್ಧರಿಸಲು ಅವರು ಸಮರ್ಥರಾಗುವಂತೆ ಮಾಡುವುದೇ ಈಗ ಅತ್ಯಂತ ನಿರ್ಣಾಯಕ. ಜತೆಗೆ, ಹೆಣ್ಣು ಮಕ್ಕಳ ಅಭಿವ್ಯಕ್ತಿಗೆ ಅವಕಾಶ, ಕುಟುಂಬದ ಒಳಗೆ ಮತ್ತು ಅವರ ಜೀವನಕ್ಕೆ ನೇರವಾಗಿ ಸಂಬಂಧಿಸಿದ ಇಂತಹ ಶಾಸನಗಳ ವಿಚಾರದಲ್ಲಿ ಅರ್ಥಪೂರ್ಣ ಭಾಗೀದಾರಿಕೆಯು ಅಗತ್ಯವಾಗಿದೆ.

ಲೇಖಕಿ: ಅಡ್ವೊಕಸಿ, ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್‌ನ ನಿರ್ದೇಶಕಿ, ಯಂಗ್ ವಾಯ್ಸಸ್ ನ್ಯಾಷನಲ್ ಮೂವ್‌ಮೆಂಟ್‌ನ ಸದಸ್ಯೆ

ಹೆಣ್ಣಿನ ಸುರಕ್ಷೆಗೆ ಮದುವೆ ವಯಸ್ಸು ಏರಬೇಕು

• ಡಾ. ಎಚ್. ಎಸ್. ಅನುಪಮಾ

			10.00 ರಿಂದ 18.00 ರವರೆಗೆ	0.00	10.00 ರಿಂದ 18.00 ರವರೆಗೆ	0.00
			18.00 ರಿಂದ 22.00 ರವರೆಗೆ	ಜುಲೈ –ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್ –ಜೂನ್ (+)100 ಪೈಸೆ	18.00 ರಿಂದ 22.00 ರವರೆಗೆ	ಜುಲೈ –ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್ –ಜೂನ್ (+)100 ಪೈಸೆ
			22.00 ರಿಂದ 06.00 ರವರೆಗೆ ಮುಂದಿನ ದಿನ	ಜುಲೈ –ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್ –ಜೂನ್ (–)100 ಪೈಸೆ	22.00 ರಿಂದ 06.00 ರವರೆಗೆ ಮುಂದಿನ ದಿನ	ಜುಲೈ –ನವೆಂಬರ್ (ಮಾನ್ಸೂನ್ ಅವಧಿ)–0 ಡಿಸೆಂಬರ್ –ಜೂನ್ (–)100 ಪೈಸೆ
12	**ಹೆಚ್.ಟಿ–3**(ಎ) ಏತ ನೀರಾವರಿ ಯೋಜನೆಗಳು/ ಸಂಘಗಳು:	**ಹೆಚ್.ಟಿ.3**(ಎ)**(i):** ಸರ್ಕಾರಿ ಇಲಾಖೆಗಳು/ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ನಿಗಮಗಳ ಏತ ನೀರಾವರಿ ಯೋಜನೆಗಳಿಗೆ ಅನ್ವಯಿಸುತ್ತದೆ.	ವಿದ್ಯುತ್ ಬಳಕೆ ಶುಲ್ಕ/ಕನಿಷ್ಠ ಶುಲ್ಕ: ಮಂಜೂರಾದ ವಿದ್ಯುತ್‌ನ ಪ್ರತಿ ಅಶ್ವ ಶಕ್ತಿಗೆ ವಾರ್ಷಿಕ ಕನಿಷ್ಠ ರೂ. 1720.00 ದ ಮಿತಿಗೆ ಒಳಪಟ್ಟು ಬಳಸಿರುವ ಎಲ್ಲಾ ಯೂನಿಟ್ಟುಗಳಿಗೆ	3.10	ವಿದ್ಯುತ್ ಬಳಕೆ ಶುಲ್ಕ/ಕನಿಷ್ಠ ಶುಲ್ಕ: ಮಂಜೂರಾದ ವಿದ್ಯುತ್‌ನ ಪ್ರತಿ ಅಶ್ವ ಶಕ್ತಿಗೆ ವಾರ್ಷಿಕ ಕನಿಷ್ಠ ರೂ. 2120.00 ದ ಮಿತಿಗೆ ಒಳಪಟ್ಟು ಬಳಸಿರುವ ಎಲ್ಲಾ ಯೂನಿಟ್ಟುಗಳಿಗೆ	4.10

ಶಿವಾಜಿನಗರದ ಸಂತ ಬೆಸಿಲಿಕಾ ಚರ್ಚ್‌ನಲ್ಲಿ ಶುಕ್ರವಾರ ರಾತ್ರಿ ಕ್ರೈಸ್ತ ಸಮುದಾಯದವರು ಪ್ರಾರ್ಥನೆ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ವಿದ್ಯುತ್ ದೀಪಗಳಿಂದ ಸಿಂಗಾರಗೊಂಡ ಚರ್ಚ್‌ಗಳು: ಸಾಮೂಹಿಕ ಪ್ರಾರ್ಥನೆ

ಕ್ರಿಸ್‌ಮಸ್ ಆಚರಣೆ: ವಿವಿಧೆಡೆ ಯೇಸುವಿನ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಣ್ಮನ ಸೆಳೆಯುತ್ತಿರುವ ವಿದ್ಯುತ್ ದೀಪಗಳಿಂದ ಅಲಂಕೃತ-ಗೊಂಡಿರುವ ಚರ್ಚ್‌ಗಳು, ಯೇಸು ಜನನ ಸಂದೇಶ ಸಾರುವ ಆಕರ್ಷಕ ಗೋದಲಿಗಳು, ಅಲ್ಲಲ್ಲಿ ಕಣ್ಸೆಳೆವ 'ಕ್ರಿಸ್‌ಮಸ್ ಟ್ರೀ'ಗಳು, ಆಗಸವನ್ನು ಚುಂಬಿಸಲು ಹೊರಟ ನಕ್ಷತ್ರಾಕಾರದ ಆಕಾಶ ಬುಟ್ಟಿಗಳ ಸಾಲು....

ಕ್ರಿಸ್‌ಮಸ್ ಹಬ್ಬದ ಸಂಭ್ರಮ ನಗರದಲ್ಲಿ ಶುಕ್ರವಾರ ಕಂಡು ಬಂದ ಪರಿ ಇದು.

ಶಿವಾಜಿನಗರದ ಸೇಂಟ್ ಮೇರಿಸ್ ಬೆಸಿಲಿಕಾ, ಫ್ರೇಜರ್ ಟೌನ್‌ನ ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ಕೆಥೆಡ್ರಲ್ ಚರ್ಚ್, ಬ್ರಿಗೇಡ್ ರಸ್ತೆಯಲ್ಲಿರುವ ಸೇಂಟ್ ಪ್ಯಾಟ್ರಿಕ್ಸ್ ಚರ್ಚ್, ಸೇಂಟ್ ಮಾರ್ಕ್ಸ್ ಕೆಥೆಡ್ರಲ್, ಚಾಮರಾಜಪೇಟೆಯ ಸೇಂಟ್ ಜೋಸೆಫ್ ಚರ್ಚ್, ಸೇಂಟ್ ಜಾನ್ಸ್ ಚರ್ಚ್ ಸೇರಿದಂತೆ ನಗರದ ಅನೇಕ ಚರ್ಚ್‌ಗಳು ವಿದ್ಯುತ್ ದೀಪಗಳ ಅಲಂಕಾರದಿಂದ ಕಂಗೊಳಿಸಿದವು. ಚರ್ಚ್‌ಗಳ ಆವರಣದಲ್ಲಿ ನಿರ್ಮಿಸಿರುವ 'ಗೋದಲಿ'ಗಳು ಒಂದಕ್ಕಿಂತ ಒಂದು ಸುಂದರವಾಗಿವೆ. ಸಾಂತಾ ಕ್ಲಾಸ್‌ನ ಪ್ರತಿರೂಪಗಳು ಚರ್ಚ್‌ಗಳ ಆವರಣದ ಮೆರುಗು ಹೆಚ್ಚಿಸಿವೆ.

ಸೇಂಟ್ ಬೆಸಿಲಿಕಾ ಚರ್ಚ್ ಸೇರಿದಂತೆ ನಗರದಲ್ಲಿರುವ ಚರ್ಚ್‌ಗಳಲ್ಲಿ ಕ್ರೈಸ್ತರು ಶುಕ್ರವಾರ ರಾತ್ರಿ ವಿಶೇಷ ಪ್ರಾರ್ಥನೆಗಳು ನಡೆದವು. ಶನಿವಾರ ಬೆಳಿಗ್ಗೆ ಕ್ರಿಸ್‌ಮಸ್ ಪ್ರಯುಕ್ತ ವಿಶೇಷ ಪ್ರಾರ್ಥನೆ, ಧರ್ಮ ಬೋಧನೆಗಳು ನಡೆಯಲಿವೆ. ಕ್ರೈಸ್ತ ಸಮುದಾಯದವರು ಚರ್ಚ್‌ಗೆ ತೆರಳಿ ಸಾಮೂಹಿಕ ಪ್ರಾರ್ಥನೆ ಕೈಗೊಳ್ಳಲಿ-ದ್ದಾರೆ.

ಮಾರುಕಟ್ಟೆಗಳಲ್ಲಿ ಕ್ರಿಸ್‌ಮಸ್‌ಗಾಗಿ ಅಲಂಕಾರಿಕ ವಸ್ತುಗಳು, ಉಡುಗೊರೆಗಳ ಖರೀದಿಯೂ ಜೋರಾಗಿ ನಡೆಯಿತು. ಮಾಲ್‌ಗಳಲ್ಲೂ ವಿಶೇಷ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಗ್ರಾಹಕರನ್ನು ಸೆಳೆಯಲು ಸ್ಥಾಪಿಸಿರುವ ಕ್ರಿಸ್‌ಮಸ್ ವೃಕ್ಷಗಳು ರಂಗು ರಂಗಿನ ದೀಪಗಳಿಂದ ಕಣ್ಸೆ-ಳೆಯುತ್ತಿವೆ. ಬೇಕರಿಗಳಲ್ಲಿ ವಿಶೇಷ ಕೇಕ್‌ಗಳ ಪ್ರದರ್ಶನ ಹಾಗೂ ಮಾರಾಟ ನಡೆಯಿತು.

		ಹೆಚ್.ಟಿ.3(ಎ)(ii): ಖಾಸಗಿ ಏತ ನೀರಾವರಿ ಯೋಜನೆಗಳು ಹಾಗೂ ಏತ ನೀರಾವರಿ ಸಂಘಗಳಿಗೆ ಅನ್ವಯಿಸುತ್ತದೆ.	ನಿಗದಿತ ಶುಲ್ಕ :ಮಂಜೂರಾದ ವಿದ್ಯುತ್‌ನ ಪ್ರತಿ ಅಶ್ವ ಶಕ್ತಿಗೆ, ಪ್ರತಿ ತಿಂಗಳಿಗೆ ರೂ.	95	ನಿಗದಿತ ಶುಲ್ಕ :ಮಂಜೂರಾದ ವಿದ್ಯುತ್‌ನ ಪ್ರತಿ ಅಶ್ವ ಶಕ್ತಿಗೆ, ಪ್ರತಿ ತಿಂಗಳಿಗೆರೂ.	215
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	3.10	ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	3.40
		ಹೆಚ್.ಟಿ. 3(ಎ)(iii): ಖಾಸಗಿ ಏತ ನೀರಾವರಿ ಯೋಜನೆಗಳು ಹಾಗೂ ಏತ ನೀರಾವರಿ ಸಂಘಗಳಿಗೆ ಅನ್ವಯಿಸುತ್ತದೆ.	ನಿಗದಿತ ಶುಲ್ಕ ಮಂಜೂರಾದ ವಿದ್ಯುತ್‌ನ ಪ್ರತಿ ಅಶ್ವ ಶಕ್ತಿಗೆ, ಪ್ರತಿ ತಿಂಗಳಿಗೆ ರೂ.	75	ನಿಗದಿತ ಶುಲ್ಕ :ಮಂಜೂರಾದ ವಿದ್ಯುತ್‌ನ ಪ್ರತಿ ಅಶ್ವ ಶಕ್ತಿಗೆ, ಪ್ರತಿ ತಿಂಗಳಿಗೆರೂ.	215
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	3.10	ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	3.40
	ಹೆಚ್.ಟಿ.3(ಬಿ)	ನೀರಾವರಿ ಹಾಗೂ ಕೃಷಿ ಫಾರಂಗಳು, ಸರ್ಕಾರಿ ತೋಟಗಾರಿಕೆ ಫಾರಂಗಳು, ಖಾಸಗಿ ತೋಟಗಾರಿಕೆ ನರ್ಸರಿಗಳು, ಕಾಫಿ, ಟೀ, ತೆಂಗು ಹಾಗೂ ಅಡಿಕೆ ಬೆಳೆಗಳು	**ವಿದ್ಯುತ್ ಬಳಕೆ ಶುಲ್ಕ :** ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಹೆಚ್.ಪಿ.ಗೆ ವಾರ್ಷಿಕ ಕನಿಷ್ಠ ರೂ. 1780/– ಕ್ಕೆ ಒಳಪಟ್ಟು	5.10	**ವಿದ್ಯುತ್ ಬಳಕೆ ಶುಲ್ಕ :** ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಹೆಚ್.ಪಿ. ಗೆ ವಾರ್ಷಿಕ ಕನಿಷ್ಠ ರೂ. 2280/– ಕ್ಕೆ ಒಳಪಟ್ಟು	5.10
13	**ಹೆಚ್.ಟಿ–4**	ಸ್ವತಂತ್ರವಾಗಿ ವಿದ್ಯುತ್ ಪಡೆಯುತ್ತಿರುವ ನಿವಾಸಿ ಅಪಾರ್ಟ್‌ಮೆಂಟುಗಳು, ಕಾಲೋನಿಗಳು.	ಡಿಮ್ಯಾಂಡ್ ಶುಲ್ಕ: ಪ್ರತಿ ತಿಂಗಳಿಗೆ ಬಿಲ್ಲಿಂಗ್ ಡಿಮ್ಯಾಂಡಿನ, ಪ್ರತಿ ಕೆವಿಎಗೆ	155	ಡಿಮ್ಯಾಂಡ್ ಶುಲ್ಕ: ಪ್ರತಿ ತಿಂಗಳಿಗೆ ಬಿಲ್ಲಿಂಗ್ ಡಿಮ್ಯಾಂಡಿನ, ಪ್ರತಿ ಕೆವಿಎಗೆ	605
			ಮತ್ತು		**ಮತ್ತು**	
			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ಎಲ್ಲಾ ಯೂನಿಟ್ಟುಗಳಿಗೆ, ಪ್ರತಿ ಯೂನಿಟ್ಟಿಗೆ	7.05	ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ಎಲ್ಲಾ ಯೂನಿಟ್ಟುಗಳಿಗೆ, ಪ್ರತಿ ಯೂನಿಟ್ಟಿಗೆ	7.55
14	**ಹೆಚ್.ಟಿ–5**	ತಾತ್ಕಾಲಿಕ ದೀಪ (67 ಹೆಚ್.ಪಿ ಗಿಂತ ಹೆಚ್ಚಿನ ಹೊರೆಯ ತಾತ್ಕಾಲಿಕ ಸ್ಥಾಪನಿಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ: ಪ್ರತಿ ತಿಂಗಳು	300	ನಿಗದಿತ ಶುಲ್ಕ: ಪ್ರತಿ ತಿಂಗಳು	600
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	11.10	ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	11.30
		ಹೆಚ್.ಟಿ–5(ಎ): ಬೆಂಗಳೂರು ಅಂತರಾಷ್ಟ್ರೀಯ ಪ್ರದರ್ಶನ ಕೇಂದ್ರ (67 ಹೆಚ್.ಪಿಗಿಂತ ಹೆಚ್ಚಿನ ಹೊರೆಯ ತಾತ್ಕಾಲಿಕ ಸ್ಥಾಪನೆಗಳಿಗೆ ಅನ್ವಯಿಸುತ್ತದೆ)	ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	12.20	ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	12.78

ಮೇಲಿನ ಶುಲ್ಕಗಳ ಜೊತೆಗೆ, ರಾಜ್ಯ ಸರ್ಕಾರವು ವಿಧಿಸಿದ/ ವಿಧಿಸಬಹುದಾದ ತೆರಿಗೆಗಳು ಅನ್ವಯಿಸುತ್ತವೆ.

ಸಿದ್ಧ ಮಾಹಿತಿ
ಅನುಬಂಧ – 2

ಪ್ರವರ್ಗ	ಸ್ಥಾಪನದ ಮಾದರಿ	ಮಾಸಿಕ ಬಳಕೆ ಮಟ್ಟ (ಕೆ.ಡಬ್ಲ್ಯೂ.ಎಚ್) (ಯೂನಿಟ್)	ಹಾಲಿ ವಿದ್ಯುತ್ ದರದ ಪ್ರಕಾರ ಮಾಸಿಕ ಬಿಲ್ (ರೂ.)	ಪ್ರಸ್ತಾಪಿಸಿದ ವಿದ್ಯುತ್ ದರದ ಪ್ರಕಾರ ಮಾಸಿಕ ಬಿಲ್ (ರೂ.)	ತೆರಿಗೆ ಹೊರತುಪಡಿಸಿ ಶೇ. ಹೆಚ್ಚಳ
ಎಲ್.ಟಿ–1	**ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ(ರಾಜ್ಯ ಸರ್ಕಾರದ ಸಹಾಯಧನದಿಂದ ಭರಿಸಲಾಗುವುದು)**				
	100 ವಾಟ್	20	168	192	14.29
		40	337	385	14.24
ಎಲ್.ಟಿ–2 ಎ(i)	**ಎ.ಇ.ಎಚ್ (ಬೆಂ.ಮ.ನ.ಪಾಲಿಕೆ, ಸಿಟಿ ಮುನಿಸಿಪಲ್ ಕೌನ್ಸಿಲ್ ವ್ಯಾಪ್ತಿಗೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ)**				
	1ಕಿ.ವಾಟ್ ವರೆಗೆ	50	319	334	4.70
		100	597	662	10.89
	3 ಕಿ.ವಾಟ್	200	1497	1722	15.03
		300	2312	2687	16.22
		400	3127	3652	16.79
ಎಲ್.ಟಿ–2 ಎ(ii)	**ಎ.ಇ.ಎಚ್ (ಗ್ರಾಮಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ)**				
	1ಕಿ.ವಾಟ್ ವರೆಗೆ	50	295	310	5.08
		100	558	623	11.65
	3 ಕಿ.ವಾಟ್	200	1408	1633	15.98
		300	2173	2548	17.26
		400	2938	3463	17.87
ಎಲ್.ಟಿ–2 ಬಿ(i)	**ಖಾಸಗಿ ಶಿಕ್ಷಣ ಸಂಸ್ಥೆಗಳು/ ನಗರ ಪಾಲಿಕೆಗಳೂ ಸೇರಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ**				
	1ಕಿ.ವಾಟ್ ವರೆಗೆ	100	855	945	10.53
	3 ಕಿ.ವಾಟ್	200	1760	1990	13.07
		300	2615	2885	10.33
		400	3470	3780	8.93
ಎಲ್.ಟಿ–2 ಬಿ(ii)	**ಖಾಸಗಿ ಶಿಕ್ಷಣ ಸಂಸ್ಥೆಗಳು/ ಗ್ರಾಮಪಂಚಾಯಿತಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ**				
	1ಕಿ.ವಾಟ್ ವರೆಗೆ	100	785	865	10.19
	3 ಕಿ.ವಾಟ್	200	1620	1830	12.96
		300	2420	2660	9.92
		400	3220	3490	8.39
ಎಲ್.ಟಿ–3(i)	**ವಾಣಿಜ್ಯ ದೀಪ: (ಬೆಂ.ಮ.ನ.ಪಾಲಿಕೆ, ಸಿಟಿ ಮುನಿಸಿಪಲ್ ಕಾರ್ಪೊರೇಶನ್ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ)**				
	1ಕಿ.ವಾಟ್ ವರೆಗೆ	50	523	558	6.69
		100	990	1030	4.04
	5 ಕಿ.ವಾಟ್‌ಗೆ	100	1410	1570	11.35
		300	3280	3460	5.49
		500	5150	5350	3.88
	10 ಕಿ.ವಾಟ್‌ಗೆ	100	1935	2245	16.02
		300	3805	4135	8.67
		500	5675	6025	6.17
ಎಲ್.ಟಿ–3(ii)	**ವಾಣಿಜ್ಯ ದೀಪ: ಗ್ರಾಮಪಂಚಾಯಿತಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ.**				
	1ಕಿ.ವಾಟ್ ವರೆಗೆ	50	488	523	7.17
		100	930	970	4.30
	5 ಕಿ.ವಾಟ್‌ಗೆ	100	1310	1470	12.21
		300	3080	3260	5.84
		500	4850	5050	4.12
	10 ಕಿ.ವಾಟ್‌ಗೆ	100	1785	2095	17.37
		300	3555	3885	9.28
		500	5325	5675	6.57
ಎಲ್.ಟಿ–4ಎ	**ನೀರಾವರಿ ಪಂಪುಸೆಟ್**				
	10ಹೆಚ್.ಪಿ ವರೆಗಿನ	600	2580	3126	21.16
	(10ಹೆಚ್.ಪಿ ವರೆಗಿನ ನೀರಾವರಿ ಪಂಪುಸೆಟ್‌ಗಳಿಗೆ ರಾಜ್ಯ ಸರ್ಕಾರದ ಸಹಾಯಧನದಿಂದ ಭರಿಸಲಾಗುವುದು)				
ಎಲ್.ಟಿ–4ಬಿ	11 ಹೆಚ್‌ಪಿ ವರೆಗಿನ	375	2434	3909	60.60
ಎಲ್.ಟಿ–4ಸಿ(i)	10 ಹೆಚ್‌ಪಿ ವರೆಗಿನ	284	1893	3177	67.83
ಎಲ್.ಟಿ–5ಎ	**ಕೈಗಾರಿಕೆ, ಕೈಗಾರಿಕೇತರ ತಾಪನ, ದೀಪವನ್ನು ಒಳಗೊಂಡಂತೆ ಮೋಟೀವ್ ಪವರ್ : ಬೆಂಗಳೂರು ಮಹಾನಗರ ಕ್ಷೇತ್ರ ವಲಯ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ**				
	5 ಎಚ್.ಪಿ	200	1575	2075	31.75
		300	2175	2725	25.29
		500	3375	4025	19.26
	10 ಎಚ್.ಪಿ	600	4580	5680	24.02
		800	6040	7240	19.87
		1000	7500	8800	17.33
	20 ಎಚ್.ಪಿ	1500	12000	14350	19.58
		2000	15650	18250	16.61
		3000	22950	26050	13.51
	50 ಎಚ್.ಪಿ	3000	26500	32000	20.75
		4000	33800	39800	17.75
		7000	55700	63200	13.46
	65 ಎಚ್.ಪಿ	4000	35375	42575	20.35
		5000	42675	50375	18.04
		10000	79175	89375	12.88
	75 ಎಚ್.ಪಿ	7000	63200	72700	15.03
		9000	77800	88300	13.50
		11000	92400	103900	12.45
ಎಲ್.ಟಿ–5ಬಿ	**ಬೆಂಗಳೂರು ಮಹಾನಗರ ಕ್ಷೇತ್ರ ವಲಯ ವ್ಯಾಪ್ತಿಯನ್ನು ಹೊರತುಪಡಿಸಿದ ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ.**				
	5 ಎಚ್.ಪಿ	200	1465	1965	34.13
		300	2035	2585	27.03
		500	3175	3825	20.47
	10 ಎಚ್.ಪಿ	600	4315	5415	25.49
		800	5645	6845	21.26
		1000	6975	8275	18.64
	20 ಎಚ್.ಪಿ	1500	11250	13600	20.89
		2000	14725	17325	17.66
		3000	21675	24775	14.30
	50 ಎಚ್.ಪಿ	3000	25075	30575	21.93
		4000	32025	38025	18.74
		7000	52875	60375	14.18
	65 ಎಚ್.ಪಿ	4000	33525	40725	21.48
		5000	40475	48175	19.02
		10000	75225	85425	13.56
	75 ಎಚ್.ಪಿ	7000	59500	69000	15.97
		9000	73400	83900	14.31
		11000	87300	98800	13.17
ಎಲ್.ಟಿ–6(b)	**ಬೀದಿ ದೀಪ/ ಸಾರ್ವಜನಿಕ ದೀಪ ಸ್ಥಾಪನಗಳು**				
	3 ಕಿ.ವಾಟ್	200	1660	2120	27.71
	5 ಕಿ.ವಾಟ್	300	2545	3285	29.08
	10 ಕಿ.ವಾಟ್	500	4425	5825	31.64
ಎಲ್.ಟಿ–6(a)	**ನೀರು ಸರಬರಾಜು ಮತ್ತು ಒಳಚರಂಡಿ ಪಂಪಿಂಗ್ ಸ್ಥಾಪನಗಳು**				
	3 ಎಚ್.ಪಿ	500	2760	3460	25.36
	5 ಎಚ್.ಪಿ	1000	5425	6725	23.96
	10 ಎಚ್.ಪಿ	2000	10850	13450	23.96
ಎಲ್.ಟಿ–6(c)	**ವಿದ್ಯುತ್ ಚಾಲಿತ ವಾಹನ–ಎಲ್.ಟಿ**				
	1ಕಿ.ವಾಟ್‌ಗೆ	50	320	320	0.00
		100	570	570	0.00
	5 ಕಿ.ವಾಟ್‌ಗೆ	100	850	850	0.00
		300	1850	1850	0.00
		500	2850	2850	0.00
ಎಲ್.ಟಿ–6(c)	**ವಿದ್ಯುತ್ ಚಾಲಿತ ವಾಹನ – ಹೆಚ್.ಟಿ**				
	100 ಕೆವಿಎ	6000	47000	47000	0.00
		10000	67000	67000	0.00
		14000	87000	87000	0.00
	1000 ಕೆವಿಎ	60000	470000	470000	0.00
		100000	670000	670000	0.00
		210000	1220000	1220000	0.00
ಎಚ್.ಟಿ – 1	**ನೀರು ಸರಬರಾಜು ಮತ್ತು ಒಳಚರಂಡಿ ಸ್ಥಾಪನಗಳು**				
	100 ಕೆವಿಎ	9000	69500	103500	48.92
		10000	75050	109050	45.30
		11000	80600	114600	42.18
	300 ಕೆವಿಎ	10000	114150	216150	89.36
		14000	136350	238350	74.81
		20000	169650	271650	60.12
	1000 ಕೆವಿಎ	110000	806000	1146000	42.18
		130000	917000	1257000	37.08
		150000	1028000	1368000	33.07
	6000 ಕೆವಿಎ	400000	3393000	5433000	60.12
		500000	3948000	5988000	51.67
		600000	4503000	6543000	45.30
ಎಚ್.ಟಿ–2(ಎ)(i)	**ಕೈಗಾರಿಕೆ : ಬೆಂಗಳೂರು ಮಹಾನಗರ ಪಾಲಿಕೆಯ ಬೆಂಗಳೂರು ಮಹಾನಗರ ಕ್ಷೇತ್ರ ವಲಯ ಹಾಗೂ ನಗರ ಮುನಿಸಿಪಾಲಿಟಿ ಕೌನ್ಸಿಲ್**				
	300 ಕೆವಿಎ	12000	153150	197775	29.14
		15000	175500	220125	25.43
		20000	212750	257375	20.98
		110000	886250	930875	5.04
	ರೈಲ್ವೆ ಕರ್ಷಣ				
	9000 ಕೆವಿಎ	1000000	8462500	8462500	0.00
		2000000	15012500	15012500	0.00
	ಬಿ.ಎಂ.ಆರ್.ಸಿ.ಎಲ್				
	9000 ಕೆವಿಎ	1000000	6883000	6883000	0.00
		2000000	12083000	12083000	0.00
ಎಚ್.ಟಿ–2(ಎ)(ii)	**ಬೆಂಗಳೂರು ಮಹಾನಗರ ಕ್ಷೇತ್ರ ವಲಯವನ್ನು ಹೊರತುಪಡಿಸಿದ ಇತರ ಪ್ರದೇಶಗಳಿಗೆ ಅನ್ವಯಿಸುತ್ತದೆ**				
	300 ಕೆವಿಎ	12000	149400	194025	29.87
		15000	171450	216075	26.03
		20000	208200	252825	21.43
		110000	871700	916325	5.12
	ರೈಲ್ವೆ ಕರ್ಷಣ				
	9000 ಕೆವಿಎ	1000000	8462500	8462500	0.00
		2000000	15012500	15012500	0.00
ಎಚ್.ಟಿ–2(ಬಿ)(i)	**ವಾಣಿಜ್ಯ : ಬೆಂಗಳೂರು ಮಹಾನಗರ ಪಾಲಿಕೆಯ ಬೆಂಗಳೂರು ಮಹಾನಗರ ಕ್ಷೇತ್ರ ವಲಯ ಹಾಗೂ ನಗರ ಮುನಿಸಿಪಾಲಿಟಿ ಕೌನ್ಸಿಲ್**				
	100 ಕೆವಿಎ	6000	78450	85200	8.60
		10000	115450	118200	2.38
		14000	152450	151200	–0.82
	1000 ಕೆವಿಎ	60000	784500	852000	8.60
		100000	1154500	1182000	2.38
		210000	2173000	2090500	–3.80
ಎಚ್.ಟಿ–2(ಬಿ)(ii)	**ಬೆಂಗಳೂರು ಮಹಾನಗರ ಕ್ಷೇತ್ರ ವಲಯವನ್ನು ಹೊರತುಪಡಿಸಿದ ಇತರ ಪ್ರದೇಶಗಳಿಗೆ ಅನ್ವಯಿಸುತ್ತದೆ**				
	100 ಕೆವಿಎ	6000	76400	83150	8.84
		10000	112600	115350	2.44
		14000	148800	147550	–0.84
	1000 ಕೆವಿಎ	60000	764000	831500	8.84
		100000	1126000	1153500	2.44
		210000	2122500	2040000	–3.89
ಎಚ್.ಟಿ–2(ಸಿ)(i)	**ಸರ್ಕಾರಿ ಆಸ್ಪತ್ರೆಗಳು, ಇಎಸ್‌ಐ, ವಿಶ್ವವಿದ್ಯಾಲಯಗಳು, ರಾಜ್ಯ ಸರ್ಕಾರದ, ರಾಜ್ಯ ಸರ್ಕಾರದ ಧನಸಹಾಯದಿಂದ ನಡೆಯುವ ವಿದ್ಯಾಸಂಸ್ಥೆಗಳು**				
	100 ಕೆವಿಎ	6000	63600	80600	26.73
		10000	92400	109400	18.40
		14000	121200	138200	14.03
	1000 ಕೆವಿಎ	60000	636000	806000	26.73
		100000	924000	1094000	18.40
		210000	1760000	1930000	9.66
ಎಚ್.ಟಿ–2(ಸಿ)(ii)	**ಎಚ್.ಟಿ–2(ಸಿ)(i) ನ್ನು ಹೊರತುಪಡಿಸಿದ ಆಸ್ಪತ್ರೆಗಳು, ವಿಶ್ವವಿದ್ಯಾಲಯಗಳು, ವಿದ್ಯಾಸಂಸ್ಥೆಗಳು**				
	100 ಕೆವಿಎ	6000	69600	86600	24.43
		10000	102400	119400	16.60
		14000	135200	152200	12.57
	1000 ಕೆವಿಎ	60000	696000	866000	24.43
		100000	1024000	1194000	16.60
		210000	1970000	2140000	8.63
ಎಚ್.ಟಿ–4(ಎ)	**ಗೃಹ ನಿವಾಸಿ ಅಪಾರ್ಟ್‌ಮೆಂಟುಗಳು : ಬೆಂ.ಮ.ನ.ಪಾಲಿಕೆ ಹಾಗೂ ಸಿಟಿ ಮುನಿಸಿಪಲ್ ಕಾರ್ಪೊರೇಶನ್ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ**				
	100 ಕೆವಿಎ	6000	55475	96725	74.36
		10000	83675	126925	51.69
		12000	97775	142025	45.26
	1000 ಕೆವಿಎ	60000	554750	967250	74.36
		100000	836750	1269250	51.69
		120000	977750	1420250	45.26

ಟಿಪ್ಪಣಿ: ಮೇಲಿನ ಶುಲ್ಕಗಳ ಜೊತೆಗೆ, ರಾಜ್ಯಸರ್ಕಾರವು ವಿಧಿಸಿದ / ವಿಧಿಸಬಹುದಾದ ತೆರಿಗೆಗಳು ಅನ್ವಯಿಸುತ್ತವೆ.

ವಿಧಾನ ಪರಿಷತ್‌ನಲ್ಲಿ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿಕೆ

ಬಿಎಂಟಿಸಿ: ₹733 ಕೋಟಿ ಸಾಲ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) 2017–18ರಿಂದ 2020–21ರವರೆಗೆ ₹ 733.10 ಕೋಟಿ ಸಾಲ ಪಡೆದಿದೆ ಎಂದು ವಿಧಾನ ಪರಿಷತ್‌ನ ಸಭಾ ನಾಯಕರೂ ಆಗಿರುವ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಬಿಜೆಪಿಯ ತುಳಸಿ ಮುನಿರಾಜು ಗೌಡ ಪ್ರಶ್ನೆಗೆ ಉತ್ತರಿಸಿದ ಅವರು, 'ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಬಿಎಂಟಿಸಿ 2017–18ರಲ್ಲಿ ₹ 146.35 ಕೋಟಿ, 2018–19ರಲ್ಲಿ ₹ 176.80 ಕೋಟಿ, 2019–20ರಲ್ಲಿ ₹ 160 ಕೋಟಿ ಮತ್ತು 2020–21ರಲ್ಲಿ ₹ 230 ಕೋಟಿ ಸಾಲ ಪಡೆದಿದೆ' ಎಂದರು.

ಇದೇ ಅವಧಿಯಲ್ಲಿ ಸಂಸ್ಥೆಯು ₹ 116.27 ಕೋಟಿ ಅಸಲು ಮತ್ತು ₹ 79.58 ಕೋಟಿ ಬಡ್ಡಿಯನ್ನು ಮರುಪಾವತಿ ಮಾಡಿದೆ. 2017–18ರಿಂದ 2021ರ ಡಿಸೆಂಬರ್‌ವರೆಗೂ ಬಿಎಂಟಿಸಿ 9,049 ಬಸ್‌ಗಳನ್ನು ಖರೀದಿಸಲು ನಿರ್ಧರಿಸಲಾಗಿತ್ತು. ಆದರೆ, 2,057 ಬಸ್‌ಗಳನ್ನು ಮಾತ್ರ ಖರೀದಿಸಲಾಗಿದೆ. ಹಳೆಯ ಬಸ್‌ಗಳನ್ನು ನಿಷ್ಕ್ರಿಯಗೊಳಿಸಬೇಕಿರುವುದರಿಂದ 643 ಹವಾ ನಿಯಂತ್ರಿತವಲ್ಲದ ಬಸ್‌ಗಳ ಖರೀದಿಗೆ ಟೆಂಡರ್ ಅಂತಿಮಗೊಳಿಸಲಾಗಿದೆ ಎಂದು ತಿಳಿಸಿದರು.

ಬಿಎಂಟಿಸಿಯನ್ನು ಖಾಸಗೀಕರಣಗೊಳಿಸುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ಕೆಆರ್‌ಐಡಿಎಲ್: ₹ 2.05 ಕೋಟಿ ವಸೂಲಿ ಬಾಕಿ

ಬೆಳಗಾವಿ: ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದಲ್ಲಿ (ಕೆಆರ್‌ಐಡಿಎಲ್) ಅವ್ಯವಹಾರ ನಡೆಸಿದ್ದ ಆರೋಪಕ್ಕೆ ಗುರಿಯಾಗಿರುವ ಅಧಿಕಾರಿಗಳಿಂದ ₹ 2.05 ಕೋಟಿ ವಸೂಲಿ ಮಾಡುವುದು ಬಾಕಿ ಇದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ಶುಕ್ರವಾರ ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಆಯನೂರು ಮಂಜುನಾಥ್ ಪ್ರಶ್ನೆಗೆ ಉತ್ತರಿಸಿದ ಸಚಿವರು, '16 ಅಧಿಕಾರಿಗಳಿಂದ ₹ 2.47 ಕೋಟಿ ವಸೂಲಿಗೆ ಆದೇಶ ಹೊರಡಿಸಲಾಗಿತ್ತು. ಈವರೆಗೆ 11 ಅಧಿಕಾರಿಗಳಿಂದ ₹ 41.09 ಲಕ್ಷ ವಸೂಲಿ ಮಾಡಲಾಗಿದೆ. ಐವರಿಂದ ₹ 2.05 ಕೋಟಿ ವಸೂಲಿ ಬಾಕಿ ಇದೆ. ಅವರಲ್ಲಿ ಒಬ್ಬರು 2005ರಲ್ಲಿ ನಿಧನರಾಗಿದ್ದಾರೆ' ಎಂದರು.

'ಬಾಕಿ ಇರುವ ಮೊತ್ತವನ್ನು ತ್ವರಿತವಾಗಿ ವಸೂಲಿ ಮಾಡಬೇಕು' ಎಂದು ಆಯನೂರು ಮಂಜುನಾಥ್ ಆಗ್ರಹಿಸಿದರು. ಅದಕ್ಕೆ ಉತ್ತರಿಸಿದ ಸಚಿವರು, 'ಲೆಕ್ಕಪರಿಶೋಧನಾ ವರದಿ ಆಧಾರದಲ್ಲಿ ₹ 2.47 ಕೋಟಿ ವಸೂಲಿಗೆ ಶಿಫಾರಸು ಮಾಡಲಾಗಿತ್ತು. ಇನ್ನೂ ಹೆಚ್ಚಿನ ಹಣ ವಸೂಲಿ ಅಗತ್ಯವಿರಬಹುದು ಎಂಬ ಅನುಮಾನದಿಂದ ಹೆಚ್ಚಿನ ಪರಿಶೀಲನೆಗೆ ಮತ್ತೊಂದು ಸಮಿತಿ ನೇಮಿಸಲಾಗಿದೆ. ಸಮಿತಿಯ ವರದಿ ಪಡೆದು ಮೂರು ತಿಂಗಳೊಳಗೆ ಬಾಕಿ ವಸೂಲಿಗೆ ಕ್ರಮ ಜರುಗಿಸಲಾಗುವುದು' ಎಂದು ಹೇಳಿದರು.

1999ರಿಂದ 2020–21ರವರೆಗೆ ಕೆಆರ್‌ಐಡಿಎಲ್‌ಗೆ ₹ 30,046 ಕೋಟಿ ಅನುದಾನ ಲಭಿಸಿದೆ. ಕಾಮಗಾರಿಗಳನ್ನು ನಿರ್ವಹಿಸಿದ ಬಾಬ್ತು ವಿವಿಧ ಇಲಾಖೆಗಳಿಂದ ₹ 88.11 ಕೋಟಿ ಬಾಕಿ ಇತ್ತು. ಅದರಲ್ಲಿ ₹ 16.13 ಕೋಟಿ ವಸೂಲಿ ಮಾಡಲಾಗಿದೆ. ₹ 65.25 ಕೋಟಿಯನ್ನು ಮನ್ನಾ ಮಾಡಲಾಗಿದೆ.

ನಾಲ್ಕು ಕೃಷಿ ವಿವಿ: ಶೇ 50ರಷ್ಟು ಹುದ್ದೆ ಭರ್ತಿಗೆ ಒಪ್ಪಿಗೆ

ಬೆಳಗಾವಿ (ಸುವರ್ಣ ವಿಧಾನಸೌಧ): ರಾಜ್ಯದ ನಾಲ್ಕು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ ಶೇಕಡ 50ರಷ್ಟನ್ನು ಭರ್ತಿ ಮಾಡಲು ಮುಖ್ಯಮಂತ್ರಿ ಒಪ್ಪಿಗೆ ಸೂಚಿಸಿದ್ದಾರೆ. ಈ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಬಿಜೆಪಿಯ ಎಸ್.ವಿ. ಸಂಕನೂರ ಪ್ರಶ್ನೆಗೆ ಉತ್ತರಿಸಿದ ಅವರು, 'ಆರ್ಥಿಕ ಮಿತಿಯ ಕಾರಣದಿಂದ ಹುದ್ದೆಗಳ ಭರ್ತಿ ವಿಳಂಬವಾಗಿದೆ. ಈಗಾಗಲೇ ಕೆಲವು ಹುದ್ದೆಗಳ ನೇಮಕಾತಿಗೆ ಪ್ರಕ್ರಿಯೆ ಆರಂಭಿಸಲಾಗಿತ್ತು. ಆದರೆ, ನ್ಯಾಯಾಲಯಗಳಿಂದ ಪ್ರತಿಕೂಲ ಆದೇಶಗಳು ಬಂದ ಕಾರಣದಿಂದ ತೊಡಕಾಗಿತ್ತು. ಈಗ ಎಲ್ಲವನ್ನೂ ಸರಿಪಡಿಸಿ, ಪ್ರಕ್ರಿಯೆ ಮುಂದುವರಿಸಲಾಗಿದೆ' ಎಂದರು.

ಕೆಲವು ವಿಷಯಗಳಲ್ಲಿ ವಿಶ್ವವಿದ್ಯಾಲಯಗಳಿಂದ ಸ್ಪಷ್ಟನೆ ಕೋರಲಾಗಿದೆ. ಕೆಲವು ಮಾಹಿತಿಗಳು ಇನ್ನಷ್ಟೇ ಬರಬೇಕಿದೆ. ಖಾಲಿ ಇರುವ ಹುದ್ದೆಗಳಲ್ಲಿ ಅರ್ಧದಷ್ಟನ್ನು ಆದಷ್ಟು ಬೇಗ ಭರ್ತಿ ಮಾಡಲಾಗುವುದು ಎಂದು ಭರವಸೆ ನೀಡಿದರು.

ವಿಶ್ವವಿದ್ಯಾಲಯ	ಮಂಜೂರಾದ ಬೋಧಕ ಹುದ್ದೆ	ಖಾಲಿ	ಮಂಜೂರಾದ ಬೋಧಕೇತರ ಹುದ್ದೆ	ಖಾಲಿ
ಬೆಂಗಳೂರು ಕೃಷಿ ವಿ.ವಿ	596	227	1,619	1,031
ಧಾರವಾಡ ಕೃಷಿ ವಿ.ವಿ	595	239	1,074	671
ರಾಯಚೂರು ಕೃಷಿ ವಿ.ವಿ	517	80	1,017	341
ಶಿವಮೊಗ್ಗ ಕೃಷಿ ವಿ.ವಿ	325	188	592	403

ಮಿಗ್–21 ಪತನ: ಪೈಲಟ್ ಸಾವು

ಜೈಪುರ/ನವದೆಹಲಿ (ಪಿಟಿಐ): ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ತರಬೇತಿ ನಡೆಯುತ್ತಿದ್ದ ಸಂದರ್ಭದಲ್ಲಿ ವಾಯುಪಡೆಯ ಮಿಗ್–21 ವಿಮಾನ ಶುಕ್ರವಾರ ಪತನಗೊಂಡು ಪೈಲಟ್ ಮೃತಪಟ್ಟಿದ್ದಾರೆ.

ವಿಂಗ್ ಕಮಾಂಡರ್ ಹರ್ಷಿತ್ ಸಿನ್ಹಾ ಮೃತ ಪೈಲಟ್. 'ಸಮ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಡಸರ್ಟ್ ನ್ಯಾಷನಲ್ ಪಾರ್ಕ್ ಪ್ರದೇಶದಲ್ಲಿ ವಿಮಾನ ಪತನಗೊಂಡಿತು' ಎಂದು ಜೈಸಲ್ಮೇರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಜಯ್ ಸಿಂಗ್ ತಿಳಿಸಿದ್ದಾರೆ.

ಜಿಲ್ಲಾ ಪಂಚಾಯತ್ ಕೋಲಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಕೋಲಾರ–563101 ದೂರವಾಣಿ: 08152–222570, ಇ–ಮೇಲ್: eepredkolar1@gmail.com

ಅಲ್ಪಾವಧಿ ದ್ವಿ–ಲಕೋಟೆ ಟೆಂಡರ್ ಇ–ಪ್ರೊಕ್ಯೂರ್‌ಮೆಂಟ್ ಪ್ರಕಟಣೆ ಸಂಖ್ಯೆ: 16/2021–22
ದಿನಾಂಕ: 22.12.2021
ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW-IIIರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ–ಪ್ರಕ್ಯೂರ್‌ಮೆಂಟ್ ದ್ವಿ–ಲಕೋಟೆ ಪದ್ಧತಿಯಲ್ಲಿ (Two Cover System) ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ್ದು, ಅಧಿಕೃತ ಗುತ್ತಿಗೆದಾರರಿಂದ **ಕೋಲಾರ ಜಿಲ್ಲೆ ಬಂಗಾರಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ (1) ಕೋಲಾರ ಜಿಲ್ಲೆ ಬಂಗಾರಪೇಟೆ ತಾ|| ಕಾರಹಳ್ಳಿ ಗ್ರಾ|| ಪಂ|| ವ್ಯಾಪ್ತಿಯ ಬಂಗಾರಪೇಟೆ ಕೋಲಾರ ಮುಖ್ಯ ರಸ್ತೆಯಿಂದ ಕಾರಹಳ್ಳಿ ಎಸ್.ಸಿ./ಎಸ್.ಟಿ. ಕಾಲೋನಿವರೆಗೆ 150 ಕಿ.ಮೀ.ಗಳ ರಸ್ತೆ ನಿರ್ಮಾಣ ಕಾಮಗಾರಿ ಇಂಡೆಂಟ್ ಸಂಖ್ಯೆ: 47421, ಟೆಂಡರ್‌ಗಿಟ್ಟ ಮೊತ್ತ ರೂ:. 70.00 ಲಕ್ಷಗಳಿಗೆ** ಟೆಂಡರನ್ನು ಆಹ್ವಾನಿಸಲಾಗಿದ್ದು, ಸದರಿ ಕಾಮಗಾರಿಗೆ ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ **https://eproc.karnataka.gov.in** ಮುಖಾಂತರ ಇ–ಟೆಂಡರನಲ್ಲಿ ಭಾಗವಹಿಸಲು ಕೋರಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ **ದಿನಾಂಕ: 07.01.2022ರ ಸಂಜೆ: 4.00 ರವರೆಗೆ** ಗುತ್ತಿಗೆದಾರರು ಟೆಂಡರುಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. (2) ಟೆಂಡರನ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿ: 10.01.2022 ರಂದು ಸಂಜೆ 4.30 ಗಂಟೆಗೆಂದು** ನಿಗದಿ ಪಡಿಸಲಾಗಿದೆ. (3) ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದ ಗುತ್ತಿಗೆದಾರರಿಗೆ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕವನ್ನು ಪ್ರತ್ಯೇಕವಾಗಿ ದೂರವಾಣಿ ಮುಖಾಂತರ ತಿಳಿಸಲಾಗುವುದು. ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (Viz.,https://eproc.karnataka.gov.in) ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಇ–ಪ್ರಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: + 91 8046010000 & +91 8022631200, 080–22230960 & 22234115ನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಕೋಲಾರ.
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 294/ಎಂ.ಸಿ.ಎ/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ರಘು 'ಅಪಸ್ವರ': ಕೆರಳಿದ ಸದಸ್ಯರು

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಚಿಂತಕರ ಚಾವಡಿಯಾದ ಮೇಲ್ಮನೆಗೆ ಇತ್ತೀಚೆಗೆ ಚಿಂತಕರೇ ಬರುತ್ತಿಲ್ಲ. ಹೀಗಾಗಿ, ಇಲ್ಲಿನ ಘನತೆ, ಪಾವಿತ್ರ್ಯತೆ ಕಳೆದುಹೋಗುತ್ತಿದೆ' ಎಂದು ಕಾಂಗ್ರೆಸ್ಸಿನ ರಘು ಆಚಾರ್ ಅವರ ವಿದಾಯದ ಮಾತಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಸದನದಲ್ಲಿ ಹಾಜರಿದ್ದ ಇತರ ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ ಘಟನೆ ವಿಧಾನಪರಿಷತ್‌ನಲ್ಲಿ ಗುರುವಾರ ನಡೆಯಿತು.

ರಘು ಆಚಾರ್ ಅವರ ಅವಧಿ ಜ. 5ಕ್ಕೆ ಮುಗಿಯಲಿದೆ. ಎರಡು ಅವಧಿಗೆ ಪರಿಷತ್ ಸದಸ್ಯರಾಗಿರುವ ಅವರು, ತಮ್ಮ ಮಾತುಗಳ ಮಧ್ಯೆ ಪರಿಷತ್‌ನ ಘನತೆ, ಗಾಂಭೀರ್ಯದ ಬಗ್ಗೆ ಬಳಸಿದ ಪದಗಳು ಇತರ ಸದಸ್ಯರನ್ನು ಕೆರಳಿಸಿತು.

'ಪರಿಷತ್ ಇತ್ತೀಚೆಗೆ ಕೆಟ್ಟು ಹೋಗುತ್ತಿದೆ. ಹಿಂದೆ ಇಲ್ಲಿ ಮಹಾನ್ ನಾಯಕರು ಇದ್ದರು. ಈಗ ಪರಸ್ಪರ ಎರಡೂ ಕಡೆ ಕಿರುಚುತ್ತಾರೆ. ಹಿಂದೆ ಕೇಳಿಸಿಕೊಳ್ಳುವ ಕಿವಿಗಳಿದ್ದುವು. ಆದರೆ, ಈಗ ಮಾತನಾಡಿದರೂ ಕೇಳಿಸಿಕೊಳ್ಳುವವರಿಲ್ಲ. ಈ ಅವ್ಯವಸ್ಥೆ ಮೇಲ್ಮನೆಗೆ ಬರಬಾರದು. ಮೊದಲ ಅವಧಿಯಲ್ಲಿ ಕಲಾಪಕ್ಕೆ ಬರುತ್ತಿದ್ದ ನಾನು, ಇತ್ತೀಚೆಗೆ ಇಲ್ಲಿಗೆ ಬರುವುದನ್ನೇ ಬಿಟ್ಟಿದ್ದೇನೆ' ಎಂದು ರಘು ಆಚಾರ್ ಬೇಸರ ವ್ಯಕ್ತಪಡಿಸಿದರು.

'ಮೇಲ್ಮನೆ ಕೆಳಮನೆಗಿಂತ ಮೊದಲೇ ಹುಟ್ಟಿದ್ದು. ಈ ಮನೆಯಲ್ಲಿ ಬುದ್ಧಿವಂತರಿಗೆ ಮಾತ್ರ ಅವಕಾಶ ಕೊಡಬೇಕು. ವಿಧಾನಸಭಾ ಚುನಾವಣೆಯಲ್ಲಿ ಸೋತವರನ್ನು ಎಲ್ಲ ಪಕ್ಷಗಳು ಮೇಲ್ಮನೆ ಸದಸ್ಯರಾಗಿ ಮಾಡುತ್ತಿವೆ. ನಾನು ಮುಂದಿನ ಸಲ ವಿಧಾನಸಭೆ ಕ್ಷೇತ್ರದಲ್ಲಿ ಸ್ಪರ್ಧೆ ಮಾಡುತ್ತೇನೆ' ಎಂದರು.

ರಘು ಆಚಾರ್ ಮಾತಿಗೆ ಇತರ ಸದಸ್ಯರುಗಳಿಂದ ತೀವ್ರ ವಿರೋಧ ವ್ಯಕ್ತಪಡಿಸಿದರು.

ಬಿಜೆಪಿಯ ಪುಟ್ಟಣ್ಣ, 'ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ ಅವರ ಥರ ರಘು ಇರುತ್ತಿದ್ದರೆ, ಅವರ ಮಾತುಗಳನ್ನು ಒಪ್ಪುತ್ತಿದ್ದೆ. ಈ ವ್ಯವಸ್ಥೆಯನ್ನು ಹಾಳು ಮಾಡಿರುವುದರಲ್ಲಿ ರಘು ಆಚಾರ್ ಪಾಲೂ ಇದೆ. ಈಗ ಹೋಗುವ ದಿನ ಈ ರೀತಿ ಮಾತನಾಡುವುದು ಸರಿಯಲ್ಲ' ಎಂದರು.

ರಘು ಆಚಾರ್ ಸದನದ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದ ಬಿಜೆಪಿಯ ಆಯನೂರು ಮಂಜುನಾಥ್, 'ಬಹಳ ದೊಡ್ಡ ಇತಿಹಾಸ ಇರುವ ಜಾಗದಲ್ಲಿ ನಿಂತು ರಘು ಆಚಾರ್ ಹಗುರವಾಗಿ ಮಾತಾಡುತ್ತಿದ್ದಾರೆ ಅನಿಸುತ್ತಿದೆ. ಆ ಮೂಲಕ, ಸದನಕ್ಕೆ, ಪರಂಪರೆಗೆ ಅಪಮಾನ ಮಾಡಿದ್ದಾರೆ. ಈ ಸದನಕ್ಕೆ ಬರುವವರು ಕಷ್ಟ ಪಟ್ಟು ಹೋರಾಟ ಮಾಡಿಕೊಂಡು ಬಂದಿದ್ದಾರೆ. ಬಡವರ ಪರ, ದೀನದಲಿತರ ಪರ, ಅಂಗವಿಕಲರ ಪರ ಧ್ವನಿ ಎತ್ತಲು ಗುರಿ ಇಟ್ಟುಕೊಂಡು ಬರಬೇಕು. ಅದು ಬಿಟ್ಟು ಯಾವುದೊ ಮಾರ್ಗದಲ್ಲಿ ಬಂದು ಹೋಗುವಾಗ ಹೀಗೆ ಮಾತಾಡುವುದು ಸರಿಯಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಘು ಆಚಾರ್ ಮಾತಾಡುವಾಗ ವೇಳೆ ಮಧ್ಯಪ್ರವೇಶಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ರಘು ಆಚಾರ್ ನೀನು ಒಳ್ಳೇ ರೀತಿ ಮಾತಾಡ್ತಿದ್ದೀಯ. ಆದರೆ, ಇಷ್ಟು ದಿನ ಯಾಕೆ ಮಾತನಾಡಿಲ್ಲ. ಕೊನೆಯ ದಿನ ಈ ರೀತಿ ಮಾತನಾಡುತ್ತಿಯಲ್ಲ ಯಾಕೆ' ಎಂದು ನಗುತ್ತಲೇ ಕುಟುಕಿದರು.

ಕೊನೆಗೆ, 'ನನ್ನ ಮಾತಿನಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮೆ ಯಾಚಿಸುತ್ತೇನೆ' ಎಂದೂ ರಘು ಆಚಾರ್ ಹೇಳಿದರು.

'ಶಸ್ತ್ರಚಿಕಿತ್ಸೆಗಾಗಿ ಸಿ.ಎಂ ವಿದೇಶಕ್ಕೆ ಹೋಗುವುದಿಲ್ಲ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೊಣಕಾಲಿನ ಶಸ್ತ್ರಚಿಕಿತ್ಸೆಗೆ ವಿದೇಶಕ್ಕೆ ಹೋಗಲಿದ್ದಾರೆ ಎನ್ನುವುದು ಸುಳ್ಳು ಸುದ್ದಿ' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು, 'ಮುಖ್ಯಮಂತ್ರಿಯವರು ಚಿಕಿತ್ಸೆಗೆ ವಿದೇಶಕ್ಕೆ ಹೋಗುವ ಕಾರ್ಯಕ್ರಮ ಇಲ್ಲ. ಶಸ್ತ್ರಚಿಕಿತ್ಸೆ ಕೂಡಾ ಮಾಡಿಸಿಕೊಳ್ಳುತ್ತಿಲ್ಲ. ಯಾರೋ ವದಂತಿ ಹಬ್ಬಿಸಿದ್ದಾರೆ ಅಷ್ಟೆ' ಎಂದರು.

'ಬೊಮ್ಮಾಯಿ ಅವರು ಶಸ್ತ್ರಚಿಕಿತ್ಸೆ ಇಲ್ಲದೆ ಗುಣಮುಖರಾಗಲು ಅಗತ್ಯವಾದ ಚಿಕಿತ್ಸೆಯನ್ನು ಇಲ್ಲಿಯೇ ಪಡೆಯಲಿದ್ದಾರೆ. ಮೂಳೆ ರೋಗ ತಜ್ಞರು ಮತ್ತು ಆಯುರ್ವೇದಿಕ್ ತಜ್ಞರು ಈ ಬಗ್ಗೆ ಸಲಹೆ ಕೊಟ್ಟಿದ್ದಾರೆ. ಫಿಜಿಯೋ ಥೆರಪಿ ಚಿಕಿತ್ಸೆ ಪಡೆಯಲಿದ್ದಾರೆ. ಮುಂದಿನ ಚುನಾವಣೆಯನ್ನು ಅವರ ನೇತೃತ್ವದಲ್ಲಿಯೇ ಎದುರಿಸುತ್ತೇವೆ' ಎಂದೂ ಅಶೋಕ ಹೇಳಿದರು.

ರಶ್ಮಿ ಶಂಕರ್‌ಗೆ 'ಮಿಸೆಸ್ ಇಂಡಿಯಾ ಅರ್ಥ್' ಕಿರೀಟ

ಡಾ. ರಶ್ಮಿ ಶಂಕರ್

ಬೆಂಗಳೂರು: ಕೋರಮಂಗಲದ ಅಪೋಲೊ ಸ್ಪೆಕ್ಟ್ರಾ ಆಸ್ಪತ್ರೆಯ ಅರಿವಳಿಕೆ ತಜ್ಞೆ ಡಾ. ರಶ್ಮಿ ಶಂಕರ್ ಅವರು 2021ನೇ ಸಾಲಿನ 'ಮಿಸೆಸ್ ಇಂಡಿಯಾ ಅರ್ಥ್' ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ.

ನವದೆಹಲಿಯಲ್ಲಿ ಇತ್ತೀಚೆಗೆ ನಡೆದ ಈ ಸ್ಪರ್ಧೆಯಲ್ಲಿ ದೇಶದ ವಿವಿಧೆಡೆಯಿಂದ ರೂಪದರ್ಶಿಯರು ಭಾಗವಹಿಸಿದ್ದರು. ಅಂತಿಮ ಸುತ್ತಿಗೆ 30 ಮಂದಿ ಆಯ್ಕೆಯಾಗಿದ್ದರು.

'ಮಹಿಳೆಯರು ಪ್ರತಿಭೆ ಪ್ರದರ್ಶಿಸಲು ಇದು ಉತ್ತಮ ವೇದಿಕೆ. ರಾಷ್ಟ್ರ ಮಟ್ಟದ ವಿಜೇತೆಯಾಗಿ ಹೊರಹೊಮ್ಮಿರುವುದು ಖುಷಿ ತಂದಿದೆ.' ಎಂದರು.

6.5 ಎಕರೆ ಸರ್ಕಾರಿ ಭೂಮಿ ಖಾಸಗಿಯವರ ಪಾಲು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ರಸ್ತೆ ಪಕ್ಕದಲ್ಲಿರುವ 6.5 ಎಕರೆ ಸರ್ಕಾರಿ ಭೂಮಿಯನ್ನು ಖಾಸಗಿ ವ್ಯಕ್ತಿಗಳು ವಶಕ್ಕೆ ಪಡೆದು ದೌರ್ಜನ್ಯ ನಡೆಸುತ್ತಿದ್ದಾರೆ ಎಂದು ಕಾಂಗ್ರೆಸ್‌ನ ಸದಸ್ಯ ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನಸಭೆಯಲ್ಲಿ ಶುಕ್ರವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 'ಈ ಜಮೀನು ಮುಖ್ಯಮಂತ್ರಿಯಾಗಿದ್ದ ದಿವಂಗತ ಆರ್. ಗುಂಡೂರಾವ್ ಅವರ ವಶದಲ್ಲಿತ್ತು. ಸರ್ಕಾರಿ ಭೂಮಿ ಎಂಬ ಕಾರಣಕ್ಕೆ ಬಳಿಕ ಅದನ್ನು ವಶಕ್ಕೆ ಪಡೆದಿತ್ತು. ಯಲಹಂಕದ ಹಿಂದಿನ ತಹಶೀಲ್ದಾರ್ ನಕಲಿ ದಾಖಲೆಗಳನ್ನು ಸೃಷ್ಟಿಸಿ ತಮಗೆ ಬೇಕಾದ ಹಾಗೆ ವರದಿ ಕೊಟ್ಟಿದ್ದಾರೆ. ಈ ಮೂಲಕ ಭೂ ಕಬಳಿಕೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಇದು ಹತ್ತಾರು ಕೋಟಿ ಬೆಲೆಬಾಳುವ ಜಮೀನು. ಮೂರು ದಿನಗಳ ಹಿಂದೆ ಕೆಲವು ವ್ಯಕ್ತಿಗಳು ಈ ಜಾಗವನ್ನು ತಮ್ಮ ಸ್ವಾಧೀನಕ್ಕೆ ಪಡೆದುಕೊಂಡು ಮಚ್ಚು ಲಾಂಗ್ ಹಿಡಿದುಕೊಂಡು ಸ್ಥಳೀಯ ಜನರಿಗೆ ಬೆದರಿಕೆ ಹಾಕಿದ್ದಾರೆ. ಈ ದೃಶ್ಯ ಸಿಸಿಟಿವಿ ಕ್ಯಾಮರಾದಲ್ಲಿ ದಾಖಲಾಗಿದೆ' ಎಂದು ಗಮನ ಸೆಳೆದರು.

ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, 'ಕಂದಾಯ ಸಚಿವರು ಇದಕ್ಕೆ ಉತ್ತರ ನೀಡಲಿದ್ದಾರೆ' ಎಂದರು.

ವೆಲ್‌ನೆಸ್ ಅಕಾಡೆಮಿ: ಪ್ರಮಾಣಪತ್ರ ಪ್ರದಾನ

ಡಾ. ಎಸ್‌.ಎಚ್. ಕುಲಕರ್ಣಿ

ಬೆಂಗಳೂರು: ನಗರದ ಎಸ್‌ಎಚ್‌ಕೆ ವೆಲ್‌ನೆಸ್ ಅಕಾಡೆಮಿ ವತಿಯಿಂದ 'ವೆಲ್‌ನೆಸ್ ಮತ್ತು ಡೈರೆಕ್ಟ್ ಸೆಲ್ಲಿಂಗ್' ಕೋರ್ಸ್‌ಗಳ ಪ್ರಮಾಣಪತ್ರ ಪ್ರದಾನ ಸಮಾರಂಭ ಇತ್ತೀಚೆಗೆ ನಡೆಯಿತು. ಅಕಾಡೆಮಿ ಸಂಸ್ಥಾಪಕ ಡಾ. ಎಸ್.ಎಚ್. ಕುಲಕರ್ಣಿ ಮಾತನಾಡಿ, 'ಉದ್ಯೋಗಕ್ಕಾಗಿ ಮಾತ್ರ ಶಿಕ್ಷಣ ಎನ್ನುವ ಧೋರಣೆ ಸಾಮಾನ್ಯವಾಗಿದೆ. ಹೀಗಾಗಿ, ಅಕಾಡೆಮಿ ವತಿಯಿಂದ ಜೀವನಕ್ಕೆ ಅಗತ್ಯ ಇರುವ ಮೌಲ್ಯಗಳ ಆಧಾರಿತ ಶಿಕ್ಷಣ ನೀಡುವ ಪ್ರಯತ್ನ ಮಾಡಲಾಗುತ್ತಿದೆ' ಎಂದರು.

78 ಮಂದಿ ಪ್ರಮಾಣಪತ್ರ ಪಡೆದರು. ಬಸವರಾಜ್ ಉಮ್ರಾಣಿ ಅವರು, ಗಣಿತವನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳುವ ವಿಧಾನವನ್ನು ಕಲಿಸಿಕೊಟ್ಟರು.

ನಾಗಪುರದ ಮಹಾ ಕೃಷಿ ಮೇಳದಲ್ಲಿ ಸಚಿವ ಅಶ್ವತ್ಥನಾರಾಯಣ

'ನೇರ ಮಾರುಕಟ್ಟೆ: ರೈತರಿಗೆ ಹೆಚ್ಚು ವರಮಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದಲ್ಲಿ ಕೃಷಿಕಲ್ಪದಂತಹ ಸಾಮಾಜಿಕ ಉದ್ಯಮಗಳ ಮೂಲಕ ನೇರ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗಿದೆ. ಇದರಡಿ ಕೃಷಿ ಉತ್ಪನ್ನಗಳಿಗೆ ₹ 7 ಕೋಟಿ ಮೌಲ್ಯದ ಮಾರುಕಟ್ಟೆ ಒದಗಿಸಲಾಗಿದೆ. ರೈತರಿಗೆ ₹ 1.2 ಕೋಟಿಗೂ ಅಧಿಕ ವರಮಾನ ದೊರೆತಿದೆ. ಕೃಷಿ ಉತ್ಪಾದಕ ಸಂಸ್ಥೆಗಳಿಗೆ ₹ 80 ಲಕ್ಷಕ್ಕೂ ಹೆಚ್ಚಿನ ಲಾಭವಾಗಿದೆ' ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ತಿಳಿಸಿದರು.

ನಾಗಪುರದಲ್ಲಿ ಕೃಷಿಮೇಳ 'ಅಗ್ರೋವಿಷನ್'ನ ಉದ್ಘಾಟನಾ ಸಮಾರಂಭದಲ್ಲಿ ಅವರು 'ತಂತ್ರಜ್ಞಾನದಿಂದ ಕೃಷಿಯ ಪರಿವರ್ತನೆ- ಆವಿಷ್ಕಾರ ಮತ್ತು ನವೋದ್ಯಮಗಳು' ಕುರಿತು ಶುಕ್ರವಾರ ಮಾತನಾಡಿದರು.

'ಕರ್ನಾಟಕದಲ್ಲಿ ನವೋದ್ಯಮಗಳಿಗೆ ಮತ್ತು ತಾಂತ್ರಿಕ ಉದ್ಯಮಶೀಲರಿಗೆ ಕೃಷಿ ಹಾಗೂ ಕೃಷಿಪೂರಕ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳಲು ಉತ್ತೇಜನ ನೀಡಲಾಗಿದೆ. ಕೃಷಿ, ಆಹಾರ ತಾಂತ್ರಿಕ ಕಂಪನಿಗಳು ಹಾಗೂ ಕೃಷಿ ಉತ್ಪಾದಕ ಸಂಸ್ಥೆಗಳ ನಡುವೆ ನೇರ ಮಾರುಕಟ್ಟೆ ಕಲ್ಪಿಸಲು ಒತ್ತು ಕೊಡಲಾಗಿದೆ' ಎಂದರು.

'ರೈತರನ್ನು ಗಮನದಲ್ಲಿರಿಸಿಕೊಂಡು ಕೃಷಿ ಪೂರೈಕೆ ಸರಪಳಿಗೆ ಹೊಸ ರೂಪ ಕೊಡಬೇಕಿದೆ. ಪ್ರತಿಯೊಬ್ಬ ಕೃಷಿಕನನ್ನೂ ಸಣ್ಣ ಉದ್ಯಮಿಯನ್ನಾಗಿಸಬೇಕು' ಎಂದು ಅಭಿಪ್ರಾಯಪಟ್ಟರು.

ಅಂಕಿ ಅಂಶ

1,000
ದೇಶದಲ್ಲಿ ಕೃಷಿ ಹಾಗೂ ಪೂರಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ನವೋದ್ಯಮಗಳು

₹2.63 ಲಕ್ಷ ಕೋಟಿ
ದೇಶದಲ್ಲಿ ಕೃಷಿ ಉತ್ಪನ್ನಗಳ ಇ-ಮಾರಾಟಕ್ಕೆ ಇರುವ ಅವಕಾಶ

ಬಡವರ ವಿರೋಧಿ ಬಿಜೆಪಿ: ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈತರು, ಬಡವರು, ಕಾರ್ಮಿಕರು, ಅಲ್ಪಸಂಖ್ಯಾತರು ಮತ್ತು ಪರಿಶಿಷ್ಟ ಜಾತಿ ವಿರೋಧಿಯಾಗಿರುವ ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸದಿದ್ದರೆ ದೇಶಕ್ಕೆ ಉಳಿಗಾಲವಿಲ್ಲ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ವಾಗ್ದಾಳಿ ನಡೆಸಿದರು.

ಜಿಗಣಿ ಪುರಸಭೆಯ ಬಹಿರಂಗ ಚುನಾವಣಾ ಪ್ರಚಾರ ಸಭೆಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ಕೋವಿಡ್‌ನಿಂದ ದೇಶದಲ್ಲಿ 42 ಲಕ್ಷ ಜನ ಸಾವಿಗೀಡಾಗಿದ್ದಾರೆ. ಆದರೆ, ಕೇವಲ 4.5 ಲಕ್ಷ ಮಂದಿ ಸಾವಿಗೀಡಾಗಿದ್ದಾರೆ ಎಂದು ಹೇಳುತ್ತಿರುವ ಸರ್ಕಾರ ತಪ್ಪು ಮಾಹಿತಿ ನೀಡುತ್ತಿದೆ. ರಾಜ್ಯದಲ್ಲೂ 3 ಲಕ್ಷ ಜನ ಸಾವಿಗೀಡಾಗಿದ್ದರೂ 37ಸಾವಿರ ಮಂದಿ ಮಾತ್ರ ಸಾವಿಗೀಡಾಗಿದ್ದಾರೆ ಎಂದು ಸುಳ್ಳು ಹೇಳಲಾಗಿದೆ' ಎಂದು ಕಿಡಿಕಾರಿದರು.

ಜಿಗಣಿಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಕಾಂಗ್ರೆಸ್ ಅಭ್ಯರ್ಥಿಗಳ ಪರ ಮತಯಾಚಿಸಿದರು. ಮುಖಂಡ ಆರ್.ಕೆ.ರಮೇಶ್, ಅಭ್ಯರ್ಥಿ ಪ್ರಹ್ಲಾದ್ ರೆಡ್ಡಿ, ಮುಖಂಡರಾದ ಅರುಣ ಕುಮಾರಿ, ಆನಂದ್ ಗೌಡ, ಜಿ.ಕೃಷ್ಣಪ್ಪ ಇದ್ದರು.

ಕಾಂಗ್ರೆಸ್ ಮುಖಂಡ ಆರ್. ಕೆ.ರಮೇಶ್, 'ಅಭಿವೃದ್ಧಿ ಮಾಡದೆಯೇ ಹಣ ಲೂಟಿ ಮಾಡುವ ಬಿಜೆಪಿಗರನ್ನು ಜನಸಾಮಾನ್ಯರು, ಪ್ರಶ್ನಿಸಿದರೆ ಸುಳ್ಳು ಪ್ರಕರಣ ದಾಖಲಿಸುವುದಾಗಿ ಬೆದರಿಕೆ ಹಾಕುತ್ತಾರೆ' ಎಂದರು.

16ನೇ ವಾರ್ಡಿನ ಕಾಂಗ್ರೆಸ್ ಅಭ್ಯರ್ಥಿ ಪ್ರಹ್ಲಾದ್ ರೆಡ್ಡಿ ಹಾಗೂ ಮುಖಂಡರಾದ ಶ್ರೀಧರ್, ಜಿ. ಕೃಷ್ಣಪ್ಪ, ಇಂದಿರಾ ನಾಗರಾಜು, ಶ್ರೀಧರ್ ಲಕ್ಷ್ಮಣ್, ಕುಮಾರ್, ನಟರಾಜ್, ಸುಜಯ್, ನರೇಂದ್ರ ಬಾಬು, ಅಚ್ಯುತ್, ಪ್ರಸನ್ನ ಕುಮಾರ್, ಮಂಜುನಾಥ್ ರೆಡ್ಡಿ ಇದ್ದರು.

JOIN INDIAN COAST GUARD
(MINISTRY OF DEFENCE)
AS NAVIK (GENERAL DUTY), NAVIK (DOMESTIC BRANCH) AND YANTRIK 02/2022 BATCH
APPLICATION WILL BE ACCEPTED 'ONLINE'
FROM 04 Jan 2022 (1100 hrs) TO 14 Jan 2022 (1700 hrs)

1. **Eligibility Conditions.** Online applications are invited from MALE INDIAN CITIZENS possessing educational qualifications and age as prescribed below, for recruitment to the **post of Navik (General Duty), Navik (Domestic Branch) and Yantrik** in the Indian Coast Guard, an Armed Force of the Union.

2. **Educational Qualification.**
(a) Navik (General Duty). 10+2 passed with Maths and Physics from an education board recognized by Council of Boards for School Education (COBSE).
(b) Navik (Domestic Branch). 10th Class passed from an education board recognized by Council of Boards for School Education (COBSE).
(c) Yantrik. 10th class passed from an education board recognized by Council of Boards for School Education (COBSE)" AND "Diploma in Electrical/Mechanical/ Electronics/Telecommunication (Radio/Power) Engineering of duration 03 or 04 years approved by All India Council of Technical Education (AICTE).
OR
10th & 12th class passed from an education board recognized by Council of Boards for School Education (COBSE)" AND "Diploma in Electrical/Mechanical/ Electronics/ Telecommunication (Radio/Power) Engineering of duration 02 or 03 years approved by All India Council of Technical Education (AICTE).
Note: - List of equivalent diploma for recruitment in Yantrik cadre in Electrical, Mechanical and Electronics & Telecommunication (Radio/Power) Engineering (Engg) branch as mentioned below:-

Electrical Engineering (Diploma)	Mechanical Engineering (Diploma)	Electronics & Telecommunication (Radio/ Power) Engineering (Diploma)
Electrical and Electronics (Power System)	Marine Engg/ Marine Engg and Systems	Advanced Electronics and Communication Engg
Electrical and Electronics Engg	Mechanical Engg	Electronic Instrumentation and Control Engg
Electrical and Instrumentation Engg	Mechanical Engg (Production)	Electronics Engg
Electrical and Mechanical Engg	Mechanical Engg (Automobile)	Electronics (Fibre Optics)
Electrical Engg	Mechanical Engg (Refrigeration and Air Conditioning)	Electronics and Communication Engg
Electrical Engg (Electronics and Power)	Mechanical Engg (Repair & Maintenance)	Electronics and Electrical Engg
Electrical Engg (Industrial Control)	Production Engg	Electronics and Telecommunication
Electrical Engg (Instrumentation and control)	Ship building Engg	
Electrical Power System		

3. **Age.** Minimum 18 Years and maximum 22 years as follows: -
(a) Navik (GD) and Yantrik. Born between **01 Aug 2000 to 31 Jul 2004** (both dates inclusive).
(b) Navik (DB). Born between 01 Oct 2000 to 30 Sep 2004 (both dates inclusive).
Note:- Upper age relaxation of 5 years for SC/ST and 3 years for OBC (non-creamy) candidates **is applicable only if posts are reserved for them.**

4. **Vacancy.** The number of post for category wise recruitment are as follows: -

Post	UR (GEN)	EWS	OBC	ST	SC	Total
Navik(General Duty)	112	28	72	11	37	260
Navik (Domestic Branch)	12	02	09	07	05	35
Yantrik (Mechanical)	04	01	02	06	00	13
Yantrik (Electrical)	06	00	02	00	01	09
Yantrik (Electronics)	03	00	01	00	01	05

Note:-
(a) These vacancies are tentative and may change depending on availability of training slots.
(b) For simplicity, Yantrik {Electronics & Tele Communication (Radio/Power)} will be referred as Yantrik (Electronics) in the advertisement.
(c) Even if there is no vacancy reserved for SC/ST/OBC(non-creamy)/ EWS category candidates, such candidates can still apply. However, they will not be eligible for any age concession/relaxation etc. SC/ST candidates are exempt from payment of application fee even in such case.

5. **How to Apply.**
(a) Applications will be accepted '**Online only' from 04 Jan 22 (1100 hrs) to14 Jan 22 (1700 hrs).** Candidates are to logon to https://joinindiancoastguard.cdac.in and follow the instructions for registering yourself with e-mail ID/ mobile number. The candidates are to ensure validity of e-mail and mobile number at least up to **31 Dec 22.**
(b) The candidate can apply for only **one post Viz. either Navik (DB) or Navik (GD) or Yantrik (Mechanical) or Yantrik (Electrical) or Yantrik (Electronics) in one cycle.** The candidature of candidate will be cancelled if multiple applications are applied by the candidate for more than one post in response to this advertisement. Multiple applications for only one selected post will also result in cancellation of candidature. Online application will be further scrutinised for eligibility and may be rejected at any stage if found ineligible in any respect. For any query regarding application, the candidate can contact through e-mail at icgcell@cdac.in and telephone no:- 020-25503108, 020-25503108.
(c) **Documents to be uploaded in the Application.** The candidates will be required to upload documents in two phases. Few documents are required at the online application stage and few are required to be uploaded if shortlisted for Stage-II. The candidates are to scan the original documents (neither photocopy nor self-attested photocopy is to be scanned) as applicable for the post applied and upload in the online application.
(i) **Compulsory Documents to be uploaded by all candidates during online application:-**
(aa) Passport size recent colour photograph (taken not before 15 Dec 2021) (front portrait in light background without head gear except for Sikhs). The photographs is to taken with candidate holding a black slate in front of his chest with his name and date of photograph taken, clearly written on it with white chalk in capital letters.
(ab) Candidate's scanned signature image.
(ac) Scanned Clear Left-Hand Thumb Impression Image.
(ad) Date of Birth Certificate (10th class mark sheet or Birth Certificate in English or Hindi).
(ae) Photo Identity proof (Adhaar Card or Voter ID or Passport or PAN Card or Driving License).
(af) 10th class mark sheet.
(ag) 10th class certificate
(ah) EWS/ SC/ ST/ OBC (non-creamy layer) Certificate (if applicable).
(aj) Scanned Signature of Parent (Father/Mother) or Guardian if the andidate applying is less than 18 years of age.
(ak) Candidate's handwritten declaration.
(al) Service Certificate/ NOC if candidate is serving CG Personnel or a civilian ICG.
Note:- If the board is issuing only "10th class mark sheet" and not the "10th class pass certificate" then the candidate to upload "10th class mark sheet" for "10th class certificate".
(ii) Additional documents to be uploaded by Navik (GD) candidates only during online application.
(aa) 12th class Mark sheet.
(ab) 12th class Certificate
Note:- If the board is issuing only "12th class mark sheet" and not the "12th class pass certificate" then the candidate to upload "12th class mark sheet" for "12th class certificate".
(iii) Additional documents to be uploaded by Yantrik (Mechanical, Electrical and Electronics) candidates only during online application.
(aa) 12th class Mark sheet (if completed).
(ab) 12th class Certificate (if completed).
(iv) Documents To Be Uploaded If Shortlisted For Stage II. If the candidate is shortlisted for Stage II of the recruitment procedure, then he will be required to upload following certificates as per the post applied:-
(aa) All Candidates.
(aaa) Formula for conversion of CGPA/ Grade into percentage for class 10 (if applicable).
(aab) NOC from Govt., Organization if the candidate is employed
(aac) Additional mark sheet for class 10 (if applicable)
(ab) Navik (GD) candidates.
(aaa) Formula for conversion of CGPA/ Grade into percentage for class 12 (if applicable).
(aab) Additional mark sheet for class 12 (if applicable).
(ac) Yantrik candidates.
(aaa) Formula for conversion of CGPA/ Grade into percentage for class 12 (if applicable).
(aab) Additional mark sheet for class 12 (if applicable).
(aac) Mark sheet of all years/ semesters of diploma.
(aad) Formula for conversion of CGPA/ Grade into percentage for diploma.
(aae) Diploma Passing Certificate.
(v) List Of Optional Documents To Be Uploaded By Candidates if Shortlisted For Stage-II.
(aa) Sports Certificate as per proficiency/achievement with respect selected game.
(ab) Death Certificate for deceased Coast Guard personnel whose death is not attributable to service, if applicable.
(ac) Death Certificate for deceased Coast Guard personnel whose death is attributable to service, if applicable.
(ad) NCC Certificate ('A'/ 'B'/ 'C')
Note:-
(aaa) In case of SC/ST/OBC (Non Creamy)/EWS applicants, availing their respective quota then either current or permanent address of online application should be same as the address mentioned in caste/category certificate {SC, ST & OBC (Non-Creamy)}. EWS certificate shall be as per **Govt. of India format (No other format will be entertained)** (Format available on ICG website). Further, OBC (Non creamy layer) certificate of candidates should be as per the format for appointment for post under the Govt. of India and should bear QR/bar code for subsequent online verification. The format of the OBC (Non Creamy) certificate is available on ICG website. **(No other format will be entertained).** Any other format will lead to cancelation of candidature.
(aab) The size of all the documents to be uploaded has to be between 10kb to 100kb.
(aac) The date of issue of all uploaded documents (SC/ST/OBC (Non-Creamy)/ EWS/Mark Sheets/Education Certificates) has to be **14 Jan 22** or any date prior to **14 Jan 22** and the validity of all the documents has to be at least up to **31 Oct 22** during document
(aad) Common reasons for rejection during document verification can be checked at https://joinindiancoastguard.cdac.in/cgept/assets/img/downloads/doc/reasonForRejection.pdf .
(aae) Documents in Digilocker will not be accepted at any stage of the examination view electronic devices are not allowed inside the examination premises. Candidates to bring their original documents at all stages of CGEPT examination. Candidates not able to produce original documents at different stages of examination will not be allowed to appear in the examination.
(d) **Examination Fee.** Candidates (except SC/ST candidates, who are exempted from payment of fee) are required to pay a fee of **Rs. 250/-(Rupees Two hundred fifty only)** through online mode by using net banking or by using Visa/Master/Maestro/Rupay Credit/Debit Card/UPI. **Admit card will be issued for the examination only to those candidates who have successfully paid the examination fee and who are entitled for waiver of examination fee.**
Note:-
(i) Fee once paid shall not be refunded under any circumstances nor can the fee be held in reserve for any other examination or selection.
(ii) Candidates from SC/ST category are entitled for waiver of examination fee. Candidates are liable to be discharged/ rejected at any stage of recruitment/ training if it is found that false SC/ST certificate has been produced to claim waiver of examination fee/other concessions as applicable.
(iii) In case candidate has made an online payment of fee and money has been deducted from your account (i.e. unsuccessful payment), Please check whether fees is auto refunded to the transaction originating account or please wait for 15 working days for automatic refund of money to your account and check transaction status in originating account.
(iv) If multiple payments are received from a candidate against single application, then that will be refunded back to the originating account after closing of registration and re-conciliation of all payment records.
Note:- Non-compliance of para 5 by the candidates will result in cancellation of candidature.
***Candidates to see Coast Guard Recruitment Website https://joinindiancoastguard.cdac.in for Hindi version of the advertisement and complete update. This is an indicative advertisement only.**
CAUTION: SELECTION IN INDIAN COAST GUARD IS FAIR AND ON MERIT BASIS. CANDIDATE SHOULD NOT FALL PREY TO UNSCRUPULOUS PERSONS POSING AS RECRUITMENT AGENTS. FOR COMPLAINT AGAINST SUCH PERSONS, CANDIDATE MUST APPROACH THE DIRECTOR (RECRUITMENT), COAST GUARD HEADQUARTERS, RECRUITMENT CENTER, NOIDA ON TELEPHONE – 0120-2975817
DISCLAIMER: The terms and condition given in the advertisement are guidelines only and orders issued by the Government as amended from time to time will apply during the recruitment process.
Scan this QR code to apply online
LAST DATE FOR ONLINE APPLICATION 14 Jan 22 (1700 hrs)
DAVP-10119/11/0007/2122

ಷೇರುಪೇಟೆ ವಹಿವಾಟು

190



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,072
ಇಂದಿನ ಅಂತ್ಯ	17,003
▲	68
ದಿನದ ಗರಿಷ್ಠ	17,155

ವಿನಿಮಯ ದರ

$ ಡಾಲರ್	75.3
£ ಪೌಂಡ್	100.71
€ ಯುರೊ	85.14
¥ ಯೆನ್ (100ಕ್ಕೆ)	65.61

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹515
12 ಮೊಟ್ಟೆಗೆ	₹68

ಮೈಸೂರು

100 ಮೊಟ್ಟೆಗೆ	₹515

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1270 (1280)
ಸೋಯಾ (ರಿಫೈನ್ಡ್)	₹1177(1170)
ಸೂರ್ಯಕಾಂತಿ (ರಿಫೈನ್ಡ್)	₹1250 (1260)
ಪಾಮೋಲಿನ್	₹1135 (1127)

ಕೊಬ್ಬರಿ ಧಾರಣೆ

ಪುತ್ತೂರು (ಇತರೆ)	₹4500-11500
ತುರುವೇಕೆರೆ	₹17800-17800

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

ದೊಡ್ಡ	₹3000-3500
ಮಧ್ಯಮ	₹2000-3000
ಸಣ್ಣ	₹1000-2000

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ ₹20000-27000

2ನೇ ದರ್ಜೆ ₹10000-18000

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ;
ಕೂಳೆ 500- 550
ನಡುಗೋಲು 600-650
ರಾಶಿ 700-800
ರಾಶಿ ಉತ್ತಮ 800-900
ಜರಡಿ 1000 -1050
ಹೆರಕಿದ್ದು 1200-1300
ಹಸಿರು ಸಾಧಾರಣ 750-850
ಹಸಿರು ಉತ್ತಮ 900-1000
ಹಸಿರು ಅತಿ ಉತ್ತಮ 1300-1400
ಕಾಳು ಮೆಣಸು - 520
ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-45000
ಹಳತು 46000-53000
ಭದ್ರಾವತಿ
ರಾಶಿ 45099-47969
ಹೊನ್ನಾಳಿ
ರಾಶಿ 47699-47899
ಹೊಸನಗರ
ಕೆಂಪುಗೋಟು 33899-39449
ರಾಶಿ 46710-48399
ಕುಮಟಾ
ಚಿಪ್ಪು 24509-41019
ಕೋಕ 22099-33009
ಫ್ಯಾಕ್ಟರಿ 13109-19309
ಹಳೆಚಾಲಿ 37509-49699
ಹೊಸಚಾಲಿ 36599-41199
ಮಂಗಳೂರು
ಕೋಕ 30000-40000
ಪುತ್ತೂರು
ಕೋಕ 11000-26000
ಹೊಸತು 27500-45000
ಶಿವಮೊಗ್ಗ
ಬೆಟ್ಟೆ 48609-53000
ಗೊರಬಲು 16100-37206
ರಾಶಿ 42666-47859
ಸರಕು 53000-73300
ಸಿದ್ದಾಪುರ
ಬಿಳಿಗೋಟು 27689-35999
ಚಾಲಿ 46099-49399
ಹೊಸಚಾಲಿ 32099-40299
ಕೆಂಪುಗೋಟು 30099-38999
ರಾಶಿ 43269-48599
ತಟ್ಟಿಬೆಟ್ಟೆ 32889-46899
ಶಿರಸಿ
ಬೆಟ್ಟೆ 35609-46099
ಬಿಳಿಗೋಟು 23361-44699
ಚಾಲಿ 40199-50372
ರಾಶಿ 37109-49609
ತುಮಕೂರು
ರಾಶಿ 45900-46800
ಯಲ್ಲಾಪುರ
ಆಪಿ 52179-56169
ಬಿಳಿಗೋಟು 28899-38899
ಚಾಲಿ 39559-51469
ಕೋಕ 21013-32309
ಕೆಂಪುಗೋಟು 30061-36599
ರಾಶಿ 46090-51799
ತಟ್ಟಿಬೆಟ್ಟೆ 38099-45699
ರಾಮನಗರ ರೇಷ್ಮೆ
ಮಿಶ್ರತಳಿ (ಸಿ.ಬಿ) 400-725
ದ್ವಿತಳಿ (ಬಿ.ವಿ) 512-865

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,350	15,400	15,400	231.20ಸೆಂಟ್ಸ್
ಎಸಿ	7,000	6,500	6,500	
ಆರ್‌ಪಿ	6,300	6,500	-	ಲಂಡನ್
ಆರ್‌ಸಿ	3,900	3,800	-	2462 ಡಾಲರ್ಸ್

‘ಕೇಂದ್ರದ ಕ್ರಮದಿಂದಾಗಿ ಬೆಲೆ ಇಳಿಕೆ’

ಬೆಂಗಳೂರು: ಕೇಂದ್ರ ಸರ್ಕಾರ ಕೈಗೊಂಡ ಕ್ರಮಗಳಿಂದಾಗಿ ಸೂರ್ಯಕಾಂತಿ ಎಣ್ಣೆ ಬೆಲೆಯು ಈಚೆಗೆ ತಲುಪಿದ್ದ ಗರಿಷ್ಠ ಮಟ್ಟಕ್ಕೆ ಹೋಲಿಸಿದರೆ ಶೇಕಡ 20ರಷ್ಟು ಕಡಿಮೆ ಆಗಿದೆ ಎಂದು ಫ್ರೀಡಂ ಹೆಲ್ತಿ ಕುಕಿಂಗ್ ಆಯಿಲ್ಸ್ ಕಂಪನಿಯ ಮಾರಾಟ ಮತ್ತು ಮಾರುಕಟ್ಟೆ ವಿಭಾಗದ ಹಿರಿಯ ಉಪಾಧ್ಯಕ್ಷ ಪಿ. ಚಂದ್ರಶೇಖರ ರೆಡ್ಡಿ ಅಭಿಪ್ರಾಯಪಟ್ಟಿದ್ದಾರೆ.

ದೇಶದಲ್ಲಿ ಬಿಕರಿಯಾಗುವ ಸೂರ್ಯಕಾಂತಿ ಎಣ್ಣೆಯಲ್ಲಿ ಶೇಕಡ 70ರಷ್ಟು ದಕ್ಷಿಣದ ರಾಜ್ಯಗಳಲ್ಲಿ ಮತ್ತು ಒಡಿಶಾದಲ್ಲಿ ಮಾರಾಟ ಆಗುತ್ತದೆ. ದೇಶಕ್ಕೆ ಉಕ್ರೇನ್, ರಷ್ಯಾದಿಂದ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ಸೂರ್ಯಕಾಂತಿ ಎಣ್ಣೆ ಆಮದಾಗುತ್ತದೆ. ‘ವರ್ಷದ ಆರಂಭದಲ್ಲಿ ಜಾಗತಿಕ ಕಾರಣಗಳಿಂದಾಗಿ ಎಣ್ಣೆಯ ಬೆಲೆ ₹ 180ರವರೆಗೂ ಏರಿಕೆ ಆಗಿತ್ತು. ಆದರೆ, ಕೇಂದ್ರ ಆಮದು ಸುಂಕವನ್ನು ತಗ್ಗಿಸಿದ್ದರಿಂದ ಎಣ್ಣೆಯ ಬೆಲೆಯನ್ನು ಇಳಿಸಲು ಸಾಧ್ಯವಾಯಿತು’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇದುವರೆಗೆ ಯಾರನ್ನೂ ಬಂಧಿಸದ ಪೊಲೀಸರು

ಹರಿದ್ವಾರದಲ್ಲಿ ದ್ವೇಷ ಭಾಷಣ: ಆರು ದಿನಗಳ ಬಳಿಕ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಲಖನೌ: ಹರಿದ್ವಾರದಲ್ಲಿ ಈಚೆಗೆ ನಡೆದ ‘ಧರ್ಮ ಸಂಸತ್’ ಕಾರ್ಯಕ್ರಮದಲ್ಲಿ ದ್ವೇಷಪೂರಿತ ಭಾಷಣ ಮಾಡಿದವರ ವಿರುದ್ಧ ಆರು ದಿನಗಳ ಬಳಿಕ ಪೊಲೀಸರು ದೂರು ದಾಖಲಿಸಿದ್ದು, ಇದುವರೆಗೆ ಯಾರನ್ನೂ ಬಂಧಿಸಿಲ್ಲ.

ಈಚೆಗಷ್ಟೇ ಹಿಂದೂ ಧರ್ಮವನ್ನು ಸ್ವೀಕರಿಸಿರುವ ಶಿಯಾ ವಕ್ಫ್ ಮಂಡಳಿಯ ಮಾಜಿ ಅಧ್ಯಕ್ಷ ವಾಸೀಂ ರಿಜ್ವಿ ಅಲಿಯಾಸ್ ಜಿತೇಂದ್ರ ನಾರಾಯಣ ತ್ಯಾಗಿ ಅವರು, ಧರ್ಮಸಂಸತ್ ಕಾರ್ಯಕ್ರಮದಲ್ಲಿನ ತಮ್ಮ ಭಾಷಣದಲ್ಲಿ ‘ಹಿಂದೂ ಧರ್ಮವನ್ನು ರಕ್ಷಿಸಲು ಹಾಗೂ ಹಿಂದೂ ರಾಷ್ಟ್ರ ನಿರ್ಮಾಣ ಮಾಡಲು ಹಿಂದೂ ಯುವಜನರು ಶಸ್ತ್ರಗಳನ್ನು ಕೈಗೆ ತೆಗೆದುಕೊಳ್ಳಬೇಕು’ ಎಂದು ಕರೆ ನೀಡಿದ್ದರು. ತ್ಯಾಗಿ ಅವರ ಭಾಷಣದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆದ ಬಳಿಕ ಪೊಲೀಸರು ಅವರ ವಿರುದ್ಧ ದೂರು ದಾಖಲಿಸಿದ್ದಾರೆ.

‘ತ್ಯಾಗಿ ಮತ್ತು ಇತರರ ವಿರುದ್ಧ ಸೆಕ್ಷನ್ 153 (ಎ) ಅಡಿ ದೂರು ದಾಖಲಿಸಲಾಗಿದೆ. ಈ ಸಂಬಂಧ ಕೊತ್ವಾಲಿ ಪೊಲೀಸ್ ಠಾಣೆಯಲ್ಲಿ ಗುಲ್‌ಬಹಾರ್ ಖಾನ್ ಎಂಬುವರು ದೂರು ದಾಖಲಿಸಿದ್ದಾರೆ. ತನಿಖೆ ಪ್ರಗತಿಯಲ್ಲಿದೆ’ ಎಂದು ಹರಿದ್ವಾರದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ ಯಾರನ್ನೂ ಬಂಧಿಸಿಲ್ಲ ಎಂದೂ ಅವರು ಮಾಹಿತಿ ನೀಡಿದ್ದಾರೆ.

ದೂರಿನ ಪ್ರಕಾರ, ‘ಡಿ. 17ರಿಂದ 19ರವರೆಗೆ ಹರಿದ್ವಾರದ ವೇದನಿಕೇತನ ಆಶ್ರಮದಲ್ಲಿ ಸ್ಥಳೀಯ ಯತಿ ನರಸಿಂಹಾನಂದ ಅವರು ಆಯೋಜಿಸಿದ್ದ ಧರ್ಮಸಂಸತ್ ಕಾರ್ಯಕ್ರಮದಲ್ಲಿ ಸಂತರು, ದಾರ್ಶನಿಕರು ಸೇರಿದಂತೆ ಬಿಜೆಪಿಯ ಕೆಲ ಮುಖಂಡರೂ ಪಾಲ್ಗೊಂಡಿದ್ದರು.

ಈ ಕಾರ್ಯಕ್ರಮದ ವಿಡಿಯೊವೊಂದರಲ್ಲಿ ಹಿಂದೂ ಮಹಾಸಭಾದ ಪದಾಧಿಕಾರಿ ಮಾ ಅನ್ನಪೂರ್ಣ ಅವರು, ‘ಹಿಂದೂ ಧರ್ಮವನ್ನು ರಕ್ಷಿಸಲು ಶಸ್ತ್ರಾಸ್ತ್ರಗಳನ್ನು ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ’. ‘ನನ್ನನ್ನು ನಾಥೂರಾಂ ಗೋಡ್ಸೆಯ ಬೆಂಬಲಿಗಳು ಎಂದು ಬ್ರ್ಯಾಂಡ್ ಮಾಡಿದರೂ ಹಿಂದೂ ಧರ್ಮ ಅಪಾಯದಲ್ಲಿದೆ ಎಂದು ನನಗೆ ಅನಿಸಿದರೆ ನಾನು ಒಂದು ನಿಮಿಷವೂ ಯೋಚಿಸುವುದಿಲ್ಲ ಮತ್ತು ಶಸ್ತ್ರಾಸ್ತ್ರಗಳನ್ನು ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ’ ಎಂದು ಹೇಳಿದ್ದಾರೆ.

ಮತ್ತೊಂದು ವಿಡಿಯೊದಲ್ಲಿ, ಧರ್ಮದಾಸ್ ಮಹಾರಾಜಿ ಎನ್ನುವವರು, ‘ತಾವು ಗೋಡ್ಸೆಯ ಹಿಂಬಾಲಕರಾಗಿದ್ದು, ರಾಷ್ಟ್ರೀಯ ಸಂಪನ್ಮೂಲಗಳಲ್ಲಿ ಅಲ್ಪಸಂಖ್ಯಾತರಿಗೆ ಮೊದಲ ಹಕ್ಕು ಎಂದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಎದೆಗೆ ಆರು ಗುಂಡುಗಳನ್ನು ಹಾರಿಸುತ್ತಿದ್ದೆ’ ಎಂದಿದ್ದಾರೆ.

ಮತ್ತೊಬ್ಬ ಮುಖಂಡ ಆನಂದ್ ಸ್ವರೂಪ್‌ಜಿ ಮಹಾರಾಜ್ ಅವರು ‘ಹಿಂದೂಗಳಿಗೆ ಹಿಂದೂ ರಾಷ್ಟ್ರ ನೀಡದಿದ್ದರೆ 1857ರ ಸ್ವಾತಂತ್ರ್ಯ ಸಂಗ್ರಾಮಕ್ಕಿಂತ ಹೆಚ್ಚು ತೀವ್ರವಾದ ಯುದ್ಧವನ್ನು ಮಾಡುತ್ತಾರೆ. ಹರಿದ್ವಾರದಲ್ಲಿರುವ ಹೋಟೆಲ್ ಮಾಲೀಕರಿಗೆ ತಮ್ಮ ಆವರಣದಲ್ಲಿ ಕ್ರಿಸ್ಮಸ್ ಆಚರಣೆಗೆ ಅವಕಾಶ ನೀಡಿದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ’ ಎಂದು ಬೆದರಿಕೆ ಹಾಕಿರುವುದು ಮತ್ತೊಂದು ವಿಡಿಯೊದಲ್ಲಿದೆ.

ಕಠಿಣ ಕ್ರಮಕ್ಕೆ ಪ್ರಿಯಾಂಕಾ ಒತ್ತಾಯ

ನವದೆಹಲಿ: ‘ಅಲ್ಪಸಂಖ್ಯಾತರು ಮತ್ತು ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ವಿರುದ್ಧ ಸಶಸ್ತ್ರ ಹಿಂಸಾಚಾರವನ್ನು ಪ್ರಚೋದಿಸುವ ದ್ವೇಷದ ಭಾಷಣಗಳಲ್ಲಿ ಭಾಗಿಯಾಗಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ವಿರೋಧಪಕ್ಷಗಳು ಶುಕ್ರವಾರ ಒತ್ತಾಯಿಸಿದ್ದು, ಇಂಥ ಹೇಳಿಕೆಗಳು ಸಂವಿಧಾನ ಮತ್ತು ಕಾನೂನನ್ನು ಉಲ್ಲಂಘಿಸುತ್ತವೆ ಎಂದೂ ಹೇಳಿದ್ದಾರೆ.

‘ಧರ್ಮ ಸಂಸತ್’ ಕಾರ್ಯಕ್ರಮದಲ್ಲಿನ ದ್ವೇಷಪೂರಿತ ಹಾಗೂ ಪ್ರಚೋದನಕಾರಿ ಭಾಷಣವನ್ನು ತೀವ್ರವಾಗಿ ಖಂಡಿಸಿರುವ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ, ಹಿಂಸಾಚಾರವನ್ನು ಪ್ರಚೋದಿಸುವವರ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿದ್ದಾರೆ.

‘ಇಂತಹ ಕೃತ್ಯಗಳು ಸಂವಿಧಾನ ಮತ್ತು ಕಾನೂನನ್ನು ಉಲ್ಲಂಘಿಸುತ್ತವೆ. ಮಾಜಿ ಪ್ರಧಾನಿಯ ಹತ್ಯೆ ಹಾಗೂ ವಿವಿಧ ಸಮುದಾಯಗಳ ನಡುವೆ ದ್ವೇಷ ಹಾಗೂ ಹಿಂಸಾಚಾರವನ್ನು ಪ್ರಚೋದಿಸುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು’ ಎಂದೂ ಅವರು ಆಗ್ರಹಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಹರಿದ್ವಾರ ಜಿಲ್ಲೆಯ ಜ್ವಾಲಾಪುರ ಪೊಲೀಸ್ ಠಾಣೆಯಲ್ಲಿ ತೃಣಮೂಲ ಕಾಂಗ್ರೆಸ್ ರಾಷ್ಟ್ರೀಯ ವಕ್ತಾರ ಸಾಕೇತ್ ಗೋಖಲೆ ದೂರು ದಾಖಲಿಸಿದ್ದಾರೆ.

ಒಮೈಕ್ರಾನ್: 183 ಪ್ರಕರಣಗಳ ವಿಶ್ಲೇಷಣೆ ಪೂರ್ಣ

ನವದೆಹಲಿ (ಪಿಟಿಐ): ಭಾರತದಲ್ಲಿ ವರದಿ ಆಗಿರುವ 358 ಒಮೈಕ್ರಾನ್ ಪ್ರಕರಣಗಳಲ್ಲಿ 183 ಪ್ರಕರಣಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅದರಲ್ಲಿ, 87 ಸೋಂಕಿತರು ಎರಡೂ ಡೋಸ್ ಲಸಿಕೆಗಳನ್ನು ಪಡೆದಿದ್ದಾರೆ. ಮೂವರು ಬೂಸ್ಟರ್ ಡೋಸ್ ಲಸಿಕೆ ಪಡೆದಿದ್ದಾರೆ ಮತ್ತು 121 ಸೋಂಕಿತರು ವಿದೇಶಗಳಿಂದ ದೇಶಕ್ಕೆ ಮರಳಿದ್ದಾರೆ ಎಂದು ಸರ್ಕಾರ ತಿಳಿಸಿದೆ.

ಇಬ್ಬರು ಒಂದು ಡೋಸ್ ಲಸಿಕೆ ಪಡೆದವರು, ಏಳು ಮಂದಿ ಲಸಿಕೆಯನ್ನೇ ಪಡೆಯದವರು ಮತ್ತು ದೇಶದ ರಾಷ್ಟ್ರೀಯ ಲಸಿಕೆ ಕಾರ್ಯಕ್ರಮದ ಅಡಿ ಲಸಿಕೆ ಪಡೆಯಲು ಯೋಗ್ಯರಲ್ಲದ 16 ಮಂದಿ ಅವರಲ್ಲಿ ಇದ್ದಾರೆ. ಇನ್ನೂ 73 ಜನರ ಲಸಿಕೆ ಸ್ಥಾನಮಾನದ ಕುರಿತು ಮಾಹಿತಿ ಇಲ್ಲ. 44 ಪ್ರಕರಣಗಳಲ್ಲಿ ಸೋಂಕಿತರು ವಿದೇಶಗಳಿಂದ ಮರಳಿರುವ 121 ಸೋಂಕಿತರ ಸಂಪರ್ಕಕ್ಕೆ ಬಂದವರು. ಇನ್ನು 18 ಜನರ ಕುರಿತು ಮಾಹಿತಿ ಇನ್ನು ಲಭ್ಯವಾಗಿಲ್ಲ ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್‌ನ (ಐಸಿಎಂಆರ್) ಮಹಾನಿರ್ದೇಶಕ ಡಾ. ಬಲರಾಮ್ ಭಾರ್ಗವ ಮಾತನಾಡಿ, ‘ದೇಶದಲ್ಲಿ ಈಗಲೂ ಡೆಲ್ಟಾ ರೂಪಾಂತರಿ ತಳಿಯೇ ಹೆಚ್ಚು ಪ್ರಬಲವಾಗಿರುವುದು. ಹಾಗಾಗಿ, ಕೋವಿಡ್–19 ವಿರುದ್ಧ ಮೊದಲು ಅನುಸರಿಸುತ್ತಿದ್ದ ಮಾನದಂಡಗಳನ್ನೇ ಈಗಲೂ ನಾವು ಮುಂದುವರಿಸಬೇಕು. ಲಸಿಕೆ ಅಭಿಯಾನಕ್ಕೆ ವೇಗ ನೀಡಬೇಕು’ ಎಂದರು.

ಒಮೈಕ್ರಾನ್ ಸೋಂಕು ಗಂಭೀರವಾದ ರೋಗಲಕ್ಷಣಗಳನ್ನು ಹೊಂದಿರುವುದಿಲ್ಲ. ಭಾರತದಲ್ಲಿ ಪತ್ತೆಯಾಗಿರುವ ಬಹುತೇಕ ಒಮೈಕ್ರಾನ್ ಪ್ರಕರಣಗಳಲ್ಲಿ ಲಕ್ಷಣಗಳು ಸೌಮ್ಯ ರೀತಿಯಲ್ಲಿ ಇವೆ. ಆದ್ದರಿಂದ ಒಮೈಕ್ರಾನ್ ಸೋಂಕಿತರಿಗೆ ನೀಡುವ ಚಿಕಿತ್ಸೆಯು ಕೊರೊನಾದ ಇತರ ತಳಿಗಳ ಸೋಂಕಿಗೆ ನೀಡುವ ಚಿಕಿತ್ಸೆಯ ಮಾದರಿಯಲ್ಲೇ ಇರುತ್ತದೆ ಎಂದು ಹೇಳಿದರು.

108 ದೇಶಗಳಲ್ಲಿ ಸುಮಾರು 1.51 ಲಕ್ಷ ಒಮೈಕ್ರಾನ್ ಪ್ರಕರಣಗಳು ಪತ್ತೆಯಾಗಿವೆ. 26 ಜನರು ಮೃತಪಟ್ಟಿದ್ದಾರೆ ಎಂದರು.

ಉತ್ತರ ಪ್ರದೇಶ, ಮಹಾರಾಷ್ಟ್ರದಲ್ಲಿ ರಾತ್ರಿ ಕರ್ಫ್ಯೂ

- ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಉತ್ತರ ಪ್ರದೇಶದಲ್ಲಿ ರಾತ್ರಿ 11 ರಿಂದ ಬೆಳಿಗ್ಗೆ 5ರ ವರೆಗೆ ಕರ್ಫ್ಯೂ ಜಾರಿ ಮಾಡಲಾಗಿದೆ
- ಸಮಾರಂಭಗಳಲ್ಲಿ ಪಾಲ್ಗೊಳ್ಳಲು 200 ಜನರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ
- ವಿದೇಶಗಳಿಂದ ಬಂದವರಿಗೆ ಓಮೈಕ್ರಾನ್ ಪರೀಕ್ಷೆ ಹಾಗೂ ಮಾಸ್ಕ್ ಧರಿಸುವುದು ಕಡ್ಡಾಯ ಮಾಡಲಾಗಿದೆ
- ಕೋವಿಡ್ ಪ್ರಸರಣವನ್ನು ತಡೆಯುವ ದಿಸೆಯಲ್ಲಿ ಕ್ರಿಸ್‌ಮಸ್, ಹೊಸ ವರ್ಷಾಚರಣೆ ಹಾಗೂ ಮದುವೆ ಸೇರಿದಂತೆ ಇತರೆ ಸಮಾರಂಭಗಳಲ್ಲಿ ಜನಸಂದಣಿಯನ್ನು ನಿಯಂತ್ರಿಸಲು ಮಹಾರಾಷ್ಟ್ರ ಸರ್ಕಾರ ಹೊಸ ಮಾರ್ಗಸೂಚಿ ಜಾರಿಗೆ ತಂದಿದೆ
- ಮಹಾರಾಷ್ಟ್ರದಲ್ಲಿ ರಾತ್ರಿ 9 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೂ ಕರ್ಫ್ಯೂ ಜಾರಿ
- ಒಳಾಂಗಣ ಮದುವೆ ಸಮಾರಂಭದಲ್ಲಿ ಕೇವಲ 100 ಜನ ಹಾಗೂ ಹೊರಾಂಗಣ ಮದುವೆಯಲ್ಲಿ ಕೇವಲ 250 ಮಂದಿಗೆ ಪಾಲ್ಗೊಳ್ಳಲು ಅವಕಾಶ ನೀಡಲಾಗಿದೆ
- ಜಿಮ್, ಸ್ಪಾ, ಹೋಟೆಲ್, ಚಿತ್ರಮಂದಿರಗಳಿಗೆ ಶೇಕಡ 50ರಷ್ಟು ಸಾಮರ್ಥ್ಯದೊಂದಿಗೆ ಕಾರ್ಯನಿರ್ವಹಿಸುವಂತೆ ಸೂಚಿಸಲಾಗಿದೆ

ಭಾರತ: ಫೆಬ್ರುವರಿಯಲ್ಲಿ ಕೋವಿಡ್ 3ನೇ ಅಲೆ ಉತ್ತುಂಗಕ್ಕೇರುವ ಸಾಧ್ಯತೆ

ನವದೆಹಲಿ: ಭಾರತದಲ್ಲಿ ಕೋವಿಡ್ ಮೂರನೇ ಅಲೆಯು 2022ರ ಫೆಬ್ರವರಿ 3ರ ವೇಳೆಗೆ ಉತ್ತುಂಗಕ್ಕೆ ಏರಬಹುದು ಎಂದು ಕಾನ್ಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಸಂಶೋಧಕರು ನಡೆಸಿರುವ ಅಧ್ಯಯನ ವರದಿಯಲ್ಲಿ ಹೇಳಲಾಗಿದೆ.

ಕೊರೊನಾ ವೈರಸ್‌ನ ಓಮೈಕ್ರಾನ್ ರೂಪಾಂತರದಿಂದ ಅನೇಕ ದೇಶಗಳಲ್ಲಿ ಪ್ರಕರಣಗಳ ಏರಿಕೆಯ ಪ್ರವೃತ್ತಿ ಕಂಡುಬರುತ್ತಿದೆ. ಇದೇ ಪ್ರವೃತ್ತಿ ಭಾರತದಲ್ಲೂ ಕಂಡುಬರಲಿದೆ ಎಂಬ ಊಹೆಯನ್ನು ಅಧ್ಯಯನ ಆಧರಿಸಿದೆ.

ಅಮೆರಿಕ, ಬ್ರಿಟನ್, ಜರ್ಮನಿ, ರಷ್ಯಾದಂತಹ ದೇಶಗಳಲ್ಲಿನ ಮೂರನೇ ಅಲೆಯ ಅಂಕಿ–ಅಂಶಗಳನ್ನು ಸಂಶೋಧಕರು ಅಧ್ಯಯನದಲ್ಲಿ ಪರಿಗಣಿಸಿದ್ದಾರೆ. ಭಾರತದಲ್ಲಿನ ಮೂರನೇ ಅಲೆಯ ಪರಿಣಾಮ ಮತ್ತು ನಿಗದಿತ ಅವಧಿಯನ್ನು ಊಹಿಸಲು ಈ ದೇಶಗಳಲ್ಲಿನ ಪ್ರಕರಣಗಳ ದೈನಂದಿನ ಅಂಕಿ–ಅಂಶಗಳನ್ನು ಸಂಶೋಧಕರು ಮಾದರಿಯನ್ನಾಗಿ ಬಳಸಿದ್ದಾರೆ. ಈ ಆಧಾರದ ಮೇಲೆ 2022ರ ಫೆಬ್ರುವರಿ ಹೊತ್ತಿಗೆ ಭಾರತದಲ್ಲಿ ಮೂರನೇ ಅಲೆ ಉತ್ತಂಗಕ್ಕೇರಬಹುದು ಎಂದು ಸಂಶೋಧಕರು ಹೇಳಿದ್ದಾರೆ.

ಅತ್ತೂರು : 26 ವಿದ್ಯಾರ್ಥಿಗಳಿಗೆ ಕೊರೊನಾ

ಕುಶಾಲನಗರ: ಕುಶಾಲನಗರ: ಸಮೀಪದ ಅತ್ತೂರು ಜ್ಞಾನಗಂಗಾ ಶಾಲೆಯ 26 ವಿದ್ಯಾರ್ಥಿಗಳಲ್ಲಿ ಕೊರೊನಾ ಸೋಂಕು ದೃಢಪಟ್ಟಿದೆ.

ವಸತಿ ಶಾಲೆಯಲ್ಲಿದ್ದ ಇಬ್ಬರು ವಿದ್ಯಾರ್ಥಿಗಳಲ್ಲಿ ಮಂಗಳವಾರ ಸೋಂಕು ದೃಢಪಟ್ಟಿತ್ತು. ನಂತರ, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಶ್ರೀನಿವಾಸ್ ನೇತೃತ್ವದಲ್ಲಿ ಬುಧವಾರ ಎಲ್ಲಾ ವಿದ್ಯಾರ್ಥಿಗಳನ್ನು ಪರೀಕ್ಷೆ ಒಳಪಡಿಸಲಾಗಿದ್ದು, ಮತ್ತೆ 24 ವಿದ್ಯಾರ್ಥಿಗಳಿಗೆ ಸೋಂಕು ದೃಢಪಟ್ಟಿದೆ. ‘ಎಲ್ಲರಿಗೂ ಸೋಮವಾರಪೇಟೆ ಆಸ್ಪತ್ರೆಯಲ್ಲಿ ಶನಿವಾರ ಚಿಕಿತ್ಸೆ ನೀಡಿ ಹೋಂ ಕ್ವಾರಂಟೈನ್‌ಗೆ ಒಳಪಡಿಸಲಾಗುವುದು’ ಎಂದು ಆರೋಗ್ಯಾಧಿಕಾರಿ ತಿಳಿಸಿದರು.

ರಾಜ್ಯ ಕೋವಿಡ್ ಅಂಕಿ–ಅಂಶ

30,03,969 ▲ ಒಟ್ಟು ಸೋಂಕಿತರು (30,03,564 ನಿನ್ನೆಯ ವಿವರ)

7,251 ▲ ಸಕ್ರಿಯ ಪ್ರಕರಣಗಳು

29,58,384 ▲ ಗುಣಮುಖರಾದವರು

38,305 ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	405	▲
ಗುಣಮುಖ	267	▼
ಸಾವು	04	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಸೆನ್ಸೆಕ್ಸ್: ಗಳಿಕೆಯ ಓಟಕ್ಕೆ ವಿರಾಮ

ಮುಂಬೈ (ಪಿಟಿಐ): ಮೂರು ದಿನಗಳ ಗಳಿಕೆಯ ಓಟಕ್ಕೆ ವಿರಾಮ ನೀಡಿದ ಸೆನ್ಸೆಕ್ಸ್, ಶುಕ್ರವಾರದ ವಹಿವಾಟಿನಲ್ಲಿ 190 ಅಂಶಗಳ ಇಳಿಕೆ ದಾಖಲಿಸಿತು. ಬ್ಯಾಂಕಿಂಗ್, ಹಣಕಾಸು ಮತ್ತು ಇಂಧನ ವಲಯದ ಷೇರುಗಳ ಮಾರಾಟ ಹಾಗೂ ಐ.ಟಿ. ವಲಯದ ಷೇರುಗಳ ಖರೀದಿ ಜೋರಾಗಿತ್ತು.

ವಿದೇಶಿ ಹೂಡಿಕೆದಾರರು ಬಂಡವಾಳ ಹಿಂತೆಗೆದುಕೊಳ್ಳುತ್ತಿರುವುದು ಮುಂದುವರಿದಿದೆ ಎಂದು ವರ್ತಕರು ತಿಳಿಸಿದ್ದಾರೆ. ದಿನದ ಅಂತ್ಯಕ್ಕೆ ಸೆನ್ಸೆಕ್ಸ್ 57,124 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 68 ಅಂಶ ಇಳಿಕೆ ಕಂಡು, 17,003ರಲ್ಲಿ ವಹಿವಾಟು ಕೊನೆಗೊಳಿಸಿತು.

‘ಒಮೈಕ್ರಾನ್ ಪ್ರಕರಣಗಳ ಹೆಚ್ಚಳ ಹಾಗೂ ಹಣದುಬ್ಬರ ಹೆಚ್ಚಳದ ಕಾರಣ ಷೇರು ಮಾರುಕಟ್ಟೆಗಳಲ್ಲಿ ಅಸ್ಥಿರತೆ ಜಾಸ್ತಿ ಇದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

ವಾರದ ವಹಿವಾಟಿನ ಅವಧಿಯಲ್ಲಿ ಸೆನ್ಸೆಕ್ಸ್ 112 ಅಂಶ ಏರಿಕೆ ಕಂಡಿದೆ. ನಿಫ್ಟಿ 18 ಅಂಶ ಏರಿಕೆಯಾಗಿದೆ. ‘ಬಂಡವಾಳ ಮಾರುಕಟ್ಟೆಗಳು ಕೋವಿಡ್ ಪರಿಸ್ಥಿತಿಯ ಮೇಲೆ ಕಣ್ಣಿಟ್ಟಿವೆ. ಒಳ್ಳೆಯ ಸುದ್ದಿ ಬಂದರೆ ಸೂಚ್ಯಂಕಗಳ ಏರುಮುಖ ಚಲನೆ ಶುರುವಾಗುತ್ತದೆ. ಅಂತಹ ಸುದ್ದಿ ಬಾರದೆ ಇದ್ದರೆ ಮಾರುಕಟ್ಟೆಯಲ್ಲಿ ಅಸ್ಥಿರತೆ ಮುಂದುವರಿಯಲಿದೆ’ ಎಂದು ರೆಲಿಗೇರ್ ಬ್ರೋಕಿಂಗ್‌ನ ಸಂಶೋಧನಾ ವಿಭಾಗದ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

‘ವರ್ತಕರು ಐ.ಟಿ., ಆಯ್ದ ಎಫ್‌ಎಂಸಿಜಿ ಕಂಪನಿಗಳು, ಫಾರ್ಮಾ ಕಂಪನಿಗಳ ಮೇಲೆ ಗಮನ ಇರಿಸಬೇಕು. ಬ್ಯಾಂಕಿಂಗ್ ವಲಯದ ಷೇರುಗಳ ಮಂದಗತಿಯ ವಹಿವಾಟು ಮುಂದುವರಿಯಬಹುದು’ ಎಂದು ಅವರು ಹೇಳಿದ್ದಾರೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು 23 ಪೈಸೆ ಹೆಚ್ಚಳವಾಗಿದೆ.

ಢಾಕಾ: ಲಾಂಚ್‌ನಲ್ಲಿ ಬೆಂಕಿ– 40 ಮಂದಿ ಸಾವು

ಢಾಕಾ: ದಕ್ಷಿಣ ಬಾಂಗ್ಲಾದೇಶದ ಸುಗಂಧ ನದಿಯಲ್ಲಿ ಸುಮಾರು 800 ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ಮೂರು ಅಂತಸ್ತಿನ ಲಾಂಚ್‌ನಲ್ಲಿ ಶುಕ್ರವಾರ ನಸುಕಿನಲ್ಲಿ ಬೆಂಕಿ ಹೊತ್ತಿಕೊಂಡ ಪರಿಣಾಮ ಕನಿಷ್ಠ 40 ಮಂದಿ ಸಾವನ್ನಪ್ಪಿದ್ದು, 150ಕ್ಕೂ ಹೆಚ್ಚು ಜನರು ಗಾಯ ಗೊಂಡಿದ್ದಾರೆ.

‘ನಸುಕಿನ 3 ಗಂಟೆ ಸುಮಾರಿಗೆ ‘ಬರ್ಗುನಾ–ಬೌಂಡ್ ಎಂವಿ ಅಭಿಜನ್–10’ ಹೆಸರಿನ ಲಾಂಚ್‌ನ ಎಂಜಿನ್ ರೂಂನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಲಾಂಚ್ ಢಾಕಾದಿಂದ ಪ್ರಯಾಣ ಆರಂಭಿಸಿತ್ತು. ಅಗ್ನಿ ದುರಂತದಲ್ಲಿ ಸಾವಿಗೀಡಾದ 9 ಜನರ ಮೃತದೇಹ ಪತ್ತೆಯಾಗಿದೆ. 72ಕ್ಕೂ ಹೆಚ್ಚಿನ ಪ್ರಯಾಣಿಕರಿಗೆ ಸುಟ್ಟಗಾಯಗಳಾಗಿದ್ದು, ಬರಿಸಾಲ್ ವೈದ್ಯಕೀಯ ಕಾಲೇಜು–ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ದುರಂತದಲ್ಲಿ ಹಲವರು ನಾಪತ್ತೆಯಾಗಿದ್ದಾರೆ’ ಎಂದು ಪೊಲೀಸರು ಮತ್ತು ಅಗ್ನಿಶಾಮಕದಳದ ಸಿಬ್ಬಂದಿ ಮಾಹಿತಿ ನೀಡಿದ್ದಾರೆ.

ಮುಂಬೈ ಧಾರಣೆ

ಶೇಂಗಾ

24-12-2021

ಜಾವಾ 70/80(ಹೊಸ)	10400-10450
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1280 (1290)
ಒಂದು ವಾರದ ಡೆಲಿವರಿ	1275 (1285)
ಸೋಯಾ ಕಚ್ಚಾ	1135 (1125)
ಪಾಮ್ ವಾರದ ಡೆಲಿವರಿ	1133 (1125)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
48,150 (48,200)
ಬೆಳ್ಳಿ ಕೆ.ಜಿ
61,800 (61,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀಮತಿ ವಿ. ಪಾರ್ವತಮ್ಮ
ಲೇಟ್ ವರದಯ್ಯನವರ ಧರ್ಮಪತ್ನಿ
ಇವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಉತ್ತರ ಕ್ರಿಯಾದಿ, ಭೂಶಾಂತಿ ಕಾರ್ಯವನ್ನು ಶ್ರೀ ವಿ. ಮಧುಸೂದನ್ ಮತ್ತು ಶ್ರೀಮತಿ ಎಂ. ಪುಷ್ಪಾರಾಣಿ ರವರು ದಿನಾಂಕ 25-12-2021 ನೇ ಶನಿವಾರ ಬೆಳಿಗ್ಗೆ 11.00 ಗಂಟೆಗೆ ರಾಮನಗರ ಜಿಲ್ಲೆ, ಬಿಡದಿ ಹೋಬಳಿ, ಅಂಜೇಪುರ ಗ್ರಾಮದಲ್ಲಿ ಏರ್ಪಡಿಸಿರುತ್ತಾರೆ. ತಾವುಗಳು ಸಕಾಲಕ್ಕೆ ಆಗಮಿಸಿ ಮಾತೃಶ್ರೀಯವರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು: ಡಾ. ವಿ. ಗೀತಾಂಜಲಿ ಮತ್ತು ಶ್ರೀ ಸಿ. ಶ್ರೀಧರ್, ಶ್ರೀಮತಿ ವಿ. ಪದ್ಮಾವತಿ ಮತ್ತು ಶ್ರೀ ನಂಜುಡಯ್ಯ ಮೊಮ್ಮಕ್ಕಳು ಹಾಗೂ ಬಂಧು ಮಿತ್ರರು
Ph: 9620598510, 9986095629

10ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಆರ್. ನಾಗರತ್ನ
(ಶ್ರೀ ರಾಮೇಗೌಡರ ಧರ್ಮಪತ್ನಿ)
ಮಾಜಿ ಉಪಮಹಾಪೌರರು
ನಿಮ್ಮ ನೆನಪು ನಮ್ಮ ಮನದಲ್ಲಿ ಅಮರ ನೀವು ನಮ್ಮ ಜೀವನದಲ್ಲಿ ದಾರಿದೀಪವಾಗಿದ್ದು ಸದಾ ನಿಮ್ಮ ನೆನಪಿನಲ್ಲಿ ಇರುವ
ಇಂತಿ ಪತಿ: ಶ್ರೀ ರಾಮೇಗೌಡ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಆರ್ ಬಾಲಕೃಷ್ಣ ಸಹೋದರರು, ಸಹೋದರಿಯರು ಹಾಗೂ ಕುಟುಂಬ ವರ್ಗದವರು.

ಪುಣ್ಯಸ್ಮರಣೆ



ಶ್ರೀ ಕೆ.ಎನ್. ಕರಿಗಿರಯ್ಯನವರು
ನಿವೃತ್ತ ಶಾಲಾ ಮುಖ್ಯೋಪಾಧ್ಯಾಯರು
(ನಿಧನ 25–12–1999)
ನೀವು ನಮ್ಮನ್ನಗಲಿ ಇಪ್ಪತ್ತೆರಡು ವರ್ಷ ಕಳೆದರೂ ನಿಮ್ಮ ಆದರ್ಶಗಳು ನಮಗೆ ಎಂದೆಂದೂ ದಾರಿದೀಪ
ಭಾವಪೂರ್ಣ ನಮನಗಳೊಂದಿಗೆ, ಪತ್ನಿ ಶ್ರೀಮತಿ ವೈ.ಕೆ. ನಾಗಮ್ಮ ಕರಿಗಿರಯ್ಯ ಮತ್ತು ಕುಟುಂಬದವರು
ಭಕ್ತಿ ನಮನಗಳು: ಶ್ರೀ ಕೆ. ಜೈಪ್ರಕಾಶ್, ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ

ವೈಕುಂಠ ಸಮಾರಾಧನೆ

ಜಿ.ಕೃಷ್ಣರೆಡ್ಡಿ {GKR}
ಇವರು ದಿನಾಂಕ 14.12.2021ರಂದು ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿನಾಂಕ 26.12.2021 ನೇ ಭಾನುವಾರ ಮಧ್ಯಾಹ್ನ 12:00 ಗಂಟೆಗೆ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ, ಮೃತರ ಆತ್ಮಕ್ಕೆ ಚಿರಶಾಂತಿಕೋರಬೇಕಾಗಿ ವಿನಂತಿ
ಇಂತಿ ದುಃಖತಪ್ತರು
ಶ್ರೀಮತಿ ಶಾರದಮ್ಮ ಮತ್ತು ಮಕ್ಕಳು, ಕುಟುಂಬ ವರ್ಗದವರು ಹಾಗು ಬಂಧು –ಮಿತ್ರರು, ಮುನ್ನೇಕೋಳಾಲ.

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರ್ಮ್ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಬೆಂಗಳೂರಿನಲ್ಲಿರುವ ಕ್ಯಾಟರಿಂಗ್ ಗೆ ಸೌತ್ ಇಂಡಿಯಾ ಕುಕ್ (ಅನುಭವವುಳ್ಳವರು), ಕೌಂಟರ್ ಸರ್ವಿಸ್ ಬಾಯ್ ಬೇಕಾಗಿದ್ದಾರೆ ಸಂಪರ್ಕಿಸಿ: 9632297098/ 9731452193.

General

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800/- 68,000/- 8884666597, 8884666594.

ಬೇಕಾಗಿದ್ದಾರೆ : ಟಾಟಾ ಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್ ಕಂಪನಿಗಳಿಗೆ SSLC, PUC,Degree ಡಿಪ್ಲೋಮಾದವರು 18,000-62,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ 8197650569, 7204396011

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ. ತರಬೇತಿಗಾಗಿ: ಬೆಂಗಳೂರು. 8792252077, ಶಿವಮೊಗ್ಗ. 9008013895

ಕಟ್ಟಡ ಸಾಮಗ್ರಿ ಟೆಸ್ಟ್ ಲ್ಯಾಬ್ ನಲ್ಲಿ ಹೆಲ್ಪರ್ ಕೆಲಸಕ್ಕೆ ಐಟಿಐ ಅಥವಾ ಪಿಯುಸಿ ಪಾಸ್/ಫೇಲ್, ಹುಡುಗರು ತಕ್ಷಣ ಬೇಕಾಗಿದ್ದಾರೆ. ತರಬೇತಿ ಅವಧಿಯಲ್ಲಿ 10,000 ಮಾಸಿಕ ವೇತನ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ: 9844137668.

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600-62000/-(ಆನ್‌ಲೈನ್ ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

WANTED. C&F, CSA, SS, DELAR, ASM/SOFOR ARKAFOODS (BASMATIRICE) ENTAIR SOUTH. CONTACT. 8328062756/ 9014323115. MAIL: foodsarka27@gmail.comWEBSITE: www.arkafoods.com

ಭವಿಷ್ಯ

Astrology

★||ಶ್ರೀಅನ್ನಪೂರ್ಣೇಶ್ವರಿದೇವಿ ಆರಾಧನೆಯಿಂದ||★ ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಸಾಲಬಾದೆ,ಮಾಟಮಂತ್ರ ಯಾವುದೇ ಸಮಸ್ಯೆಗಳಿಗೆ ಕೇವಲ 30.ನಿಮಿಷದಲ್ಲಿ ಪರಿಹಾರ. ಬ್ರಹ್ಮಾನಂದ ಗುರೂಜಿ. 8050061378

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

ವಶೀಕರಣ ಸ್ಪೆಶಲಿಸ್ಟ್ ಕೊಳ್ಳೆಗಾಲದ ಪ್ರಖ್ಯಾತ ದೈವಾಂಶ ಮೋಡಿ ಮಾಂತ್ರಿಕರು ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಸಕಲ ಸಮಸ್ಯೆಗಳಿಗೆ ಪರಿಹಾರ ಅಸಾಧ್ಯವಾದುದ್ದು ಇಲ್ಲಿ ಸಾಧ್ಯ 9535883556

ಶ್ರೀಗಣಪತಿ ಜ್ಯೋತಿಷ್ಯಾಲಯ: 3100ಗೆ ಸ್ತ್ರೀವಶೀಕರಣ, ಪುರುಷ ವಶೀಕರಣ ಕೇರಳ ಕೊಳ್ಳೇಗಾಲ ಮಾಂತ್ರಿಕರು ದಯಾನಂದ ದೀಕ್ಷಿತರು ಫೋನಿನ ಮೂಲಕ ಪರಿಹಾರ. Ph:9900981165

ಪ್ರವಾಸ

Travel

29/1/2022 ರಿಂದ 17 ದಿನಗಳ ಅಷ್ಟಜ್ಯೋತಿರ್ಲಿಂಗ ಸಮೇತ ಅಹಮದಾಬಾದ್, ದ್ವಾರಕಾ, ಪಟೇಲ್ ಪ್ರತಿಮೆ, ಶಿರಡಿ. ಶಿವರಾತ್ರಿ ಪ್ರಯುಕ್ತ 17/2/2022 ರಿಂದ 22 ದಿನಗಳ ಪುರಿ, ಕೋಲ್ಕತ್ತಾ, ನೇಪಾಳ, ಹರಿದ್ವಾರ್, ಕಾಶಿ, ದೆಹಲಿ ಇತ್ಯಾದಿ ವಿವರಗಳಿಗೆ ಏಷ್ಯನ್ ಟ್ರಾವೆಲ್ ಲೈನ್ಸ್(S) ಆರ್.ವಿ.ರಸ್ತೆ #164/3, ಮಿನರ್ವ ಬಸ್‌ಸ್ಟಾಪ್ ಎದುರು, ಬೆಂಗಳೂರು4, 08026565085. 9480182865, 8105657052

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High-end Luxury Flats in Mysore, Zoo Road, near Mysore Mall, Rera-003588, www.govianu.com. 8103990990

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ

ಮಾನ್ಯ ಓದುಗರು ಮತ್ತು ಜಾಹೀರಾತುದಾರರಿಗೆ ಕ್ರಿಸ್‌ಮಸ್ ಹಬ್ಬದ ಹಾರ್ದಿಕ ಶುಭಾಷಯಗಳು
9.30 ರಿಂದ ಸಾಯಂಕಾಲ 4 ಗಂಟೆಯವರೆಗೆ ಕ್ಲಾಸಿಫೈಡ್ಸ್ ಬುಕ್ಕಿಂಗ್ ತೆರೆದಿರುತ್ತದೆ.
ಕ್ಲಾಸಿಫೈಡ್ಸ್ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿರಿ:
Ph: 45557160 / 162 / 163 / 164

ಯಲಹಂಕ ರೈತರ ಸಂತೆ ಬಳಿಯ ಕೆಳಸೇತುವೆಯಲ್ಲಿ ವಾಹನಗಳು ಅಡ್ಡಾದಿಡ್ಡಿಯಾಗಿ ಸಂಚರಿಸುತ್ತಿರುವುದು (ಎಡಚಿತ್ರ) ಯಲಹಂಕ ರೈತರ ಸಂತೆ ಬಳಿ ಬಸ್ ತಂಗುದಾಣವಿಲ್ಲದೆ ಪ್ರಯಾಣಿಕರ ಪಡಿಪಾಟಲು –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ರೈತರ ಸಂತೆ ಬಳಿ ವಾಹನಗಳ ಅಡ್ಡಾದಿಡ್ಡಿ ಸಂಚಾರ • ಕಿರಿದಾದ ಕೆಳಸೇತುವೆಯಲ್ಲಿ ದಟ್ಟಣೆ

ಸವಾರರಿಗೆ ಸವಾಲಾಗಿದೆ 'ಸಂತೆ ವೃತ್ತ'

• ಮನೋಹರ್ ಎಂ.

ಬೆಂಗಳೂರು: ಯಲಹಂಕ ಬಳಿಯ ರಾಷ್ಟ್ರೀಯ ಹೆದ್ದಾರಿ ಕೆಳಸೇತುವೆ ಮೂಲಕ ರೈತರ ಸಂತೆ ವೃತ್ತ ದಾಟುವ ವಾಹನ ಸವಾರರಿಗೆ ಪ್ರತಿದಿನ ಹೆಣಗಾಟ ತಪ್ಪಿದ್ದಲ್ಲ. ವಾಹನಗಳು ಹೆಚ್ಚಿನ ಪ್ರಮಾಣದಲ್ಲಿ ರಸ್ತೆಗಿಳಿಯುವ ಅವಧಿಯಲ್ಲಿ ಇಲ್ಲಿ ದಟ್ಟಣೆ ಉಂಟಾಗುತ್ತಿದೆ. ವಾಹನಗಳು ನಾಲ್ಕು ಕಡೆಗಳಿಂದಲೂ ಅಡ್ಡಾದಿಡ್ಡಿಯಾಗಿ ನುಗ್ಗುವುದರಿಂದ ಈ ವೃತ್ತ ದಾಟಿ ಸಾಗಲು ಗಂಟೆಗಟ್ಟಲೆ ಸಮಯ ತಗಲುತ್ತದೆ.

ಕೋಗಿಲು ವೃತ್ತ, ಬೆಂಗಳೂರು, ಜಕ್ಕೂರು, ಯಲಹಂಕ ಹಳೆಯ ಟೌನ್, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ವೆಂಕಟಾಲ ಸೇರಿದಂತೆ ವಿವಿಧ ಸ್ಥಳಗಳಿಗೆ ಸಂಪರ್ಕ ಕಲ್ಪಿಸುವ ಕೊಂಡಿ ಈ ಕೆಳ ಸೇತುವೆ.

ಕೆಲಸಕ್ಕೆ ಸ್ವಂತ ವಾಹನದಲ್ಲಿ ಹೋಗುವವರು, ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ಯಲಹಂಕದ ಸಂತೆಗೆ ತರಕಾರಿ–ಸೊಪ್ಪು ಹೊತ್ತು ತರುವ ಹಾಗೂ ಖರೀದಿದಾರರ ವಾಹನಗಳು ಒಂದೇ ಸಮಯಕ್ಕೆ ಇಲ್ಲಿ ಸಂಧಿಸುತ್ತವೆ. ಇದರಿಂದ ಕಿರಿದಾದ ಕೆಳಸೇತುವೆಯಲ್ಲಿ ಉಂಟಾಗುವ ದಟ್ಟಣೆ ನಿಯಂತ್ರಿಸಲು ಇಲ್ಲಿನ ಸಂಚಾರ ಪೊಲೀಸರೂ ಹೈರಾಣಾಗುತ್ತಾರೆ.

'ವಾಹನಗಳ ನಿಯಂತ್ರಣಕ್ಕಾಗಿ ಈ ವೃತ್ತದಲ್ಲಿ ಸಮರ್ಪಕವಾದ ಸಂಚಾರ ಸಿಗ್ನಲ್ ಇಲ್ಲ. ಇರುವ ಸಣ್ಣ ಸಿಗ್ನಲ್‌ಗಳು ಆಗಾಗ ಕೆಟ್ಟುಹೋಗುತ್ತಿವೆ. ಇದರಿಂದ ವಾಹನಗಳು ಅಡ್ಡಾದಿಡ್ಡಿಯಾಗಿ ಸಂಚರಿಸಿ ದಟ್ಟಣೆ ಎದುರಾಗುತ್ತದೆ. ಯಲಹಂಕದಲ್ಲಿ ಪ್ರತಿದಿನ ನಡೆಯುವ 'ರೈತರ ಸಂತೆ'ಗೆ ನಗರದ ಹೊರಭಾಗಗಳಿಂದ ಬರುವ ಭಾರಿ ವಾಹನಗಳಿಂದ ಜಕ್ಕೂರು ಮುಖ್ಯರಸ್ತೆಯಲ್ಲಿ ಮುಂಜಾನೆಯಿಂದ ಬೆಳಿಗ್ಗೆ 10ರವರೆಗೆ ದಟ್ಟಣೆ ಅಧಿಕವಾಗಿರುತ್ತದೆ. ಭಾನುವಾರವಂತೂ ಇಲ್ಲಿನ ಎಲ್ಲ ರಸ್ತೆಗಳಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುವುದು ಸಾಮಾನ್ಯ' ಎಂದು ದೂರುತ್ತಾ ಯಲಹಂಕ ನಿವಾಸಿ ಸೋಮಶೇಖರ್.

'ದೊಡ್ಡ ಟ್ರಕ್, ಲಾರಿ ಅಥವಾ ಬಸ್ ಕೆಳಸೇತುವೆ ದಾಟುವ ಸಮಯದಲ್ಲಿ ವಾಹನ ಸಂಚಾರ ಕೆಲಕಾಲ ಸ್ಥಗಿತವಾಗುತ್ತದೆ. ಕೆಲವು ಬಾರಿ ಕೋಗಿಲು ವೃತ್ತದಿಂದ ರೈತರ ಸಂತೆ ವೃತ್ತದವರೆಗೂ ವಾಹನಗಳ ಸಾಲನ್ನು ನೋಡಬಹುದು. ಅರ್ಧಗಂಟೆ ನಿಂತರೂ ದಟ್ಟಣೆ ತಗ್ಗುವುದಿಲ್ಲ. ಇತ್ತ ಬೆಂಗಳೂರು ಕಡೆಯಿಂದ ವೇಗವಾಗಿ ಬರುವ ವಾಹನಗಳು ಸೇತುವೆ ಕೆಳಗೆ ನಿಯಂತ್ರಣ ತಪ್ಪಿ ಅಪಘಾತಕ್ಕೀಡಾದ ಉದಾಹರಣೆಗಳೂ ಇವೆ' ಎಂದರು.

'ಚಿಕ್ಕಬಳ್ಳಾಪುರದಿಂದ ಯಲಹಂಕಕ್ಕೆ ಪ್ರತಿ ದಿನ ಬಸ್‌ನಲ್ಲಿ ಬರುತ್ತೇನೆ. ಕೋಗಿಲು ವೃತ್ತದಿಂದ ಸಂತೆ ವೃತ್ತದವರೆಗೆ ಬಸ್ ಹೋಗುವಷ್ಟರಲ್ಲಿ ಅರ್ಧಗಂಟೆಯಾಗುತ್ತದೆ. ಹಾಗಾಗಿ, ಮಾರ್ಗ ಮಧ್ಯೆ ಇಳಿದುಕೊಂಡು ನಡೆದೇ ಹೋಗುತ್ತೇನೆ. ಇಲ್ಲಿನ ದಟ್ಟಣೆಯಿಂದಾಗಿ ಕಾಲೇಜಿಗೆ ಸಕಾಲದಲ್ಲಿ ತಲುಪಲು ಸಾಧ್ಯವಾಗುತ್ತಿಲ್ಲ' ಎಂದು ವಿದ್ಯಾರ್ಥಿ ಹರೀಶ್ ಬೇಸರ ವ್ಯಕ್ತಪಡಿಸಿದರು.

'ಕೆಳಸೇತುವೆ ಮಾರ್ಗ ಕಿರಿದಾಗಿದ್ದು, ವಾಹನಗಳು ಎಲ್ಲೆಂದರಲ್ಲಿ ನುಗ್ಗುತ್ತವೆ. ಯಲಹಂಕಕ್ಕೆ ತೆರಳುವವರೂ ಇದೇ ಕೆಳಸೇತುವೆ ಮೂಲಕ ಸಾಗಬೇಕು. ಅಲ್ಲಿನ ಪಾದಚಾರಿ ಮಾರ್ಗಗಳಲ್ಲಿ ದನ ಕರುಗಳು ಮಲಗಿರುತ್ತವೆ. ಕೆಲವೊಮ್ಮೆ ಧುತ್ತೆಂದು ವಾಹನಗಳ ಎದುರು ಬರುತ್ತವೆ. ಇದರಿಂದ ಸಂಚಾರಕ್ಕೂ ಸಮಸ್ಯೆಯಾಗುತ್ತಿದೆ' ಎಂದು ಅಳಲು ತೋಡಿಕೊಂಡರು.

ವಿಭಜಕ ಅಳವಡಿಸಿ: 'ಸೇತುವೆ ಕೆಳಗಿನ ಮಾರ್ಗದಲ್ಲಿ ರಸ್ತೆ ವಿಭಜಕ ಇಲ್ಲದ ಕಾರಣ ಕೆಲವೊಮ್ಮೆ ರಸ್ತೆಯಲ್ಲಿ ಸಾಗುವ ವಾಹನಗಳೆಲ್ಲವೂ ಏಕಮುಖವಾಗಿ ಸಂಚರಿಸಿ ದಟ್ಟಣೆ ಉಂಟು ಮಾಡುತ್ತವೆ. ಈ ಸಮಸ್ಯೆ ತಪ್ಪಿಸಲು ರಸ್ತೆ ವಿಭಜಕ ಅಳವಡಿಸಬೇಕಿದೆ. ಇದರಿಂದ ವಾಹನಗಳು ಎರಡೂ ಬದಿ ಸಂಚರಿಸಲು ಅನುಕೂಲವಾಗಲಿದೆ' ಎಂದು ಅವರು ಖಾಸಗಿ ಕಂಪನಿ ಉದ್ಯೋಗಿ ನಿರಂಜನ್ ಸಲಹೆ ನೀಡಿದರು.

ತಂಗುದಾಣ ನಿರ್ಮಾಣಕ್ಕೆ ಒತ್ತಾಯ

'ದೇವನಹಳ್ಳಿ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಹಾಗೂ ಆಂಧ್ರಪ್ರದೇಶದ ಬರುವ ಬಸ್‌ಗಳು ಇದೇ ಮಾರ್ಗದಲ್ಲಿ ಸಂಚರಿಸುತ್ತವೆ. ಯಲಹಂಕಕ್ಕೆ ಪ್ರತಿನಿತ್ಯ ಬಂದು ಹೋಗುವ ಪ್ರಯಾಣಿಕರ ಸಂಖ್ಯೆಯೂ ಹೆಚ್ಚು. ಆದರೆ, ಪ್ರಯಾಣಿಕರ ಆಶ್ರಯಕ್ಕೆ ಎರಡೂ ಬದಿ ಸೂಕ್ತ ಬಸ್ ತಂಗುದಾಣಗಳಿಲ್ಲ. ಸುಡು ಬಿಸಿಲು, ಮಳೆಯಲ್ಲೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ರಸ್ತೆಯಲ್ಲೇ ನಿಂತು ಬಸ್‌ಗಾಗಿ ಕಾದಿರುತ್ತಾರೆ. ಎರಡೂ ರಸ್ತೆಯಲ್ಲಿ ಬಸ್ ತಂಗುದಾಣ ನಿರ್ಮಿಸುವಷ್ಟು ಜಾಗ ಇದೆ. ಸ್ಥಳೀಯ ಜನಪ್ರತಿನಿಧಿಗಳು ಇಲ್ಲಿ ತಂಗುದಾಣಗಳನ್ನು ನಿರ್ಮಿಸಿದರೆ, ಪ್ರಯಾಣಿಕರಿಗೆ ಅನುಕೂಲವಾಗಲಿದೆ' ಎಂದು ಹುಣಸಮಾರನಹಳ್ಳಿಯ ರಾಘವೇಂದ್ರ ಮನವಿ ಮಾಡಿದರು.

ರೈತರ ಸಂತೆಗೆ ಬರುವ ಭಾರಿ ವಾಹನಗಳು ರಸ್ತೆಯಲ್ಲೇ ಹೆಚ್ಚು ಸಮಯ ನಿಲ್ಲುತ್ತವೆ. ಇದರಿಂದ ದಟ್ಟಣೆ ಹೆಚ್ಚು. ವಾಹನಗಳ ನಿಲುಗಡೆಗೆ ಪ್ರತ್ಯೇಕ ಸ್ಥಳ ನಿಗದಿ ಮಾಡಬೇಕು.

ಪವನ್, ಯಲಹಂಕ ನಿವಾಸಿ

ಯಲಹಂಕ ಕೆಳಸೇತುವೆ ಬಳಿ ಶೀಘ್ರವಾಗಿ ಸಂಚಾರ ಸಿಗ್ನಲ್ ಅಳವಡಿಸಿದರೆ, ದಟ್ಟಣೆ ತಗ್ಗಲಿದೆ. ವಾಹನಗಳ ವೇಗ ಚಾಲನೆಯೂ ತಡೆ ನೀಡಬಹುದು.

ಚಿರಂತ್, ವಿದ್ಯಾರ್ಥಿ

ಪ್ರಯಾಣ ಪ್ರಯಾಸ

'ಅವಿವಾಹಿತ ಮಠಾಧೀಶರಿಗೇಕೆ ಮೊಟ್ಟೆ ವಿಷಯ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಲಾ ಮಕ್ಕಳಿಗೆ ಕೋಳಿ ಮೊಟ್ಟೆ ವಿತರಿಸಬಾರದು ಎಂದು ಹೆಂಡತಿ–ಮಕ್ಕಳಿಲ್ಲದ ಮಠಾಧೀಶರು ಹೇಳುತ್ತಿದ್ದಾರೆ. ಈ ಬಗ್ಗೆ ಮಾತನಾಡಲು ಅವರು ಯಾರು' ಎಂದು ಸಾಹಿತಿ ಕುಂ. ವೀರಭದ್ರಪ್ಪ ಪ್ರಶ್ನಿಸಿದರು.

ರಂಗ ವಿಜಯಾ, ರಂಗಮಂಚ ಕಾಗೋಡು ಮತ್ತು ಮಲೆನಾಡು ವಿಜ್ಞಾನ– ಜಾನಪದ ಜ್ಞಾನ ಪರಂಪರೆ ಸಂಶೋಧನಾ ಕೇಂದ್ರದಿಂದ ಆಯೋಜಿಸಿದ್ದ ರಂಗಜೀವಿ ಪ್ರಸಾದಿ ಮತ್ತು ರಂಗಕರ್ಮಿ ಚಂದ್ರು ಅವರ 50ರ ಸಂಭ್ರಮ ಕಾರ್ಯಕ್ರಮದಲ್ಲಿ ವಿಶ್ವೇಶ್ವರಯ್ಯ ಎಂ.ಜಿ. ಗುಣಿ ಮತ್ತು ಅಮರನಾಥ ಅವರ ಪುಸ್ತಕಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಶಾಲಾ ಮಕ್ಕಳಿಗೆ ಮೊಟ್ಟೆ ಕೊಡಬೇಡಿ ಎಂದು ಯಾವುದೋ ಸ್ವಾಮೀಜಿ ಹೇಳುತ್ತಾರೆ. ಶಾಲಾ ಮಕ್ಕಳು ಮೊಟ್ಟೆ ಬೇಕೇ ಬೇಕು ಎನ್ನುತ್ತಾರೆ. ಸರ್ಕಾರ ನಡೆಸುವುದು ಮಠಾಧೀಶರೋ, ಚುನಾಯಿತ ಜನಪ್ರತಿನಿಧಿಗಳೊ ಎಂಬುದೇ ಅರ್ಥವಾಗುತ್ತಿಲ್ಲ. ಈ ಅವಿವಾಹಿತ ಮಠಾಧೀಶರಿಗೆ ಈ ವಿಷಯ ಏಕೆ ಬೇಕು' ಎಂದು ಕೇಳಿದರು.

'ಆಳುವ ಸರ್ಕಾರಗಳು ನಮ್ಮ ಭಾಷೆ, ಬದುಕು, ಆಹಾರ ಪದ್ಧತಿ ಸೇರಿ ಎಲ್ಲವನ್ನೂ ನಿಯಂತ್ರಿಸುತ್ತಿವೆ. ಪ್ರಾದೇಶಿಕ ಭಾಷೆ ಮತ್ತು ಅವುಗಳ ಆಶೋತ್ತರಗಳನ್ನು ಮೂಲೆಗುಂಪು ಮಾಡುತ್ತಿವೆ. ಇದನ್ನು ರಂಗಕರ್ಮಿಗಳು, ಬರಹಗಾರರು ಪ್ರತಿಭಟಿಸಲೇಬೇಕು' ಎಂದು ತಿಳಿಸಿದರು.

'ಸ್ವತಂತ್ರ ವ್ಯಕ್ತಿತ್ವ ಹೊಂದಬೇಕಿದ್ದ ಮೈಸೂರಿನ ರಂಗಾಯಣದ ಸಂಸ್ಥೆ ಚಕ್ರವರ್ತಿ ಸೂಲಿಬೆಲೆ ಮತ್ತು ಬಿಜೆಪಿ ವಕ್ತಾರರಾದ ಮಾಳವಿಕ ಅವಿನಾಶ್ ಅವರನ್ನು ಕಾರ್ಯಕ್ರಮಕ್ಕೆ ಅಥಿತಿಯಾಗಿ ಆಹ್ವಾನಿಸುವ ಮೂಲಕ ಘನತೆ ಕಳೆದುಕೊಳ್ಳುತ್ತಿದೆ' ಎಂದು ಹೇಳಿದರು.

ಯೋಗಗುರು ದಾಸಪ್ಪ ಕೇಶವ, ನಾಟಕಕಾರ ರಾಜೇಂದ್ರ ಕಾರಂತ, ರಂಗ ಸಂಘಟಕ ಎಚ್.ವಿ.ವಾಸು, ರಂಗಭೂಮಿ ನಟ ಧನಂಜಯ, ಗಾಯಕ ಬೆನಕ ಶ್ರೀನಾಥ್, ರಂಗ ವಿನ್ಯಾಸಕ ಕೃಷ್ಣ ರಾಯಚೂರು, ಜನಪದರು ಸಂಸ್ಥೆಯ ಅಧ್ಯಕ್ಷ ಪಾಪಣ್ಣ, ಸುರೇಶ್ ಜನಪದ, ರಂಗಭೂಮಿ ಕಲಾವಿದ ಸಿದ್ದೇಶ್, ಗಾಯಕ ರಮೇಶ್, ಯುವ ಸಂಘಟಕ ಹನುಮಂತರಾಜು, ಕಲಾವಿದ ಜಿ.ಕೆ.ಶಿವಣ್ಣ, ಚಿತ್ರಕಲಾ ಶಿಕ್ಷಕ ಬಿ.ಜಯರಾಂ ಅವರಿಗೆ ರಂಗಜೀವಿ ಮತ್ತು ರಂಗಕರ್ಮಿ ಪುರಸ್ಕಾರ ನೀಡಲಾಯಿತು.

ಅಹಮದಾಬಾದ್: ಲೆಕ್ಕಪತ್ರ ಇಲ್ಲದ ₹ 160 ಕೋಟಿ ನಗದು ವಶ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಸುಗಂಧದ್ರವ್ಯ ತಯಾರಿಕೆ ಉದ್ದಿಮೆದಾರ ಪೀಯೂಷ್ ಜೈನ್ ಎಂಬುವವರಿಗೆ ಸೇರಿದ, ಕಾನ್ಪುರದಲ್ಲಿರುವ ನಿವಾಸದ ಮೇಲೆ ತೆರಿಗೆ ಅಧಿಕಾರಿಗಳು ನಡೆಸಿದ ದಾಳಿಯಲ್ಲಿ ₹160 ಕೋಟಿ ನಗದು ವಶಪಡಿಸಿಕೊಳ್ಳಲಾಗಿದೆ.

ಕೇಂದ್ರೀಯ ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್ (ಸಿಬಿಐಸಿ), ಸರಕು ಮತ್ತು ಸೇವಾ ತೆರಿಗೆ ಗುಪ್ತಚರ ನಿರ್ದೇಶನಾಲಯದ (ಡಿಜಿಜಿಐ) ಅಹಮದಾಬಾದ್ ವಲಯ ಕಚೇರಿ ಅಧಿಕಾರಿಗಳು ಶುಕ್ರವಾರ ಈ ಮಾಹಿತಿ ನೀಡಿದ್ದಾರೆ.

ಸಿಬಿಐಸಿ ಇತಿಹಾಸದಲ್ಲಿಯೇ ಜಪ್ತಿ ಮಾಡಿರುವ ಲೆಕ್ಕಪತ್ರ ಇಲ್ಲದ ಭಾರಿ ಮೊತ್ತದ ನಗದು ಇದಾಗಿದೆ ಎಂದು ಹೇಳಲಾಗಿದೆ. ಜೈನ್ ಒಡೆತನದ 'ಒಡೋಕೆಮ್ ಇಂಡಸ್ಟ್ರೀಜ್' ಕನೌಜ್‌ನಲ್ಲಿದೆ.

'ಕಾಗದಗಳಿಂದ ಸುತ್ತಿದ್ದ ಹಣವನ್ನು ಪೆಟ್ಟಿಗೆಗಳಲ್ಲಿ ತುಂಬಲಾಗಿತ್ತು. ಈ ಪೆಟ್ಟಿಗೆಗಳನ್ನು 6–7 ಕಪಾಟುಗಳಲ್ಲಿ ಇಟ್ಟಿರುವುದನ್ನು ಸಿಬ್ಬಂದಿ ಪತ್ತೆ ಹಚ್ಚಿದರು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE

www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಹರಟೆಕಟ್ಟೆ

ಪ್ರಜಾವಾಣಿ ಕನ್ನಡ ಧ್ವನಿ

ವಿಷಯ: ಹೆಣ್ಣುಮಕ್ಕಳ ವಿವಾಹ ವಯಸ್ಸು 21ಕ್ಕೆ

ಭಾಗವಹಿಸುವವರು:

ವಿಜಯ ಅಮೃತರಾಜ್, ವಕೀಲರು, ಸಾಹಿತಿ ಕೊಪ್ಪಳ

ರೂಪಾ ಗಣೇಶ್, ಆಪ್ತ ಸಮಾಲೋಚಕಿ, ಶಿಕ್ಷಣ ತಜ್ಞೆ ಬೆಂಗಳೂರು

ಪ್ರಸಾರ ಮಧ್ಯಾಹ್ನ 3 ಗಂಟೆಗೆ

ಪಾಡ್‌ಕಾಸ್ಟ್: ಬೆಳಿಗ್ಗೆ 7 **ವಚನವಾಣಿ,** ಬೆಳಿಗ್ಗೆ 7.30 **ದಿನದ ಸೂಕ್ತಿ** , ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್,** ಬೆಳಿಗ್ಗೆ 9 **ಪ್ರಚಲಿತ,** ಬೆಳಿಗ್ಗೆ 9.30 **ಸಂಪಾದಕೀಯ**

ನಗರದಲ್ಲಿ ಇಂದು

ಸುಸ್ವರಲಯ ಪ್ರೌಢ ಸಂಗೀತ ಕಲಾಶಾಲೆಯ ವಾರ್ಷಿಕೋತ್ಸವ: ವಿವಿಧ ಸಂಗೀತ ಕಾರ್ಯಕ್ರಮಗಳ ಪ್ರಸ್ತುತಿ, ಸ್ಥಳ–ರಾಮಲಲಿತ ಕಲಾ ಮಂದಿರ, ಬನಶಂಕರಿ 2ನೇ ಹಂತ, ಬೆಳಿಗ್ಗೆ 9.30ರಿಂದ ರಾತ್ರಿ 8.54ರವರೆಗೆ

ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದ ಅಂಗವಾಗಿ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರ: ಆಯೋಜನೆ–ಬಿಜೆಪಿ ಸ್ಲಂ ಮೋರ್ಚಾ, ಸ್ಥಳ–ಗಣಪತಿ ದೇವಸ್ಥಾನದ ಮುಂಭಾಗ, ಕಣಿಯರ ಕಾಲೊನಿ, ಚಾಮರಾಜಪೇಟೆ, ಬೆಳಿಗ್ಗೆ 10ರಿಂದ ಮಧ್ಯಾಹ್ನ 2

ಅಟಲ್ ಬಿಹಾರಿ ವಾಜಪೇಯಿ ಅವರ ಗೌರವಾರ್ಥ 'ಉತ್ತಮ ಆಡಳಿತ ದಿನ': ಉದ್ಘಾಟನೆ–ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ, ಸ್ಥಳ–ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10.30

ಕಲಾನಾದಂ–2021: ವಿವಿಧ ಸಂಗೀತ ಮತ್ತು ನೃತ್ಯ ಸಂಸ್ಥೆಗಳ ಮಕ್ಕಳಿಂದ ಕಲಾ ಪ್ರದರ್ಶನ, ಅತಿಥಿ–ನಜೀನ್ ಬಾನು, ಆಯೋಜನೆ–ಸಂಸ್ಕೃತಿ ಸಚಿವಾಲಯ, ಸ್ಥಳ–ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ಅರಮನೆ ರಸ್ತೆ, ಸಂಜೆ 4ರಿಂದ

ಲಕ್ಷ್ಮಣ್ ಕಬಾಡಿ ಅವರ 'ದಿ ಜಾಯ್' ಚಿತ್ರಕಲಾ ಪ್ರದರ್ಶನ: ಅತಿಥಿಗಳು–ಎಂ.ಜಿ. ದೊಡ್ಡಮನಿ, ಪರಮೇಶ್ ಜೋಳದ, ಹರೀಶ್ ಕುಮಾರ್ ಸೆಜೆಕನ್, ಸ್ಥಳ–ಪ್ರೋಶ್ ವೇವ್ಸ್ ಆರ್ಟ್ ಗ್ಯಾಲರಿ, ರಾಜಾಜಿನಗರ, ಸಂಜೆ 4.30 (ಡಿ.31ರವರೆಗೆ ಪ್ರದರ್ಶನ ಇರಲಿದೆ)

ಅಟಲ್ ಬಿಹಾರಿ ವಾಜಪೇಯಿ ಸ್ಮಾರಕ ಉಪನ್ಯಾಸ: ವಿಷಯ–ಭಾರತೀಯ ರಾಜಕೀಯ @75, ಮಾತನಾಡುವವರು–ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್, ಸುರೇಶ್ ಪ್ರಭು, ಆಯೋಜನೆ–ಇಂಡಿಯಾ ಪ್ರತಿಷ್ಠಾನ, ಸ್ಥಳ–ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನ ಸಭಾಂಗಣ, ಬಸವನಗುಡಿ, ಸಂಜೆ 5.30

ರಸಸಂಜೆ: ವಿ. ಬಿಯಾಂಕ ರಾಧಾಕೃಷ್ಣ, ಜೆ.ಮಾನಸ ಗೌರಿ, ವಿ.ಯಾಜ್ಞಿಕಾ ಅಯ್ಯಂಗಾರ್, ಯು.ಕೆ.ಲಲಿತಾ ಅವರಿಂದ ಭರತನಾಟ್ಯ ಪ್ರದರ್ಶನ, ಅತಿಥಿ–ಲಲಿತಾ ಶ್ರೀನಿವಾಸನ್, ಆಯೋಜನೆ–ವೆಂಕಟೇಶ ನೃತ್ಯ ಮಂದಿರ, ಸ್ಥಳ–ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 6

ಉತ್ತರ್ ದಕ್ಷಿಣ್–ಪ್ರವೀಣ್ ಗೋಡ್ಖಿಂಡಿ ಮತ್ತು ಅನುಪಮಾ ಭಾಗವತ್ ಅವರ ಜುಗಲ್‌ಬಂದಿ, ಎಂ.ಎಸ್.ಶೀಲಾ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ: ಆಯೋಜನೆ–ವಿವಿಡ್ ಆರ್ಟ್ಸ್ ಆ್ಯಂಡ್ ಎಂಟರ್‌ಟೈನ್‌ಮೆಂಟ್ ಮತ್ತು ರಸ್ಟಿಕ್ ಸೋಲ್, ಸ್ಥಳ–ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 6

ಪ್ರವೀಣ್ ಗೋಡ್ಖಿಂಡಿ

ಅಯ್ಯಪ್ಪಸ್ವಾಮಿ ಪೂಜಾ ಮಹೋತ್ಸವ: ವಿಶೇಷ ಪೂಜೆ ಮತ್ತು ಮಹಾಮಂಗಳಾರತಿ, ಸಾನ್ನಿಧ್ಯ–ಸಿದ್ದಲಿಂಗ ಸ್ವಾಮೀಜಿ, ಸಂಗೀತ ಕಾರ್ಯಕ್ರಮ–ಶಶಿಧರ ಕೋಟೆ ಮತ್ತು ತಂಡ, ಆಯೋಜನೆ–ಅಯ್ಯಪ್ಪಸ್ವಾಮಿ ಭಕ್ತ ಮಂಡಲಿ, ಸ್ಥಳ–ಮುಕ್ಕಡಶೆಟ್ಟಿ ರಾಮಣ್ಣಗಲ್ಲಿ, ಬಳೇಪೇಟೆ, ಸಂಜೆ 6.30

100 ಮಂದಿ ಸಾಂತಾಕ್ಲಾಸ್ ವೇಷಧಾರಿಗಳಿಂದ ಯೋಧರಿಗಾಗಿ ಬೈಕ್ ಯಾತ್ರೆ: ಚಾಲನೆ–ಶಾಸಕಿ ಸೌಮ್ಯಾರೆಡ್ಡಿ, ಆಯೋಜನೆ–ಶಿ ಫಾರ್ ಸೊಸೈಟಿ, ಸ್ಥಳ–ದಿ ಚಾನ್ಸರಿ ಪೆವಿಲಿಯನ್, ರೆಸಿಡೆನ್ಸಿ ರಸ್ತೆ, ಬೆಳಿಗ್ಗೆ 6.30

'ಮುಕ್ಕಾಂ ಪೋಸ್ಟ್ ಬೊಂಬಿಲವಾಡಿ' ನಾಟಕ ಪ್ರದರ್ಶನ: ಪ್ರಸ್ತುತಿ–ಸಮಷ್ಟಿ ತಂಡ, ಸ್ಥಳ–ರಂಗಶಂಕರ, ಮಧ್ಯಾಹ್ನ 3.30 ಮತ್ತು ಸಂಜೆ 7.30ಕ್ಕೆ

ಭರತನಾಟ್ಯ ರಂಗಪ್ರವೇಶ: ಈಶಾನಿ ಮೋಹಪಾತ್ರ, ಅತಿಥಿಗಳು–ಪದ್ಮಿನಿ ರವಿ, ಜಾಹ್ನವಿ ಫಾಲ್ಕೆ, ಗ್ರೂಪ್ ಕ್ಯಾಪ್ಟನ್ ವರದಪ್ರಸಾದ್ ಸಬೂತ್, ಆಯೋಜನೆ–ಕ್ಲಾಸಿಕಲ್ ರಿದಮ್ಸ್, ಸ್ಥಳ–ಕೃಷ್ಣದೇವರಾಯ ಕಲಾ ಮಂದಿರ, ತೆಲುಗು ವಿಜ್ಞಾನ ಸಮಿತಿ, ವೈಯಾಲಿಕಾವಲ್, ಸಂಜೆ 5

ಈಶಾನಿ ಮೋಹಪಾತ್ರ

ಶನಿವಾರ ● ಡಿಸೆಂಬರ್ 25, 2021 ಪ್ರಜಾವಾಣಿ

ಉತ್ತರ ಕರ್ನಾಟಕ ಚರ್ಚೆ: ಕಾಲಾವಕಾಶ ನೀಡದ ಬಗ್ಗೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿ

ಧರಣಿಯಲ್ಲೇ ಕೊನೆಗೊಂಡ ವಿಧಾನಸಭೆ ಕಲಾಪ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಮಾತನಾಡಲು ಹೆಚ್ಚಿನ ಸಮಯ ನೀಡಲಿಲ್ಲ ಎಂದು ಆಕ್ರೋಶಗೊಂಡ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಸದಸ್ಯರ ಧರಣಿಯ ಮಧ್ಯೆ ವಿಧಾನಸಭೆಯ ಚಳಿಗಾಲದ ಅಧಿವೇಶನಕ್ಕೆ ಶುಕ್ರವಾರ ತೆರೆ ಬಿದ್ದಿತು.

ಸುಮಾರು ಒಂದು ತಾಸು ಮಾತನಾಡಿದ ಸಿದ್ದರಾಮಯ್ಯ, 'ಉತ್ತರ ಕರ್ನಾಟಕ ಭಾಗದ ಇನ್ನೂ ಅನೇಕ ಸಮಸ್ಯೆಗಳು ಮತ್ತು ನೀರಾವರಿ ಯೋಜನೆಗಳ ಬಗ್ಗೆ ಮಾತನಾಡಬೇಕಿದ್ದು, ಇನ್ನೂ ಒಂದು ಗಂಟೆ ಮಾತನಾಡಲು ಅವಕಾಶ ನೀಡಬೇಕು' ಎಂದು ಪಟ್ಟು ಹಿಡಿದರು. ಆದರೆ, ಮಾತು ಮುಂದುವರಿಸಲು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವಕಾಶ ನೀಡಲಿಲ್ಲ. ಇದರಿಂದ ಸಿಟ್ಟಿಗೆದ್ದ ಸಿದ್ದರಾಮಯ್ಯ ತಾವೇ ನೇರವಾಗಿ ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ಕೂಡಿದರು. ಕಾಂಗ್ರೆಸ್‌ನ ಇತರ ಸದಸ್ಯರು ಅವರ ಜತೆಗೂಡಿದರು.

ಈ ಹಂತದಲ್ಲಿ ಉತ್ತರ ನೀಡಲು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಮುಂದಾದಾಗ ಅವರಿಗೆ ಘೋಷಣೆಗಳ ಮೂಲಕ ತಿರುಗೇಟು ನೀಡಿದರು. 'ಬೇಕೇ ಬೇಕು ಚರ್ಚೆ ಬೇಕು'. 'ಧಿಕ್ಕಾರ ಧಿಕ್ಕಾರ ಬಿಜೆಪಿ ಸರ್ಕಾರಕ್ಕೆ ಧಿಕ್ಕಾರ'. 'ಉತ್ತರ ಕರ್ನಾಟಕ ವಿರೋಧಿ ಸರ್ಕಾರಕ್ಕೆ ಧಿಕ್ಕಾರ' ಎಂದು ಘೋಷಣೆ ಕೂಗಿದರು.

> ಆಲಮಟ್ಟಿ ಅಣೆಕಟ್ಟೆ ಎತ್ತರವನ್ನು 527 ಮೀಟರ್‌ಗೆ ಹೆಚ್ಚಿಸಬೇಕು. ಬಾಗಲಕೋಟೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ನೀಡಬೇಕು
>
> **ವೀರಣ್ಣ ಚರಂತಿಮಠ**, ಬಿಜೆಪಿ ಶಾಸಕ

ಸಿದ್ದರಾಮಯ್ಯ ಅವರಿಗೆ ತಿರುಗೇಟು ನೀಡಿದ ಕಾರಜೋಳ, 'ಸರ್ಕಾರದ ಉತ್ತರ ಕೇಳದೇ ಪಲಾಯನ ಮಾಡುತ್ತಿದ್ದೀರಿ. ಈ ಭಾಗಕ್ಕೆ ಅನ್ಯಾಯ ಆಗಿದ್ದರೆ ಅದು ಕಾಂಗ್ರೆಸ್‌ನಿಂದಲೇ. ಕೃಷ್ಣಾ ಮೇಲ್ದಂಡೆಗೆ ವರ್ಷಕ್ಕೆ ₹50 ಸಾವಿರ ಕೋಟಿ ಕೊಡ್ತೀನಿ ಎಂದು ಕೇವಲ ₹7,728 ಕೋಟಿ ಕೊಟ್ಟಿದ್ದೀರಿ. ನಿಮಗೆ ನಾಚಿಕೆ ಆಗಬೇಕು. ಇದರ ಬಗ್ಗೆ ಮಾತನಾಡಲು ನಿಮಗೆ ನೈತಿಕ ಅಧಿಕಾರ ಇಲ್ಲ' ಎಂದರು.

'ಬರೀ ಸುಳ್ಳು, ಬರೀ ಸುಳ್ಳು... ಕೈಗೊಂಬೆ ಕೈಗೊಂಬೆ ಆರ್‌ಎಸ್‌ಎಸ್ ಕೈಗೊಂಬೆ' ಎಂದು ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಡಾ.ರಂಗನಾಥ್, ಯತೀಂದ್ರ ಸಿದ್ದರಾಮಯ್ಯ ಮುಂತಾದವರು ಘೋಷಣೆಗಳನ್ನು ಮುಂದುವರಿಸಿದರು. ಈ ಗದ್ದಲದ ಮಧ್ಯೆ ಸಚಿವರು ಉತ್ತರ ಪೂರ್ಣಗೊಳಿಸಿದರು.

ಅಷ್ಟಕ್ಕೇ ಸುಮ್ಮನಾಗದ ಸಿದ್ದರಾಮಯ್ಯ, 'ಎರಡೂವರೆ ವರ್ಷಗಳ ಬಳಿಕ ಬೆಳಗಾವಿ ಅಧಿವೇಶನ ನಡೆದಿದೆ. ಉತ್ತರಕರ್ನಾಟಕದ ಬಗ್ಗೆ ಮಾತನಾಡಲು ಹೆಚ್ಚಿನ ಕಾಲಾವಕಾಶ ನೀಡಬೇಕು. ಭೋಜನ ವಿರಾಮದ ನಂತರ ಕಲಾಪ ಮುಂದುವರಿಸಬೇಕು' ಎಂದು ಆಗ್ರಹಿಸಿದರು. ಆದರೆ, ಅದಕ್ಕೆ ಅವಕಾಶ ನೀಡದ ಸಭಾಧ್ಯಕ್ಷರು ಕಲಾಪವನ್ನು ಅನಿರ್ದಿಷ್ಟಾವಧಿ ಮುಂದೂಡಿದರು.

ಬೆಳಿಗ್ಗೆ ಚರ್ಚೆ ಆರಂಭಿಸಿದಾಗ ಆಡಳಿತ ಸದಸ್ಯರು ತಮಗೆ ಮಾತನಾಡಲು ಅವಕಾಶ ನೀಡಲಿಲ್ಲ. ವಿರೋಧ ಪಕ್ಷದವರಿಗೆ ಹೆಚ್ಚಿನ ಅವಕಾಶ ನೀಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿ, ಕೆಲವು ಸದಸ್ಯರು ಸಭಾಧ್ಯಕ್ಷರ ಪೀಠದ ಬಳಿ ಬಂದರು. ಅವರನ್ನು ಸಮಾಧಾನಪಡಿಸಿ 'ಒಂದಿಬ್ಬರಿಗೆ ಅವಕಾಶ ನೀಡುತ್ತೇನೆ ನಿಮ್ಮ ಸ್ಥಳಗಳಿಗೆ ಹಿಂದಕ್ಕೆ ಹೋಗಿ' ಎಂದು ಮನವಿ ಮಾಡಿದರು.

ಸಿದ್ದರಾಮಯ್ಯ ಅವರಿಗೆ ಮಾತನಾಡಲು ಅವಕಾಶ ನೀಡುತ್ತಿಲ್ಲ ಎಂದು ಆರೋಪಿಸಿದ ಕಾಂಗ್ರೆಸ್ ಸದಸ್ಯರು ಶುಕ್ರವಾರ ಒಂದೇ ದಿನ ಮೂರು ಬಾರಿ ಧರಣಿ ನಡೆಸಿದರು.

ವಿರೋಧ ಪಕ್ಷದವರಿಗೆ ಪರಿಹಾರ ಬೇಕಿಲ್ಲ: ಮುಖ್ಯಮಂತ್ರಿ ಬೊಮ್ಮಾಯಿ



ಬಸವರಾಜ ಬೊಮ್ಮಾಯಿ

ಉತ್ತರ ಕರ್ನಾಟಕದ ಸಮಸ್ಯೆಗಳನ್ನು ಪರಿಹರಿಸುವುದು ವಿರೋಧ ಪಕ್ಷದವರಿಗೆ ಬೇಕಿಲ್ಲ. ಸಮಸ್ಯೆಗಳನ್ನು ಬಿಂಬಿಸುವುದಷ್ಟೇ ಅವರ ಆದ್ಯತೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಿಡಿಕಾರಿದರು.

ವಿಧಾನಸಭೆ ಕಲಾಪ ಮುಗಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸದನದ ಚರ್ಚೆಯನ್ನು ಆಲಿಸಿ ಸರ್ಕಾರದ ಪರವಾಗಿ ಸುದೀರ್ಘ ಉತ್ತರ ನೀಡಲು ಸಚಿವ ಗೋವಿಂದ ಕಾರಜೋಳ ಸಿದ್ಧರಾಗಿದ್ದರು. ಆದರೆ, ಕಾಂಗ್ರೆಸ್ಸಿಗರು ಧರಣಿ ನಡೆಸುವ ಮೂಲಕ, ನಮ್ಮ ಸರ್ಕಾರ ಈ ಭಾಗಕ್ಕೆ ಏನು ಮಾಡುತ್ತಾ ಇದೆ, ಮಾಡಲಿದೆ ಎಂಬುದನ್ನು ತಿಳಿಸುವ ಅವಕಾಶವನ್ನೇ ಕೊಡಲಿಲ್ಲ. ಕಾಂಗ್ರೆಸ್‌ನವರಿಗೆ ನಿಜವಾಗಿಯೂ ಈ ಭಾಗದ ಮೇಲೆ ಪ್ರೀತಿ ಇದ್ದರೆ ಸರ್ಕಾರದ ಉತ್ತರ ಪಡೆದು, ಅಭಿವೃದ್ಧಿಯ ಸಿಂಚನ, ಸಮಸ್ಯೆಗೆ ಪರಿಹಾರ ಏನು ಎಂಬುದನ್ನು ಜನರಿಗೆ ತಿಳಿಸಬೇಕಿತ್ತು. ಅವರ ಆರೋಪಗಳು ಏನೇ ಇರಲಿ. ಉತ್ತರ ಕರ್ನಾಟಕದ ಅಭಿವೃದ್ಧಿಗೆ ನಾವು ಬದ್ಧ-ವಾಗಿದ್ದೇವೆ' ಎಂದು ಪ್ರತಿಪಾದಿಸಿದರು.

'ಈ ಅಧಿವೇಶನದಲ್ಲಿ ಕರ್ನಾಟಕದ ನೆಲ, ಜಲ, ಜನ, ಭಾಷೆ, ಸಂಸ್ಕೃತಿಯನ್ನು ಕಾಪಾಡಲು ಸರ್ಕಾರ ಬದ್ಧವಾಗಿದೆ ಎಂಬುದನ್ನು ಸಾರಿದ್ದೇವೆ. ಎರಡೂ ಸದನಗಳಲ್ಲಿ ಈ ಕುರಿತ ಸರ್ವಾನುಮತದ ನಿರ್ಣಯವನ್ನು ಕೈಗೊಳ್ಳುವ ಮೂಲಕ ಗಡಿ ತಕರಾರು ತೆಗೆಯುವವರಿಗೆ ತಕ್ಕ ಉತ್ತರವನ್ನು ಕೊಟ್ಟಿದ್ದೇವೆ. ಪುಂಡಾಟಿಕೆ ನಡೆಸುವವರಿಗೆ ತಕ್ಕ ಶಿಕ್ಷೆ ಕೊಡಿಸುವ ಎಚ್ಚರಿಕೆಯನ್ನೂ ನೀಡಿದ್ದೇವೆ' ಎಂದು ಹೇಳಿದರು.

ನೀರಾವರಿಗೆ ಕೊಟ್ಟಿದ್ದು ₹52 ಸಾವಿರ ಕೋಟಿ: ಸಿದ್ದರಾಮಯ್ಯ

ಸಿದ್ದರಾಮಯ್ಯ

'ನಾವು ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಕೃಷ್ಣಾ ಮತ್ತು ಕಾವೇರಿ ಕೊಳ್ಳದ ಯೋಜನೆಗಳಿಗೆ ವರ್ಷಕ್ಕೆ ₹10 ಸಾವಿರ ಕೋಟಿಯಂತೆ ಐದು ವರ್ಷಗಳಲ್ಲಿ ಒಟ್ಟು ₹51,217 ಕೋಟಿ ನೀಡಿದ್ದೇವೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

'ನೀವು ತಪ್ಪು ಮಾಹಿತಿ ನೀಡಿದ್ದೀರಿ' ಎಂದು ಅವರು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರನ್ನು ತರಾಟೆಗೆ ತೆಗೆದುಕೊಂಡರು.

'ನಿಮ್ಮ ಅವಧಿಯಲ್ಲಿ (2008-13)ಎಲ್ಲ ನೀರಾವರಿ ಯೋಜನೆಗಳಿಗೆ ಸೇರಿ ಒಟ್ಟು ಕೊಟ್ಟ ಹಣ ₹33,835 ಕೋಟಿ. ಅದರಲ್ಲಿ ಕೃಷ್ಣಾ ಮೇಲ್ದಂಡೆಗೆ ಕೊಟ್ಟಿದ್ದು ₹7,132 ಕೋಟಿ ಮಾತ್ರ' ಎಂದು ಸಿದ್ದರಾಮಯ್ಯ ಎದಿರೇಟು ಕೊಟ್ಟರು.

ಕಳೆದ ಚುನಾವಣೆಯ ಸಂದರ್ಭದಲ್ಲಿ ಎಲ್ಲಾ ನೀರಾವರಿ ಯೋಜನೆಗಳು ಮತ್ತು ಕುಡಿಯುವ ನೀರು ಯೋಜನೆಗಳಿಗೆ ₹1.50 ಲಕ್ಷ ಕೋಟಿ ಹಣ ಕೊಡ್ತೀರಿ ಎಂದು ಘೋಷಿಸಿದ್ದೀರಿ. ಅಲ್ಲದೆ, ಯಡಿಯೂರಪ್ಪ ಅವರು ವಿಶ್ವಾಸ ಮತ ಕೇಳುವ ಸಂದರ್ಭದಲ್ಲಿ ಅದೇ ಮಾತು ಹೇಳಿದ್ದರು. ಕಳೆದ ಎರಡೂವರೆ ವರ್ಷಗಳಲ್ಲಿ ಖರ್ಚು ಮಾಡಿದ್ದು ಎಷ್ಟು? ₹17,734 ಕೋಟಿ ಖರ್ಚು ಮಾಡಿದ್ದೀರಿ ಎಂದು ಕುಟುಕಿದರು.

'ನಮ್ಮ ಸರ್ಕಾರ ಇದ್ದಾಗ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ 30 ಸಾವಿರ ಹುದ್ದೆಗಳನ್ನು ಭರ್ತಿ ಮಾಡಿದ್ದೆವು. ನಿಮ್ಮ ಸರ್ಕಾರ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಿದೆ ಎಂಬುದರ ಲೆಕ್ಕ ಕೊಡಿ? ನೀವು ಬಂದ ಮೇಲೆ ಒಂದೇ ಒಂದು ಹುದ್ದೆ ಭರ್ತಿ ಮಾಡಿದ್ದೀರಾ' ಎಂದೂ ಸಿದ್ದರಾಮಯ್ಯ ಪ್ರಶ್ನಿಸಿದರು.

ಪೂರಕ ಅಂದಾಜಿಗೆ ವಿಧಾನ ಪರಿಷತ್ ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ₹ 3,577 ಕೋಟಿ ಮೊತ್ತದ ಎರಡನೇ ಪೂರಕ ಅಂದಾಜಿನ 'ಕರ್ನಾಟಕ ಧನ ವಿನಿಯೋಗ ಮಸೂದೆ'ಯನ್ನು ವಿಧಾನ ಪರಿಷತ್‌ನಲ್ಲಿ ಧ್ವನಿ ಮತದ ಮೂಲಕ ಶುಕ್ರವಾರ ಅಂಗೀಕರಿಸಲಾಯಿತು.

ಮಸೂದೆ ಮಂಡಿಸಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಪ್ರಸಕ್ತ ಸಾಲಿನಲ್ಲಿ ಗುರಿ ಮೀರಿ ತೆರಿಗೆ ಸಂಗ್ರಹವಾಗುವ ನಿರೀಕ್ಷೆಯಿದೆ. ನವೆಂಬರ್ ಅಂತ್ಯದವರೆಗೆ ಶೇ 67ರಷ್ಟು ತೆರಿಗೆ ಸಂಗ್ರಹವಾಗಿದೆ' ಎಂದರು.

'ಮುಂದಿನ ದಿನಗಳಲ್ಲಿ ರಾಜ್ಯದ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವ ನಿರೀಕ್ಷೆಯಿದೆ. ಆದರೆ, ಕೋವಿಡ್‌ನಿಂದ ಎರಡು ವರ್ಷ ಹದಗೆಟ್ಟಿರುವ ಹಣಕಾಸು ಸ್ಥಿತಿ ಸುಧಾರಣೆಯಾಗಲು ಇನ್ನಷ್ಟು ಸಮಯ ಬೇಕಾಗಿದೆ' ಎಂದರು.

'ನಾನು ಸಮಸ್ಯೆಯ ಭಾಗವಾಗಲು ಇಚ್ಛಿಸುವುದಿಲ್ಲ. ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತೇನೆ. ಅನುತ್ಪಾದಕ ವೆಚ್ಚಗಳಿಗೆ ಕಡಿವಾಣ ಹಾಕಿ ಉಳಿತಾಯಕ್ಕೆ ಆದ್ಯತೆ ನೀಡುತ್ತೇನೆ' ಎಂದು ಅವರು ಭರವಸೆ ನೀಡಿದರು.

ಏಕೀಕರಣದ ನಂತರ ಉತ್ತರ ಕರ್ನಾಟಕ ನಿರ್ಲಕ್ಷ್ಯ: ಶಾಸಕ ನಡಹಳ್ಳಿ ಆರೋಪ

'ನಾನು ವಿಮಾನ ನಿಲ್ದಾಣ ಕೇಳುತ್ತಿಲ್ಲ. ಹೆದ್ದಾರಿಗಳನ್ನೂ ಕೇಳುತ್ತಿಲ್ಲ. ಅನ್ನಕ್ಕಾಗಿ ಬೆಂಗಳೂರಿಗೆ ವಲಸೆ ಬಂದು ಕಸ ತೆಗೆಯುವ, ಪಾಯಿಖಾನೆ ತೊಳೆಯುವ, ಗಾರೆ ಕೆಲಸ ಮಾಡುವ ನಮ್ಮ ಭಾಗದ ಪರಿಶಿಷ್ಟಜಾತಿ ಮತ್ತು ವರ್ಗದ ತುಳಿತಕ್ಕೆ ಜನರ ಬಗ್ಗೆ ಮಾತನಾಡಬೇಕಾಗಿದೆ' ಎಂದು ಬಿಜೆಪಿಯ ಎ.ಎಸ್.ಪಾಟೀಲ ನಡಹಳ್ಳಿ ಹೇಳಿದರು.

ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ಗಮನ ಸೆಳೆದ ಅವರು, 'ಏಕೀಕರಣದ ಬಳಿಕ ಅಭಿವೃದ್ಧಿಯಲ್ಲಿ ತಾರತಮ್ಯ ಆಗಿದೆ. ನನಗೆ ಪರಿಹಾರ ಬೇಕೇ ಹೊರತು ಸರ್ಕಾರದ ಉತ್ತರ ಬೇಕಿಲ್ಲ' ಎಂದರು.

'ಡಾ.ಡಿ.ಎಂ.ನಂಜುಂಡಪ್ಪ ವರದಿ ಅನ್ವಯವೂ ನಮ್ಮ ಭಾಗಕ್ಕೆ ಅನ್ಯಾಯವಾಗಿದೆ. ಕೇಂದ್ರ ಸರ್ಕಾರ ಮಹಾರಾಷ್ಟ್ರದ ವಿದರ್ಭ ಪ್ರದೇಶಕ್ಕೆ ಪ್ಯಾಕೇಜ್ ನೀಡಿದ ಮಾದರಿಯಲ್ಲೇ ಉತ್ತರ ಕರ್ನಾಟಕ ಭಾಗಕ್ಕೂ ಪ್ಯಾಕೇಜ್ ನೀಡಬೇಕು. ಉತ್ತರ ಕರ್ನಾಟಕ ಅಭಿವೃದ್ಧಿಗೆ ಪ್ರತ್ಯೇಕ ಮಂಡಳಿಯೊಂದನ್ನು ರಚಿಸಬೇಕು' ಎಂದು ಒತ್ತಾಯಿಸಿದರು.

ಅಲ್ಲದೆ, ನಂಜುಂಡಪ್ಪ ವರದಿ ಅನ್ವಯ ಉದ್ಯೋಗದಲ್ಲಿ ಈ ಭಾಗದವರಿಗೆ ಶೇ 50 ರಷ್ಟು ಮೀಸಲಾತಿ ನೀಡಬೇಕು. ರಾಜಕೀಯ ಮೀಸಲಾತಿಯೂ ಶೇ 50 ರಷ್ಟು ನೀಡಬೇಕು ಎಂದು ನಡಹಳ್ಳಿ ಆಗ್ರಹಿಸಿದರು.

ಜಾತ್ರಾ ಮಹೋತ್ಸವ

ಧಾರವಾಡ ಕಸಬಾಗೌಡರ ಓಣಿಯ ಪ್ರಸಿದ್ಧ ಹಾಗೂ ಪುರಾತನ ಕಾಲದ ದ್ಯಾಮವ್ವ-ದುರ್ಗವ್ವ ದೇವಸ್ಥಾನದ ಜಾತ್ರಾ ಮಹೋತ್ಸವ ಹಾಗೂ ರಥೋತ್ಸವ ನೂರು ವರ್ಷಗಳ ಬಳಿಕ ಶುಕ್ರವಾರ ನಡೆಯಿತು. ಪೌರಾಣಿಕ ಪಾತ್ರಗಳ ವೇಷಧಾರಿಗಳು ಗಮನಸೆಳೆದರು

ಪ್ರಜಾವಾಣಿ ಚಿತ್ರ: ಬಿ.ಎಂ. ಕೇದಾರನಾಥ

ಕಾಯ್ದೆ ತಿದ್ದುಪಡಿಯಿಂದ ಎಪಿಎಂಸಿಗಳಿಗೆ ನಷ್ಟವಾಗಿಲ್ಲ: ಕೋಟ ಶ್ರೀನಿವಾಸ ಪೂಜಾರಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ರಾಜ್ಯದಲ್ಲಿ 2020ರಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ಎಪಿಎಂಸಿ) ಕಾಯ್ದೆ ತಿದ್ದುಪಡಿ ಜಾರಿಗೊಳಿಸಿದ ಬಳಿಕ ಎಪಿಎಂಸಿಗಳ ವಹಿವಾಟು ಕುಸಿದಿಲ್ಲ ಮತ್ತು ಸೆಸ್ ಸಂಗ್ರಹದಲ್ಲೂ ನಷ್ಟವಾಗಿಲ್ಲ ಎಂದು ವಿಧಾನ ಪರಿಷತ್‌ನ ಸಭಾ ನಾಯಕರೂ ಆಗಿರುವ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಜೆಡಿಎಸ್‌ನ ಗೋವಿಂದರಾಜು ಪ್ರಶ್ನೆಗೆ ಸಹಕಾರ ಸಚಿವರ ಪರವಾಗಿ ಉತ್ತರಿಸಿದ ಅವರು '2017-18ರಲ್ಲಿ ಎಪಿಎಂಸಿಗಳಿಂದ ರಾಜ್ಯ ಸಂಚಿತ ನಿಧಿಗೆ ₹ 77 ಕೋಟಿ, 2019-20ರಲ್ಲಿ 60.81 ಕೋಟಿ ಮತ್ತು 2020ರ ಜುಲೈ ಅಂತ್ಯದವರೆಗೆ ₹ 15.71 ಕೋಟಿ ಸಂಗ್ರಹವಾಗಿತ್ತು' ಎಂದು ಹೇಳಿದರು.

ಆವರ್ತ ನಿಧಿಗೆ 2018-19ರಲ್ಲಿ ₹ 135.61 ಕೋಟಿ, 2019-20ರಲ್ಲಿ ₹ 110 ಕೋಟಿ ಮತ್ತು 2020ರ ಜುಲೈ ಅಂತ್ಯದವರೆಗೆ ₹ 88.35 ಕೋಟಿ ಪಾವತಿಯಾಗಿತ್ತು. ಹೊಸ ಕಾಯ್ದೆ ಜಾರಿಯಾದ ಬಳಿಕ ಸಂಚಿತ ನಿಧಿ ಮತ್ತು ಆವರ್ತ ನಿಧಿಗೆ ಪಾವತಿಯಾ-ಗುತ್ತಿರುವ ಮೊತ್ತದಲ್ಲಿ ಕುಸಿತವಾಗಿಲ್ಲ ಎಂದು ತಿಳಿಸಿದರು.

1,281 ಶುದ್ಧ ಕುಡಿಯುವ ನೀರು ಘಟಕ ಸ್ಥಗಿತ

ರಾಜ್ಯದಲ್ಲಿ 16,781 ಗ್ರಾಮೀಣ ಜನವಸತಿಗಳಲ್ಲಿ 18,440 ಶುದ್ಧ ಕುಡಿಯುವ ನೀರು ಘಟಕಗಳನ್ನು ಅಳವಡಿಸಿದ್ದು, ಅವುಗಳಲ್ಲಿ 1,281 ಸ್ಥಗಿತವಾಗಿವೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಜೆಡಿಎಸ್‌ನ ಮರಿತಿಬ್ಬೇಗೌಡ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಅವರು, 'ಸದ್ಯ 17,159 ಶುದ್ಧ ಕುಡಿಯುವ ನೀರು ಘಟಕಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಸ್ಥಗಿತಗೊಂಡಿರುವ ಘಟಕಗಳ ದುರಸ್ತಿಗೆ ಕ್ರಮ ಕೈಗೊಂಡಿಲ್ಲ. ಘಟಕಗಳ ನಿರ್ವಹಣೆಯಲ್ಲಿ ವಿಫಲವಾಗಿರುವ ಗುತ್ತಿಗೆದಾರರ ಗುತ್ತಿಗೆಗಳನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಮಾಹಿತಿ ನೀಡಿದ್ದಾರೆ.

ಸಚಿವರಿಗೆ ಗದರಿದ ಸಭಾಧ್ಯಕ್ಷ ಕಾಗೇರಿ

ಪ್ರಜಾವಾಣಿ ವಾರ್ತೆ

ಬೆಳಗಾವಿ(ಸುವರ್ಣ ವಿಧಾನಸೌಧ): 'ಏನ್ರೀ ಸುನಿಲ್, ನಿರಾಣಿ ಏನ್ ಮಾಡ್ತಾ ಇದ್ದೀರಿ. ಸದನ ಮತ್ತು ಕಲಾಪವನ್ನು ಸರಿಯಾಗಿ ನಿಭಾಯಿಸುವ ಹೊಣೆಗಾರಿಕೆ ಸಚಿವರಾದ ನಿಮ್ಮದಲ್ಲವೇ. ಏನ್ ಮಾಡ್ತಾ ಇದ್ದೀರಿ' ಎಂದು ವಿಧಾನಸ-ಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಗರಂ ಆಗಿ ಪ್ರಶ್ನಿಸಿದರು.

ಉತ್ತರ ಕರ್ನಾಟಕದ ವಿಷಯದಲ್ಲಿ ಚರ್ಚೆ ಸಂದರ್ಭದಲ್ಲಿ ಸದನದಲ್ಲಿ ಕೋರಂ ಇಲ್ಲದೇ ಇರುವುದನ್ನು ಧರಣಿ-ಯಲ್ಲಿದ್ದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಗಮನಕ್ಕೆ ತಂದರು. 'ಕೋರಂ ಇಲ್ಲದೆ ಸದನ ಹೇಗೆ ನಡೆಸುತ್ತೀರಿ' ಎಂದು ಪ್ರಶ್ನಿಸಿದರು.

ಆಗಷ್ಟೇ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರು ಹೊರಗೆ ಹೋಗಿದ್ದರು. ಇದನ್ನು ಸಿದ್ದರಾಮಯ್ಯ ಆಕ್ಷೇಪಿಸಿದರು. ಆಗ ಆಡಳಿತ ಪಕ್ಷದ ಸದಸ್ಯರೊಬ್ಬರು ಕೈಸನ್ನೆಯ ಮೂಲಕ ಶೌಚಾಲಯಕ್ಕೆ ಹೋಗಿದ್ದು ತಿಳಿಸಿದರು.

ತಲೆ ಎಣಿಸಿದ ಸಭಾಧ್ಯಕ್ಷರು, ಆಡಳಿತಪಕ್ಷದ ಸಚಿವರನ್ನು ತರಾಟೆಗೆ ತೆಗೆದುಕೊಂಡರು. ಧರಣಿಯಲ್ಲಿ-ದ್ದ ಕಾಂಗ್ರೆಸ್ ಸದಸ್ಯರು 'ಕೋರಂ ಕೋರಂ ಕೋರಂ' ಎಂದು ಕೂಗಲು ಆರಂಭಿಸಿದರು.

'ಏಯ್ ಸುನಿಲ್ ಕುಮಾರ್ ಹಿಂದೆ ನೀವು ಮುಖ್ಯಸಚೇತಕರಾಗಿದ್ದವರು. ಸಚೇತಕರಾದ ಸತೀಶ್ ರೆಡ್ಡಿ ಅವರೇ ನೀವೆಲ್ಲರೂ ಮುಂದಾಗಿ ಅವ್ಯವಸ್ಥೆ ಸರಿಪಡಿಸಬೇಕಲ್ವಾ' ಎಂದು ಕಾಗೇರಿ ಹೇಳಿದರು.

'ನಿರಾಣಿಯವರೇ ನೀವು ಸಚಿವರು. ಅಲ್ಲಿಂದಿಲ್ಲಿಗೆ ಓಡಾಡಿದರೆ ಹೇಗೆ? ನೀವು-ನಾವು ಸೇರಿ ಸುಗಮ ಕಲಾಪ ನಡೆಸಬೇಕಲ್ಲವೇ? ಜವಾಬ್ದಾರಿ ಮರೆತರೆ ಹೇಗೆ? ಕಲಾಪ ಸರಿಯಾಗಿ ನಡೆಯುತ್ತಿಲ್ಲ ಎಂದು ಮೊನ್ನೆಯಿಂದಲೂ ಚರ್ಚೆ ನಡೆಸಿ, ತಪ್ಪು ತಿದ್ದಿಕೊಳ್ಳಬೇಕು ಎಂಬ ನಿರ್ಧಾರಕ್ಕೆ ಬರಲಾಗಿದೆ. ಅದು ಪಾಲನೆಯಾಗದೇ ಇದ್ದರೆ ಹೇಗೆ' ಎಂದು ಸಭಾಧ್ಯಕ್ಷರು ಕಟುವಾಗಿಯೇ ಪ್ರಶ್ನಿಸಿದರು.

ನಮ್ಮ ಗರಡಿಗೆ ಸಚಿವ ಸೋಮಣ್ಣ ವಾಪಸ್: ಸಿದ್ದರಾಮಯ್ಯ ವಿಶ್ವಾಸ

ಬೆಳಗಾವಿ: 'ಸೋಮಣ್ಣ ನಮ್ಮ ಗರಡಿಗೆ ಮತ್ತೆ ವಾಪಸ್ ಆಗಲಿದ್ದಾರೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಉತ್ತರ ಕರ್ನಾಟಕ ಸಮಸ್ಯೆ ಕುರಿತು ಒಂದು ಗಂಟೆ ಮಾತನಾಡಿದ ಸಿದ್ದರಾಮಯ್ಯ ಇನ್ನೂ ಎರಡು ಗಂಟೆ ಮಾತನಾಡುವುದಿದೆ ಎಂದರು. ಆಗ ಮಧ್ಯ ಪ್ರವೇಶಿಸಿದ ವಸತಿ ಸಚಿವ ವಿ. ಸೋಮಣ್ಣ, 'ಮಧ್ಯಾಹ್ನ 2ಗಂಟೆಗೆ ಮುಗಿಸುತ್ತೇನೆ ಎಂದು ಇಡೀ ಸದನದ ಮುಂದೆ ನೀವು ಹೇಳಿದ್ದೀರಿ.ಇನ್ನೂ ಸಮಯ ಬೇಕು ಎಂದರೆಹೇಗೆ? ಹಿಂದೆಲ್ಲ ನೀವು ಮಾತನಾಡುತ್ತೀರಾ ಎಂದರೆ ಎಲ್ಲಿದ್ದರೂ ಬಂದು ಭಾಷಣ ಕೇಳುತ್ತಿದ್ದೆವು. ಆಗ ಸಾದಾಸೀದಾ ಇದ್ದ ನೀವು ಈಗ ಬದಲಾಗಿದ್ದೀರಿ. ನಿಮ್ಮ ಭಾಷಣದಲ್ಲಿ ಮೊದಲ ಸ್ವಾರಸ್ಯ ಇಲ್ಲ. ಹೇಳಿದ್ದನ್ನೇ ತಿರುಗಾಮುರುಗಾ ಹೇಳುತ್ತೀರಿ. ಕೃಷ್ಣಾ ಭಾಗ್ಯ ಎಂದು ಎಷ್ಟು ಸಾರಿ ಹೇಳಿದ್ದೀರಿ. ಬೇಗ ಮುಗಿಸಿ ಬಿಡಿ' ಎಂದರು.

ಆಗ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಉತ್ತರ ಕರ್ನಾಟಕ ಭಾಗದ ಶಾಸಕ ನಾನು. ಕೃಷ್ಣಾ ಬಗ್ಗೆ ಮಾತ್ರ ಮಾತನಾಡಿದ್ದೇನೆ. ಇನ್ನೂ ಮಹದಾಯಿ, ಸಿಂಗಟಾಲೂರು ಮಾತ್ರವಲ್ಲದೇ ಈ ಭಾಗ ಹಿಂದುಳಿದಿರುವ ಬಗ್ಗೆ ಮಾತನಾಡಬೇಕಿದೆ. ಮೂರು ಗಂಟೆ ಬೇಕು' ಎಂದರು.

'ಈಗ ಉತ್ತರ ಕರ್ನಾಟಕದ ಭಾಗದ ಶಾಸಕರು ಹೌದು. ಆದರೆ, ಮುಂದೆ ನೀವು ಎಲ್ಲಿ ಹೋಗುತ್ತೀರಿ; ಅದಕ್ಕೆ ಏನು ಸಿದ್ಧತೆ ಮಾಡುತ್ತಿದ್ದೀರಿ. ನಿಮ್ಮ ಮುಂದಿನ ದಾರಿ ಏನು ಎಂಬುದೆಲ್ಲ ನಿಮ್ಮ ಗರಡಿಯಲ್ಲೇ 30 ವರ್ಷ ಪಳಗಿದ ನನಗೆ ಗೊತ್ತಿದೆ. ಅದನ್ನೆಲ್ಲ ಈಗ ಹೇಳುವುದಿಲ್ಲ' ಎಂದು ಸೋಮಣ್ಣ ಹೇಳಿದರು.

ಆಗ ತಿರುಗೇಟು ನೀಡಿದ ಸಿದ್ದರಾಮಯ್ಯ, 'ಏಯ್ ಸೋಮಣ್ಣ, ನೀನು ಮತ್ತೆ ನಮ್ಮ ಗರಡಿಗೆ ವಾಪಸ್ ಆಗ್ತಾ ಇದ್ದೀಯಲ್ಲ. ಆಯ್ತು ಆಯ್ತು ಕುತ್ಕೊ' ಎಂದು ಹೇಳಿ ಸುಮ್ಮನಾದರು.

ರಾಜೀನಾಮೆಗೆ ಮುಂದಾಗಿದ್ದ ಸಭಾಪತಿ ಹೊರಟ್ಟಿ

ಒಂದನೇ ಪುಟದಿಂದ...

ಸುದೀರ್ಘ ಅವಧಿಯಲ್ಲಿ ಪರಿಷತ್ತಿನ ಸದಸ್ಯರಾಗಿ ಕಾರ್ಯನಿರ್ವಹಿಸಿರುವ ಹೊರಟ್ಟಿಯವರಿಗೆ ಇದು ಮುಜುಗರ ತಂದಿತ್ತು. 'ನಾನು ಪ್ರಮಾಣ ಮಾಡಿ ಹೇಳುವೆ, ಇದರಲ್ಲಿ ನನ್ನ ತಪ್ಪಿಲ್ಲ. ವಿಳಂಬವಾಗುತ್ತದೆ ಎಂಬುದನ್ನು ವಿರೋಧ ಪಕ್ಷದ ಗಮನಕ್ಕೆ ತಂದಿರುವುದಾಗಿ ಆಡಳಿತ ಪಕ್ಷದವರು ನನಗೆ ತಿಳಿಸಿದ್ದರು. ಈ ಕಾರಣಕ್ಕೆ ತಡವಾಯಿತು' ಎಂದು ಹೊರಟ್ಟಿ ಸಮಜಾಯಿಷಿ ನೀಡಿದರು. ಅದನ್ನು ವಿರೋಧ ಪಕ್ಷಗಳಾದ ಕಾಂಗ್ರೆಸ್, ಜೆಡಿಎಸ್ ಸದಸ್ಯರು ಒಪ್ಪಿರಲಿಲ್ಲ. ಬಳಿಕ ಕಲಾಪವನ್ನು ಐದು ನಿಮಿಷ ಮುಂದೂಡಿದ್ದ ಸಭಾಪತಿ, ಮುನಿಸಿನಿಂದಲೇ ಹೊರನಡೆದಿದ್ದರು. ಅದಾದ ತರುವಾಯ ಸಭಾಪತಿ ಹುದ್ದೆಗೆ ರಾಜೀನಾಮೆ ಕೊಡುವ ನಿರ್ಧಾರಕ್ಕೆ ಹೊರಟ್ಟಿ ಬಂದಿದ್ದರಲ್ಲದೇ, ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ಅವರಿಗೂ ತಿಳಿಸಿದ್ದರು. ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ ಬಳಿಕ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜೆಡಿಎಸ್, ಕಾಂಗ್ರೆಸ್ ನಾಯಕರು ಮನವೊಲಿಸಿದ ನಂತರವಷ್ಟೇ ರಾಜೀನಾಮೆ ನಿರ್ಧಾರದಿಂದ ಹೊರಟ್ಟಿ ಹಿಂದೆ ಸರಿದರು ಎಂದು ಮೂಲಗಳು ತಿಳಿಸಿವೆ

ಮತಾಂತರ: ಮೇಲ್ಮನೆಯಲ್ಲಿ ಸರ್ಕಾರಕ್ಕೆ ಮುಖಭಂಗ

ಒಂದನೇ ಪುಟದಿಂದ...

ಹೊರಟ್ಟಿ ಅವರ ಕೊಠಡಿಯಲ್ಲೇ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ನಡುವೆ ಭಾರಿ ವಾಕ್ಸಮರ ನಡೆದು, ಕೋಲಾಹಲದ ಸನ್ನಿವೇಶ ನಿರ್ಮಾಣವಾಯಿತು.

ಕಲಾಪ ಮುಂದೂಡಲು ಆಗ್ರಹ: ಕೊಠಡಿಯಲ್ಲಿ ಗದ್ದಲ ಹೆಚ್ಚುತ್ತಿದ್ದಂತೆ ಕೋರಂ ಬೆಲ್ ಹಾಕಿದ ಸಭಾಪತಿ ಬಸವರಾಜ ಹೊರಟ್ಟಿ ಸದನಕ್ಕೆ ಬಂದು ಕಲಾಪ ಆರಂಭಿಸಿದರು. ಮತ್ತಷ್ಟು ವಿಳಂಬ ಮಾಡಲು ಯತ್ನಿಸಿದ ಸಭಾನಾಯಕರು, ನಿವೃತ್ತರಾಗುತ್ತಿರುವ ಸದಸ್ಯರಿಗೆ ಅಭಿನಂದನೆ ಹೇಳಲು ಅವಕಾಶ ಕೋರಿದರು. ಕಾಂಗ್ರೆಸ್ ಸದಸ್ಯರು ವಿರೋಧ ವ್ಯಕ್ತಪಡಿಸಿದರು.

'ಬಿಜೆಪಿಯ ಕೆಲವರಿಗಾಗಿ ಕಲಾಪ ವಿಳಂಬ ಮಾಡಿ ಸದನದ ಸದಸ್ಯರನ್ನು ಅವಮಾನಿಸಲಾಗಿದೆ. ಇದು ಸರಿಯಲ್ಲ. ಊರಿನತ್ತ ಹೊರಟಿದ್ದ ನಮ್ಮ ಸದಸ್ಯರೂ ವಾಪಸ್ ಬರುತ್ತಿದ್ದಾರೆ. ಶನಿವಾರದವರೆ-ಗೆ ಕಲಾಪ ಮುಂದೂಡಬೇಕು. ಶನಿವಾರ ಮತಾಂತರ ನಿಷೇಧ ಮಸೂದೆ ಮಂಡಿಸಬೇಕು' ಎಂದು ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, ಸಿ.ಎಂ. ಇಬ್ರಾಹಿಂ, ಎಂ. ನಾರಾಯಣಸ್ವಾಮಿ ಮತ್ತಿತರರು ಆಗ್ರಹಿಸಿದರು.

ಜೆಡಿಎಸ್‌ನ ಮರಿತಿಬ್ಬೇಗೌಡ ಮಾತನಾಡಿ, 'ಸದನದಲ್ಲಿರುವ ನಾವು ಯಾರೊಬ್ಬರೂ ಶಾಶ್ವತವಲ್ಲ. ಆದರೆ, ಸಭಾಪತಿಯವರ ಪೀಠದ ತೀರ್ಮಾನ ದೊಡ್ಡದು. ಈ ದಿನ ಮಸೂದೆ ಮಂಡನೆಗೆ ಅವಕಾಶ ನೀಡಬಾರದು' ಎಂದು ಒತ್ತಾಯಿಸಿದರು.

ವಿಷಾದ ವ್ಯಕ್ತಪಡಿಸಿದ ಸಭಾಪತಿ: ವಿರೋಧ ಪಕ್ಷಗಳ ಸದಸ್ಯರ ಆಕ್ಷೇಪಕ್ಕೆ ಭಾವುಕರಾಗಿ ಪ್ರತಿಕ್ರಿಯಿಸಿದ ಹೊರಟ್ಟಿ, 'ನಾನು ಉದ್ದೇಶಪೂರ್ವಕವಾಗಿ ವಿಳಂಬ ಮಾಡಿಲ್ಲ. ತಮ್ಮ ಕೆಲವು ಸದಸ್ಯರು ಸದನಕ್ಕೆ ಬರುತ್ತಿದ್ದು, ಅಲ್ಲಿಯವರೆಗೂ ಕಾಲಾವಕಾಶ ನೀಡಿ ಎಂದು ಆಡಳಿತ ಪಕ್ಷದ ಪ್ರಮುಖರು ಕೋರಿದರು. ನಿಮ್ಮ ಜತೆ (ವಿರೋಧ ಪಕ್ಷಗಳ ಮುಖಂಡರು) ಚರ್ಚೆ ಮಾಡಿರುವುದಾಗಿಯೂ ನನಗೆ ತಿಳಿಸಿದ್ದರು' ಎಂದರು.

'ನನ್ನಿಂದ ಯಾವುದೇ ತಪ್ಪಾಗಿಲ್ಲ. ಆದರೂ, ಸದಸ್ಯರ ಮನಸ್ಸಿಗೆ ನೋವಾ-ಗಿರುವುದಕ್ಕಾಗಿ ವಿಷಾದ ವ್ಯಕ್ತಪಡಿ-ಸುತ್ತೇನೆ' ಎಂದ ಸಭಾಪತಿ, ಕಲಾಪ ಮುಂದುವರಿಸುವಂತೆ ಮನವಿ ಮಾಡಿದರು.

ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ಶನಿವಾರಕ್ಕೆ ಕಲಾಪ ಮುಂದೂಡುವಂತೆ ಪಟ್ಟು ಹಿಡಿದರು. ಐದು ನಿಮಿಷಗಳ ಕಾಲ ಕಲಾಪ ಮುಂದೂಡಿದ ಸಭಾಪತಿ, ಆಡಳಿತ ಮತ್ತ ವಿರೋಧ ಪಕ್ಷಗಳ ಪ್ರಮುಖರನ್ನು ತಮ್ಮ ಕೊಠಡಿಗೆ ಆಹ್ವಾನಿಸಿ ಮಾತುಕತೆ ನಡೆಸಿದರು. ಮಸೂದೆ ಮಂಡನೆಯನ್ನು ಮುಂದೂಡುವ ತೀರ್ಮಾನವನ್ನು ಸಂಧಾನ ಸಭೆಯಲ್ಲಿ ಕೈಗೊಳ್ಳಲಾಯಿತು.

ಐದು ನಿಮಿಷದ ಬಳಿಕ ಕಲಾಪ ಮತ್ತೆ ಆರಂಭವಾಯಿತು. ಸಭಾಪತಿ ಬಸವರಾಜ ಹೊರಟ್ಟಿ ಅವರು ಪೀಠಕ್ಕೆ ಮರಳಲಿಲ್ಲ. ಅವರ ಬದಲಿಗೆ ಉಪ ಸಭಾಪತಿ ಎಂ.ಕೆ. ಪ್ರಾಣೇಶ್ ಪೀಠದಲ್ಲಿ-ದ್ದರು.

ಆಗ ಮಾತನಾಡಿದ ಕೋಟ ಶ್ರೀನಿವಾಸ ಪೂಜಾರಿ, 'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಮಸೂದೆಯನ್ನು ಈಗ ಮಂಡಿಸುವುದಿಲ್ಲ. ಮುಂದಿನ ಅಧಿ-ವೇಶನದಲ್ಲಿ ವಿಧಾನ ಪರಿಷತ್‌ನಲ್ಲಿ ಮಂಡಿಸಿ, ಅಂಗೀಕಾರ ಪಡೆಯುತ್ತೇವೆ' ಎಂದು ಪ್ರಕಟಿಸಿದರು. ನಂತರ ಕಲಾಪದ ವರದಿ ಮಂಡಿಸಿದ ಉಪಸಭಾಪತಿ, ಅನಿರ್ದಿಷ್ಟಾವಧಿಗೆ ಕಲಾಪವನ್ನು ಮುಂದೂಡಿದರು.

ಬೆಳಿಗ್ಗೆಯಿಂದಲೂ ಕಸರತ್ತು

ಮತಾಂತರ ನಿಷೇಧ ಮಸೂದೆಯನ್ನು ವಿಧಾನ ಪರಿಷತ್‌ನಲ್ಲಿ ಮಂಡಿಸಿ, ಅಂಗೀಕಾರ ಪಡೆಯಲು ಸರ್ಕಾರ ಶುಕ್ರವಾರ ಬೆಳಿಗ್ಗೆಯಿಂದಲೂ ಕಸರತ್ತು ನಡೆಸಿತ್ತು.

ಬಿಜೆಪಿ ಸದಸ್ಯ ಎನ್. ರವಿಕುಮಾರ್ ಸದನದಲ್ಲಿ ಹಾಜರಿದ್ದ ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರ ಪಟ್ಟಿ ಸಿದ್ಧಪಡಿಸಿದ್ದರು. ಆಗ ಬಿಜೆಪಿಯ ಸದಸ್ಯ ಬಲ ಕಡಿಮೆ ಇರುವುದು ಗೊತ್ತಾಗಿತ್ತು. ಮಧ್ಯಾಹ್ನದ ವೇಳೆಗೆ ಕಾಂಗ್ರೆಸ್ ಮತ್ತು ಜೆಡಿಎಸ್‌ನ ಕೆಲವರು ಊರುಗಳತ್ತ ಹೊರಟಿರುವ ಮಾಹಿತಿ ಲಭಿಸುತ್ತಿದ್ದಂತೆ, ಮತ್ತೆ ಮಸೂದೆ ಮಂಡನೆಯ ತೀರ್ಮಾನಕ್ಕೆ ಬರಲಾಗಿತ್ತು. ಆ ಬಳಿಕವೇ ಬಿಜೆಪಿ ಸದಸ್ಯರನ್ನು ಸಂಪರ್ಕಿಸಿದ್ದ ಮುಖ್ಯಮಂತ್ರಿ, ತಕ್ಷಣ ಸದನಕ್ಕೆ ಬರುವಂತೆ ತಾಕೀತು ಮಾಡಿದ್ದರು.

ಕಾಂಗ್ರೆಸ್ ಕೂಡ ಪ್ರತಿತಂತ್ರ ರೂಪಿಸುತ್ತಿತ್ತು. ವಿರೋಧ ಪಕ್ಷದ ಮುಖ್ಯ ಸಚೇತಕ ಎಂ. ನಾರಾಯಣಸ್ವಾಮಿ ಬೆಳಿಗ್ಗೆಯೇ ಸದನದಲ್ಲಿರುವ ಎರಡೂ ಕಡೆಯ ಸದಸ್ಯರ ಪಟ್ಟಿ ಮಾಡಿದ್ದರು. ಕಾಂಗ್ರೆಸ್‌ನ ಆರ್. ಧರ್ಮಸೇನ, ರಘು ಆಚಾರ್, ವಿಜಯ್ ಸಿಂಗ್, ಸಿ.ಎಂ. ಲಿಂಗಪ್ಪ ಅವರಿಗೆ ಮಾರ್ಗ ಮಧ್ಯದಿಂದಲೇ ಹಿಂದಿರುಗುವಂತೆ ಕಾಂಗ್ರೆಸ್ ನಾಯಕರು ಸೂಚನೆ ನೀಡಿದ್ದರು. 4 ಗಂಟೆಯ ವೇಳೆಗೆ ಕೆಲವರು ಕಿತ್ತೂರು ಸಮೀಪ ಬಂದಿದ್ದರು ಎಂಬ ಮಾಹಿತಿಯನ್ನು ವಿರೋಧ ಪಕ್ಷದ ಮುಖಂಡರು ಸದನದಲ್ಲೇ ಹಂಚಿಕೊಂಡರು.

ಅಖಿಲೇಶ್, ಜಯಂತ್ ಚೌಧರಿಯನ್ನು ರಾಮ, ಲಕ್ಷ್ಮಣರಂತೆ ಬಿಂಬಿಸಿದ ಬೆಂಬಲಿಗರು

'ಹಿಂದೂ ವಿರೋಧಿ' ಅಭಿಪ್ರಾಯ ಬದಲಿಸಲು ಎಸ್‌ಪಿ ಪ್ರಯತ್ನ

ಪ್ರಜಾವಾಣಿ ವಾರ್ತೆ

ಜನತಂತ್ರದ ಹಬ್ಬ 2021

ಲಖನೌ: ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್‌ರನ್ನು ಹಿಂದೂ ವಿರೋಧಿ ಎಂದು ಬಿಜೆಪಿ ಬಿಂಬಿಸುತ್ತಿರುವ ವೇಳೆಯೇ ಆ ಅಭಿಪ್ರಾ-ಯವನ್ನು ಬದಲಿಸಲು ಎಸ್‌ಪಿ ಪ್ರಯತ್ನಿ-ಸುತ್ತಿರುವಂತೆ ತೋರುತ್ತಿದೆ. ಅಲಿಗಡ ಜಿಲ್ಲೆಯ ಇಗ್ಲಾಸ್‌ನಲ್ಲಿ ಎಸ್‌ಪಿ ಮತ್ತು ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಗುರುವಾರ ಜಂಟಿಯಾಗಿ ನಡೆಸಿದ ಸಾರ್ವಜನಿಕ ರ್‍ಯಾಲಿಯಲ್ಲಿ ಅಖಿಲೇಶ್ ಯಾದವ್ ಮತ್ತು ಆರ್‌ಎಲ್‌ಡಿ ಅಧ್ಯಕ್ಷ ಜಯಂತ್ ಚೌಧರಿ ಅವರು ರಾಮ ಮತ್ತು ಲಕ್ಷ್ಮಣರ ರೂಪದಲ್ಲಿದ್ದ ಪೋಸ್ಟರ್‌ಗ-ಳನ್ನು ಪ್ರದರ್ಶಿಸಲಾಗಿತ್ತು. ಅಖಿಲೇಶ್ ಹಿಂದುತ್ವದ ಪರ ಎಂದು ಬಿಂಬಿಸುವ ಪ್ರಯತ್ನ ಇದಾಗಿದೆ ಎನ್ನಲಾಗಿದೆ.

ಸ್ಥಳೀಯ ಜಾನಪದ ಗಾಯಕರು ಅಲ್ಲಿಯ ಆಡುಭಾಷೆಯಲ್ಲಿ ಹಾಡುಗಳನ್ನು ಹಾಡಿದರು. ಆ ಹಾಡುಗಳಲ್ಲೂ ಈ ಇಬ್ಬರು ನಾಯಕರನ್ನು ರಾಮ ಮತ್ತು ಲಕ್ಷ್ಮಣ ಎಂದು ಬಿಂಬಿಸಲಾಗಿತ್ತು. ರಾಮ, ಲಕ್ಷ್ಮಣರ ಉಲ್ಲೇಖವಾದಾಗಲೆಲ್ಲಾ ಎಸ್‌ಪಿ, ಆರ್‌ಎಲ್‌ಡಿ ಬೆಂಬಲಿಗರ ಹರ್ಷೋದ್ಗಾರ ಕೇಳಿಬರುತ್ತಿತ್ತು.

ಅಖಿಲೇಶ್ ಮತ್ತು ಜಯಂತ್ ಇಬ್ಬರೂ ರಾಮ ಮತ್ತು ಲಕ್ಷ್ಮಣರ ಹಾಗೇ ಸಹೋದರರ ರೀತಿ ಇದ್ದರು. ಅವರನ್ನು ರಾಮ, ಲಕ್ಷ್ಮಣರಂತೆ ಬಿಂ-ಬಿಸುವುದರಲ್ಲಿ ಯಾವುದೇ ತಪ್ಪು ಇಲ್ಲ. ಜನರನ್ನು ಹೆದರಿಸುತ್ತಿದ್ದ ರಾಕ್ಷಸರನ್ನು ರಾಮ ಮತ್ತು ಲಕ್ಷ್ಮಣರು ಒಟ್ಟಿಗೆ ಸೇರಿ ಸಂಹಾರ ಮಾಡಿದಂತೆ, ದುರಾಡಳಿತಕ್ಕೆ ಹೆಸರಾಗಿರುವ ಬಿಜೆಪಿಯನ್ನು ಸೋಲಿಸಲು ಇವರಿಬ್ಬರೂ ಒಟ್ಟಾಗಿದ್ದಾರೆ ಎಂದು ಅಲಿಗಡದ ಎಸ್‌ಪಿ ಮುಖಂಡರೊಬ್ಬರು ಹೇಳಿದರು.

ಅಖಿಲೇಶ್‌ರನ್ನು 'ಹಿಂದೂ ವಿರೋಧಿ' ಮತ್ತು 'ಮುಸ್ಲಿಂ ಪರ' ಎಂದು ಬಿಜೆಪಿ ಬಿಂಬಿಸುತ್ತಿದೆ. ಬಿಜೆಪಿಯ ಪ್ರಯತ್ನಕ್ಕೆ ಉತ್ತರ ನೀಡಲು ಎಸ್‌ಪಿ ತಯಾರಾಗಿದೆ. ಮತ ಧ್ರುವೀಕರಣ ಮಾಡಲು ತನ್ನನ್ನು 'ಹಿಂದೂ ಉದ್ಧಾರಕ' ಎಂದು ಬಿಜೆಪಿ ಬಿಂಬಿಸಿಕೊ-ಳ್ಳುತ್ತಿದೆ. ಅವರ ಈ ಪ್ರಯತ್ನಕ್ಕೆ ನಾವು ಅಡ್ಡಿಪಡಿಸಬೇಕು ಎಂದು ಎಸ್‌ಪಿ ಮೂಲಗಳು ಹೇಳಿವೆ.

1990ರಲ್ಲಿ ಅಯೋಧ್ಯೆಯಲ್ಲಿ ಕರಸೇವಕರ ಮೇಲೆ ನಡೆದಿದ್ದ ಗುಂಡಿನ ದಾಳಿ ಕುರಿತು ಬಿಜೆಪಿ ಚುನಾವಣಾ ರ್‍ಯಾಲಿಗಳಲ್ಲಿ ಪ್ರಸ್ತಾಪಿಸುತ್ತಿದೆ. ಗುಂಡಿನ ದಾಳಿ ನಡೆದ ವೇಳೆ ಎಸ್‌ಪಿ ಸಂಸ್ಥಾಪಕ ಮುಲಾಯಂ ಸಿಂಗ್ ಉತ್ತರ ಪ್ರದೇಶದ ಮುಖ್ಯಮಂತ್ರಿ ಆಗಿದ್ದರು. ಹಾಗಾಗಿ ಅಖಿಲೇಶ್ 'ಹಿಂದೂ ವಿರೋಧಿ' ಎಂದು ಬಿಜೆಪಿ ರ್‍ಯಾಲಿಗಳಲ್ಲಿ ಕೇಳಿ ಬರುತ್ತಿದೆ.

ಅಖಿಲೇಶ್ ಆಡಳಿತ ಮುಸ್ಲಿಂ ಪರವಾಗಿತ್ತು. ಅವರು ಹಿಂದೂಗಳಿಗೆ ಹಬ್ಬಗಳನ್ನು ಆಚರಿಸಲು ಅನುವು ಮಾಡಿರಲಿಲ್ಲ. ನ್ಯಾಯಬೆಲೆ ಅಂಗಡಿಗಳಲ್ಲಿ ಮುಸ್ಲಿಮರಿಗೆ ಹೆಚ್ಚು ಪಡಿತರ ನೀಡಲಾಗುತ್ತಿತ್ತು ಎಂಬುದಾಗಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಆರೋಪಿಸಿದ್ದರು.

ಇತ್ತೀಚೆಗೆ ರಾಯಬರೇಲಿಯಲ್ಲಿ ಎಸ್‌ಪಿ ರ್‍ಯಾಲಿ ನಡೆದ ವೇಳೆ ಅಖಿಲೇಶ್‌ರನ್ನು ಶ್ರೀಕೃಷ್ಣನಿಗೆ ಹೋಲಿಸಲಾಗಿತ್ತು.

ಚುನಾವಣಾ ರ್‍ಯಾಲಿಗಳನ್ನು ನಿಲ್ಲಿಸಿ: ಅಲಹಾಬಾದ್ ಹೈಕೋರ್ಟ್

ಪ್ರಯಾಗ್‌ರಾಜ್ (ಪಿಟಿಐ): ಚುನಾವಣೆ ನಿಗದಿಯಾಗಿರುವ ರಾಜ್ಯಗಳಲ್ಲಿ ಕೊರೋನಾ ರೂಪಾಂತರ ತಳಿ ಓಮೈಕ್ರಾನ್ ಸೋಂಕು ಹರಡುತ್ತಿರುವ ಕಾರಣ ರಾಜಕೀಯ ಸಮಾವೇಶಗಳನ್ನು ನಿಲ್ಲಿಸುವಂತೆ ಕೇಂದ್ರ ಸರ್ಕಾರವನ್ನು ಅಲಹಾಬಾದ್ ಹೈಕೋರ್ಟ್ ಒತ್ತಾಯಿಸಿದೆ.

ಮೊಕದ್ದಮೆಯೊಂದರ ವಿಚಾರಣೆ ನಡೆಸುವ ವೇಳೆ, ನ್ಯಾಯಮೂರ್ತಿ ಶೇಖರ್ ಕುಮಾರ್ ಯಾದವ್ ಅವರನ್ನು ಒಳಗೊಂಡ ಪೀಠ ಈ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದೆ. 'ದೇಶದಲ್ಲಿ ಓಮೈಕ್ರಾನ್ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದೆ. ಕೋವಿಡ್-19ರ ಮೂರನೇ ಅಲೆಯ ಸಾಧ್ಯತೆಗಳು ಇವೆ' ಎಂದಿದೆ.

ಎರಡನೇ ಅಲೆ ವೇಳೆ ಲಕ್ಷಾಂತರ ಜನರು ಸೋಂಕಿತರಾಗಿದ್ದರು ಮತ್ತು ಹಲವರು ಮೃತಪಟ್ಟರು. ಉತ್ತರ ಪ್ರದೇಶ ಪಂಚಾಯತಿ ಚುನಾವಣೆ ಮತ್ತು ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಗಳು ಕೊರೋನಾ ಸೋಂಕು ಇನ್ನಷ್ಟು ಹರಡಲು ಕಾರಣ-ವಾಗಿದ್ದವು.

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆ ಹತ್ತಿರ-ವಾಗುತ್ತಿದೆ. ಎಲ್ಲಾ ರಾಜಕೀಯ ಪಕ್ಷಗಳೂ ಚುನಾವಣಾ ರ್‍ಯಾಲಿಗಳನ್ನು ಆಯೋಜಿಸಿ ಲಕ್ಷಾಂತರ ಜನರು ಒಂದೆಡೆ ಸೇರುವಂತೆ ಮಾಡುತ್ತಿವೆ. ಈ ರ್‍ಯಾಲಿಗಳಲ್ಲಿ ದೈಹಿಕ ಅಂತರ ಸೇರಿ ಕೋವಿಡ್‌ಗೆ ಸಂಬಂಧಿಸಿದ ಯಾವುದೇ ರೀತಿಯ ಮುನ್ನೆ-ಚ್ಚರಿಕೆಗಳನ್ನು ಪಾಲಿಸಲು ಸಾಧ್ಯವಿಲ್ಲ. ಹಾಗಾಗಿ, ರಾಜಕೀಯ ಸಮಾವೇಶಗಳನ್ನು ಕೂಡಲೇ ನಿಲ್ಲಿಸದಿದ್ದರೆ ಪರಿಸ್ಥಿತಿ ಎರಡನೇ ಅಲೆಗಿಂತ ಬಿಗಡಾಯಿಸಲಿದೆ. ಕೂಡಲೇ ರಾಜಕೀಯ ಸಮಾವೇಶಗಳನ್ನು ನಿಲ್ಲಿಸಿ, ರಾಜಕೀಯ ಪಕ್ಷಗಳಿಗೆ ಸುದ್ದಿವಾಹಿನಿಗಳು ಮತ್ತು ಪತ್ರಿಕೆಗಳ ಮೂಲಕ ಪ್ರಚಾರ ನಡೆಸುವಂತೆ ಆದೇಶಿಸಬೇಕು ಎಂದು ಕೋರ್ಟ್ ಹೇಳಿದೆ.

ಸಾಧ್ಯವಾದರೆ, ಮುಂದಿನ ವರ್ಷ ಫೆಬ್ರುವರಿಯಲ್ಲಿ ನಡೆಯಬಹುದಾದ ಚುನಾವಣೆಗಳನ್ನು ಕೆಲ ತಿಂಗಳುಗಳ ಕಾಲ ಮುಂದೂಡಬಹುದು. ಸಂವಿಧಾನದ ವಿಧಿ 21ರಲ್ಲಿ ಬದುಕುವ ಹಕ್ಕು ನೀಡಲಾಗಿದೆ. ಜೀವವಿದ್ದರೆ ಮಾತ್ರ ಚುನಾವಣಾ ರ್‍ಯಾಲಿ, ಸಭೆಗಳನ್ನು ನಡೆಸಬಹುದು ಎಂದು ಚುನಾವಣಾ ಆಯೋಗಕ್ಕೆ ಕೋರ್ಟ್ ಹೇಳಿದೆ.

ಲಸಿಕಾ ಅಭಿಯಾನದ ಯಶಸ್ಸಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಶ್ಲಾಘಿಸಿದ ಕೋರ್ಟ್, ರ್‍ಯಾಲಿಗಳನ್ನು ನಿಲ್ಲಿಸುವ ಮತ್ತು ಚುನಾವಣೆ ಮುಂದೂಡುವ ಕ್ರಮಗಳ ಕುರಿತು ಪ್ರಧಾನಿ ದೃಢ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿದೆ.

ಕಡಿಮೆ ದರದಲ್ಲಿ ವಿದ್ಯುತ್; ಅಖಿಲೇಶ್ ಭರವಸೆ

ಲಖನೌ (ಪಿಟಿಐ): ಸಮಾಜವಾದಿ ಪಕ್ಷ ಅಧಿಕಾರಕ್ಕೆ ಬಂದರೆ ಕಡಿಮೆ ದರದಲ್ಲಿ ನಿರಂತರ ವಿದ್ಯುತ್ ನೀಡಲಾಗುವುದು ಎಂದು ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಭರವಸೆ ನೀಡಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ಇಟಾ ಮತ್ತು ಇತರ ಜಿಲ್ಲೆಗಳಲ್ಲಿ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ಯೋಜನೆ ರೂಪಿಸಲಾಗಿತ್ತು. ಅದರಂತೆ ವಿದ್ಯುತ್ ಘಟಕಗಳನ್ನು ಸ್ಥಾಪಿಸಿದ್ದರೆ ಉತ್ತರ ಪ್ರದೇಶದ ಜನರು ವಿದ್ಯುತ್‌ಗೆ ದೇಶದಲ್ಲೇ ಅತಿ ಹೆಚ್ಚು ದರ ನೀಡಬೇಕಿರಲಿ-ಲ್ಲ. ನಮ್ಮ ಪಕ್ಷ ಅಧಿಕಾರ ಅಧಿಕಾರಕ್ಕೆ ಬಂದರೆ ಕಡಿಮೆ ಬೆಲೆಯಲ್ಲಿ ಕೃಷಿ, ಗೃಹ ಬಳಕೆ ಮತ್ತು ಕೈಗಾರಿಕೆಗಳಿಗೆ ನಿರಂತರ ವಿದ್ಯುತ್ ನೀಡುತ್ತೇವೆ' ಎಂದಿದ್ದಾರೆ.

ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ, ಮೂರು ಕೃಷಿ ಕಾನೂನುಗಳ ವಿರುದ್ಧದ ಹೋರಾಟದಲ್ಲಿ ಮಡಿದ ರೈತರಿಗೆ ಹುತಾತ್ಮ ಸ್ಥಾನಮಾನ ಮತ್ತು ಅವರ ಕುಟುಂಬಗಳಿಗೆ ತಲಾ ₹1 ಕೋಟಿ ನೀಡುವುದಾಗಿ ಅವರು ಇಗ್ಲಾಸ್‌ನಲ್ಲಿ ನಡೆದ ರ್‍ಯಾಲಿಯಲ್ಲಿ ಭರವಸೆ ನೀಡಿದ್ದರು.

'ವಿಧಾನಸಭೆ: ಶೇ 75 ಸದಸ್ಯರಷ್ಟೇ ಹಾಜರು'

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಈ ಬಾರಿಯ ಅಧಿವೇಶನದಲ್ಲಿ ಶೇ 75ರಷ್ಟು ಸದಸ್ಯರು ಹಾಜರಾಗಿದ್ದರು ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ವಿಧಾನಸಭೆಯ ಕಲಾಪವನ್ನು ಅನಿ-ರ್ದಿಷ್ಟಾವಧಿಗೆ ಮುಂದೂಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸದನಕ್ಕೆ ಗೈರುಹಾಜರಾಗಲು 8 ಸದಸ್ಯರು ಪೂರ್ವಾನುಮತಿ ಪಡೆದಿದ್ದರು' ಎಂದರು.

'ಈ ವರ್ಷ 40 ದಿನಗಳ ಅಧಿವೇಶನ ನಡೆದಿದೆ. ಪ್ರತಿವರ್ಷ 60 ದಿನಗಳ ಕಾಲ ಅಧಿವೇಶನ ನಡೆಯಬೇಕು ಎಂಬುದು ನಮ್ಮ ಹಂಬಲ. ಕೊರೊನಾ ಸೋಂಕಿನ ಕಾರಣದಿಂದ ಕಳೆದ ಎರಡು ವರ್ಷದಿಂದ 60 ದಿನಗಳು ಅಧಿವೇಶನ ನಡೆದಿರಲಿಲ್ಲ.



ವಿಶ್ವೇಶ್ವರ ಹೆಗಡೆ ಕಾಗೇರಿ

ಮುಂದಿನ ವರ್ಷ ಹೆಚ್ಚಿನ ದಿನ ಅಧಿವೇಶನ ನಡೆಸುವ ಸಂಬಂಧ ಮುಖ್ಯಮಂತ್ರಿ ಅವರೊಂದಿಗೆ ಸಮಾಲೋಚನೆ ನಡೆಸುತ್ತೇನೆ' ಎಂದರು.

'ಬೆಳಗಾವಿಯಲ್ಲಿ 52 ಗಂಟೆಗಳ ಕಾಲ ಕಾರ್ಯಕಲಾಪ ನಡೆಸಲಾಗಿದೆ. ಒಟ್ಟು 2426 ಪ್ರಶ್ನೆಗಳನ್ನು ಸ್ವೀಕರಿಸಲಾ-ಗಿದ್ದು, ಸದನದಲ್ಲಿ ಉತ್ತರಿಸಬೇಕಾದ 150 ಪ್ರಶ್ನೆಗಳ ಪೈಕಿ 149 ಪ್ರಶ್ನೆಗಳಿಗೆ ಉತ್ತರ ನೀಡಲಾಗಿದೆ. ಲಿಖಿತ ಮೂಲಕ ಉತ್ತರಿಸುವ 2032 ಪ್ರಶ್ನೆಗಳ ಪೈಕಿ 1921 ಪ್ರಶ್ನೆಗಳಿಗೆ ಉತ್ತರಗಳನ್ನು ಮಂಡಿಸಲಾಗಿದೆ. ಈ ಮೂಲಕ ಶೇ 99 ಸಾಧನೆ ಮಾಡಲಾಗಿದೆ' ಎಂದರು.

'ಅತಿವೃಷ್ಟಿ ಕುರಿತ ಚರ್ಚೆಯಲ್ಲಿ 37 ಸದಸ್ಯರು ಭಾಗವಹಿಸಿದ್ದು, 8 ಗಂಟೆ 38 ನಿಮಿಷಗಳ ಕಾಲ ಹಾಗೂ ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು 13 ಸದಸ್ಯರು ಭಾಗವಹಿಸಿದ್ದು 5 ಗಂಟೆ 45 ನಿಮಿಷಗಳ ಕಾಲ ಚರ್ಚಿಸಲಾಗಿದೆ' ಎಂದು ಅವರು ತಿಳಿಸಿದರು.

ಪ್ರೊ ಕಬಡ್ಡಿ: ಗೆಲುವಿನ ಖಾತೆ ತೆರೆದ ಬುಲ್ಸ್; ದಬಂಗ್ ಡೆಲ್ಲಿ, ಬೆಂಗಾಲ್ ವಾರಿಯರ್ಸ್‌ಗೆ ಜಯ

ಬೆಂಗಳೂರಿಗೆ 'ಪವನ' ಬಲ

ಬೆಂಗಳೂರು: ನಾಯಕ ಪವನ್ ಶೆರಾವತ್ ಮಿಂಚಿನ ಆಟದ ಬಲದಿಂದ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಲೀಗ್‌ನಲ್ಲಿ ಮೊದಲ ಜಯ ದಾಖಲಿಸಿತು.

ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 38–30ರಿಂದ ತಮಿಳ್ ತಲೈವಾಸ್ ವಿರುದ್ಧ ಜಯಭೇರಿ ಬಾರಿಸಿತು.

ಬುಲ್ಸ್ ತಂಡವು ಮೊದಲ ಪಂದ್ಯದಲ್ಲಿ ಸೋಲನುಭವಿಸಿತ್ತು. ಈ ಪಂದ್ಯದಲ್ಲಿ ಪವನ್ ಚುರುಕಿನ ದಾಳಿ ನಡೆಸಿ ಒಂಬತ್ತು ಪಾಯಿಂಟ್ಸ್ ಗಳಿಸಿದರು. ಅವರು ಒಟ್ಟು 16 ಬಾರಿ ದಾಳಿ ಮಾಡಿ, ಎಂಟರಲ್ಲಿ ಯಶಸ್ವಿಯಾದರು. ಎರಡು ಬಾರಿ ಖಾಲಿ ಕೈನಲ್ಲಿ ಮರಳಿದರು. ಅವರಿಗೆ ಉತ್ತಮ ಜೊತೆ ನೀಡಿದ ಚಂದ್ರನ್ ರಂಜೀತ್ ಏಳು ಅಂಕ ಗಳಿಸಿದರು. ರಕ್ಷಣಾ ವಿಭಾಗದಲ್ಲಿ ಮಿಂಚಿದ ಸೌರಭ್ ನಂದಾಲ್ ಐದು ಅಂಕ ಗಳಿಸಿ ಮಿಂಚಿದರು.

ತಲೈವಾಸ್ ತಂಡವು ಮೊದಲಾರ್ಧದಲ್ಲಿ ಕಠಿಣ ಪೈಪೋಟಿಯೊಡ್ಡಿತು. ತಂಡದ ಭವಾನಿ ರಜಪೂತ ದಾಳಿಯಲ್ಲಿ ಎಂಟು ಅಂಕಗಳನ್ನು ಗಳಿಸಿದರು. ರಕ್ಷಣಾ ವಿಭಾಗದಲ್ಲಿ ಮಿಂಚಿದ ಸಾಗರ್ ಐದು ಅಂಕ ಪಡೆದರು.

ಡೆಲ್ಲಿ ಜಯಭೇರಿ: ಅಮೋಘ ದಾಳಿ ಸಂಘಟಿಸಿದ ನವೀನಕುಮಾರ್ ಆಟದ ಬಲದಿಂದ ದಬಂಗ್ ಡೆಲ್ಲಿ ತಂಡವು ಟೂರ್ನಿಯಲ್ಲಿ ಸತತ ಎರಡನೇ ಜಯ ದಾಖಲಿಸಿತು. ಡೆಲ್ಲಿ ತಂಡವು 31–27ರಿಂದ ಯು ಮುಂಬಾ ವಿರುದ್ಧ ಜಯಿಸಿತು. ನವೀನಕುಮಾರ್ ಒಟ್ಟು 17 ಅಂಕಗಳನ್ನು ಗಳಿಸಿದರು. ಅವರು ರೇಡಿಂಗ್‌ನಲ್ಲಿ 12, ಟ್ಯಾಕಲ್‌ನಲ್ಲಿ 1 ಮತ್ತು ನಾಲ್ಕು ಬೋನಸ್ ಅಂಕಗಳನ್ನು ಜೇಬಿಗಿಳಿಸಿಕೊಂಡರು. ಜೋಗಿಂದರ್ ಸಿಂಗ್ ನರ್ವಾಲ್ ನಾಲ್ಕು ಟ್ಯಾಕಲ್ ಪಾಯಿಂಟ್ ಗಳಿಸಿ ತಂಡಕ್ಕೆ ಬಲ ತುಂಬಿದರು.

ಮುಂಬಾ ತಂಡದ ವಿ. ಅಜಿತಕುಮಾರ್ ಏಳು ಮತ್ತು ಅಭಿಷೇಕ್ ಸಿಂಗ್ ಐದು ಅಂಕಗಳನ್ನು ರೇಡಿಂಗ್‌ನಲ್ಲಿ ಗಳಿಸಿದರು. ಆದರೆ, ತಂಡದ ಟ್ಯಾಕ್ಲಿಂಗ್‌ನಲ್ಲಿ ಆದ ಲೋಪಗಳನ್ನು ಬಳಸಿಕೊಂಡ ಡೆಲ್ಲಿ ತಂಡವು ಜಯಿಸಿತು.

ಬೆಂಗಾಲ್‌ಗೆ ಗೆಲುವು: ಬಲಿಷ್ಠ ಎದುರಾಳಿಗಳ ವಿರುದ್ಧ ಚಾಕಚಕ್ಯ ಆಟವಾಡಿದ ಬೆಂಗಾಲ್ ವಾರಿಯರ್ಸ್ ಗೆಲುವಿನ ನಗೆ ಸೂಸಿತು. ಶುಕ್ರವಾರ ರಾತ್ರಿ ನಡೆದ ಪಂದ್ಯದಲ್ಲಿ ಬೆಂಗಾಲ್ 31–28ರಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು.

ಏಳು ಟಚ್ ಪಾಯಿಂಟ್‌ಗಳೊಂದಿಗೆ ಎಂಟು ಪಾಯಿಂಟ್ ಕಲೆ ಹಾಕಿದ ಮಣಿಂದರ್ ಸಿಂಗ್ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಮೊಹಮ್ಮದ್ ನಬಿಭಕ್ಷ್ ಮತ್ತು ರಿಂಕು ನರ್ವಾಲ್ ಕ್ರಮವಾಗಿ ನಾಲ್ಕು ಮತ್ತು ಮೂರು ಪಾಯಿಂಟ್ಸ್ ಗಳಿಸಿದರು. ಬದಲಿ ಆಟಗಾರರಾಗಿ ಬಂದ ಆಕಾಶ್ ಮತ್ತು ರೋಹಿತ್ ತಲಾ ನಾಲ್ಕು ಪಾಯಿಂಟ್‌ಗಳ ಕಾಣಿಕೆ ನೀಡಿದರು.

ಗುಜರಾತ್ ಜೈಂಟ್ಸ್‌ನ ರಾಕೇಶ್ ನರ್ವಾಲ್ ಅವರ ಏಕಾಂಗಿ ಹೋರಾಟ ವ್ಯರ್ಥವಾಯಿತು. ಆರು ಟಚ್ ಪಾಯಿಂಟ್ ಮತ್ತು ಐದು ಬೋನಸ್ ಪಾಯಿಂಟ್ ಗಳಿಸಿದ ಅವರು ಒಟ್ಟು 12 ಪಾಯಿಂಟ್ಸ್ ಗಳಿಸಿದರು.

ಎದುರಾಳಿ ಪಾಳಯದಿಂದ ತಪ್ಪಿಸಿಕೊಂಡ ಬೆಂಗಾಲ್ ವಾರಿಯರ್ಸ್‌ನ ನಬಿಭಕ್ಷ್

ತಮಿಳ್ ತಲೈವಾಸ್ ಆವರಣದಲ್ಲಿ ಬೆಂಗಳೂರು ಬುಲ್ಸ್ ತಂಡದ ಭರತ್ ಪಾಯಿಂಟ್ ಗಳಿಸಲು ಯತ್ನಿಸಿದರು

vivo PRO KABADDI

ಇಂದಿನ ಪಂದ್ಯ (ರಾತ್ರಿ)

- ಯು.ಪಿ.ಯೋಧಾ Vs ಪಟ್ನಾ ಪೈರೇಟ್ಸ್ — 7.30
- ತೆಲುಗು ಟೈಟನ್ಸ್ – ಪುಣೇರಿ ಪಲ್ಟನ್ — 8.30
- ಜೈಪುರ ಪಿಂಕ್ ಪ್ಯಾಂಥರ್ಸ್ – ಹರಿಯಾಣ ಸ್ಟೀಲರ್ಸ್ — 9.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	2	2	-	-	10
ಬೆಂಗಾಲ್ ವಾರಿಯರ್ಸ್	2	2	-	-	10
ಯು ಮುಂಬಾ	2	1	1	-	6
ಗುಜರಾತ್ ಜೈಂಟ್ಸ್	2	1	1	-	6
ಪಟ್ನಾ ಪೈರೇಟ್ಸ್	1	1	-	-	5
ಬೆಂಗಳೂರು ಬುಲ್ಸ್	2	1	1		5
ತೆಲುಗು ಟೈಟನ್ಸ್	1	-	-	1	3
ತಮಿಳ್ ತಲೈವಾಸ್	2	-	1	1	3
ಹರಿಯಾಣ ಸ್ಟೀಲರ್ಸ್	1	-	1	-	1
ಯು.ಪಿ.ಯೋಧಾ	1	-	1	-	1
ಜೈಪುರ ಪಿಂಕ್ ಪ್ಯಾಂಥರ್ಸ್	1	-	1	-	1
ಪುಣೇರಿ ಪಲ್ಟನ್	1	-	1	-	0

(ಶುಕ್ರವಾರದ ಪಂದ್ಯಗಳ ಅಂತ್ಯಕ್ಕೆ)

ಭವಾನಿ ಸ್ಪರ್ಧೆಗೆ ತೆರೆದ ಅವಕಾಶ

ವಿಶೇಷ ಯೋಜನೆಯಡಿ ₹ 8.16 ಲಕ್ಷ ಮಂಜೂರು

ನವದೆಹಲಿ (ಪಿಟಿಐ): ಮುಂದಿನ ವರ್ಷ ನಾಲ್ಕು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಫೆನ್ಸಿಂಗ್ ಪಟು ಭವಾನಿ ದೇವಿ ಅವರಿಗೆ ಅವಕಾಶ ದೊರಕಿದೆ.

ತರಬೇತಿ ಮತ್ತು ಸ್ಪರ್ಧೆಯ ವಾರ್ಷಿಕ ಯೋಜನೆಯಡಿ ಕೇಂದ್ರ ಸರ್ಕಾರ ₹ 8.16 ಲಕ್ಷ ಮೊತ್ತವನ್ನು ಮಂಜೂರು ಮಾಡಿರುವ ಹಿನ್ನೆಲೆಯಲ್ಲಿ ಅವರು ವಿದೇಶದಲ್ಲಿ ತರಬೇತಿ ಪಡೆದು ವಿವಿಧ ಟೂರ್ನಿಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸಬ್ರೆ ವಿಭಾಗದಲ್ಲಿ ಸ್ಪರ್ಧಿಸುವ ಮೂಲಕ ಒಲಿಂಪಿಕ್ಸ್‌ನಲ್ಲಿ ದೇಶವನ್ನು ಪ್ರತಿನಿಧಿಸಿದ ಮೊದಲ ಫೆನ್ಸರ್ ಎನಿಸಿಕೊಂಡಿದ್ದ ಭವಾನಿ ದೇವಿ ಮೊದಲ ಸುತ್ತಿನಲ್ಲಿ ಜಯ ಗಳಿಸಿದ್ದರು. ಎರಡನೇ ಸುತ್ತಿನಲ್ಲಿ ಸೋತು ಹೊರಬಿದ್ದಿದ್ದರು.

ಭವಾನಿ ದೇವಿ –ಪಿಟಿಐ ಚಿತ್ರ

ಜಾರ್ಜಿಯಾದ ತಿಬಿಲಿಸಿಯಲ್ಲಿ ಜನವರಿ 4ರಿಂದ ನಡೆಯಲಿರುವ ತರಬೇತಿಯಲ್ಲಿ ಅವರು ಪಾಲ್ಗೊಳ್ಳುವರು. ಜನವರಿ 14ರಿಂದ ಅಲ್ಲೇ ನಡೆಯಲಿರುವ ಅಂತರರಾಷ್ಟ್ರೀಯ ಫೆನ್ಸಿಂಗ್ ಫೆಡರೇಷನ್‌ನ ವಿಶ್ವಕಪ್‌ನಲ್ಲಿ ಸ್ಪರ್ಧಿಸುವರು.

ಜನವರಿ 28ರಿಂದ ಬಲ್ಗೇರಿಯಾದಲ್ಲಿ ನಡೆಯಲಿರುವ ವಿಶ್ವಕಪ್‌ನಲ್ಲೂ ಭಾಗವಹಿಸುವರು. ಮಾರ್ಚ್ 4 ಮತ್ತು 5ರಂದು ಗ್ರೀಸ್‌ನಲ್ಲಿ, 18 ಮತ್ತು 19ರಂದು ಬಲ್ಗೇರಿಯಾದಲ್ಲಿ ನಡೆಯಲಿರುವ ಟೂರ್ನಿಗಳಲ್ಲೂ ಅವರು ದೇಶವನ್ನು ಪ್ರತಿನಿಧಿಸುವರು.

ಸದ್ಯ ವಿಶ್ವ ರ‍್ಯಾಂಕಿಂಗ್‌ನ ಮಹಿಳೆಯರ ಸಬ್ರೆ ವಿಭಾಗದಲ್ಲಿ ಭವಾನಿ ದೇವಿ 55ನೇ ಸ್ಥಾನದಲ್ಲಿದ್ದಾರೆ. ಕ್ರೀಡಾ ಸಚಿವಾಲಯ ಈ ವರ್ಷದ ಆರಂಭದಲ್ಲಿ ಭಾರತ ಫೆನ್ಸಿಂಗ್ ಸಂಸ್ಥೆಗೆ ತರಬೇತಿ ಮತ್ತು ಸ್ಪರ್ಧೆ ಯೋಜನೆಯಡಿ ₹ 3 ಕೋಟಿ ಮಂಜೂರು ಮಾಡಿತ್ತು.

ಮಹಿಳಾ ತಂಡಕ್ಕೆ ಸಮಾನ ಮೊತ್ತ

ಬೆಂಗಳೂರು: ಕರ್ನಾಟಕ ರಾಜ್ಯ ವಾಲಿಬಾಲ್ ಸಂಸ್ಥೆ ಆಯೋಜಿಸಿರುವ ಅಖಿಲ ಭಾರತ ದಕ್ಷಿಣ ವಲಯ ವಾಜಪೇಯಿ ಕಪ್ ವಾಲಿಬಾಲ್ ಟೂರ್ನಿಯಲ್ಲಿ ಪುರುಷರ ಮತ್ತು ಮಹಿಳೆಯರ ತಂಡಗಳಿಗೆ ಸಮಾನ ಪ್ರಶಸ್ತಿ ಮೊತ್ತ ನೀಡಲು ನಿರ್ಧರಿಸಲಾಗಿದೆ.

ಶನಿವಾರದಿಂದ ಇದೇ 29ರ ವರೆಗೆ ಶಂಕರ ಮಠ ಸಮೀಪದ ವಿವೇಕಾನಂದ ಕ್ರೀಡಾಂಗಣದಲ್ಲಿ ಟೂರ್ನಿ ನಡೆಯಲಿದೆ.

ಟೂರ್ನಿಯ ಪುರುಷರ ವಿಭಾಗದ ವಿಜೇತ ತಂಡಕ್ಕೆ ₹ 40,000 ಮತ್ತು ರನ್ನರ್ ಅಪ್ ತಂಡಕ್ಕೆ ₹ 20,000, ಮೂರನೇ ಸ್ಥಾನ ಗಳಿಸಿದ ತಂಡಕ್ಕೆ ₹ 10,000, ಮಹಿಳಾ ವಿಭಾಗದ ಚಾಂಪಿಯನ್ ತಂಡಕ್ಕೆ ₹ 30,000, ರನ್ನರ್ ಅಪ್ ತಂಡಕ್ಕೆ ₹ 20,000, ಮೂರನೇ ಸ್ಥಾನ ಗಳಿಸಿದ ತಂಡಕ್ಕೆ ₹ 10,000 ನೀಡಲಾಗುವುದು ಎಂದು ವಾಲಿಬಾಲ್ ಸಂಸ್ಥೆಯ ಅಧ್ಯಕ್ಷ ಎಸ್. ಹರೀಶ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದರು.

ಆದರೆ ಏಕರೂಪದಲ್ಲಿ ಪ್ರಶಸ್ತಿ ಮೊತ್ತ ಹಂಚಲು ನಿರ್ಧರಿಸಲಾಗಿದೆ ಎಂದು ಶುಕ್ರವಾರ ಹೇಳಿದ್ದಾರೆ.

ಐವರು ಬೌಲರ್ ಜೊತೆ ಭಾರತ ತಂಡ ಕಣಕ್ಕೆ

ಸೆಂಚುರಿಯನ್ (ಪಿಟಿಐ): ದಕ್ಷಿಣ ಆಫ್ರಿಕಾ ಎದುರಿನ ಬಾಕ್ಸಿಂಗ್ ಡೇ ಟೆಸ್ಟ್‌ನಲ್ಲಿ ಭಾರತ ತಂಡವು ಐವರು ಬೌಲರ್‌ಗಳೊಂದಿಗೆ ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ.

ಆದರೆ ಬ್ಯಾಟಿಂಗ್ ವಿಭಾಗದಲ್ಲಿ ಅಜಿಂಕ್ಯ ರಹಾನೆ ಮತ್ತು ಶ್ರೇಯಸ್ ಅಯ್ಯರ್ ಅವರಲ್ಲಿ ಒಬ್ಬರನ್ನು ಆಯ್ಕೆ ಮಾಡುವ ಒತ್ತಡದಲ್ಲಿ ತಂಡವಿದೆ.

ಶುಕ್ರವಾರ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ತಂಡದ ಉಪನಾಯಕ ಕೆ.ಎಲ್. ರಾಹುಲ್ ಈ ಬಗ್ಗೆ ಸೂಚ್ಯವಾಗಿ ಹೇಳಿದರು.

'ಟೆಸ್ಟ್ ಪಂದ್ಯಗಳಲ್ಲಿ ಪ್ರತಿಯೊಂದು ತಂಡವು 20 ವಿಕೆಟ್‌ಗಳನ್ನು ಪಡೆಯಲು ಪ್ರಯತ್ನಿಸುತ್ತವೆ. ನಾವು ಕೂಡ ಬಹಳಷ್ಟು ಟೆಸ್ಟ್‌ಗಳಲ್ಲಿ ಜಯಿಸಲು ಇದೇ ತಂತ್ರಗಾರಿಕೆ ಅನುಸರಿಸಿದ್ದು ಫಲ ನೀಡಿದೆ' ಎಂದು ರಾಹುಲ್ ಹೇಳಿದರು.

ಮಧ್ಯಮವೇಗಿ ಶಾರ್ದೂಲ್ ಠಾಕೂರ್ ಬ್ಯಾಟಿಂಗ್ ಕೂಡ ಚೆನ್ನಾಗಿ ಮಾಡಬಲ್ಲರು. ಆದ್ದರಿಂದ ಐದನೇ ಬೌಲರ್ ಆಗಿ ಅವರು ಅವಕಾಶ ಪಡೆಯುವ ಸಾಧ್ಯತೆ ಇದೆ.


ಕೆ.ಎಲ್. ರಾಹುಲ್

'ಅಜಿಂಕ್ಯ, ಹನುಮವಿಹಾರಿ ಮತ್ತು ಶ್ರೇಯಸ್ ಅಯ್ಯರ್ ಅವರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳುವುದು ಸ್ವಲ್ಪ ಕ್ಲಿಷ್ಟಕರ. ಅಜಿಂಕ್ಯ ಅನುಭವಿ ಆಟಗಾರ. ಶ್ರೇಯಸ್ ತಮ್ಮ ಪದಾರ್ಪಣೆಯಲ್ಲಿಯೇ ಶತಕ ಬಾರಿಸಿದ್ದಾರೆ. ಹನುಮವಿಹಾರಿ ಕೂಡ ತಂಡದ ಗೆಲುವುಗಳಲ್ಲಿ ಹಲವು ಬಾರಿ ಕಾಣಿಕೆ ನೀಡಿದ್ದಾರೆ. ಈ ಕುರಿತು ತಂಡದ ವ್ಯವಸ್ಥಾಪಕರು ನಿರ್ಧಾರ ಕೈಗೊಳ್ಳುವರು' ಎಂದು ರಾಹುಲ್ ಹೇಳಿದರು.

'ದಕ್ಷಿಣ ಆಫ್ರಿಕಾದ ಪಿಚ್‌ಗಳಲ್ಲಿ ಚೆಂಡು ಬೌನ್ಸ್ ಆಗುವ ರೀತಿ ತುಸು ವಿಭಿನ್ನವಾಗಿದೆ. ಸರಣಿಗೂ ಕೆಲವು ದಿನಗಳ ಮುಂಚೆಯೇ ಇಲ್ಲಿ ಬಂದು ಪಿಚ್ ಮತ್ತು ವಾತಾವರಣಕ್ಕೆ ಹೊಂದಾಣಿಕೆಯಾಗಲು ಪ್ರಯತ್ನಿಸುತ್ತಿದ್ದೇವೆ' ಎಂದರು

ಎಲ್ಲ ಮಾದರಿಗಳ ಕ್ರಿಕೆಟ್‌ಗೆ ವಿದಾಯ ಘೋಷಿಸಿದ ಟರ್ಬನೇಟರ್

'ದೂಸ್ರಾ' ಸರದಾರ ಹರಭಜನ್

ನವದೆಹಲಿ (ಪಿಟಿಐ): 'ದೂಸ್ರಾ' ಎಸೆತಗಳ ಮೂಲಕ ಬ್ಯಾಟ್ಸ್‌ಮನ್‌ಗಳ ಪಾಲಿಗೆ ಸಿಂಹಸ್ವಪ್ನವಾಗಿದ್ದ ಆಫ್‌ಸ್ಪಿನ್ನರ್ ಹರಭಜನ್ ಸಿಂಗ್ ಎಲ್ಲ ಮಾದರಿಗಳ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದಾರೆ.

ಟೆಸ್ಟ್ ಕ್ರಿಕೆಟ್‌ನಲ್ಲಿ ಹ್ಯಾಟ್ರಿಕ್ ಸಾಧನೆ ಮಾಡಿದ ಭಾರತದ ಮೊದಲ ಬೌಲರ್ ಎಂಬ ಹೆಗ್ಗಳಿಕೆಯ ಹರಭಜನ್ ಅವರದ್ದು. 1998ರಲ್ಲಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಸ್ಟ್ರೇಲಿಯಾ ಎದುರಿನ ಟೆಸ್ಟ್‌ನಲ್ಲಿ ಪದಾರ್ಪಣೆ ಮಾಡಿದ್ದರು.

'ಎಲ್ಲ ಉತ್ತಮ ಸಂಗತಿಗಳು ಇವತ್ತು ಮುಕ್ತಾಯವಾಗಿದೆ. ನನಗೆ ಸರ್ವಸ್ವವನ್ನೂ ನೀಡಿದ ಕ್ರಿಕೆಟ್‌ಗೆ ಇವತ್ತು ವಿದಾಯ ಹೇಳುತ್ತಿದ್ದೇನೆ. 23 ವರ್ಷಗಳ ಸುದೀರ್ಘ ವೃತ್ತಿಜೀವನದಲ್ಲಿ ಜೊತೆಗೂಡಿದ, ಬೆಂಬಲಿಸಿದ ಎಲ್ಲರಿಗೂ ಕೃತಜ್ಞನಾಗಿದ್ದೇನೆ. ಜಲಂಧರ್‌ನ ಗಲ್ಲಿಗಳಿಂದ ಭಾರತ ಕ್ರಿಕೆಟ್ ತಂಡದ ಟರ್ಬನೇಟರ್ ಆಗಿ ಬೆಳೆದಿದ್ದು ಅತ್ಯಂತ ಸುಂದರ ಪಯಣ' ಎಂದು 41 ವರ್ಷದ ಹರಭಜನ್ ಟ್ವೀಟ್ ಮಾಡಿದ್ದಾರೆ.

'ಬೇರೆಲ್ಲ ಕ್ರಿಕೆಟಿಗರಂತೆ ನನಗೂ ಭಾರತ ತಂಡದ ಪೋಷಾಕಿನಲ್ಲಿ ವಿದಾಯದ ಪಂದ್ಯ ಆಡಿ ಹೊರಬೀಳುವ ಆಸೆಯಿತ್ತು. ಅದಕ್ಕಾಗಿ ಇಷ್ಟು ವರ್ಷ ಕಾದೆ' ಎಂದಿದ್ದಾರೆ.

2016ರಿಂದ ಈಚೆಗೆ ಅವರಿಗೆ ಭಾರತ ತಂಡದಲ್ಲಿ ಆಡುವ ಅವಕಾಶ ಸಿಕ್ಕಿಲ್ಲ. ಐಪಿಎಲ್‌ನಲ್ಲಿ ಆಡಿದ್ದರು. ಹೋದ ಆವೃತ್ತಿಯಲ್ಲಿ ಕೆಕೆಆರ್ ಪರವಾಗಿ ಕೆಲವು ಪಂದ್ಯಗಳಲ್ಲಿ ಆಡಿದ್ದರು.

'2001ರಲ್ಲಿ ಕೋಲ್ಕತ್ತದಲ್ಲಿ ನಡೆದಿದ್ದ ಆಸ್ಟ್ರೇಲಿಯಾ ಎದುರಿನ ಟೆಸ್ಟ್‌ನಲ್ಲಿ ಹ್ಯಾಟ್ರಿಕ್ ಗಳಿಸಿದ್ದೆ. ಈ ಸಾಧನೆ ಮಾಡಿದ ಮೊದಲ ಭಾರತೀಯ ಬೌಲರ್ ಆಗಿದ್ದೆ. ಆ ಸರಣಿಯ ಮೂರು ಪಂದ್ಯಗಳಲ್ಲಿ ಒಟ್ಟು 32 ವಿಕೆಟ್ ಗಳಿಸಿದ್ದು ಅವಿಸ್ಮರಣೀಯ. 2007ರ ಟಿ20 ಮತ್ತು 2011ರ ಏಕದಿನ ವಿಶ್ವಕಪ್ ಜಯಿಸಿದ್ದು ಕೂಡ ಬಹಳ ಮಹತ್ವದ ಸಂಗತಿಗಳು ಎಂದು ಹರಭಜನ್ ಹೇಳಿದ್ದಾರೆ.

'ನನ್ನ ತಂದೆ,ತಾಯಿಯ ಶ್ರಮ ದೊಡ್ಡದು. ಪತ್ನಿ ಗೀತಾಳ ಪ್ರೀತಿಯೂ ನನ್ನ ಸಾಧನೆಗೆ ಶಕ್ತಿಯಾಗಿದೆ. ಗುರುಗಳು ಮತ್ತು ಕುಟುಂಬಕ್ಕೆ ಕೃತಜ್ಞನಾಗಿದ್ದೇನೆ' ಎಂದು ಹೇಳಿದರು.


ಹರಭಜನ್ ಸಿಂಗ್

ಮಾದರಿ	ಪಂದ್ಯ	ರನ್	ಶ್ರೇಷ್ಠ	ಅರ್ಧಶತಕ	ಶತಕ	ವಿಕೆಟ್	ಶ್ರೇಷ್ಠ
ಟೆಸ್ಟ್	103	2225	115	9	2	417	84ಕ್ಕೆ8
ಏಕದಿನ	236	1237	49	0	0	269	31ಕ್ಕೆ5
ಟಿ20	28	108	21	0	0	25	12ಕ್ಕೆ4
ಐಪಿಎಲ್	163	833	64	0	0	150	18ಕ್ಕೆ5

ಹೆಚ್ಚು ಟೆಸ್ಟ್ ವಿಕೆಟ್ ಪಡೆದ ಬೌಲರ್‌ಗಳು

ಅತ್ಯಂತ ಕೌಶಲಪೂರ್ಣ ಆಫ್‌ಸ್ಪಿನ್ನರ್, ದೈವದತ್ತ ಪ್ರತಿಭೆಯಿರುವ ಬ್ಯಾಟರ್ ಆಗಿದ್ದ ಹರಭಜನ್ ಭಾರತ ತಂಡದ ಹಲವು ಜಯಗಳಿಗೆ ಕಾಣಿಕೆ ನೀಡಿದ್ದಾರೆ.
ವಿವಿಎಸ್ ಲಕ್ಷ್ಮಣ್ ಎನ್‌ಸಿಎ ಮುಖ್ಯಸ್ಥ

ಭಾರತದಲ್ಲಷ್ಟೇ ಅಲ್ಲ; ವಿಶ್ವದಲ್ಲಿಯೇ ಶ್ರೇಷ್ಠ ಕ್ರಿಕೆಟಿಗರಲ್ಲಿ ಹರಭಜನ್ ಕೂಡ ಒಬ್ಬರು. ಅವರೊಂದಿಗೆ ಆಡಿದ್ದು ನನಗೆ ಲಭಿಸಿದ ದೊಡ್ಡ ಗೌರವ.
ಎಸ್. ಶ್ರೀಶಾಂತ್ ಕ್ರಿಕೆಟಿಗ

ಪದಾರ್ಪಣೆ
- ಟೆಸ್ಟ್ – 1998 – ಆಸ್ಟ್ರೇಲಿಯಾ ಎದುರು (ಚಿನ್ನಸ್ವಾಮಿ ಕ್ರೀಡಾಂಗಣ ಬೆಂಗಳೂರು)
- ಏಕದಿನ – 1998 – ನ್ಯೂಜಿಲೆಂಡ್ ಎದುರು (ಶಾರ್ಜಾ)
- ಟಿ20 – 2006 – ದಕ್ಷಿಣ ಆಫ್ರಿಕಾ ಎದುರು (ವಾಂಡರರ್ಸ್ ಕ್ರೀಡಾಂಗಣ)
- ಐಪಿಎಲ್ – 2008 – ಮುಂಬೈ ಇಂಡಿಯನ್ಸ್ ಪರ – ಆರ್‌ಸಿಬಿ ವಿರುದ್ಧ (ಮುಂಬೈ)

ಕೊನೆಯ ಪಂದ್ಯ
- ಟೆಸ್ಟ್ – 2015 – ಶ್ರೀಲಂಕಾ ಎದುರು (ಗಾಲ್, ಶ್ರೀಲಂಕಾ)
- ಏಕದಿನ – 2015 – ದ.ಆಫ್ರಿಕಾ ಎದುರು (ಮುಂಬೈ)
- ಟಿ20 – 2016 – ಯುಎಇ ಎದುರು (ಢಾಕಾ)
- ಐಪಿಎಲ್ – 2021 – ಕೋಲ್ಕತ್ತ ನೈಟ್‌ರೈಡರ್ಸ್ ಪರ – ಆರ್‌ಸಿಬಿ ವಿರುದ್ಧ (ಚೆನ್ನೈ)

ವಿವಾದಗಳಲ್ಲಿ ಭಜ್ಜಿ

ಬೆಂಗಳೂರು: ಹರಭಜನ್ ಸಿಂಗ್ ಭಾರತ ತಂಡದಲ್ಲಿ ಆಡುವ ಸಂದರ್ಭದಲ್ಲಿ ಹಲವು ಬಾರಿ ವಿವಾದಗಳನ್ನು ಮೈಮೇಲೆಳೆದುಕೊಂಡಿದ್ದರು. ಅದರಲ್ಲಿ ಪ್ರಮುಖವಾದದ್ದು 'ಮಂಕಿ ಗೇಟ್' ವಿವಾದ. ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಟೆಸ್ಟ್ ಪಂದ್ಯದ ಸಂದರ್ಭದಲ್ಲಿ ಹರಭಜನ್ ತಮ್ಮನ್ನು 'ಮಂಗ' ಎಂದು ಜನಾಂಗೀಯ ನಿಂದನೆ ಮಾಡಿದ್ದಾರೆಂದು ಆ್ಯಂಡ್ರ್ಯೂ ಸೈಮಂಡ್ಸ್ ಆರೋಪಿಸಿದ್ದರು. ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ವಿವಾದವಾಗಿತ್ತು. ಆಸ್ಟ್ರೇಲಿಯಾ ತಂಡದ ನಾಯಕ ರಿಕಿ ಪಾಂಟಿಂಗ್ ರೆಫರಿಗೆ ದೂರು ನೀಡಿದ್ದರು. ಕೊನೆಗೂ ಭಜ್ಜಿ ಆರೋಪಮುಕ್ತರಾದರು. 2008ರ ಐಪಿಎಲ್ ನಲ್ಲಿ ಮುಂಬೈ ಇಂಡಿಯನ್ಸ್ ತಂಡದಲ್ಲಿದ್ದ ಹರಭಜನ್ ಪಂಜಾಬ್ ತಂಡದಲ್ಲಿದ್ದ ಎಸ್. ಶ್ರೀಶಾಂತ್ ಅವರ ಕಪಾಳಕ್ಕೆ ಹೊಡೆದಿದ್ದು ಬಹಳ ದೊಡ್ಡ ಸುದ್ದಿಯಾಗಿತ್ತು.

ಬಾಂಗ್ಲಾ ವಿರುದ್ಧ ಭಾರತಕ್ಕೆ ಜಯ

ಬೆಂಗಳೂರು: ಆರಂಭಿಕ ಬ್ಯಾಟರ್ ಪ್ರಕಾಶ್ ಜಯರಾಮಯ್ಯ ಮತ್ತು ನಾಯಕ ವೆಂಕಟೇಶ್ವರ ರಾವ್ ಅವರ ಅಮೋಘ ಶತಕವು ಭಾರತ ಅಂಧರ ಕ್ರಿಕೆಟ್ ತಂಡಕ್ಕೆ ಭರ್ಜರಿ ಜಯ ತಂದುಕೊಟ್ಟಿತು.

ಪ್ರಕಾಶ್

ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಶುಕ್ರವಾರ ನಡೆದ ಇಂಡಸ್ ಇಂಡ್ ಬ್ಯಾಂಕ್ ಪ್ರಾಯೋಜಿತ ಟ್ವೆಂಟಿ20 ಟೂರ್ನಿಯ ಪಂದ್ಯದಲ್ಲಿ ಭಾರತ 124ರನ್‌ಗಳಿಂದ ಬಾಂಗ್ಲಾದೇಶವನ್ನು ಮಣಿಸಿತು.

279 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಪ್ರವಾಸಿ ತಂಡ ಆರಂಭದಲ್ಲಿ ವೇಗವಾಗಿ ರನ್ ಗಳಿಸಿ ನಿರೀಕ್ಷೆ ಮೂಡಿಸಿತು. ಮಹಮದ್ ಅಬ್ದುಲ್ ಮಲಿಕ್ ಹಾಗೂ ಅರೀಫ್ ಉಲ್ಲಾ ಅರ್ಧಶತಕ ಪೂರೈಸಿದರು.

ಇವರಿಬ್ಬರು ಔಟಾದ ನಂತರ ಕ್ರೀಸಿಗೆ ಬಂದ ಯಾರಿಗೂ ಹೆಚ್ಚು ಹೊತ್ತು ನಿಲ್ಲಲು ಆಗಲಿಲ್ಲ.

ನಾಯಕ ಮೊಹಮ್ಮದ್ ರೆಹಮಾನ್ ಔಟಾಗದೆ ಉಳಿದರೂ ತಂಡವನ್ನು ಗೆಲುವಿನ ದಡ ಸೇರಿಸಲು ಆಗಲಿಲ್ಲ. ತಂಡಕ್ಕೆ 154ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಟಾಸ್ ಗೆದ್ದು ಬ್ಯಾಟಿಂಗ್ ಆರಿಸಿಕೊಂಡ ಭಾರತ ತಂಡ ಆರಂಭದಲ್ಲೇ ನಕುಲ್ ಹಾಗೂ ಓಂಪ್ರಕಾಶ್ ಅವರ ವಿಕೆಟ್ ಕಳೆದುಕೊಂಡಿತು. ದೀಪಕ್ ಮಲಿಕ್ ಅವರು ಪ್ರಕಾಶ್ ಜಯರಾಮಯ್ಯ ಅವರಿಗೆ ಉತ್ತಮ ಸಹಕಾರ ನೀಡಿದರು. ಆರಂಭದಿಂದಲೇ ಸ್ಫೋಟಕ ಶೈಲಿಯಲ್ಲಿ ಬ್ಯಾಟಿಂಗ್ ಮಾಡಿದ ಪ್ರಕಾಶ್ ಜಯರಾಮಯ್ಯ ಅವರು ಮಲಿಕ್ ಔಟಾದ ಮೇಲೆ ವೆಂಕಟೇಶ್ವರ ರಾವ್ ಅವರೊಂದಿಗೆ ಭರ್ಜರಿ ಜೊತೆಯಾಟವಾಡಿದರು.

ಇಬ್ಬರೂ ಬಿರುಸಿನ ಬ್ಯಾಟಿಂಗ್ ಮೂಲಕ ಎದುರಾಳಿ ಬೌಲರ್‌ಗಳನ್ನು ಕಾಡಿದರು. ಪ್ರಕಾಶ್ 62 ಎಸೆತಗಳಲ್ಲಿ 26 ಬೌಂಡರಿಗಳನ್ನು ಒಳಗೊಂಡ 129 ರನ್ ಗಳಿಸಿ ಅಜೇಯರಾಗಿ ಉಳಿದರು. ವೆಂಕಟೇಶ್ವರ ರಾವ್ 42 ಎಸೆತಗಳಲ್ಲಿ 18 ಬೌಂಡರಿ ಹಾಗೂ ಎರಡು ಸಿಕ್ಸರ್ ಒಳಗೊಂಡ 101 ರನ್ ಗಳಿಸಿದರು.

ಬ್ಯಾಸ್ಕೆಟ್‌ಬಾಲ್: ಎಂಇಜಿ, ಜೆಎಸ್‌ಸಿ ಜಯಭೇರಿ

ಬೆಂಗಳೂರು: ಎಂಇಜಿ ಮತ್ತು ಜೆಎಸ್‌ಸಿ ತಂಡಗಳು ರಾಜ್ಯ ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಶುಕ್ರವಾರ ಭರ್ಜರಿ ಜಯ ದಾಖಲಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪುರುಷರ ವಿಭಾಗದ ಪಂದ್ಯದಲ್ಲಿ ಎಂಇಜಿ 103–63ರಲ್ಲಿ ಧಾರವಾಡದ ರೋವರ್ಸ್ ತಂಡವನ್ನು ಮಣಿಸಿತು. ಮಧ್ಯಂತರ ಅವಧಿಯಲ್ಲಿ 60–32ರ ಮುನ್ನಡೆಯಲ್ಲಿದ್ದ ಎಂಇಜಿ ದ್ವಿತೀಯಾರ್ಧದಲ್ಲೂ ಅಮೋಘ ಆಟ ಮುಂದುವರಿಸಿತು. ಎಂಇಜಿ ಪರ ಮಯೂರ್ 17 ಮತ್ತು ರೋವರ್ಸ್‌ಗಾಗಿ ತೇಜಸ್ 21 ಪಾಯಿಂಟ್ ಕಲೆ ಹಾಕಿದರು.

ಮಹಿಳೆಯರ ವಿಭಾಗದಲ್ಲಿ ಜೆಎಸ್‌ಸಿ 79–36ರಲ್ಲಿ ನ್ಯಾಷನಲ್ಸ್ ಮೈಸೂರು ತಂಡವನ್ನು ಮಣಿಸಿತು. ಅದಿತಿ 20 ಪಾಯಿಂಟ್ಸ್ ಗಳಿಸಿದರು.

ಪುರುಷರ ವಿಭಾಗದ ಇತರ ಪಂದ್ಯಗಳಲ್ಲಿ ಎಎಸ್‌ಸಿ 98–68ರಲ್ಲಿ ಬಿ.ಸಿ ಬಿ.ಸಿಯನ್ನು ಸೋಲಿಸಿತು. ಡಿವೈಇಎಸ್ ಬೆಂಗಳೂರು 66–32ರಲ್ಲಿ ಎಂಸಿಎಚ್‌ಎಸ್ ವಿರುದ್ಧ, ಐಬಿಬಿಸಿ 83–54ರಲ್ಲಿ ಕೆಎಸ್‌ಪಿ ವಿರುದ್ಧ, ವೈಎಂಎಂಎ 56–55ರಲ್ಲಿ ಬ್ರದರ್ಸ್ ಬಿಸಿ ವಿಜಯಪುರ ವಿರುದ್ಧ, ವಿವೇಕ್ಸ್ ಎಸ್‌ಸಿ 120–79ರಲ್ಲಿ ಪಿನಾಕಿನಿ ಬಿ.ಜಿ ವಿರುದ್ಧ, ಮಂಗಳೂರು ಬಿ.ಸಿ 79–68ರಲ್ಲಿ ಬೀಗಲ್ಸ್ ಬಿ.ಸಿ ವಿರುದ್ಧ, ಬ್ಯಾಂಕ್ ಆಫ್ ಬರೋಡ 82–33ರಲ್ಲಿ ರಾಜ್‌ಕುಮಾರ್ ಬಿ.ಸಿ ವಿರುದ್ಧ ಜಯ ಗಳಿಸಿತು.

ಮಹಿಳೆಯರ ವಿಭಾಗದಲ್ಲಿ ಡಿವೈಇಎಸ್ ವಿದ್ಯಾನಗರ 49–17ರಲ್ಲಿ ವಿವೇಕ್ಸ್ ಎಸ್‌ಸಿಯನ್ನು, ಬೀಗಲ್ಸ್ ಬಿ.ಸಿ 48–35ರಲ್ಲಿ ಸಿ.ಜೆ.ಸಿಯನ್ನು, ರಾಜ್‌ಮಹಲ್ ಎಸ್‌ಸಿ 65–51ರಲ್ಲಿ ಡಿವೈಇಎಸ್ ವಿಜಯಪುರವನ್ನು, ರಾಜ್‌ಕುಮಾರ್ ಬಿ.ಸಿ 49–24ರಲ್ಲಿ ಎಂ.ಎನ್.ಕೆ ರಾವ್ ಪಾರ್ಕ್ ಬಿ.ಸಿಯನ್ನು ಸೋಲಿಸಿತು.

ಗೋವಾ ಆಸೆಗೆ ಒಎಫ್‌ಸಿ ತಣ್ಣೀರು

ವಾಸ್ಕೊ: ಹೊಸ ಕೋಚ್ ಮಾರ್ಗದರ್ಶನದಲ್ಲಿ ಮೊದಲ ಬಾರಿ ಕಣಕ್ಕೆ ಇಳಿದ ಎಫ್‌ಸಿ ಗೋವಾ ತಂಡದ ಗೆಲುವಿನ ಆಸೆಗೆ ಜೊನಾಥಾಸ್ ಕ್ರಿಸ್ಟಿಯನ್ ತಣ್ಣೀರು ಸುರಿದರು. ಶುಕ್ರವಾರ ರಾತ್ರಿ ಇಲ್ಲಿ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಎಫ್‌ಸಿ ಗೋವಾ ಮತ್ತು ಒಡಿಶಾ ಎಫ್‌ಸಿ ತಂಡಗಳ ನಡುವಿನ ಪಂದ್ಯ 1–1ರ ಡ್ರಾದಲ್ಲಿ ಮುಕ್ತಾಯವಾಯಿತು.

ದೇವೇಂದ್ರ ಮರ್ಗಾಂವ್ಕರ್ ಅವರ ನೆರವಿನೊಂದಿಗೆ ಇವಾನ್ ಗೊಂಜಾಲೆಜ್ 42ನೇ ನಿಮಿಷದಲ್ಲಿ ಗಳಿಸಿದ ಗೋಲಿನೊಂದಿಗೆ ಗೋವಾ ತಂಡ ಮುನ್ನಡೆ ಗಳಿಸಿತ್ತು. ಆದರೆ 53ನೇ ನಿಮಿಷದಲ್ಲಿ ಜೊನಾಥಾಸ್ ಗಳಿಸಿದ ಗೋಲಿನೊಂದಿಗೆ ಒಡಿಶಾ ತಿರುಗೇಟು ನೀಡಿತು.

ಆರಂಭದಲ್ಲಿ ಸತತ ಮೂರು ಪಂದ್ಯಗಳನ್ನು ಸೋತ ಕಾರಣ ತಂಡದ ಕೋಚ್ ಯುವಾನ್ ಫೆರಾಂಡೊ ಅವರನ್ನು ಗೋವಾ ತಂಡ ವಜಾಗೊಳಿಸಿತ್ತು. ನಂತರ ಡೆರಿಕ್ ಪೆರೇರಾ ಅವರನ್ನು ಕೋಚ್ ಆಗಿ ನೇಮಕ ಮಾಡಿಕೊಂಡಿತ್ತು.

ಇಂದು ಬಿಡುವು: ಕ್ರಿಸ್‌ಮಸ್ ಪ್ರಯುಕ್ತ ಶನಿವಾರ ಪಂದ್ಯ ಇಲ್ಲ. ಭಾನುವಾರ ತಿಲಕ್ ಮೈದಾನದಲ್ಲಿ ನಡೆಯಲಿರುವ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ಎಫ್‌ಸಿ ಮತ್ತು ಜೆಮ್ಷೆಡ್‌ಪುರ ಎಫ್‌ಸಿ ತಂಡಗಳು ಸೆಣಸಲಿವೆ.

ಎಫ್‌ಸಿ ಗೋವಾ ತಂಡದ ಇವಾನ್ ಗೊನ್ಸಾಲೆಜ್ ಗೋಲು ಗಳಿಸಿ ಸಂಭ್ರಮಿಸಿದರು

ಬೆಂಗಳೂರು ರೇಸ್

ಆಬ್ಸಿಡಿಯನ್ ಗೆಲ್ಲುವ ನಿರೀಕ್ಷೆ

ಬೆಂಗಳೂರು 2000 ಗಿನ್ನೀಸ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಆಬ್ಸಿಡಿಯನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.45ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸೆಟೆರ್ಹಾ 13, ಲಾರ್ಡ್ಸ್ ಆಫ್ ಲೆಜೆಂಡ್ 2, ಮೆಸರ್ ಆಫ್ ಟೈಮ್ 12

2ನೇ ರೇಸ್: ಡ್ರೀಮ್ ಚೇಸರ್ 8, ಅಕಸ್ಟರ್ 4, ಕೇಪಬಲ್ 6

3ನೇ ರೇಸ್: ಗೋಲ್ಡನ್ ವಿಷನ್ 1, ಜೆನರಲ್ ಪ್ಯಾಟನ್ 3, ಗ್ಯಾಲಕ್ಟಿಕಲ್ 2

4ನೇ ರೇಸ್: ಸ್ಪೆಕ್ಟಾಕ್ಯುಲರ್ 12, ಪರ್ಫೆಕ್ಟ್ ಎಂಪ್ರೆಸ್ 10, ಆರ್ಮರಿ 5

5ನೇ ರೇಸ್: ಸೆಟ್ ಟು ವಿನ್ 1, ಕ್ವಾಸಿರ್ 2, ಸ್ಕಾಫನ್‌ಬರ್ಗ್ 5

6ನೇ ರೇಸ್: ಆಬ್ಸಿಡಿಯನ್ 5, ಅಸ್ಕೊವಾಲ್ 1, ಕೆನ್‌ಸಿಂಗ್ಟನ್ 4

7ನೇ ರೇಸ್: ಕಾಪರ್ ಸನ್‌ರೈಸ್ 9, ಎಸೆರಾಸ್ 2, ಮಸ್ಟೀರಿಯನ್ 3

8ನೇ ರೇಸ್: ಕಟಾನ 1, ಫೋರ್ ವ್ಹೀಲ್ ಡ್ರೈವ್ 2, ಮಾರ್ಕೊ ಪೋಲೊ 4

ಉತ್ತಮ ಬೆಟ್: ಡ್ರೀಮ್ ಚೇಸರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ವಿಜಯ್ ಹಜಾರೆ ಟ್ರೋಫಿ: ಅಪರಾಜಿತ್, ಶೆಲ್ಡನ್ ಶತಕ

ಫೈನಲ್‌ಗೆ ತಮಿಳುನಾಡು, ಹಿಮಾಚಲಪ್ರದೇಶ

ಜೈಪುರ (ಪಿಟಿಐ): ತಮಿಳುನಾಡು ಮತ್ತು ಹಿಮಾಚಲ ಪ್ರದೇಶ ತಂಡಗಳು ವಿಜಯ್ ಹಜಾರೆ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯಗಳಲ್ಲಿ ತಮಿಳುನಾಡು ತಂಡವು ಸೌರಾಷ್ಟ್ರ ವಿರುದ್ಧ 2 ವಿಕೆಟ್‌ಗಳಿಂದ ಜಯ ಗಳಿಸಿತು. ಹಿಮಾಚಲಪ್ರದೇಶ ತಂಡವು 77 ರನ್‌ಗಳಿಂದ ಸರ್ವಿಸಸ್ ವಿರುದ್ಧ ಗೆದ್ದಿತು.

ಸಂಕ್ಷಿಪ್ತ ಸ್ಕೋರು: ಕೆ.ಎಲ್. ಸೈನಿ ಕ್ರೀಡಾಂಗಣ: ಸೌರಾಷ್ಟ್ರ: 50 ಓವರ್‌ಗಳಲ್ಲಿ 8ಕ್ಕೆ 310 (ವಿಶ್ವರಾಜ್ ಜಡೇಜ 52, ಶೆಲ್ಡನ್ ಜಾಕ್ಸನ್ 134, ಪ್ರೇರಕ್ ಮಂಕಡ್ 37, ಅರ್ಪಿತ್ ವಾಸವದಾ 57, ಸಿಲಂಬರಸನ್ **54ಕ್ಕೆ3, ವಿಜಯಶಂಕರ್ 72ಕ್ಕೆ4), ತಮಿಳುನಾಡು:** 50 ಓವರ್‌ಗಳಲ್ಲಿ 8ಕ್ಕೆ 314 (ಬಾಬಾ ಅಪರಾಜಿತ್ 122, ಬಾಬಾ ಇಂದ್ರಜೀತ್ 50, ದಿನೇಶ್ ಕಾರ್ತಿಕ್ 31, ವಾಷಿಂಗ್ಟನ್ ಸುಂದರ್ 70, ಚೇತನ್ ಸಕಾರಿಯಾ 62ಕ್ಕೆ5, ಯುವರಾಜ್ ಚುಡಾಸಮಾ 69ಕ್ಕೆ2) ಫಲಿತಾಂಶ: ತಮಿಳುನಾಡು ತಂಡಕ್ಕೆ 2 ವಿಕೆಟ್‌ಗಳ ಜಯ.

ಸವಾಯಿ ಮಾನಸಿಂಗ್ ಕ್ರೀಡಾಂಗಣ: ಹಿಮಾಚಲಪ್ರದೇಶ: 50 ಓವರ್‌ಗಳಲ್ಲಿ 6ಕ್ಕೆ 281 (ಪ್ರಶಾಂತ್ ಚೋಪ್ರಾ 78, ದಿಗ್ವಿಜಯ್ ರಂಗಿ 37, ರಿಷಿ ಧವನ್ 84, ಆಕಾಶ್ ವಸಿಷ್ಠ ಔಟಾಗದೆ 45, ರಾಜ್ ಬಹಾದೂರ್ 52ಕ್ಕೆ2) **ಸರ್ವಿಸಸ್:** 46.1 ಓವರ್‌ಗಳಲ್ಲಿ 204 (ರವಿ ಚೌಹಾಣ್ 45, ರಜತ್ ಪಲಿವಾಲಾ 55, ದೇವೆಂದರ್ ಲೊಹಚಾಬ್ 34, ರಿಷಿ ಧವನ್ 27ಕ್ಕೆ4, ಸಿದ್ದಾರ್ಥ್ ಶರ್ಮಾ 34ಕ್ಕೆ2, ಆಕಾಶ್ ವಸಿಷ್ಠ 28ಕ್ಕೆ2) ಫಲಿತಾಂಶ: ಹಿಮಾಚಲಪ್ರದೇಶ ತಂಡಕ್ಕೆ 77 ರನ್ ಜಯ.

ಫೈನಲ್
ತಮಿಳುನಾಡು–ಹಿಮಾಚಲಪ್ರದೇಶ
ಡಿ. 26
ಸವಾಯಿ ಮಾನಸಿಂಗ್ ಕ್ರೀಡಾಂಗಣ.

ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್: ಕಿಕ್‌ಸ್ಟಾರ್ಟ್‌ಗೆ ಭರ್ಜರಿ ಜಯ

ಎಫ್‌ಸಿಬಿ ಯುನೈಟೆಡ್‌ಗೆ ಗೆಲುವಿನ 'ಡಬಲ್'

ಬೆಂಗಳೂರು: ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡ ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನಲ್ಲಿ ಶುಕ್ರವಾರ ಗೆಲುವಿನ 'ಡಬಲ್' ಸಾಧನೆ ಮಾಡಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯಗಳಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ 3–0ಯಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿಯನ್ನು ಮತ್ತು 6–0ಯಿಂದ ಎಡಿಇಎಫ್‌ಸಿಯನ್ನು ಮಣಿಸಿತು.

ನಟ ಪುನೀತ್ ರಾಜ್‌ಕುಮಾರ್ ಅವರ ನಿಧನದಿಂದಾಗಿ ಅಕ್ಟೋಬರ್ 29ರಂದು ಬೆಂಗಳೂರು ಯುನೈಟೆಡ್ ಹಾಗೂ ಇಂಡಿಪೆಂಡೆನ್ಸ್ ನಡುವಿನ ಪಂದ್ಯವನ್ನು 70ನೇ ನಿಮಿಷದಲ್ಲಿ ಸ್ಥಗಿತಗೊಳಿಸಲಾಗಿತ್ತು. ಆ ಪಂದ್ಯವನ್ನು ಶುಕ್ರವಾರ ಮುಂದುವರಿಸಲಾಯಿತು. ಪಂದ್ಯ ನಿಂತಾಗ 2–0 ಮುನ್ನಡೆಯಲ್ಲಿದ್ದ ತಂಡ ಶುಕ್ರವಾರ 20 ನಿಮಿಷಗಳ ಪಂದ್ಯದಲ್ಲಿ ಮತ್ತೊಂದು ಗೋಲು ಗಳಿಸಿತು. ರೊನಾಲ್ಡೊ ಆಗಸ್ಟೊ ಆ್ಯಂಟೊನಿಯೊ (11ನೇ ನಿಮಿಷ). ಲೂಕ್ ಮಜೆಸೆನ್ (19ನೇ ನಿ) ಮತ್ತು ಮೊಹಮ್ಮದ್ ರೆಹಬರ್ (88ನೇ ನಿ) ಗೋಲು ಗಳಿಸಿದರು.

ಗೆಲುವಿನ ನಂತರ ಸಂಭ್ರಮಿಸಿದ ಎಫ್‌ಸಿ ಬೆಂಗಳೂರು ತಂಡದ ಆಟಗಾರರು (ಎಡದಿಂದ): ನಿಹಾಲ್ ಕೊಲ್ಯಾಸೊ, ಮೊಹಮ್ಮದ್ ರೆಹಬರ್, ರೊನಾಲ್ಡೊ ಆಗಸ್ಟೊ ಮತ್ತು ಜೇಸನ್ ಜೋರ್ಡನ್ –ಪ್ರಜಾವಾಣಿ ಚಿತ್ರ

ಮತ್ತೊಂದು ಪಂದ್ಯದಲ್ಲಿ ರೊನಾಲ್ಡೊ ಆಗಸ್ಟೊ (8, 68ನೇ ನಿ), ಥೋಕೊಮ್ ಜೇಮ್ಸ್ ಸಿಂಗ್ (44ನೇ ನಿ), ಮೊಹಮ್ಮದ್ ರೆಹಬರ್ (70ನೇ ನಿ) ಮತ್ತು ನಿಹಾಲ್ ಕೊಲ್ಯಾಕೊ (83, 90 + 2ನೇ ನಿ) ಗೋಲು ಗಳಿಸಿದರು.

ಕಿಕ್‌ಸ್ಟಾರ್ಟ್‌ಗೆ ಮಣಿದ ಎಂಇಜಿ

ಇದೇ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪ್ರಿನ್ಸ್‌ವಿಲ್ ಮತ್ತು ಅಂಕಿತ್ ಅವರ ಹ್ಯಾಟ್ರಿಕ್ ನೆರವಿನಿಂದ ಕಿಕ್ ಸ್ಟಾರ್ಟ್ ಎಫ್‌ಸಿ 9–1ರಲ್ಲಿ ಎಂಇಜಿ–ಸೆಂಟರ್ ವಿರುದ್ಧ ಗೆಲುವು ಸಾಧಿಸಿತು. ಕಿಕ್‌ಸ್ಟಾರ್ಟ್‌ಗಾಗಿ ಪ್ರಿನ್ಸ್‌ವಿಲ್ ಎಮಕ (7, 54, 75 ಮತ್ತು 81ನೇ ನಿ), ಸುಧೀರ್ ಕೋಟಿಕೇಳ (40, 72ನೇ ನಿ), ಅಂಕಿತ್ (43, 45 ಮತ್ತು 68ನೇ ನಿ) ಗೋಲು ಗಳಿಸಿದರು. ಎಂಇಜಿ ತಂಡದ ಏಕೈಕ ಗೋಲು ಗಳಿಸಿದವರು ರಾಹುಲ್ ರಾಮಕೃಷ್ಣ (49ನೇ ನಿ).

ಬೆಂಗಳೂರು ಈಗಲ್ಸ್ 4–1ರಲ್ಲಿ ಎಫ್‌ಸಿ ಡೆಕ್ಕನ್ ತಂಡವನ್ನು ಸೋಲಿಸಿತು. ದೊರ್ಜಿ (3ನೇ ನಿ) ವಿಜಯ್ ತಂಗವೇಲು (16ನೇ ನಿ), ಅಪ್ಪು (45 + 1ನೇ ನಿ) ಮತ್ತು ಆ್ಯಶ್ಲಿ (90 + 2ನೇ ನಿ) ಈಗಲ್ಸ್‌ಗಾಗಿ ಗೋಲು ಗಳಿಸಿದರೆ ಡೆಕ್ಕನ್ ಪರವಾಗಿ ಫೆಬಿನ್ ದಾಸ್ (15ನೇ ನಿ) ಚೆಂಡನ್ನು ಗುರಿ ಮುಟ್ಟಿಸಿದರು.

ಶನಿವಾರ ವಿಶ್ರಾಂತಿ ದಿನವಾಗಿದ್ದು ಭಾನುವಾರ ಮಹಿಳಾ ಲೀಗ್‌ನ ಪಂದ್ಯಗಳು ನಡೆಲಿವೆ.

ಬರ್ತಿದೆ ಗಜಾನನ ಆ್ಯಂಡ್ ಗ್ಯಾಂಗ್!

6

ಕಳೆದು ಹೋಗದಿರಲಿ 'ನಮ್ಮ ಸಮಯ'

ಒತ್ತಡ ಇಂದಿನ ಜನಜೀವನದ ಅವಿಭಾಜ್ಯ ಅಂಗ. ಒತ್ತಡವಿಲ್ಲದವರನ್ನು ಹುಡುಕುವುದೂ ಕಷ್ಟ. ಇದರ ನಡುವೆ 'ನಮ್ಮ ಸಮಯ' ಎಂಬುದು ಮರೆತೇ ಹೋಗುತ್ತಿದೆ. ಹಾಗಾದರೆ ನಮ್ಮ ಕ್ಷಣವನ್ನು ಅನುಭವಿಸುವುದು ಹೇಗೆ?



ಸುಕೃತ ಎಸ್.

ಒತ್ತಡ ತುಂಬಿದ ಬದುಕಿನ ಮಧ್ಯೆ ಸಣ್ಣ ಸಣ್ಣ ಸಂತೋಷದ ಕ್ಷಣಗಳನ್ನು ಅನುಭವಿಸುವ ವ್ಯವಧಾನವನ್ನೂ ನಾವು ಕಳೆದುಕೊಂಡಿದ್ದೇವೆ. ಹಣ ಸಂಪಾದನೆ ಮಾತ್ರವೇ ಮುಖ್ಯವಾಗಿ ನೆಮ್ಮದಿ ತರುವ ಹಲವು ಸಣ್ಣ ವಿಷಯಗಳತ್ತ ನಮ್ಮ ಗಮನ ಹೋಗುವುದೇ ಇಲ್ಲ. ಆದರೆ, ಇಂಥ ಸಣ್ಣ ಸಣ್ಣ ವಿಷಯಗಳೇ ನಮಗೆ ಉತ್ಸಾಹ ತುಂಬುತ್ತವೆ, ಮೊಗದಲ್ಲಿ ನಗು ಮೂಡುವಂತೆ ಮಾಡುತ್ತವೆ.

ಮನಸನ್ನು ಅರಳಿಸಿ, ಮೊಗದಲ್ಲಿ ನಗು ಮೂಡುವಂತೆ ಮಾಡುವ, ಆ 'ನಮ್ಮ ಸಮಯ'ವನ್ನು ಹುಡುಕುವುದು ಹೇಗೆ? ಅದನ್ನು ಅನುಭವಿಸುವುದು ಹೇಗೆ? ಬನ್ನಿ ನೋಡೋಣ.

- ಮನೆಯಿಂದಲೇ ಕಚೇರಿ ಕೆಲಸ ಮಾಡುತ್ತಿದ್ದರೆ, ಮುಂದಿನ ಝೂಮ್ ಮೀಟಿಂಗ್ ಬಗ್ಗೆ ತಲೆಕೆಡಿಸಿಕೊಂಡು ಗಡಿಬಿಡಿಯಲ್ಲಿ ಊಟ ಮಾಡುವುದಕ್ಕಿಂತ ಇರುವ ಕಡಿಮೆ ಸಮಯದಲ್ಲೇ ಆರಾಮಾಗಿ ಕುಳಿತು ಊಟ ಮಾಡುವುದು ಉತ್ತಮ. ಮನೆಯಲ್ಲಿ ಅಥವಾ ಕಚೇರಿಯಲ್ಲೇ ಊಟ ಮಾಡುವುದಾದರೆ, ಕಿಟಕಿ ಪಕ್ಕ ಕೂತು, ಹೊರಗಡೆ ನೋಡಿಕೊಂಡು, ಶುದ್ಧ ಗಾಳಿ ಪಡೆಯುತ್ತಾ ಊಟ ಮಾಡಿ. ಇದು ಮೆದುಳಿಗೆ ಒಂದಿಷ್ಟು ಆರಾಮ ನೀಡುತ್ತದೆ. ಊಟ ಮಾಡುವಾಗ ಆದಷ್ಟು ಮೊಬೈಲ್‌ನಂತಹ ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳಿಂದ ದೂರವಿರಿ. ಊಟ ಮುಗಿಸಿ ಐದು ನಿಮಿಷಗಳ ಸಣ್ಣ ವಾಕ್ ಮಾಡಿ.
- ಆಪ್ತರೊಂದಿಗಿನ ಪುಟ್ಟ ಮಾತುಕತೆ ಕೂಡ ಒತ್ತಡದಿಂದ ನಿಮ್ಮನ್ನು ದೂರ ಇಡಬಹುದು. ಕೆಲಸ ಮಧ್ಯೆ ಪೋಷಕರು, ಸ್ನೇಹಿತರು, ಆಪ್ತೇಷ್ಟರೊಂದಿಗೆ ನಡೆಸುವ ಸಂಭಾಷಣೆ ಆಪ್ತಭಾವ ನೀಡಿ, ಉತ್ಸಾಹ ತುಂಬಬಲ್ಲದು. ಇಲ್ಲವಾದಲ್ಲಿ, ಕಾಫಿ ಅಥವಾ ಟೀ ಬ್ರೇಕ್‌ನಲ್ಲಿ ಕಚೇರಿಯ ಗೆಳೆಯರ ಬಳಗದೊಂದಿಗೆ ಕಾಲ ಕಳೆಯಿರಿ. ಇದು ನಿಮ್ಮ ಮನಸ್ಸಿಗೆ ಆರಾಮ ನೀಡುತ್ತದೆ.
- ಕಚೇರಿಗೆ ಬರುವಾಗ ಅಥವಾ ಕಚೇರಿಯಿಂದ ಮನೆಗೆ ಹೋಗುವಾಗ, ಟ್ರಾಫಿಕ್‌ನಲ್ಲಿ ಕೆಂಪು ದೀಪ ಬಂದಾಗ ಕಚೇರಿಗೆ ತಡವಾಯಿತು ಅಥವಾ ಇನ್ನೇನನ್ನೋ ಯೋಚಿಸುವ ಬದಲು ದೀರ್ಘವಾಗಿ ಮೆಲ್ಲನೆ ಉಸಿರಾಡಿ. ಕೆಂಪು ದೀಪ ಹೋಗುವವರೆಗೂ ಹೀಗೆ ಮಾಡುವುದರಿಂದ ಮನಸ್ಸಿಗೆ ಆರಾಮವೆನಿಸುತ್ತದೆ.
- ಕಚೇರಿಯಿಂದ ಮನೆಗೆ ಹೋಗುವಾಗ ನಿಮಗೆ ಇಷ್ಟವಾದ ಹಾಡು ಕೇಳಿ. ನಿಮಗೆ ಇಷ್ಟವಾದವರ ಉಪನ್ಯಾಸ/ ಮಾತುಗಳನ್ನು ಆಲಿಸಿ. ಇದರಿಂದ ಒತ್ತಡ ನಿವಾರಣೆಯಾಗುತ್ತದೆ. ಮನಸ್ಸು ಪ್ರಫುಲ್ಲವಾಗುತ್ತದೆ. ಮನೆಗೆ ಹೋದ ನಂತರ ಕುಟುಂಬದವರೊಂದಿಗೆ ಆಪ್ತವಾಗಿ ಬೆರೆಯಲು ಸಹಾಯವಾಗುತ್ತದೆ
- ತುಂಬಾ ಒತ್ತಡ ಎನಿಸಿದಾಗ ಕೆಲವು ಸಣ್ಣಪುಟ್ಟ ವ್ಯಾಯಾಮ ಮಾಡುವುದು ಕೂಡ ಆರಾಮ ನೀಡಬಹುದು. ಸುಮ್ಮನೆ ಕುತ್ತಿಗೆಯನ್ನು ಮೆಲ್ಲನೆ ಕೆಲವು ಸುತ್ತು ತಿರುಗಿಸುವುದು, ಭುಜವನ್ನು ತಿರುಗಿಸುವುದು ಇಂತಹ ಸಣ್ಣಪುಟ್ಟ ವ್ಯಾಯಾಮಗಳನ್ನು ಮಾಡುವುದರಿಂದ ಒತ್ತಡದಿಂದ ಹೊರಬರಬಹುದು. 21 ಬಾರಿ ದೀರ್ಘವಾಗಿ ಉಸಿರಾಡುವುದರಿಂದ ಗಮನವನ್ನು ಕೇಂದ್ರೀಕರಿಸುವ ಜೊತೆಗೆ, ವಿಶ್ರಾಂತಿ ಪಡೆಯಬಹುದು.
- ನಮ್ಮಲ್ಲಿರುವ ಹವ್ಯಾಸಗಳೂ, ಮನಸ್ಸಿನ ಒತ್ತಡವನ್ನು ನಿವಾರಿಸಲು ನೆರವಾಗುತ್ತವೆ. ನಿಮಗೆ ಹಾಡು ಹೇಳುವ ಹವ್ಯಾಸವಿದ್ದರೆ, ಆಗಾಗ್ಗೆ ಹಾಡನ್ನು ಗುನುಗುತ್ತಿರಬಹುದು. ಚಿತ್ರಕಲೆ, ಕರಕುಶಲ ವಸ್ತುಗಳ ತಯಾರಿಸುವವರೂ ಇದೇ ವಿಧಾನದಲ್ಲಿ ಒತ್ತಡವನ್ನು ನಿವಾರಿಸಿಕೊಳ್ಳಬಹುದು

ಸಂಕ್ರಾಂತಿಗೆ ಉಗ್ರಾವತಾರ

ಪ್ರಿಯಾಂಕ ಉಪೇಂದ್ರ

ಸಿನಿಮಾ

ಗುರುಮೂರ್ತಿ ನಿರ್ದೇಶನದ ಪ್ರಿಯಾಂಕ ಉಪೇಂದ್ರ ನಟಿಸುತ್ತಿರುವ 'ಉಗ್ರಾವತಾರ' ಚಿತ್ರ ಸಂಕ್ರಾಂತಿಗೆ ತೆರೆಯ ಮೇಲೆ ಬರುವ ಸಾಧ್ಯತೆ ಇದೆ. ಚಿತ್ರದ ಟೀಸರ್ ಅನ್ನು ನಟ ಉಪೇಂದ್ರ ಅವರು ಪ್ರಿಯಾಂಕ ಅವರ ಜನ್ಮದಿನದಂದು ಬಿಡುಗಡೆಗೊಳಿಸಿದ್ದಾರೆ.

ಚಿತ್ರದಲ್ಲಿ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಪ್ರಿಯಾಂಕ ಕಾಣಿಸಿಕೊಂಡಿದ್ದು, ಇದೇ ಮೊದಲ ಬಾರಿಗೆ ಸಾಹಸ ಪ್ರಧಾನ ಕತೆಯಲ್ಲಿ ನಟಿಸಿದ್ದಾರೆ. ಉಗ್ರಾವತಾರವನ್ನೇ ತಾಳಿ ರೌಡಿಗಳನ್ನು ಮಟ್ಟ ಹಾಕಿದ್ದಾರೆ. ಟೀಸರ್ ನೋಡಿ ಪ್ರತಿಕ್ರಿಯೆ ನೀಡಿದ ಉಪೇಂದ್ರ, 'ಮನೆಯಲ್ಲೇ ಪ್ರಿಯಾಂಕ ಉಗ್ರಾವತಾರವನ್ನು ನಾನು ನೋಡಿದ್ದೇನೆ. ನಿಮಗೆ ಇದು ಹೊಸದು ಅನಿಸಬಹುದು' ಎಂದು ಮುಗುಳ್ನಕ್ಕರು.

ಚಿತ್ರೀಕರಣದ ಅನುಭವ ಹಂಚಿಕೊಂಡ ಪ್ರಿಯಾಂಕ, 'ಆರಂಭದಲ್ಲಿ ಸಾಹಸ ದೃಶ್ಯಗಳಲ್ಲಿ ನಟಿಸಲು ಭಯವಿತ್ತು. ಇವೆಲ್ಲಾ ನಿನ್ನಿಂದ ಆಗದು ಎಂದು ಹಲವರು ಹೇಳಿದರು. ನನ್ನ ಪ್ರಯತ್ನ ಇಲ್ಲಿಯವರೆಗೂ ತಂದು ನಿಲ್ಲಿಸಿದೆ. ಫೈಟ್‌ಗಳು ಸ್ವಾಭಾವಿಕವಾಗಿ ಬರಬೇಕೆಂದು ಕೆಲವು ಕಡೆ ಡ್ಯೂಪ್ ಬಳಸಿಲ್ಲ. ಪ್ರೇಕ್ಷಕರು ಇಷ್ಟಪಟ್ಟರೆ ಇನ್ನು ಮುಂದೆ ಇಂತಹ ಪಾತ್ರಗಳಲ್ಲಿ ನಾನು ಕಾಣಿಸಿಕೊಳ್ಳುತ್ತೇನೆ. ಚಿತ್ರದಲ್ಲಿ ಸಾಮಾಜಿಕ ಸಂದೇಶವನ್ನು ಹೇಳಲಾಗಿದೆ. ಮಹಿಳೆಯರ ವಿರುದ್ಧದ ಶೋಷಣೆ, ಪೊಲೀಸರಿಂದ ಆಗುವ ತೊಂದರೆ ಮುಂತಾದ ವಿಷಯಗಳು ಇದರಲ್ಲಿವೆ' ಎಂದು ಹೇಳಿದರು.

ಪ್ಯಾನ್ ಇಂಡಿಯಾ ಸಿನಿಮಾ ಇದಾಗಿದ್ದು, ಐದು ಭಾಷೆಗಳಲ್ಲಿ ಚಿತ್ರ ತೆರೆ ಕಾಣಲಿದೆ. ಗುರುಮೂರ್ತಿ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರವನ್ನು ಎಸ್.ಜಿ.ಸತೀಶ ನಿರ್ಮಿಸಿದ್ದಾರೆ.



ಚಳಿಗಾಲದಲ್ಲಿ ಚರ್ಮದ ಆರೋಗ್ಯ ಕಾಪಾಡಿಕೊಳ್ಳುವುದು ಸುಲಭವಲ್ಲ. ಆದರೆ ಚರ್ಮದ ಆರೋಗ್ಯ ರಕ್ಷಣೆಯಲ್ಲಿ ನಾವು ಸೇವಿಸುವ ಆಹಾರದ ಪಾತ್ರವೂ ಮಹತ್ವದ್ದು. ಹಾಗಾದರೆ ಚಳಿಗಾಲದ ಆಹಾರ ಹೇಗಿರಬೇಕು?

ಚಳಿಗಾಲ: ಚರ್ಮದ ಆರೋಗ್ಯಕ್ಕೆ ಪೂರಕ ಆಹಾರ

ಮನಸ್ವಿ

ಚಳಿಗಾಲದಲ್ಲಿ ಚರ್ಮದ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ. ಚರ್ಮದ ಆರೋಗ್ಯ ರಕ್ಷಣೆಯಲ್ಲಿ ನಾವು ಸೇವಿಸುವ ಆಹಾರಕ್ರಮದ ಪಾತ್ರವೂ ದೊಡ್ಡದು. ಇದು ದೈಹಿಕಶಕ್ತಿ ಹಾಗೂ ಆರೋಗ್ಯದ ಮೇಲೆ ತುಂಬಾ ಪ್ರಭಾವ ಬೀರುತ್ತದೆ. ಅದರಲ್ಲೂ ಚಳಿಗಾಲದಲ್ಲಿ ದೇಹಕ್ಕೆ ಸೂಕ್ತ ಎನ್ನಿಸುವ ಆಹಾರ ಸೇವಿಸುವುದು ಬಹಳ ಅಗತ್ಯ.

ಆರೋಗ್ಯಕರ ಆಹಾರ ಸೇವನೆ ಕೇವಲ ಚರ್ಮದ ಆರೋಗ್ಯ ಮಾತ್ರವಲ್ಲ ದೇಹತೂಕ ನಿಯಂತ್ರಣ, ರೋಗ ನಿರೋಧಕ ಶಕ್ತಿ ಹೆಚ್ಚಳಕ್ಕೂ ಸಹಕಾರಿ. ಇದು ಚರ್ಮವನ್ನು ಪುನರುಜ್ಜೀವನಗೊಳಿಸುವ ಜೊತೆಗೆ ಕೂದಲ ಆರೋಗ್ಯವನ್ನು ವೃದ್ಧಿಸುತ್ತದೆ. ಜೊತೆಗೆ, ಕೂದಲ ಕಾಂತಿ ಹೆಚ್ಚಿಸಿ, ಕೂದಲು ಉದುರುವಿಕೆಯನ್ನು ಕಡಿಮೆ ಮಾಡುತ್ತದೆ. ಉಗುರಿನ ಆರೋಗ್ಯವನ್ನು ಸುಧಾರಿಸುತ್ತದೆ.

ಹಾಗಾದರೆ, ಚಳಿಗಾಲದಲ್ಲಿ ಯಾವ ರೀತಿಯ ಆಹಾರವನ್ನು, ಎಷ್ಟು ಪ್ರಮಾಣದಲ್ಲಿ ಸೇವಿಸಬೇಕು ಎಂಬುದಕ್ಕೆ ಇಲ್ಲಿ ಮಾಹಿತಿ ನೀಡಲಾಗಿದೆ.

ನೀರು: ನಮ್ಮ ದೈನಂದಿನ ಆಹಾರಕ್ರಮದಲ್ಲಿ ನೀರಿನ ಪಾತ್ರ ಬಹಳ ಮಹತ್ವದ್ದು. ಹೆಚ್ಚು ಹೆಚ್ಚು ನೀರು ಕುಡಿಯುವುದರಿಂದ ದೇಹದಲ್ಲಿ ನೀರಿನಂಶ ಹೆಚ್ಚುತ್ತದೆ. ಸಾಕಷ್ಟು ನೀರು ಕುಡಿಯುವುದರಿಂದ ಚರ್ಮವು ಮೃದುವಾಗುತ್ತದೆ. ನೀರು ಕುಡಿಯದಿದ್ದರೆ ಚರ್ಮ ಒಣಗುವುದು, ಸಿಪ್ಪೆ ಏಳುವುದು, ನೆರಿಗೆ ಮೂಡುವುದು ಹಾಗೂ ಕಾಂತಿ ಕಳೆದುಕೊಳ್ಳುವಂತಹ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಅಷ್ಟೇ ಅಲ್ಲ, ನೀರು ಕುಡಿಯುವುದು ಕಡಿಮೆಯಾದರೆ, ನಿರ್ಜಲೀಕರಣದಂತಹ (ಡೀಹೈಡ್ರೇಷನ್) ಸಮಸ್ಯೆಯೂ ಕಾಣಿಸುತ್ತದೆ.

ಫ್ಯಾಟಿ ಆ್ಯಸಿಡ್: ವಾಲ್‌ನಟ್, ಅಗಸೆ ಬೀಜದಂತಹ ಆಹಾರ ಧಾನ್ಯಗಳು, ಬಂಗುಡೆ, ಸಾಲ್ಮನ್‌ನಂತಹ ಮೀನು ಇವುಗಳಲ್ಲಿ ಒಮೇಗಾ 3 ಫ್ಯಾಟಿ ಆ್ಯಸಿಡ್ ಅಂಶ ಅಧಿಕವಿದೆ. ಇವುಗಳನ್ನು ಸೇವಿಸುವುದರಿಂದ ಚರ್ಮದ ಕಾಂತಿ ಹೆಚ್ಚುತ್ತದೆ. ಇದರಲ್ಲಿ ಚರ್ಮಕ್ಕೆ ಬೇಕಾಗುವ ನೈಸರ್ಗಿಕ ಕೊಬ್ಬಿನಂಶವಿದ್ದು, ಚರ್ಮಕ್ಕೆ ತೇವಾಂಶ ಒದಗಿಸುತ್ತವೆ. ಅಲ್ಲದೇ ಚರ್ಮದ ಹೊಳಪು ಹೆಚ್ಚಿಸಿ ಬೇಗ ವಯಸ್ಸಾದಂತೆ ಕಾಣುವುದಕ್ಕೆ ತಡೆ ಹಾಕುತ್ತವೆ.

ವಿಟಮಿನ್ ಎ ಹಾಗೂ ಸಿ ಅಂಶ ಇರುವ ಹಣ್ಣು ಹಾಗೂ ತರಕಾರಿ ಸೇವನೆ: ಸಿಟ್ರಸ್ ಅಂಶವಿರುವ ಕಿತ್ತಳೆ ಹಾಗೂ ದ್ರಾಕ್ಷಿಯಂತಹ ಹಣ್ಣುಗಳಲ್ಲಿ ವಿಟಮಿನ್ ಸಿ ಅಧಿಕವಿದೆ. ಇದು ಕೊಲಾಜನ್ ಅನ್ನು ಉತ್ಪಾದಿಸಲು ಸಹಾಯ ಮಾಡುತ್ತದೆ. ಕೊಲಾಜನ್ ಚಳಿಗಾಲದಲ್ಲಿ ಚರ್ಮದ ಆರೋಗ್ಯಕ್ಕೆ ಬೇಕಾಗುವ ಪ್ರೊಟೀನ್ ಅನ್ನು ಒದಗಿಸುತ್ತದೆ. ಮಾಂಸ, ಮೀನು, ಮೊಟ್ಟೆ ಹಾಗೂ ಡೇರಿ ಉತ್ಪನ್ನಗಳಲ್ಲಿ ವಿಟಮಿನ್ ಎ ಅಂಶ ಅಧಿಕವಿದೆ. ಇನ್ನು ಸಸ್ಯಾಹಾರಿಗಳು ಆಲೂಗೆಡ್ಡೆ, ಕ್ಯಾರೆಟ್ ಹಾಗೂ ಬ್ರೊಕೋಲಿಯಂತಹ ತರಕಾರಿಗಳನ್ನು ಸೇವಿಸಬಹುದು. ಇವುಗಳಲ್ಲಿ ವಿಟಮಿನ್ ಎ ಅಂಶ ಅಧಿಕವಾಗಿದೆ. ಈ ತರಕಾರಿಗಳು ದೇಹಕ್ಕೆ ಬೇಕಾಗುವ ನೀರಿನಂಶವನ್ನು ಒದಗಿಸುತ್ತವೆ. ಅಲ್ಲದೇ ಚರ್ಮ ಒಣಗುವುದು, ತುರಿಕೆ ಹಾಗೂ ಚರ್ಮ ಕಾಂತಿಹೀನವಾಗುವಂತಹ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ.

ಬೆಣ್ಣೆಹಣ್ಣು: ಬೆಣ್ಣೆಹಣ್ಣಿನಲ್ಲಿ ಆರೋಗ್ಯಕರ ಕೊಬ್ಬಿನಂಶ, ಜೀವಸತ್ವಗಳು ಹಾಗೂ ಖನಿಜಾಂಶ ಅಧಿಕವಾಗಿದೆ. ಈ ಹಣ್ಣಿನಲ್ಲಿರುವ ಪ್ರೊಟೀನ್ ಅಂಶ ಚರ್ಮದ ಕೊಲಾಜನ್ ಮತ್ತು ಎಲಾಸ್ಟಿನ್ ಅನ್ನು ಬಿಗಿಗೊಳಿಸಲು ಕಾರಣವಾಗಿದೆ.

ಹಸಿರುಸೊಪ್ಪುಗಳು: ಚರ್ಮದ ಕಾಂತಿ ಹೆಚ್ಚಲು ಚಳಿಗಾಲದಲ್ಲಿ ಹೆಚ್ಚು ಹೆಚ್ಚು ಹಸಿರು ಸೊಪ್ಪಿನ ಸೇವನೆ ಅಗತ್ಯ. ಇದರಲ್ಲಿ ಖನಿಜಾಂಶ ಹೇರಳವಾಗಿದ್ದು ದೇಹದ ಆರೋಗ್ಯಕ್ಕೆ ಬಹಳ ಮುಖ್ಯ. ಇದರಲ್ಲಿರುವ ಆ್ಯಂಟಿಆಕ್ಸಿಡೆಂಟ್ ಅಂಶ ಚರ್ಮದ ಅಲರ್ಜಿಯನ್ನು ಕಡಿಮೆ ಮಾಡುತ್ತದೆ. ಚರ್ಮದ ಹೊಳಪು ಹೆಚ್ಚುವಂತೆ ಮಾಡುತ್ತದೆ.

ರೆಸಿಪಿ

ಬಾಯಲ್ಲಿ ನೀರೂರಿಸುವ ಬ್ರೌನಿ

ಬ್ರೌನಿ... ಇದನ್ನು ಕೇಳಿದಾಕ್ಷಣ ಒಮ್ಮೆ ತಿರುಗಿ ನೋಡುತ್ತೇವೆ. ಒಮ್ಮೆ ಬ್ರೌನಿ ರುಚಿಯನ್ನು ಸವಿದವರು ಮತ್ತೆ ಕೊಟ್ಟರೆ ಬೇಡ ಎನ್ನುವುದಿಲ್ಲ. ಮೃದುವಾಗಿರುವ ಈ ತಿನಿಸು ಬಾಯಲ್ಲಿಟ್ಟರೆ ಕರಗುವಂತಿದೆ. ಬ್ರೌನಿ ಬೇರೆ ಬೇರೆ ಪರಿಮಳದಲ್ಲೂ ಲಭ್ಯ. ಕೊಂಚ ಸಿಹಿ ಹೆಚ್ಚಿದ್ದು ಕೇಕ್‌ನಂತಿರುವ ಬ್ರೌನಿ ಕೇಕ್ ಪ್ರಿಯರಿಗೆ ಅಚ್ಚುಮೆಚ್ಚು. ಡಿಸೆಂಬರ್ ತಿಂಗಳು ಬಂತೆಂದರೆ ಕ್ರಿಸ್‌ಮಸ್ ಸಲುವಾಗಿ ಬಗೆ ಬಗೆಯ ಕೇಕ್ ಬ್ರೌನಿಗಳನ್ನು ತಯಾರಿಸುತ್ತಾರೆ. ಬ್ರೌನಿಯನ್ನು ತಾಜಾ ಇರುವಾಗಲೇ ತಿಂದರೆ ರುಚಿ. ಆ ಕಾರಣಕ್ಕೆ ನೀವು ಮನೆಯಲ್ಲಿ ಸುಲಭವಾಗಿ ಹಾಗೂ ಸರಳವಾಗಿ ತಯಾರಿಸಿ ತಿನ್ನಬಹುದು. ಬ್ರೌನಿ ಕೇಕ್ ಅನ್ನು ಸಕ್ಕರೆರಹಿತವಾಗಿ ತಯಾರಿಸಬಹುದು. ಇದನ್ನು ಮಧುಮೇಹಿಗಳು ಸೇವಿಸಬಹುದು. ಮಕ್ಕಳಿಗಂತೂ ಬ್ರೌನಿ ತುಂಬಾ ಇಷ್ಟವಾಗುವ ಸಿಹಿ ತಿನಿಸು.

ಬಾದಾಮಿ, ಬಾಳೆಹಣ್ಣು, ಕೋಕೊವಾ, ಮೊಟ್ಟೆ.. ಹೀಗೆ ಮನೆಯಲ್ಲೇ ಕಡಿಮೆ ಸಾಮಗ್ರಿಗಳಿಂದ ಬ್ರೌನಿ ತಯಾರಿಸಬಹುದು. ಇದನ್ನು ಪೌಷ್ಟಿಕಾಂಶಯುಕ್ತ ಸಾಮಗ್ರಿಗಳಿಂದ ತಯಾರಿಸುವ ಕಾರಣ ರೋಗನಿರೋಧಕ ಶಕ್ತಿಯನ್ನೂ ಹೆಚ್ಚಿಸುತ್ತದೆ. ಕೋಕೊವಾ ಪುಡಿಯಲ್ಲಿ ಆ್ಯಂಟಿಆಕ್ಸಿಡೆಂಟ್ ಅಂಶ ಅಧಿಕವಿದೆ. ಬಾದಾಮಿ ಬೆಣ್ಣೆಯಲ್ಲಿ ಪ್ರೊಟೀನ್ ಅಂಶ ಹೆಚ್ಚಿದೆ. ಬಾಳೆಹಣ್ಣಿನಲ್ಲಿ ಪೊಟ್ಯಾಶಿಯಂ ಅಧಿಕವಿದೆ. ಹಾಗಾಗಿ ಇದನ್ನು ಆರೋಗ್ಯಕರ ಡೆಸರ್ಟ್ ಎಂದೂ ಕರೆಯಬಹುದು.

ಅಲ್ಮಂಡ್ ಬಟರ್ ಬ್ರೌನಿ

ಬೇಕಾಗುವ ಸಾಮಗ್ರಿಗಳು: ಮಧ್ಯಮ ಗಾತ್ರದ ಕಳಿತ ಬಾಳೆಹಣ್ಣು – 4, ಅಲ್ಮಂಡ್ ಬಟರ್ – 1/2 ಕಪ್ (ಸಕ್ಕರೆ ರಹಿತ), ಕೋಕೊವಾ ಪುಡಿ – ಅರ್ಧ ಕಪ್.

ತಯಾರಿಸುವ ವಿಧಾನ: ಒವೆನ್ ಅನ್ನು 350 ಡಿಗ್ರಿಯಲ್ಲಿ ಬಿಸಿ ಮಾಡಿಕೊಳ್ಳಿ. ಒಂದು 8*8 ಇಂಚು ಗಾತ್ರದ ಬೇಕಿಂಗ್ ಪ್ಯಾನ್‌ಗೆ ಪ್ಯಾರ್‌ಮೆಂಟ್ ಪೇಪರ್ ಹಚ್ಚಿ ಸಿದ್ಧ ಮಾಡಿಕೊಳ್ಳಿ. ಬ್ಲೆಂಡರ್ ಸಹಾಯದಿಂದ ಬಾಳೆಹಣ್ಣನ್ನು ಕಿವುಚಿಕೊಳ್ಳಿ. ಅದಕ್ಕೆ ಆಮಂಡ್ ಬಟರ್ ಹಾಗೂ ಕೋಕೊವಾ ಪುಡಿಯನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಇದನ್ನು ಮೊದಲೇ ತಯಾರಿಸಿ ಇಟ್ಟುಕೊಂಡು ಪ್ಯಾನ್‌ಗೆ ಸುರಿಯಿರಿ. ಇದನ್ನು ಒವೆನ್‌ನಲ್ಲಿಟ್ಟು 20 ನಿಮಿಷಗಳ ಕಾಲ ಬೇಯಸಿ. ಈಗ ನಿಮ್ಮ ಮುಂದೆ ಅಲ್ಮಂಡ್ ಬಟರ್ ಬ್ರೌನಿ ತಿನ್ನಲು ಸಿದ್ಧ.

ಪರಿಸರ ಸ್ನೇಹಿ 'ಸೂಪರ್ ಬಾಟಮ್' ಡೈಪರ್

ಪಲ್ಲವಿ ಉಟಗಿ

ಉತ್ಪನ್ನ

ಇಂದಿನ ತಾಯಂದಿರಿಗೆ ಚಿಕ್ಕ ಮಕ್ಕಳ ಪಾಲನೆ-ಪೋಷಣೆ ನಿಜಕ್ಕೂ ಸವಾಲು. ಅದರಲ್ಲೂ ಪುಟ್ಟ ಮಕ್ಕಳಿಗೆ ಡೈಪರ್ ತೊಡಿಸುವುದು ಅವರಿಗೆ ಸಂಕಟವೇ ಸರಿ. ಯಾಕೆಂದರೆ ದಿನಪೂರ್ತಿ ಡೈಪರ್ ತೊಡಿಸುವುದರಿಂದ ಹಸುಗೂಸಿನಲ್ಲಿ ಚರ್ಮದ ಸಮಸ್ಯೆ ಕಾಣಿಸಿಕೊಳ್ಳಬಹುದು ಎಂಬ ಆತಂಕ ತಾಯಂದಿರನ್ನು ಕಾಡಬಹುದು. ಈ ಭಯವನ್ನು ದೂರ ಮಾಡುವ ಸಲುವಾಗಿಯೇ 'ಸೂಪರ್ ಬಾಟಮ್' ಎಂಬ ಸಂಸ್ಥೆ ಪರಿಸರ ಸ್ನೇಹಿ ಡೈಪರ್ ಹಾಗೂ ಮಕ್ಕಳ ಒಳ ಉಡುಪುಗಳನ್ನು ತಯಾರಿಸಿದೆ. ಪಲ್ಲವಿ ಉಟಗಿ ಎನ್ನುವವರು ಸೂಪರ್ ಬಾಟಮ್ ಸಂಸ್ಥೆಯ ರೂವಾರಿ.

ಈ ಪರಿಸರ ಸ್ನೇಹಿ ಡೈಪರ್ ಅನ್ನು ಸಾವಯವ ಹತ್ತಿಯಿಂದ ತಯಾರಿಸಲಾಗಿದ್ದು, ಪುನರ್ ಬಳಕೆ ಮಾಡಬಹುದು. ಬಟ್ಟೆಯಿಂದ ತಯಾರಿಸಿದ ಯುಎನ್‌ಒ 2.0 ಡೈಪರ್ ಅನ್ನು ಮೂರು ತಿಂಗಳ ಮಗುವಿನಿಂದ ಮೂರು ವರ್ಷ ವಯೋಮಾನದವರೆಗಿನ ಮಕ್ಕಳಿಗೆ ತೊಡಿಸಬಹುದು.

ಈ ಡೈಪರ್ ತೇವ ನಿರೋಧಕವಾಗಿದ್ದು, ರಾತ್ರಿವೇಳೆ ಮಗುವಿನ ಉತ್ತಮ ನಿದ್ದೆಗೂ ಸಹಕರಿಸುತ್ತದೆ.

'ಸೂಪರ್ ಬಾಟಮ್ ಉತ್ಪನ್ನಗಳು ನನಗೆ ನಿಜಕ್ಕೂ ಬಹಳ ಮೆಚ್ಚುಗೆಯಾಗಿವೆ. ಇದರಲ್ಲಿ ಒಂದನ್ನು ಆಯ್ಕೆ ಮಾಡಿ ಹೇಳುವುದು ಕಷ್ಟ. ಇದರಲ್ಲಿರುವ ಎಲ್ಲಾ ಉತ್ಪನ್ನಗಳು ನನಗೆ ಇಷ್ಟ. ನನಗೆ ಮಗಳು ಹುಟ್ಟಿದಾಗಿನಿಂದಲೂ ಆಕೆಗೆ ಸೂಪರ್‌ಬಾಟಮ್ ಡೈಪರ್ ಬಳಸಿದ್ದೆ. ಈಗ ಅವಳಿಗೆ ತೊಡಿಸುವ ಒಳ ಉಡುಪುಗಳು ಕೂಡ ಇದೇ ಬ್ರ್ಯಾಂಡ್‌ನದ್ದು. ಸೂಪರ್‌ಬಾಟಮ್ ಉತ್ಪನ್ನಗಳು ಗುಣಮಟ್ಟದ ವಿಷಯದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ. ಇದರೊಂದಿಗೆ ಅವರ ಗ್ರಾಹಕ ಸೇವೆಯೂ ಕೂಡ ಬಹಳ ಚೆನ್ನಾಗಿದೆ' ಎನ್ನುವುದು ಸೂಪರ್ ಬಾಟಮ್ ಡೈಪರ್ ಮತ್ತು ಇತರ ಉತ್ಪನ್ನಗಳನ್ನು ಬಳಸುತ್ತಿರುವ ನಾಲ್ಕು ವರ್ಷದ ಮಗುವಿನ ತಾಯಿ ಪ್ರಜ್ಞಾ ಈಶ್ವರ್ ಅವರ ಅಭಿಪ್ರಾಯ.

ಬೆಂಗಳೂರು ಕರಕುಶಲ ಮೇಳ

ದೇಶದ ವಿವಿಧ ರಾಜ್ಯಗಳಲ್ಲಿರುವ ಕರಕುಶಲ ಕರ್ಮಿಗಳ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸುವ ಸಲುವಾಗಿ ಬೆಂಗಳೂರಿನ ಚಿತ್ರ ಕಲಾ ಪರಿಷತ್‌ನಲ್ಲಿ ಡಿಸೆಂಬರ್ 24ರಿಂದ 'ಬೆಂಗಳೂರು ಆರ್ಟ್ ಅಂಡ್ ಕ್ರಾಫ್ಟ್ ಮೇಳ' ಆರಂಭವಾಗಿದೆ.

ಕ್ರಿಸ್‌ಮಸ್ ಮತ್ತು ಹೊಸ ವರ್ಷಾಚರಣೆಯ ಹಿನ್ನೆಲೆಯಲ್ಲಿ ಆಯೋಜಿಸಲಾಗಿರುವ ಈ ಮೇಳ ಜನವರಿ 2, 2022ರವರೆಗೆ ನಡೆಯಲಿದೆ. ಬೆಳಿಗ್ಗೆ 11 ರಿಂದ ಸಂಜೆ 7 ಗಂಟೆಯವರೆಗೆ ನಡೆಯುವ ಕರಕುಶಲ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಮೇಳಕ್ಕೆ ಪ್ರವೇಶ ಉಚಿತ.

ಮೇಳದಲ್ಲಿ 80 ಕ್ಕೂ ಹೆಚ್ಚು ಮಳಿಗೆಗಳಿವೆ. ದೇಶದ ವಿವಿಧ ಭಾಗಗಳಿಂದ ಆಗಮಿಸಿರುವ ಕರಕುಶಲ ಕರ್ಮಿಗಳು ತಮ್ಮ ಕಲಾಕೃತಿಗಳು ಹಾಗೂ ಉತ್ಪನ್ನಗಳನ್ನು ಪ್ರದರ್ಶನಕ್ಕಿಟ್ಟು ಮಾರಾಟ ಮಾಡುತ್ತಿದ್ದಾರೆ. ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಸಂಭ್ರಮಾಚರಣೆಗಾಗಿ ಅಗತ್ಯವಿರುವ ಅಲಂಕಾರಿಕ ವಸ್ತುಗಳು ಇಲ್ಲಿ ಲಭ್ಯ. ಆಟಿಕೆಗಳು, ಉಡುಪುಗಳಿವೆ. ಬಟ್ಟೆ, ಮರದ ಆಟಿಕೆಗಳು, ಹೆಂಗಳೆಯರ ಆಕರ್ಷಣೆಯ ಆಭರಣಗಳು, ಬೆಡ್ ಲೈನೆನ್, ಕಲಾಕೃತಿಗಳು, ಪೀಠೋಪಕರಣಗಳು, ಮ್ಯಾಟ್‌ಗಳು, ಪಿಂಗಾಣಿ ವಸ್ತುಗಳು ಸೇರಿದಂತೆ ನೂರಾರು ಬಗೆಯ ಉತ್ಪನ್ನಗಳು ಈ ಪ್ರದರ್ಶನದಲ್ಲಿವೆ.

ನಗರದ ಕಾರ್ಯಕ್ರಮ

ಕಾಮರೂಪಿಗಳ್ ನಾಟಕದ ದೃಶ್ಯ

- **ರಂಗಭೂಮಿ:** ಸಂಚಯ ನಾಟಕ ತಂಡದಿಂದ ಕಾಮರೂಪಿಗಳ್ ನಾಟಕ ಪ್ರದರ್ಶನ
- **ಮೂಲ :** ರಾಮಾಯಣದ ಪಂಚವಟಿ ಪ್ರಸಂಗ
- **ಆಧಾರಿತ, ನಿರ್ದೇಶನ:** ಗಣೇಶ್ ಮಂದಾರ್ತಿ,
- **ಸ್ಥಳ:** ರಂಗಶಂಕರ, ಜೆ. ಪಿ. ನಗರ, ಬೆಂಗಳೂರು, ಭಾನುವಾರ ಮಧ್ಯಾಹ್ನ 3.30ಕ್ಕೆ ಹಾಗೂ ಸಂಜೆ 7.30ಕ್ಕ

- **ಅಜಾದಿ ಕಾ ಅಮೃತ ಮಹೋತ್ಸವ:** ನ್ಯಾಷನಲ್ ಗ್ಯಾಲರಿ ಆಫ್ ಮಾರ್ಡನ್ ಆರ್ಟ್ ಬೆಂಗಳೂರು, ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್ ಹಾಗೂ ನಾದಂ ಇದರ ಸಹಯೋಗದೊಂದಿಗೆ 13ನೇ ಚಿನ್ನ ಕಲಾನಾದಂ 2021 ಆಯೋಜಿಸುತ್ತಿದೆ. ಮುಖ್ಯ ಅತಿಥಿ: ಪಿ. ವೇಣುಗೋಪಾಲ್, ಪ್ರಾದೇಶಿಕ ನಿರ್ದೇಶಕ, ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್, ಬೆಂಗಳೂರು., ಸ್ಥಳ: ನ್ಯಾಷನಲ್ ಗ್ಯಾಲರಿ ಆಫ್ ಮಾರ್ಡನ್ ಆರ್ಟ್, ನಂ.49, ಮಾಣಿಕ್ಯವೇಲು ಮ್ಯಾನ್ಷನ್, ಪ್ಯಾಲೇಸ್ ರಸ್ತೆ, ಬೆಂಗಳೂರು, ಶನಿವಾರ ಹಾಗೂ ಭಾನುವಾರ ಸಂಜೆ 4 ರಿಂದ 7ರ ವರೆಗೆ.

ಕೋವಿಡ್ ಕಾಲದಲ್ಲಿ ನೃತ್ಯ ಸಾಂತ್ವನ

ವರ್ಚ್ಯುವಲ್ ವೇದಿಕೆಯಲ್ಲಿ ಮಕ್ಕಳಿಂದ ನೃತ್ಯ

ಮಂಜುಶ್ರೀ ಎಂ. ಕಡಕೋಳ

ಕೋವಿಡ್-19 ವಾಣಿಜ್ಯ ಚಟುವಟಿಕೆಗಳ ಮೇಲಷ್ಟೇ ಅಲ್ಲ ಕಲಾ ಕ್ಷೇತ್ರದ ಮೇಲೂ ಬೀರಿದ ಪರಿಣಾಮ ಅಗಾಧ. ಒಂದೆಡೆ ಸಂಗೀತ, ನೃತ್ಯ, ಯಕ್ಷಗಾನ, ರಂಗ ಚಟುವಟಿಕೆಗಳನ್ನೇ ನಂಬಿಕೊಂಡವರಿಗೆ ಆರ್ಥಿಕವಾಗಿ ಸಂಕಷ್ಟಕ್ಕೀಡು ಮಾಡಿದ್ದರೆ, ಮತ್ತೊಂದೆಡೆ ಮಕ್ಕಳು ಸೇರಿದಂತೆ ಹಿರಿಯರ ಮೇಲೂ ದೈಹಿಕ- ಮಾನಸಿಕವಾಗಿ ಪರಿಣಾಮ ಬೀರಿತು.

ಮೊದಲ ಅಲೆಯಲ್ಲಿ ತಮ್ಮ ನೃತ್ಯ ಚಟುವಟಿಕೆಗಳ ಮೇಲೆ ಪರಿಣಾಮ ಬೀರಿದ್ದನ್ನು ನಗರದ ನೃತ್ಯ ಕಲಾವಿದ ಜನಾರ್ದನ್ ರಾಜ್ ಅರಸ್ ಅವರು ಎದುರಿಸಿದ ರೀತಿ ಭಿನ್ನ ಪ್ರಯೋಗಕ್ಕೆ ಎಡೆಮಾಡಿಕೊಟ್ಟಿದೆ.

ಶಾಸ್ತ್ರೀಯ ಮತ್ತು ಸಮಕಾಲೀನ ನೃತ್ಯಪ್ರಕಾರಗಳಲ್ಲಿ ಪರಿಣತರಾಗಿರುವ ಜನಾರ್ದನ್ ಅವರು ಖ್ಯಾತ ಕಥಕ್ ನೃತ್ಯಕಲಾವಿದೆ ಡಾ.ಮಾಯಾರಾವ್ ಅವರ ಶಿಷ್ಯ. ಮಲ್ಲೇಶ್ವರದಲ್ಲಿರುವ ತಮ್ಮ 'ಕಾರ್ನುಕೋಪಿಯಾ' ನೃತ್ಯ ಸಂಸ್ಥೆಯ ಮೂಲಕ 17 ದೇಶಗಳಲ್ಲಿ ನೂರಾರು ನೃತ್ಯ ಪ್ರದರ್ಶನ ನೀಡಿರುವ ಅವರು ನೃತ್ಯ ನಿರ್ದೇಶಕರಾಗಿಯೂ ಪ್ರಸಿದ್ಧಿ ಪಡೆದಿದ್ದಾರೆ.

ಜನಾರ್ದನ್ ರಾಜ್ ಅರಸ್

ಮೊದಲ ಲಾಕ್‌ಡೌನ್ ಸಮಯದಲ್ಲಿ ಕುಟುಂಬದ ಸದಸ್ಯರನ್ನು ಹೊರತುಪಡಿಸಿ ಇತರರನ್ನು ಭೇಟಿಯಾಗಲು ಸಾಧ್ಯವಾಗದ ಸಮಯದಲ್ಲಿ ತಮ್ಮ ಮಕ್ಕಳು, ವಿದ್ಯಾರ್ಥಿಗಳ ಮಾನಸಿಕ ಸ್ಥಿತಿ ಗಮನಿಸಿದ್ದ ಅವರು, ಮನೋದೈಹಿಕ ಆರೋಗ್ಯಕ್ಕೆ ನೃತ್ಯ ಪರಿಣಾಮಕಾರಿಯಾಗಬಲ್ಲದು ಎಂಬುದನ್ನು ಕಂಡುಕೊಂಡರು.

ಆರಂಭದಲ್ಲಿ ತಮ್ಮ ಇಬ್ಬರು ಹೆಣ್ಣುಮಕ್ಕಳಿಗೆ ನೃತ್ಯ ಮಾಡಲು ಪ್ರೇರೇಪಿಸುತ್ತಿದ್ದ ಅವರ ಪ್ರಯೋಗ ಕ್ರಮೇಣ ಅಕ್ಕಪಕ್ಕದ ಮನೆಯವರೂ ಜತೆಗೂಡಿ ಹೆಜ್ಜೆ ಹಾಕುವಷ್ಟು ಯಶಸ್ಸು ಪಡೆಯಿತು. ಮನಸಿಗೆ ಉಲ್ಲಾಸ ನೀಡುತ್ತಿದ್ದ ಈ ಚಟುವಟಿಕೆಯಿಂದ ಇತರರೂ ಲಾಭ ಪಡೆಯಬೇಕೆಂಬ ಉದ್ದೇಶದಿಂದ 'ಉಲ್ಲಾಸ' ಹೆಸರಿನಡಿ ನೃತ್ಯ ತರಗತಿ ಆರಂಭಿಸಲು ಪ್ರೇರಣೆಯಾಯಿತು.

ಲಾಕ್‌ಡೌನ್ ಸಮಯದಲ್ಲಿ ನೃತ್ಯ ಕಾರ್ಯಕ್ರಮ, ತರಗತಿಗಳಿಲ್ಲದೇ ನಿರುದ್ಯೋಗಿಯಾಗಿದ್ದಾಗ ಜನಾರ್ದನ್ ಅವರ ಕೈಹಿಡಿದದ್ದು ತಂತ್ರಜ್ಞಾನ ಕೌಶಲ ಮತ್ತು ನೃತ್ಯಕಲೆ. ಶಾಲೆಗಳಿಂದ ಭೌತಿಕವಾಗಿ ದೂರವಾಗಿದ್ದ ಮಕ್ಕಳ ಮನಸು ಮುದುಡದಂತೆ ಕಾಪಾಡುವ ಮದ್ದು ನೃತ್ಯ ಎಂದರಿತ ಅವರು, ಆನ್‌ಲೈನ್ ಮೂಲಕ ನೃತ್ಯ ತರಗತಿ ಆರಂಭಿಸಿದರು. ಮಕ್ಕಳು ಉತ್ಸಾಹದಿಂದ ತರಗತಿಗಳಲ್ಲಿ ತೊಡಗಿಕೊಂಡಾಗ ಪೋಷಕರನ್ನೂ ಒಳಗೊಂಡಲ್ಲಿ ಕೋವಿಡ್ ಭೀತಿ ಹೋಗಲಾಡಿಸಲು ಹಾಗೂ ಕುಟುಂಬದಲ್ಲಿ ಪರಸ್ಪರರ ಬಾಂಧವ್ಯ ಬೆಸೆಯುವಲ್ಲಿ ನೃತ್ಯ ಪೂರಕ ಎಂಬುದನ್ನು ಮನಗಂಡರು. 'ಮಕ್ಕಳ ಜತೆಗೆ ತರಗತಿಯ ಚಟುವಟಿಕೆಗಳಲ್ಲಿ ಪೋಷಕರನ್ನೂ ಒಳಗೊಂಡಾಗ ಬೀರಿದ ಪರಿಣಾಮ ಅದ್ಭುತ' ಎಂಬುದು ಜನಾರ್ದನ್ ಅವರ ಅಭಿಮತ.

ಈ ಹಿಂದೆ ಆಫ್‌ಲೈನ್‌ನಲ್ಲಿ ಜಾಗತಿಕವಾಗಿ ಎಲ್ಲರನ್ನೂ ಏಕಕಾಲಕ್ಕೆ ತಲುಪಲು ಸಾಧ್ಯವಾಗದೇ ಇದ್ದದ್ದು ಕೋವಿಡ್ ಸಮಯದಲ್ಲಿ ಆನ್‌ಲೈನ್ ಮೂಲಕ ಸಾಧ್ಯವಾಯಿತು. ಸೌದಿ, ಅಮೆರಿಕ, ಕೆನಡಾ ದೇಶಗಳ ಜತೆಗೆ ದೇಶದ ಮಣಿಪುರ, ಮಹಾರಾಷ್ಟ್ರ ಹಾಗೂ ಕರ್ನಾಟಕ ವಿದ್ಯಾರ್ಥಿಗಳ ಸಮಾಗಮ ಒಂದೇ ವೇದಿಕೆ ಅಡಿ ಅಗಿದ್ದು ಅವರ ಸಂತಸಕ್ಕೆ ಕಾರಣವಾಗಿದೆ.

ಜನಾರ್ದನ್ ರಾಜ್ ಅರಸ್ ಸಂಯೋಜನೆಯ ಕಥಕ್ ನೃತ್ಯ

'ಉಲ್ಲಾಸ್' ನೃತ್ಯತಂಡ ವಿದ್ಯಾರ್ಥಿನಿಯರಿಂದ ನೃತ್ಯ ಪ್ರದರ್ಶನದ ನೋಟ

ತರಗತಿಯಲ್ಲಿ ನೃತ್ಯವಷ್ಟೇ ಅಲ್ಲದೆ, ಕಥೆ ಹೇಳುವುದು, ಚಿತ್ರಕಲೆಯ ಅಭ್ಯಾಸ ಸೇರಿದಂತೆ ಇತರ ಚಟುವಟಿಕೆಗಳ ಮೂಲಕ ಮಕ್ಕಳ ಮನಸ್ಸನ್ನು ಸೃಜನಾತ್ಮಕವಾಗಿ ರೂಪಿಸುವಲ್ಲಿ ಜನಾರ್ದನ್ ಅರಸ್ ಅವರ ಪರಿಶ್ರಮವಿದೆ. ಬೆಂಗಳೂರಿನ ಟ್ರಾಫಿಕ್‌ನಲ್ಲಿ ಓಡಾಡಲು ಆಗದವರಿಗೆ ಆನ್‌ಲೈನ್ ನೃತ್ಯ ತರಗತಿ ವರವಾಗಿ ಪರಿಣಮಿಸಿದೆ. ಈ ಹಿಂದೆ ವಾರಾಂತ್ಯದಲ್ಲಿ ಮಾತ್ರ ತರಗತಿಗೆ ಹಾಜರಾಗುತ್ತಿದ್ದ ವಿದ್ಯಾರ್ಥಿಗಳಿಗೆ ಯಾವುದಾದರೂ ಒಂದು ದಿನ ತರಗತಿ ತಪ್ಪಿದಾಗ ಕಲಿಕೆಯಲ್ಲಿ ಹಿಂದುಳಿಯುವಂತಾಗುತ್ತಿತ್ತು. ಆದರೆ ಈಗ ಜೂಮ್‌ನಂಥ ತಂತ್ರಜ್ಞಾನದಿಂದ ವಾರದಲ್ಲಿ ಯಾವ ಎರಡು ದಿನವಾದರೂ ವಿದ್ಯಾರ್ಥಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ತರಗತಿ ಹಾಜರಾಗುವ ಅನುಕೂಲ ಕಲ್ಪಿಸಲಾಗಿದೆ.

ಕೋವಿಡ್ ಕಾಲದ ಒಂದು ವರ್ಷದಲ್ಲಿ ವಿದ್ಯಾರ್ಥಿಗಳು- ಪೋಷಕರು ಪರಸ್ಪರ ಬೆರೆಯುವಲ್ಲಿ ಜನಾರ್ದನ್ ಅವರ ಆನ್‌ಲೈನ್ ನೃತ್ಯ ತರಗತಿ ಬೀರಿದ ಪ್ರಭಾವ ಅಪಾರವಾದದ್ದು ಎನ್ನುವುದು ಪೋಷಕರ ಅಭಿಪ್ರಾಯ.

ದೈಹಿಕ ಅಂತರ ಪಾಲಿಸಬೇಕಾದ ಸಮಯದಲ್ಲಿ ಪರಸ್ಪರ ಭೌತಿಕವಾಗಿ ದೂರವಿದ್ದರೂ, ಆನ್‌ಲೈನ್ ಮೂಲಕವೇ ವಿದ್ಯಾರ್ಥಿಗಳು ದಸರಾ ಹಬ್ಬದ ನಿಮಿತ್ತ ನೀಡಿದ ನೃತ್ಯ ಕಾರ್ಯಕ್ರಮ ಯಶಸ್ವಿಯಾಗಿ ನೇರವೇರಿತು. ತಾಂತ್ರಿಕ ಕೌಶಲವಿದ್ದರೆ ಆನ್‌ಲೈನ್‌ನಲ್ಲೂ ನೃತ್ಯ ಪ್ರದರ್ಶನ ನೀಡಬಹುದು ಎಂಬುದನ್ನು ಪ್ರಾಯೋಗಿಕವಾಗಿ ತೋರಿಸುವಲ್ಲಿ ಜನಾರ್ದನ್ ಯಶಸ್ವಿಯಾದರು.

ಗ್ರೀನ್ ಸ್ಟುಡಿಯೊದ ಮೂಲಕ ಕಥಕ್‌ನ ವಿವಿಧ ಘರಾಣೆಗಳು, ಮಾರ್ಷಲ್ ಅರ್ಟ್, ಮಂಡಲ-ಯಂತ್ರದ ಮೂಲಕ ಜಾಮಿತ್ರಿಯ ವಿವಿಧ ಪ್ರಯೋಗಗಳು ಅವರಿಗೆ ಹೆಸರು ತಂದುಕೊಟ್ಟಿವೆ. **ಹೆಚ್ಚಿನ ಮಾಹಿತಿಗೆ:98860 85680. ಯುಟ್ಯೂಬ್ ಲಿಂಕ್: https://youtu.be/NImmz7TZQy8**

ನೃತ್ಯದಿಂದ ಮನಸು ನಿರಾಳ

'ಮೊದಲ ಲಾಕ್‌ಡೌನ್ ವೇಳೆ ಮಗಳು ಎಸ್‌ಎಸ್‌ಎಲ್‌ಸಿ ಓದುತ್ತಿದ್ದಳು. ಒಂದೆಡೆ ಸ್ನೇಹಿತರನ್ನು ಭೇಟಿಯಾಗದೇ ಇರುವುದು, ಮತ್ತೊಂದೆಡೆ ಶಾಲೆಯೂ ಇರಲಿಲ್ಲ. ಅಂಥ ಸಮಯದಲ್ಲಿ ಆಕೆಗೆ ಮಾನಸಿಕ ಒತ್ತಡ ಉಂಟಾಗುತ್ತಿತ್ತು. ಜನಾರ್ದನ್ ಅವರ ನೃತ್ಯ ತರಗತಿಗಳಿಗೆ ಹಾಜರಾದ ಮೇಲೆ ಅವಳಿಗೆ ಮಾನಸಿಕವಾಗಿ ರೀಲ್ಯಾಕ್ಸ್ ಅನಿಸಿತು. ನಾನು ಮತ್ತು ನನ್ನ ಹೆಂಡತಿ ಇಬ್ಬರೂ ಉದ್ಯೋಗಸ್ಥರು. ಮಗಳ ಜತೆಗೆ ನಾವೂ ಆನ್‌ಲೈನ್‌ನಲ್ಲೂ ನೃತ್ಯದ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದು ಸಂತಸ ನೀಡಿತು. ಸದಾ ಬ್ಯುಸಿಯಾಗಿರುತ್ತಿದ್ದ ನಮಗೆ ನೃತ್ಯದ ಮೂಲಕ ಕೌಟುಂಬಿಕ ಬೆಸುಗೆಗೂ ಸಹಕಾರಿಯಾಯಿತು' ಎನ್ನುತ್ತಾರೆ ಅರುಣ್ ನಾರಾಯಣನ್.

ಅರುಣ್ ನಾರಾಯಣನ್

'ಈಗಲೂ ಆನ್‌ಲೈನ್‌ನಲ್ಲೇ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗುತ್ತಿದ್ದಾರೆ. ವರ್ಚ್ಯುವಲ್ ರಿಯಾಲಿಟಿ ತಂತ್ರಜ್ಞಾನದಿಂದ ಮುಂದಿನ ದಿನಗಳಲ್ಲಿ ಕಲಿಕಾ ವಿಧಾನದಲ್ಲಿ ಬಹಳಷ್ಟು ಬದಲಾವಣೆ ಆಗಲಿದೆ. ತಂತ್ರಜ್ಞಾನದ ವಿಚಾರದಲ್ಲಿ ಕಲಾವಿದರೂ ಅಪ್‌ಡೇಟ್ ಆಗುವ ಅಗತ್ಯವಿದೆ. ರೂಪಾಂತರದ ಈ ಪ್ರಕ್ರಿಯೆಯು ನೃತ್ಯ ಕ್ಷೇತ್ರಕ್ಕೆ ವರವಾಯಿತು' ಎನ್ನುತ್ತಾರೆ ಜನಾರ್ದನ್ ರಾಜ್ ಅರಸ್.

ಸಂಬಂಧಗಳ ಪಾಠ ಹೇಳಲಿದೆ 'ಪರಿಶುದ್ಧಂ'

'ಪರಿಶುದ್ಧಂ' ಚಿತ್ರತಂಡ

ಪತಿ-ಪತ್ನಿ ಸಂಬಂಧದ ಕತೆ ಹೇಳಲು ಹೊರಟಿದೆ 'ಪರಿಶುದ್ಧಂ'. ಕಾರ್ತಿಕ್ ವೆಂಕಟೇಶ್ ನೇತೃತ್ವದಲ್ಲಿ ಮೂಡಿಬರುತ್ತಿದೆ.

ಕಾರ್ತಿಕ್ ವೆಂಕಟೇಶ್ ಅವರು ಐದು ವರ್ಷಗಳ ಬಳಿಕ ಈ ಚಿತ್ರದ ಮೂಲಕ ಮತ್ತೆ ನಿರ್ದೇಶನಕ್ಕಿಳಿದಿದ್ದಾರೆ. ನಿರ್ಮಾಣದಲ್ಲೂ ಅವರು ಪಾಲುದಾರರು. ಕುಮಾರ್ ರಾಥೋಡ್ ಬ್ಯಾನರ್ ಅಡಿಯಲ್ಲಿ ಚಿತ್ರ ನಿರ್ಮಾಣಗೊಳ್ಳುತ್ತಿದೆ. ಮಂಗಳೂರಿನ ರೋಹನ್ ಕಿಡಿಯಾರ್ ಮತ್ತು ಮಂಜುನಾಥ್ ಬಂಡವಾಳ ಹೂಡಿದ್ದಾರೆ.

ಮಹಿಳಾ ಪ್ರಧಾನ ಕತೆಯಲ್ಲಿ ಗಂಡ ಹೆಂಡತಿ ಸಂಬಂಧ ಪರಿಶುದ್ಧವಾಗಿರುತ್ತದೆ ಎಂಬುದನ್ನು ಆ್ಯಕ್ಷನ್, ಥ್ರಿಲ್ಲರ್ ಮೂಲಕ ಹೇಳಲಿದ್ದು, ಪ್ರತಿ ದೃಶ್ಯ ಗ್ರಾಫಿಕ್ ಮೂಲಕ ಮೂಡಿಬರುತ್ತಿದೆ.

ಸ್ಪರ್ಶ ರೇಖಾ ಅವರು ಈ ಚಿತ್ರದಲ್ಲಿ ಮನೋವೈದ್ಯೆ. ಸಾಮಾಜಿಕ ಆಸಕ್ತಿಯುಳ್ಳ ಮಹಿಳೆ. ಅಪರಾಧಿಗಳು ಇವರ ಬಳಿ ಬಂದು ಮನಃಪರಿವರ್ತನೆಯಾಗುವ ಸನ್ನಿವೇಶ ಚಿತ್ರದಲ್ಲಿದೆ. ಡಿಸಿಪಿಯಾಗಿ ಬಡ್ತಿಗೊಳ್ಳುವ ದಿಶಾಪೂವಯ್ಯ. ಇವರಿಬ್ಬರಿಂದಲೇ ಸಿನಿಮಾ ಸಾಗುತ್ತದೆ. ನಾಯಕರಾದ ಕೀರ್ತಿಕೃಷ್ಣ, ಭಾರ್ಗವ್, ಮತ್ತೊಂದು ಮುಖ್ಯ ಪಾತ್ರದಲ್ಲಿ ರಾಜ್‌ಚರಣ್, ಪೊಲೀಸ್ ಆಯುಕ್ತ ಮತ್ತು ನಾಯಕನ ತಂದೆಯಾಗಿ ಯತಿರಾಜ್, ಫೋರೆನ್ಸಿಕ್ ವೈದ್ಯರಾಗಿ ರಮೇಶ್‌ಪಂಡಿತ್, ನಿರ್ಮಾಪಕರಾಗಿ ವಿಕ್ಟರಿ ವಾಸು, ಪೇದೆಯಾಗಿ ಕುರಿರಂಗ, ಮನೆ ಆಳಾಗಿ ಮೈಸೂರು ರಮಾನಂದ್, ವಕೀಲರಾಗಿ ಸ್ವಸ್ತಿಕ್ ಶಂಕರ್, ನವನಟಿ ಅಂಜಲಿ ನಟಿಸುತ್ತಿದ್ದಾರೆ.

ಈಗಾಗಲೇ ಬೆಂಗಳೂರು, ಮತ್ತಿತರ ಕಡೆಗಳಲ್ಲಿ ಅರ್ಧದಷ್ಟು ಚಿತ್ರೀಕರಣ ಮುಗಿದಿದೆ. ನಾಲ್ಕು ಹಾಡುಗಳ ಪೈಕಿ ಒಂದು ಗೀತೆಯನ್ನು 'ಕಕ' ಅಕ್ಷರದಲ್ಲಿ ಸಾಹಿತ್ಯವನ್ನು ರಚಿಸಲಾಗಿದ್ದು, ಗಾಯಕ ವಿಜಯ್‌ಪ್ರಕಾಶ್ ಈ ಹಾಡಿಗೆ ಧ್ವನಿಯಾಗಲಿದ್ದಾರೆ. ಛಾಯಾಗ್ರಹಣ ಕೃಷ್ಣಸಾರಥಿ, ಸಂಕಲನ ನಿಖಿಲ್, ಸಂಭಾಷಣೆ ವಿನಯ್‌ಮೂರ್ತಿ, ಸಾಹಸ ರಾಮ್‌ದೇವ್, ನೃತ್ಯ ಕಿಶೋರ್ ಅವರದು. ಈ ಚಿತ್ರ ಕನ್ನಡ, ತೆಲುಗು ಮತ್ತು ಹಿಂದಿ ಭಾಷೆಗಳಲ್ಲಿ ಸಿದ್ಧಗೊಳ್ಳುತ್ತಿದೆ.

ಬರ್ತಿದೆ ಗಜಾನನ ಆ್ಯಂಡ್ ಗ್ಯಾಂಗ್!

ಅದಿತಿ ಪ್ರಭುದೇವ

'ಒಬ್ಬ ಹೀರೊ..ಒಬ್ಬು ಹೀರೊಯಿನ್.. ಒಬ್ಬ ವಿಲನ್ ಇದ್ರೆ ಕಥೆ ಮುಗಿತಾ?' ಎಂದು ಪ್ರಶ್ನಿಸುತ್ತಾ ಬಂದಿದೆ ಶ್ರೀ ಮಹಾದೇವ್ ಹಾಗೂ ಅದಿತಿ ಪ್ರಭುದೇವ ನಟನೆಯ 'ಗಜಾನನ ಆ್ಯಂಡ್ ಗ್ಯಾಂಗ್'.

'ನಮ್ ಗಣಿ ಬಿಕಾಂ ಪಾಸ್' ಸಿನಿಮಾ ಮೂಲಕ ಚಿತ್ರರಂಗಕ್ಕೆ ನಾಯಕ ಮತ್ತು ನಿರ್ದೇಶಕನಾಗಿ ಪ್ರವೇಶಿಸಿದ ಅಭಿಷೇಕ್ ಶೆಟ್ಟಿ 'ಗಜಾನನ ಆ್ಯಂಡ್ ಗ್ಯಾಂಗ್' ಸಿನಿಮಾಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ನಟಿ ಮೇಘನಾ ರಾಜ್ ಇತ್ತೀಚೆಗೆ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿದರು.

ಚಿತ್ರದ ಶೀರ್ಷಿಕೆಯೇ ಹೇಳುವಂತೆ ಐವರು ಕಾಲೇಜು ಗೆಳೆಯರ ಕಥೆಯಾಧಾರಿತ ಸಿನಿಮಾ ಇದಾಗಿದೆ. ಚಿತ್ರದಲ್ಲಿ ಶ್ರೀ ಎರಡು ಶೇಡ್‌ನಲ್ಲಿ ಕಾಣಿಸಿಕೊಂಡಿದ್ದಾರೆ. 'ಗಜ' ಎಂಬ ಪಾತ್ರದಲ್ಲಿ ಶ್ರೀ ನಟಿಸಿದ್ರೆ, ಅದಿತಿ ಪ್ರಭುದೇವ ಮಿಡಲ್ ಕ್ಲಾಸ್ ಕುಟುಂಬದ ಕಾಲೇಜು ಹುಡುಗಿಯಾಗಿ ಕಾಣಿಸಿಕೊಂಡಿದ್ದಾರೆ. ನಿರ್ದೇಶಕ ಅಭಿಷೇಕ್ ಶೆಟ್ಟಿ ಕೂಡಾ ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ.

ಬೃಂದಾವನ್ ಎಂಟರ್‌ಪ್ರೈಸಸ್ ಅಡಿಯಲ್ಲಿ ಯು.ಎಸ್.ನಾಗೇಶ್ ಕುಮಾರ್ ಈ ಸಿನಿಮಾಕ್ಕೆ ಬಂಡವಾಳ ಹೂಡಿದ್ದಾರೆ. ಪ್ರದ್ಯುತನ್ ಸಂಗೀತ ನೀಡಿದ್ದು, ಥ್ರಿಲ್ಲರ್ ಮಂಜು ಸಾಹಸ ನಿರ್ದೇಶನ ಚಿತ್ರಕ್ಕಿದೆ. ಉಳಿದಂತೆ ಬಿಗ್‌ಬಾಸ್ ಖ್ಯಾತಿಯ ರಘು ಗೌಡ, ಚೇತನ್ ದುರ್ಗ, ನಾಟ್ಯ ರಂಗ, ಅಶ್ವಿನ್ ಹಾಸನ್ ಹಾಗೂ ಶಮಂತ್ ಊರುಫ್ ಬ್ರೋ ಗೌಡ ಕೂಡ ನಟಿಸಿದ್ದಾರೆ.

ಕಾಕ್ಟೈಲ್ ಚಿತ್ರದ ದೃಶ್ಯ

ಚಿತ್ರೀಕರಣ ಮುಗಿಸಿದ 'ಕಾಕ್ಟೈಲ್'

ವಿಜಯಲಕ್ಷ್ಮೀ ಕಂಬೈನ್ಸ್ ಬ್ಯಾನರ್‌ನಲ್ಲಿ ಡಾ. ಶಿವಪ್ಪ ನಿರ್ಮಾಣದ ಸಸ್ಪೆನ್ಸ್, ಥ್ರಿಲ್ಲರ್ ಕಥಾ ಹಂದರವುಳ್ಳ ವಿನೂತನ ಅವಿಷ್ಕಾರದ 'ಕಾಕ್ಟೈಲ್' ಸಿನಿಮಾದ ಚಿತ್ರೀಕರಣವು ಬೆಂಗಳೂರು ಸುತ್ತಮುತ್ತ ಎರಡು ಹಂತಗಳಲ್ಲಿ ಮುಗಿದಿದೆ. ಸದ್ಯ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್ ಕೆಲಸಗಳಲ್ಲಿ ನಿರತವಾಗಿದೆ.

ಶ್ರೀರಾಮ್ ಕಥೆ,ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಹೊಸ ಪ್ರತಿಭೆಗಳಾದ ವಿರೇನ್ ಕೇಶವ್ ಹಾಗೂ ಚರೀಷ್ಮಾ ನಾಯಕ-ನಾಯಕಿಯಾಗಿ ನಟಿಸಿದ್ದಾರೆ. ಇವರೊಂದಿಗೆ ಶೋಭರಾಜ್, ಮಹಾಂತೇಶ್, ಶಿವಮಣಿ, ಚಂದ್ರಕಲಾಮೋಹನ್, ಕರಿಸುಬ್ಬು, ರಮೇಶ್ ಪಂಡಿತ್ ಮುಂತಾದವರ ತಾರಗಣವಿದೆ.

ಲೋಕಿತವಸ್ಯ ಸಂಗೀತ, ರವಿವರ್ಮ(ಗಂಗು) ಛಾಯಾಗ್ರಹಣ, ಮೋಹನ್.ಬಿ. ರಂಗಕಹಳೆ ಸಂಕಲನ, ಹೃದಯಶಿವ ಮತ್ತು ಸಿರಾಜ್‌ಮಿಜಾರ್ ಸಾಹಿತ್ಯ, ನರಸಿಂಹ ಸಾಹಸ, ಸುನಿಲ್ ನೃತ್ಯವಿದೆ. ಚಿತ್ರದ ಟ್ರೇಲರ್ ಸದ್ಯದಲ್ಲೆ ಬಿಡುಗಡೆಯಾಗಲಿದೆ.

ಆರ್‌ಜೆ ಆಗಲಿದ್ದಾರೆ ಓಲ್ಡ್‌ಮಾಂಕ್ ಶ್ರೀನಿ

'ಬೀರ್‌ಬಲ್' ಚಿತ್ರದ ಯಶಸ್ಸಿನ ನಂತರ 'ಓಲ್ಡ್ ಮಾಂಕ್' ಸಿದ್ಧಪಡಿಸಿರುವ ನಟ, ನಿರ್ದೇಶಕ ಶ್ರೀನಿ ಈಗ ಹೊಸದೊಂದು ಯೋಜನೆಗೆ ಕೈ ಹಾಕಿದ್ದಾರೆ.

ಇನ್ನೂ ಹೆಸರಿಡದ ಚಿತ್ರವೊಂದು ಈಗಾಗಲೇ ಹೈದರಾಬಾದ್‌ನಲ್ಲಿ ಸೆಟ್ಟೇರಿದೆ ಎಂದು ಶ್ರೀನಿ ಅವರೇ ಮಾಹಿತಿ ಹಂಚಿಕೊಂಡಿದ್ದಾರೆ. ಈ ಚಿತ್ರದಲ್ಲಿ ಶ್ರೀನಿ ಅವರದ್ದು ರೇಡಿಯೊ ಜಾಕಿ ಪಾತ್ರವಂತೆ. ನಟನೆಗೆ ಬರುವ ಮೊದಲು ಶ್ರೀನಿ ಅವರು ರೇಡಿಯೊ ಜಾಕಿ ಆಗಿದ್ದರು. ಆ ಅನುಭವವನ್ನೇ ಬಳಸಿಕೊಂಡು ಈ ಹೊಸ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಈ ಚಿತ್ರ ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ನಿರ್ಮಾಣವಾಗುತ್ತಿದೆ. ಕನ್ನಡ ಆವೃತ್ತಿಯಲ್ಲಿ ಶ್ರೀನಿ ನಾಯಕ.

ಈ ಚಿತ್ರದ ಕಥೆ, ನಿರ್ದೇಶನ ಪ್ರಶಾಂತ್ ಸಾಗರ್ ಅಟ್ಲೂರಿ ಅವರದ್ದು. ರಘುವೀರ್ ಗೋರಿಪಾರ್ತಿ ಮತ್ತು ಸೃಜನ್ ಯರಬೋಳು ನಿರ್ಮಾಪಕರು. ಸುಮಾ ಕಾರ್ತಿಕೇಯ ಅವರೂ ಚಿತ್ರಕಥೆಗೆ ಕೈಜೋಡಿಸಿದ್ದಾರೆ. ಶ್ರೀರಾಮ್ ಮದ್ದೂರಿ ಅವರ ಸಂಗೀತವಿದೆ.

ಓಲ್ಡ್ ಮಾಂಕ್ ಮುಂದಿನ ವರ್ಷ ಫೆಬ್ರುವರಿಯಲ್ಲಿ ಬಿಡುಗಡೆಗೊಳ್ಳಲಿದೆ. ಹೊಸ ಚಿತ್ರದ ಶೂಟಿಂಗ್ ಈಗಾಗಲೇ ಹೈದರಾಬಾದ್‌ನಲ್ಲಿ ಆರಂಭವಾಗಿದೆ. 35 ದಿನಗಳ ವೇಳಾಪಟ್ಟಿ ಹಾಕಿಕೊಳ್ಳಲಾಗಿದೆ. ಈಗಾಗಲೇ 12 ದಿನಗಳ ಶೂಟಿಂಗ್ ಮುಕ್ತಾಯವಾಗಿದೆ ಎಂದು ಶ್ರೀನಿ ಮಾಹಿತಿ ನೀಡಿದರು.

ಗ್ಯಾಂಗ್ ಕಟ್ಟಿಕೊಂಡು ಬರುತ್ತಿದ್ದಾರೆ ಗೋಲ್ಡನ್ ಸ್ಟಾರ್

ಗೋಲ್ಡನ್ ಸ್ಟಾರ್ ಗಣೇಶ್ ಈಗ ಗ್ಯಾಂಗ್ ಕಟ್ಟಿಕೊಂಡು ಹೊಸ ಅವತಾರದಲ್ಲಿ ಕಿರುತೆರೆ ಮೇಲೆ ಬರುತ್ತಿದ್ದಾರೆ.

'ಗೋಲ್ಡನ್ ಗ್ಯಾಂಗ್'ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಹೊಸ ಗೇಮ್ ಷೋದ ಹೆಸರು.

ಗ್ಯಾಂಗ್‌ಗಳೊಂದಿಗೆ ಬಾಲ್ಯ, ಯೌವನದ ತುಂಟತನ, ಕುಚೇಷ್ಟೆಗಳ ಸವಿನೆನಪುಗಳನ್ನು ಮೆಲುಕುಹಾಕುತ್ತಾ ನೆನಪಿನಲ್ಲಿ ಉಳಿಯುವ ಆಟಗಳನ್ನು ಆಡಿಸುವ ರಿಯಾಲಿಟಿ ಶೋ ಕಾರ್ಯಕ್ರಮವಿದು. ಕಾರ್ಯಕ್ರಮದ ಪ್ರೋಮೊ ಸಾಕಷ್ಟು ಕುತೂಹಲ ಕೆರಳಿಸಿದೆ. ಅಂದಹಾಗೆ ಈ ಗ್ಯಾಂಗ್‌ನಲ್ಲಿರುವವರು ಕಿರುತೆರೆ ಕಲಾವಿದರೇ.

ಗಣೇಶ್ ಅವರಿಗೆ ಕಿರುತೆರೆ ಹೊಸದಲ್ಲ. ಗಾಯಕ, ನಿರ್ದೇಶಕ ಮತ್ತು ನಿರೂಪಕನಾಗಿ ಮಿಂಚಿದವರು. ಈಗ ಹಿರಿತೆರೆಯ ಜೊತೆಗೇ ಕಿರುತೆರೆಗೆ ಬರುತ್ತಿದ್ದಾರೆ ಎಂದು ಜೀ ವಾಹಿನಿ ಹೇಳಿದೆ.

ನಟ ಗಣೇಶ್

'ಸಣ್ಣವರಿದ್ದಾಗ ನಮ್ಮ ಗ್ಯಾಂಗ್‌ಗೆ ಚಡ್ಡಿ ಗ್ಯಾಂಗ್, ತರ್ಲೆ ಗ್ಯಾಂಗ್, ಪೋಲಿ ಗ್ಯಾಂಗ್ ಎಂದು ಕರೆಯುತ್ತಿದ್ದರು. ಅದಾದ ನಂತರ ಕಾಲೇಜಿಗೆ ಹೋಗಬೇಕಾದರೆ ಬಂಕ್ ಗ್ಯಾಂಗ್, ಲಾಸ್ಟ್ ಬೆಂಚ್ ಗ್ಯಾಂಗ್ ಹೀಗೆ ಹಲವಾರು ರೀತಿಯ ಹೆಸರುಗಳಿಂದ ನಮ್ಮ ಗ್ಯಾಂಗನ್ನು ಗುರುತಿಸಿಕೊಂಡಿದ್ದೇವೆ. ಈಗ ನಮ್ಮ ನಿಮ್ಮ ನೆಚ್ಚಿನ ಕಲಾವಿದರ ಗ್ಯಾಂಗ್ ಹೇಗಿದೆ, ಅದರ ತರಲೆ ದಿನಗಳು ಹೇಗಿವೆ ಎಂದು ನೋಡಿ ಖುಷಿಪಡುವ ಸಮಯ ಶುರುವಾಗಿದೆ' ಎಂದು ಈ ಕಾರ್ಯಕ್ರಮದ ಪ್ರೋಮೊದಲ್ಲಿ ಗಣೇಶ್ ಹೇಳಿದ್ದಾರೆ.

ಕಾರ್ಯಕ್ರಮದ ಪ್ರಸಾರ ದಿನಾಂಕ ಇನ್ನಷ್ಟೇ ನಿಗದಿಯಾಗಬೇಕಿದೆ.

ಮೂರು ದಾಖಲೆ ಮುಡಿಗೇರಿಸಿಕೊಂಡ 'ಬಾಳೇ ಬಂಗಾರ'



ಹಿರಿಯ ನಟಿ, ನಟ ದಿವಂಗತ ವಿಷ್ಣುವರ್ಧನ್ ಅವರ ಪತ್ನಿ ಭಾರತಿ ವಿಷ್ಣುವರ್ಧನ್ ಬದುಕಿನ ಕುರಿತ ಸಾಕ್ಷ್ಯಚಿತ್ರ 'ಬಾಳೇ ಬಂಗಾರ' ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್, ಏಷ್ಯಾ ಬುಕ್ ಆಫ್ ರೆಕಾರ್ಡ್ಸ್ ಹಾಗೂ ಕಲಾಂ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿವೆ ಎಂದು ಚಿತ್ರದ ನಿರ್ಮಾಪಕ ಅನಿರುದ್ಧ ಜತ್ಕರ್ ತಿಳಿಸಿದ್ದಾರೆ.

ಮೇರು ನಟಿಯೊಬ್ಬರ ಕುರಿತಾದ ಅತ್ಯಂತ ದೀರ್ಘ ಕಾಲಾವಧಿಯ ಸಾಕ್ಷ್ಯಚಿತ್ರವಿದು. ಅನಿರುದ್ಧ ಅವರೇ ಈ ಸಾಕ್ಷ್ಯಚಿತ್ರದ ಪರಿಕಲ್ಪನೆ, ಸಂಶೋಧನೆ, ಲೇಖನ, ನಿರೂಪಣೆ ಹಾಗೂ ನಿರ್ದೇಶನ ಮಾಡಿದ್ದಾರೆ. ಕೀರ್ತಿ ಇನ್ನೋವೇಷನ್ಸ್ ಲಾಂಛನದ ಅಡಿ ಈ ಸಾಕ್ಷ್ಯಚಿತ್ರ ನಿರ್ಮಾಣವಾಗಿದೆ.

ಶೀಘ್ರದಲ್ಲೇ ಆನ್‌ಲೈನ್ ವೇದಿಕೆಗಳಲ್ಲಿ ವೀಕ್ಷಣೆಗೆ ಬಿಡುಗಡೆ ಮಾಡಲಾಗುವುದು ಎಂದು ಅನಿರುದ್ಧ ತಿಳಿಸಿದ್ದಾರೆ.

ಪ್ರಮಾಣಪತ್ರದೊಂದಿಗೆ ಅನಿರುದ್ಧ ಜತ್ಕರ್

ಸಿನಿಮಾ

ನೋಗರಾಜ್ ಆಗಿ ಡ್ಯಾನಿಷ್ ಸೇಠ್

ಹೊಸ ವೇಷದಲ್ಲಿ ಬರ್ತಿದ್ದಾರೆ ನೋಗರಾಜ್

'ಹಂಬಲ್ ಪೊಲಿಟೀಷಿಯನ್ ನೋಗರಾಜ್' ಈ ಸಿನಿಮಾ ಮೂಲಕ ಎಲ್ಲರನ್ನು ರಂಜಿಸಿದ್ದ ಡ್ಯಾನಿಶ್ ಸೇಠ್ ಈಗ ವೆಬ್‌ಸೀರಿಸ್ ಮೂಲಕ ಮತ್ತೊಮ್ಮೆ ರಂಜಿಸಲು ಬರುತ್ತಿದ್ದಾರೆ. 'ಹಂಬಲ್ ಪೊಲಿಟೀಷಿಯನ್...' ಹೆಸರಿನಲ್ಲೇ ಈ ಹಾಸ್ಯ ಸರಣಿ ಬಿಡುಗಡೆ ಆಗುತ್ತಿದೆ.

ವೂಟ್ ಸೆಲೆಕ್ಟ್‌ನ ಒಟಿಟಿ ವೇದಿಕೆಯಲ್ಲಿ ಈ ಸರಣಿ ಜ. 6ರಿಂದ 10 ಕಂತುಗಳಲ್ಲಿ ಪ್ರಸಾರವಾಗಲಿದೆ.

ಡ್ಯಾನಿಷ್ ಸೇಠ್ ಜತೆ ಪ್ರಕಾಶ್ ಬೆಳವಾಡಿ, ವಿನಯ್ ಚೆಂಡೂರ್ ಮತ್ತು ದಿಶಾ ಮದನ್ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಸಾದ್‌ಖಾನ್ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ.

ಡ್ಯಾನಿಶ್ ಸೇಠ್ ಒಬ್ಬ ಸ್ವಯಂ ಸೇವಕನಾಗಿ ಸೇವೆ ಸಲ್ಲಿಸುತ್ತಾ ರಾಜಕೀಯ ಕ್ಷೇತ್ರಕ್ಕೆ ಕಾಲಿಡಲಿದ್ದಾರೆ. ನಂತರ ರೆಸಾರ್ಟ್ ರಾಜಕೀಯ, ಮುಖ್ಯಮಂತ್ರಿ ಸ್ಥಾನಕ್ಕೇರಲು ಏನೆಲ್ಲಾ ಸರ್ಕಸ್ ಮಾಡಲಿದ್ದಾರೆ ಹಾಗೂ ಅಧಿಕಾರಿ ದುರಾಸೆ, ಭ್ರಷ್ಟಾಚಾರವನ್ನು ವಿಡಂಬನಾತ್ಮಕವಾಗಿ ತೆಗೆದುಕೊಂಡು ಹೋಗುವ ಮೂಲಕ ರೋಲರ್ ಕೋಸ್ಟರ್ ಆಗಿ ನೋಗರಾಜ್ ಜನರನ್ನು ರಂಜಿಸಲಿದ್ದಾರೆ. 10 ಎಪಿಸೋಡ್‌ನ ಈ ವೆಬ್‌ಸೀರಿಸ್ ಪೂರ್ತಿ ಪಂಚಿಂಗ್ ಡೈಲಾಗ್ ಹಾಗೂ ನಗುವಿಗೆ ಕೊರತೆ ಇಲ್ಲ.

ಸರಣಿ ಕೊಲೆ ಸುತ್ತ 'ದ್ವಿಪಾತ್ರ'

ಅವಿನಾಶ್, ಮಾಳವಿಕಾ ಅವಿನಾಶ್ ಜೊತೆ ಕಲಾವಿದರು

ಸದ್ದಿಲ್ಲದೇ ಚಿತ್ರೀಕರಣ ಮುಗಿಸಿದೆ 'ದ್ವಿಪಾತ್ರ'. ಸದ್ಯ ನಿರ್ಮಾಣೋತ್ತರ ಕೆಲಸಗಳು ಭರ್ಜರಿಯಾಗಿ ಸಾಗಿವೆ. ಮುಖ್ಯಪಾತ್ರಗಳ ಎರಡು ಬಗೆಯ ವ್ಯಕ್ತಿತ್ವವೇ ಚಿತ್ರದ ಕಥಾವಸ್ತು. ಹಾಗಾಗಿ ಚಿತ್ರಕ್ಕೆ ದ್ವಿಪಾತ್ರ ಎಂದು ಹೆಸರಿಸಿರುವುದಾಗಿ ಚಿತ್ರದ ನಿರ್ದೇಶಕ ಶ್ರೀವತ್ಸ ಆರ್ ತಿಳಿಸಿದ್ದಾರೆ.

ಸಸ್ಪೆನ್ಸ್ ಥ್ರಿಲ್ಲರ್ ಕಥಾನಕ ಹೊಂದಿದೆ ಈ ಚಿತ್ರ. ಬೆಂಗಳೂರಿನಲ್ಲಿ ನಡೆದ ಸರಣಿ ಕೊಲೆಗಳ ಸುತ್ತ ಈ ಚಿತ್ರ ಸಾಗಿದೆ. ಪಾತ್ರಧಾರಿಗಳೆಲ್ಲರೂ ಅಪರಾಧಿಗಳಂತೆ ಗೋಚರಿಸುತ್ತಾರೆ. ಹಾಗಿದ್ದರೆ ನಿಜವಾದ ಅಪರಾಧಿ ಯಾರು? ಎಂಬುದನ್ನು ಚಿತ್ರ ಹೇಳಲಿದೆ.

ಚಂದು ಗೌಡ, ಸತ್ಯಾಶ್ರಯ, ಅವಿನಾಶ್, ಮಾಳವಿಕಾ ಅವಿನಾಶ್, ಸುಚೇಂದ್ರಪ್ರಸಾದ್, ಶ್ರೀಧರ್ ಕೊಣನೂರು, ಪ್ರಶಾಂತ್ ಸಿದ್ಧಿ, ರಘು ಗೌಡ, ಪಾಯಲ್ ಚಂಗಪ್ಪ, ಅಶ್ವತ್ಥ್ ನೀನಾಸಂ, ಚನ್ನಕೇಶವ, ಸಂದೀಪ್ ನಾರಾಯಣ್, ವಿಕಿ ಕೋಲಾರ, ಸ್ನೇಹಾ ಹೆಗ್ಡೆ ತಾರಾಗಣದಲ್ಲಿದ್ದಾರೆ.

ಆರ್.ಜೆ. ಸಿನಿಕ್ರಿಯೇಷನ್ಸ್ ಮತ್ತು ಪ್ರೈಮ್‌ಸ್ಟಾರ್ ಸ್ಟುಡಿಯೊ ಲಾಂಛನದ ಅಡಿಯಲ್ಲಿ ಈ ಚಿತ್ರ ಮೂಡಿಬರುತ್ತಿದೆ. ಸತ್ಯಾಶ್ರಯ, ಹೆಬ್ಬಗೋಡಿ ಮಧುಸೂದನ್, ಜಯಶ್ರೀ ಅವರು ನಿರ್ಮಾಪಕರು.

ಅಮರ್‌ಗೌಡ ಛಾಯಾಗ್ರಹಣ, ಜೈಜು ಪೋಪ್ಸ ಸಂಗೀತವಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

EXCELLENT BUSINESS OPPORTUNITY
For Retired, Housewives, CA's, Doctors, MLM, Real Estate Consultant, Lecturers/ Professor's, Banking Financial & Services, Chit Fund/ Mutual Fund Agents, VRS, NRI'S Self Employed, Business Owners, Professionals etc.
India's Most trusted, Leading 153 Year old MNC Company offers service oriented DISTRIBUTION with Zero investment
Address: Beside Indiranagar Metro Station 2nd Floor, Above RBL Bank, Bengaluru-38
Ph : 9916588854 / 8919491856

REAL ESTATE SELLING

Sites

Anjanapura

SALE- BDA- 40x60, Anjanapura, 2nd Block, 80' Road, Commercial Site 1.35 Cr. 20x30- 31,00,000/- Also 8th Block- 40x60, N/F- 91,00,000/-, 12th Block, 30x40, E/F, 7500/-. 9945373839/ 9620041313.

Arkavathi Layout

ARKAVATHI BDA 20x30 Site East Facing, Near Greenfield School, 37 Lakhs, Contact Genuine Buyers: 9945564769

Banashankari

BANASHANKARI 6TH Stage, Anjanapura, Vishweswaraiah Layout, BDA/ A Katha 20x30, 30x40, 40x60, 50x80, BUYING/ SELLING, IMMEDIATE SETTLEMENT. SHIVARAJU: 9845390290, 9591369367.

BANASHANKARI 6TH Stage, 4th Block, 50x80, N/F Commercial Near RV College 5th Block 50x80, East, 60' Road 8th Block, 40x60 West, Near Rashtrotana School: 9513332646 9902764626

BANASHANKARI 6TH STAGE- Surroundings BDA- AVAILABLE/ WANTED- 20x30, 30x40, 40x60, 50x80 Sites. 'BRINDAVAN ASSOCIATES:- 9980863245

SALE- BDA- Banashankari 6th- 9th Block, 30x40, W/F, 20x30 S/F, 30' Road. Also 4th Block- 20x30, S/F, 5th Block- 30x40 S/F- 9620041313/ 9945373839

BANASHANKARI 6TH Stage 4th Block 20x30 west facing, 3rd block 2130 Sqft North West Corner Prime location, ready to build 9900097239

BANASHANKARI 6TH Stage, Near, 4th 'H' Block, 'A' Khata 30x40, West, Rs.5500/- 9901315949 9731814437

BANASHANKARI 6TH Stage,1st Block, BDA Site, 40x60, West, Near Brigade Omega Apartment 7500/- 9845600007

Chandra Layout

CANARA BANK COLONY, 50X41 SITE with building, South Facing. 2.90Crores. Negotiable. Mail: durga824@gmail.com

J P Nagar

J.P.NAGARA DOLLARS Colony, 50x80 Site, West Facing BTM 2nd Stage 40x60 North Facing Sale:- 9845307497.

Kanakapura Road

SALE:- BDA- Approved Kanakapura Road, Narayananagar, Bank Officers Layout- 2nd Block, 40x45, S/F- 6600/- P.Sq.ft- 9620041313/ 9845809099

BANK OFFICERS Layout,Narayananagar 1st Block, 30x40, S/F,Site For Sale Good Location : 9880668789/8884707773

Magadi Road

DC CONVERTED BBMP Katha Sites Available@ Herohalli, Opposite:Aacharya College, Magadi Road, Loan Available. Contact:- 9972220339/ 9844645948.

Mysore Road

BDA SITE for sale 40'x60' East facing, 170, III Block Jnanabarathi. Contact: 9901628999.

Mysore

SITE FOR Sale 100'x80' East facing Adipampa Road- Mysore Suitable for Complex, hospitals, Malls, Flats. Contact: 9901628999

Vishweshwariah Layout

20X33 NORTH-WEST CORNER, SMV Layout 7th Block, BDA attach Gowramma Layout A Katha Site No.16 Total Sqft 660 Near 100 Feet Road, KLE Law College, DX-Max Apartment, Rate 52.5 Lakhs: 9986999802

"VISHVESWARAIAH LAYOUT- COMMERCIAL 100 feet Road 80x180, 50x80 22000 Sqft 3rd Block, also any measurement sites Available/ Wanted in all Blocks. 9379776189"

BDA VISHWESWAIAH Layout, 5th Block, Site #1876, 50x80, NF, 60 Feet Road, 8000/- Sft, Negotiable. Contact. 8123910222

VISHVESHWARAIAH 2ND Block 30x40 West facing Allotty Site sale near Double Road, Good location. 9845268611

VISHWESHWARAIAH LAYOUT 4th BLOCK 20X30, South Face Near BDA Complex 44 Lakh Negotiable. Contact: 8892901567

URGENT SALE Reasonable Price, immediate settlement, excellent location Vishveshwaraiah Layout BDA Site No. 3428, N/F 40x60 6th block near National Public School, Rs. 9600/- (Nego). Genuine buyers Pratap: 9606847367.

30X40 SITE Sale Vishvesvaraya Layout 7th Block East 7750 Sqft And 40X60 5th Block Vidyanikethan School:- 8310003509

AVAILABLE BDA Sites In Sir M Vishvesharayya Layout 20X30, 30X40, 40X60, 50X80 Good Location. Call:9844421127

BDA, VISHWESHWARAIAH Layout, 4th Block, 30x40, NF, Rs 5100/- Per Sft, Good Location. Contact: 9945266212

Nandi Hills

SALE- "HILL View Pavilion"- 50x80- Overlooking Nandi Hills- Approved Premium Villa Plot, East facing, Ready to build, Gated Community. Contact: 9980594495

Flat

Dollars Colony

3 BHK Luxury Flats Dollars Colony, 2nd cross, Pebble Bay. 8088330330. www.govianu.com

PRM/KA/RERA/1251/446/PR/190130/002312 **SKYGRAND** 2 & 3-BHK, G+12 FLOORS HORAMAVU ₹ 56.83 - 78.81 Lacs#	PRM/KA/RERA/1251/309/PR/211209/004576 **STAVAM** 2 & 3-BHK, G+3 FLOORS ISRO LAYOUT PH-II ₹ 31.22 - 53.90 Lacs#	PRM/KA/RERA/1251/446/PR/190722/002710 **SOVEREIGN** 1, 2 & 3-BHK, G+4 FLOORS KITHAGANUR ₹ 30.36 - 58.82 Lacs#
PRM/KA/RERA/1251/309/PR/181122/002151 **SYNERGY** 2 & 3-BHK, G+3 FLOORS YELAHANKA ₹ 35.16 - 57.20 Lacs#	PRM/KA/RERA/1251/309/PR/180120/001878 **SKYCITY** 3-BHK, G+19 FLOORS THANISANDRA MN RD ₹ 1.11 - 1.37 Crores#	PRM/KA/RERA/1251/472/PR/221221/004599 **SASMARA** 2 & 3-BHK, G+3 FLOORS HEBBAL BEHIND BIG BAZAAR ₹ 49.25 - 81.25 Lacs#
PRM/KA/RERA/1251/446/PR/210312/004002 **SKYSHUBHAM** 2 & 3-BHK, G+14 FLOORS K R PURAM ₹ 39.36 - 65.42 Lacs#	PRM/KA/RERA/1251/308/PR/201201/003733 **SAHARA** 2 & 3-BHK, G+4 FLOORS SARJAPURA ₹ 31.00 - 38.96 Lacs#	

8880 003 003 www.dsmaxproperties.com
For more details/information about the project, visit : www.rera.karnataka.gov.in
*T&C Apply

Hebbal

SALE 2 BHK Apt 974 sft car parking A Khata Kodigehalli Near GKVK 42 lacs. Brokers Excuse. Contact: 93798 15173.

HRBR Layout

FLATS FOR Sale @ HRBR BDA Layout 2/ 3 BHK in Good Location 9538828808 9845066608

Indiranagar

NEW BRAND apartment Defence Colony, Indiranagar, GF, 3 BHK, 2000 sqft, semi-furnished, 3.6 crores. 9353150028.

Jayanagar

NEW FLATS For Sale Jayanagar 1st Block East 2 & 3BHK Call 9538848828, 9845066608.

Kanakapura Road

3-BHK FLATS Sale:- 1575 Sq.Ft, N/F, Fully Furnished. All Including+ Registration- 68,00,000/-. Konankunte, Near Junior Delhi Public School, Kanakpura Main Road.-9343722162/ 9611144096.

SALE: 2 BHK Apartment, Ready Occupation, Near THALAGHATAPURA Metro Station. KANAKAPURA MAIN ROAD, Contact: 99806-93496

Bangalore North

SALE FLAT 4267sqft 4BHK plus servant room 3car park, partly furnished in Malleswaram. Broker excuse. Call 9916667669, 9060303026

Old Airport Road

MURUGESHPALYA WIND Tunnel Road. FLAT FOR SALE. 2- Bedroom with Carparking, First Floor. 59,00,000/-. Negotiable. 9845243757

Rajarajeshwari Nagar

3BHK FLATS, 75L, Opposite Gopalan Arcade, Metro Station. OC + CC, Canara Bank Approved: 9611374397

Sahakarnagar

LUXURY HIGH Rise Flats, Sahakar Nagar, 60 Feet Road, F-Block. 8088330330, www.govianu.com

Shanthi Nagar

3 BEDROOM Apartment 1785sft, Car-Parking Final Rent Rs.50000/- Inclusive Maintenance Advance 5Lakhs. Skyline Apartment Lang ford Main Road, Shantinagar.FOR SALE 2Crores 991sqft Undivided share Call: 9341231868, 9886285184

Sanjaynagar

SALE NEW East 3BHK FLATS (1500, 1800 sft) SANJAYNAGAR 1,13,00,000- 1,35,00,000. All inclusive- 9590893080

3 BHK Luxury Flats Sanjaynagar, near RMV Hospital Park. 8088330330 www.govianu.com

Yeshwanthpur

TWO bed- room flat 1000sft 55/ 65 lacs yeshwantpur mathikere road deepesh LIC agent 9035315797

Farm House/ Land/ Resorts

Nelamangala

MANGO FARM for Sale near Niduvanda Railway Station (6 KM) 8.5 Acre, Nelamangala Taluk, Clear Title. Contact Number: 7892159744/ 8082532126

Out-Station

SALE- CHIKKAMAGALUR Farm House with Resort, 29 Lakh per acre. 8103990990. www.govianu.com

SOCIAL SERVICES

Old Age Home

OLD AGE Home/ Orphanage available near Whitefield for Elders and Boys. Contact: 9611785161/ 9901290021.

JOB OPPORTUNITIES

HRD & Admin

REQUIRED QUALIFIED person for Managing documents in office at Hesaraghatta Main Road, Bagalgunte with minimum qualifications OR Person who have worked in advocates office. Contact ::9108372746

MORE Classifieds IN SUPPLEMENT

Engg/ Production Technical

Leading Construction Company
Wants the following **CIVIL ENGINEERS** for their Project at Sarjapura / Hoskote for immediate appointment.
1. JR. ENGINEERS: 1 to 3 yrs Experience
2. SR. ENGINEERS: 5 to 10 yrs Experience
Interested persons may send their bio-data with details of present employment, salary drawn, expected, time required for joining etc.
Emjay Engineering Company
70, Domlur Layout Bangalore-560071
Email:jayemengineering@gmail.com
Mob:9845047577

General

JOB OPPORTUNITIES in Bangalore Wanted fulltime Executives for Banking Process fiv (background verifications) Call: 9986954958

Part-Time Jobs

WANTED 10TH/PUC Passed for City Career Agency in LIC, Age: 18-60, House Wives/ Retired/ Working, Stipend 7000/- PM, Commission , Gratuity & other Benefits: 9901995554/ 8217293244

Walk-in

SWIGGY FOOD DELIVERY APP
EXCITING JOB OPPORTUNITY IN BANGALORE !
₹ 20,000 to 25,000 Per Month
We want Delivery Executives
Full Time & Part Time
Weekly Payouts
Flexible Working Hours
Walk-in Interview
#6, AVS Compound, 80 ft Road, Koramangala, Blr-34
Near Sony Signal, GKB Opticals
Interested? Call: 080-45687736

PUBLIC NOTICE

PUBLIC NOTICE

General public are hereby notified that, my client B.R. Nandakumar S/o B.M. Ramakrishnappa, aged about 39 years, R/at Bettakote Village, Channarayapattana Hobli, Devanahalli Taluk, Bangalore Rural District, do hereby revoked/cancelled the General power of attorney given to Sri. Praksh Chand Kothari, S/o Late Pukhraj, aged about 75 years, # 102, 1st Floor, Jala Shambhavi Complex, 1st Main, Gandhinagar, Bengaluru-560009, dated 31/07/2014 with immediate effect which was registered before Sub Registrar of Devanahalli, in Book-4, Number DNH-4-00408-2014-15, stored in CD Number DNHD391 dated 31/07/2014 in respect of property bearing survey No. 117/3, Old survey No. 117, (Erstwhile Sy. No. 1/5 and earlier Sy. No. 1), measuring 38 guntas, situated at Bettakote Village, Channarayapattana Hobli, Devanahalli Taluk, Bangalore Rural District is hereby revoked/cancelled vide notice dated 20/12/2021. Accordingly, on behalf of my client the above GPA holder from today onwards have no any authorization whatsoever in respect of schedule property to represent my client as attorney and barred to act as my client attorney hereinafter. Therefore my client here by issuing this general public notice/information in spite of this notice if any person/s made any type of transaction with aforesaid person in respect of the schedule property he/they are sole liable for the all cost and consequences arising thereof and the same there is no binding on my client or over the schedule property

SCHEDULE PROPERTY

All that piece and parcel of survey No. 117/3, Old survey No. 117, (Erstwhile Sy. No. 1/5 and earlier Sy. No. 1), measuring 38 guntas, situated at Bettakote Village, Channarayapattana Hobli, Devanahalli Taluk, Bangalore Rural District bounded on **East By:** Property of B.M. Ramakrishnappa, **West By:** Property of B.M. Kempanna and B.K. Nagaraj, **North By:** Property of Mr. B.R. Vijaykumar, **South By:** Property of Munivenkatappa and Government land.

Anjaneya A.B., Advocate
11, S-24, V.M.C. Complex,
2nd Floor, 10th Cross, Cubbonpet,
Bengaluru-560002.

PUBI IC NOTICE

This is to inform General Public that, I, Smt. Visalakshmi, aged 82 years, wife of Late M.A. Meenakshi Sundaram, is the Absolute owner of the Property all that piece and parcel of Property Bearng Site No. 20, Katha No.146, Property No.34, Situated at Kurudusonnenahalli, Village, Bidarahalli Hobli, Avalahalli Grama Panchayath, Bangalore East Taluk, Bangalore and Measuring East to West 30 Feet and North to South 40 Feet. Totally Measuring in all 1200 Square Feet and Bounded on the East by: Site No 15, West By Site No.25, North by Road; South by: Site No.19 Registered as Document No.17013 Sub-Registrar, K.R.Puram, Bangalore was Lost Recently. If any one found out the same, inform the Advocate, within 14 Days. Failing which the appropriate action will be taken as per Law.

Sd/-
SAMUEL SOLOMON, M.A, LLB, CA IIB
Advocate & Notary
No. 10, Grace Nivas,
Opp. Suryanarayan Mutt, Lingarajapuram,
Bangalore - 560 084. Mob: 94481 89646

AADITYA GARDEN
Only Few Sites are Available
BBMP 'A' Khata Sites
Anjanapura
Few Mins. Drive from B.G Road & Kanakapura Road
Best Offer Price ₹4250/- Per Sqft Negotiable
Within BBMP Limits with DC Conversion
All Class Amenities, Ready to Construct
Plot Sizes : 30x45, 30x50 & 60x40
98455 55547 / 99866 55668

BUSINESS

Business to Business

Business

ZENITH LOANS available @4% yearly interest Business Project Takeover Property Mortgage NPA 8447587173 Agents Welcome

Finance

GOLDEN OPPORTUNITY. RTD's, VRS, Housewives, Earn more than Lakh. Contact: 9972169164

Business Offers

Finance

NRI'S INVESTMENT And Finance Available On Low Interest Against Properties, Land & Building, Sites, Flats, Converted & Agriculture Lands Call: 7411265189

PERSONAL

Change of Name

I, VINAYAGAMOORTHY Kuppusamy Residing #26, 7th cross, Adithya Layout, Ramamurthynagar, Bangalore-16 have changed my daughter's name from NIKITHA to NIKITHA VINAYAGAMOORTHY vide affidavit dated 18.12.2021 before H.G.Padmanabha Rao, Notary, Bangalore.

I, VAISHNVI MANGNALE Residing at No.B-301, Shriram Adithya Apartment, Arehalli BSK 3rd-Stage, Bangalore-61 have change my Name to VAISHNAVI UMASHANKAR MANGNALE vide Affidavit Dated: 24-12-2021 Before Notary H.S.Sakalesh Aradhya, Bangalore

I, VINAYAGAMOORTHY Kuppusamy Residing #26, 7th cross, Adithya Layout, Ramamurthynagar, Bangalore-16 have changed my son's name from NITHIN to NITHIN VINAYAGAMOORTHY vide affidavit dated 18.12.2021 before H.G.Padmanabha Rao, Notary, Bangalore.

I, BHARATH Kumar D.K. have changed my daughter's name from B. AADHYA to PREKSHITHA GOWDA vide affidavit dated 23-12-2021 before Notary Jayappa. A, Bangalore

BHARTI W/O 14844574K-SEP- DHARMANNA KATRAL, R/a Dhanaragi, Bijapur, Karnataka changed name from BHARTI to BHARATI KATRAL notary KV Mani, Bangalore.

WEEKEND CORNER

ಬೆಂಗಳೂರಿನ ಬನಶಂಕರಿಯಲ್ಲಿ ಮಾರಾಟ
ಕಾಂಚೀಪುರಂ
ಎ.ಜಿ. ಬಾಬು ಸಾಹ್
ರೇಷ್ಮೆ ಸೀರೆ ವ್ಯಾಪಾರಿಗಳು
ಮೇರಿ ಕ್ರಿಸ್‌ಮಸ್, ಹೊಸ ವರ್ಷ ಮತ್ತು ಸಂಕ್ರಾಂತಿ ಹಬ್ಬದ ಮಾರಾಟ
ಶ್ರೀ ಹರಿ ಕಲ್ಯಾಣ ಮಂಟಪ
ನಂ. 5-136/17, 30ನೇ ಮೈನ್, ಬನಶಂಕರಿ 3ನೇ ಹಂತ, ಬೆಂಗಳೂರು-560 085. ಮೊ. : 6385697571
ದಿನಾಂಕ: 26,27,28,29 & 30ನೇ ಡಿಸೆಂಬರ್ 2021
ಕೊನೆಯ ದಿನ ಸಂಜೆ 5.00 ಗಂಟೆಗೆ ಮುಕ್ತಾಯ
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ, ಹಿಂತಿರಿಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
ಒಂದು ಬಾರಿಗೆ 50 ಜನರಿಗೆ ಮಾತ್ರ ಪ್ರವೇಶ
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ
ನಮ್ಮ ಚಾನೆಲ್ ಅನ್ನು ಸಬ್‌ಸ್ಕ್ರೈಬ್ ಮಾಡಿ
ಎ.ಜಿ. ಬಾಬು ಸಾಹ್ YouTube
ಹೊಸ ಮಾರಾಟ ಮತ್ತು ಮಾಹಿತಿಗಾಗಿ
ಬೆಲ್ ಐಕಾನ್ ಅನ್ನು ಒತ್ತಲು ಮರೆಯದಿರಿ